ಭಾನುವಾರ, ಡಿಸೆಂಬರ್ 21, 2025 ₹ 7.00
www.prajavani.net
prajavani.net prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ರಿಸ್‌ಮಸ್ ಸಾಂತಾ



ಕ್ರಿಸ್‌ಮಸ್ ಅಂಗವಾಗಿ ಕೋಲ್ಕತ್ತದಲ್ಲಿ ನಿರ್ಮಿಸಲಾದ ಸಾಂತಾ ಕ್ಲಾಸ್ ಪ್ರತಿಮೆಗೆ ಕಲಾವಿದರೊಬ್ಬರು ಶನಿವಾರ ಅಂತಿಮ ಸ್ಪರ್ಶ ನೀಡಿದರು

ಟೆನಿಸ್ ಆಡಿದ ರಾಹುಲ್



ವಿಶ್ವ ಟೆನಿಸ್ ಲೀಗ್‌ನ ಭಾಗವಾಗಿ ಬೆಂಗಳೂರಿನಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಕ್ರಿಕೆಟಿಗ ಕೆ.ಎಲ್ ರಾಹುಲ್ ಟೆನಿಸ್ ಆಡಿದರು

ಶಾಂತಿ ರಕ್ಷಣೆ: 895 ಮಂದಿಯಿಂದ ಮುಚ್ಚಳಿಕೆ

ಮುಚ್ಚಳಿಕೆ ನೀಡಿದವರಲ್ಲಿ 521 ಮಂದಿ ಹಿಂದೂಗಳು, 351 ಮಂದಿ ಮುಸ್ಲಿಮರು, 30 ಮಂದಿ ಇತರರು

ಪ್ರಜಾವಾಣಿ ವಾರ್ತೆ

ಮಂಗಳೂರು: ಮಂಗಳೂರು ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ ಸಾರ್ವಜನಿಕ ಶಾಂತಿ ಕಾಪಾಡುವ ಉದ್ದೇಶದಿಂದ ರೌಡಿಗಳ ಪಟ್ಟಿಯಲ್ಲಿ ಹೆಸರಿರುವ 807 ಮಂದಿಯೂ ಸೇರಿದಂತೆ ಒಟ್ಟು 895 ಮಂದಿಯಿಂದ ಮುಚ್ಚಳಿಕೆ ಬರೆಸಿಕೊಳ್ಳಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಸುಧೀರ್ ಕುಮಾರ್ ರೆಡ್ಡಿ ಸಿ.ಎಚ್. ತಿಳಿಸಿದ್ದಾರೆ.

'ಮುಚ್ಚಳಿಕೆ ಬರೆದುಕೊಟ್ಟವರಲ್ಲಿ 521ಮಂದಿ ಹಿಂದೂಗಳು ಹಾಗೂ 351 ಮಂದಿ ಮುಸ್ಲಿಮರು ಹಾಗೂ 23 ಮಂದಿ ಇತರ ಧರ್ಮದವರು ಇದ್ದಾರೆ. ಹಿಂದೂಗಳ ಪೈಕಿ 474 ಮಂದಿ ರೌಡಿಗಳ ಪಟ್ಟಿಯಲ್ಲಿ ಹೆಸರಿರುವವರು ಹಾಗೂ 47 ಮಂದಿ ಈ ಹಿಂದೆ ಅಪರಾಧ ಕೃತ್ಯಗಳಲ್ಲಿ ತೊಡಗಿಸಿಕೊಂಡ ವ್ಯಕ್ತಿಗಳು. ಮುಸ್ಲಿಮರ ಪೈಕಿ 321 ಮಂದಿ ರೌಡಿಗಳ ಪಟ್ಟಿಯಲ್ಲಿ ಹೆಸರಿರುವವರು ಹಾಗೂ 30 ಮಂದಿ ಇತರರು. ಇತರ ಧರ್ಮದವರಲ್ಲಿ 11 ಮಂದಿ ರೌಡಿಶೀಟರ್‌ಗಳು ಹಾಗೂ 23 ಮಂದಿ ಇತರರು' ಎಂದು ಕಮಿನಷರ್ ವಿವರಿಸಿದ್ದಾರೆ.


ಸುಧೀರ್ ಕುಮಾರ್ ರೆಡ್ಡಿ ಸಿ.ಎಚ್.

ನಗರದಲ್ಲಿ ಎಸ್‌ಡಿಪಿಐ ನೇತೃತ್ವದಲ್ಲಿ ಶುಕ್ರವಾರ ಏರ್ಪಡಿಸಿದ್ದ ಪ್ರತಿಭಟನೆಯಲ್ಲಿ 'ಅಪರಾಧ ಕೃತ್ಯದಲ್ಲಿ ಭಾಗಿಯಾದ ಆರೋಪಿಗಳಿಂದ ಮುಚ್ಚಳಿಕೆ ಬರೆಸಿಕೊಳ್ಳುವ ವಿಚಾರದಲ್ಲಿ ತಾರತಮ್ಯ ನಡೆಸಲಾಗುತ್ತಿದೆ' ಎಂಬ ಆರೋಪ ವ್ಯಕ್ತವಾಗಿದ್ದಕ್ಕೆ ಪ್ರತಿಕ್ರಿಯಿಸಿರುವ ಪೊಲೀಸ್ ಕಮಿಷನರ್, ಈ ಕುರಿತ ಸಮಗ್ರ ಮಾಹಿತಿ ಹಂಚಿಕೊಂಡಿದ್ದಾರೆ.

'ಬಜಪೆಯಲ್ಲಿ ಶಾರದೋತ್ಸವ ಮೆರವಣಿಗೆ ಕಾರ್ಯಕ್ರಮ ಹಮ್ಮಿಕೊಳ್ಳಲು ಅನುಮತಿ ನೀಡುವ ಮುನ್ನ ವಿಶ್ವ ಹಿಂದೂ ಪರಿಷತ್/ ಬಜರಂಗದಳದಿಂದ ಹಾಗೂ ಪ್ರತಿಭಟನೆಗೆ ಅನುಮತಿ ನೀಡುವ ಮುನ್ನ ಎಸ್‌ಡಿಪಿಐನಿಂದ ತಲಾ ₹ 2 ಲಕ್ಷ ಭದ್ರತಾ ಠೇವಣಿ ಪಡೆಯಲಾಗಿತ್ತು. ಇಂತಹ ಕಾರ್ಯಕ್ರಮಗಳಲ್ಲಿ ದ್ವೇಷ ಭಾಷಣ ಮಾಡುವುದಕ್ಕೆ ಕಡಿವಾಣ ಹಾಕುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿತ್ತು' ಎಂದು ಅವರು ತಿಳಿಸಿದ್ದಾರೆ.

'ಪೊಲೀಸರು ಯಾರ ವಿರುದ್ಧವೂ ಯಾವುದೇ ಪೂರ್ವಗ್ರಹದಿಂದ ಕ್ರಮ ಕೈಗೊಳ್ಳುವುದಿಲ್ಲ. ನಮ್ಮವರು ಸಾಕ್ಷಿ ಪುರಾವೆಗಳ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಾರೆ. ಸಾರ್ವಜನಿಕರ ನೆಮ್ಮದಿಗೆ ಭಂಗವನ್ನು ಉಂಟುಮಾಡುವವರ ಹಾಗೂ ಅಪರಾಧ ಕೃತ್ಯಗಳಲ್ಲಿ ತೊಡಗುವವರ ವಿರುದ್ಧ ಕ್ರಮ ಕೈಗೊಳ್ಳುವ ಅಧಿಕಾರ ಪೊಲೀಸರಿಗೆ ಇದೆ. ಅದನ್ನು ಮುಂದೆಯೂ ಬಳಸುತ್ತೇವೆ' ಎಂದು ಪೊಲೀಸ್ ಕಮಿಷನರ್ ಸ್ಪಷ್ಟಪಡಿಸಿದ್ದಾರೆ.

'ಅರೆಬರೆ ಮಾಹಿತಿ ಹಂಚಿಕೊಳ್ಳುವ ಮೂಲಕ ಮುಗ್ಧ ಸಾರ್ವಜನಿಕರ ಮನಸುಗಳಲ್ಲಿ ಕೋಮುದ್ವೇಷ ಹರಡುವ ಪ್ರಯತ್ನ ಇಲ್ಲಿ ನಡೆಯುತ್ತಿದೆ. ಅಪರಾಧ ಚಟುವಟಿಕೆ ನಿಯಂತ್ರಣ ಜನರ ಕೈಯಲ್ಲೇ ಇದೆ. ಯಾರು ಹೆಚ್ಚು ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿರುತ್ತಾರೋ ಆ ಸಮುದಾಯದವರ ಅಪರಾಧ ಕೃತ್ಯಗಳ ಸಂಖ್ಯೆಯೂ ಜಾಸ್ತಿ ಇರುತ್ತದೆ. ಅದಕ್ಕೆ ತಕ್ಕಂತೆ ಪೊಲೀಸರು ಕ್ರಮ ವಹಿಸುತ್ತಾರೆ' ಎಂದರು.

ಮುಖ್ಯಾಂಶಗಳು
- ಕಾರ್ಯಕ್ರಮದಲ್ಲಿ ದ್ವೇಷಭಾಷಣ ತಡೆಯಲು ₹ 2 ಲಕ್ಷ ಭದ್ರತಾ ಠೇವಣಿ
- ಅರೆಬರೆ ಮಾಹಿತಿ ಹಂಚಿ ಕೋಮುದ್ವೇಷ ಹರಡಲು ಯತ್ನ: ಕಮಿಷನರ್

'ಭದ್ರತಾ ಠೇವಣಿಯ ₹ 10.15 ಲಕ್ಷ ಮುಟ್ಟುಗೋಲು'
'ಮುಚ್ಚಳಿಕೆಯ ಷರತ್ತುಗಳನ್ನು ಉಲ್ಲಂಘಿಸಿದಕ್ಕಾಗಿ ಒಟ್ಟು 54 ಮಂದಿಯಿಂದ ಭದ್ರತಾ ಠೇವಣಿಯ ₹ 10.15 ಲಕ್ಷವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಅವರಲ್ಲಿ 39 ಮಂದಿ ಹಿಂದೂಗಳು. ಅವರ ಭದ್ರತಾ ಠೇವಣಿಯಿಂದ ₹ 7.40 ಲಕ್ಷ ಹಣ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. 13 ಮಂದಿ ಮುಸ್ಲಿಮರಿದ್ದು, ಅವರ ಭದ್ರತಾ ಠೇವಣಿಯಿಂದ ₹ 2.40 ಲಕ್ಷ ಹಣ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಇತರ ಧರ್ಮಕ್ಕೆ ಸೇರಿದ ಇಬ್ಬರ ಭದ್ರತಾ ಠೇವಣಿಯ ₹35 ಸಾವಿರವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಇನ್ನಷ್ಟು ಪ್ರಕರಣಗಳಲ್ಲಿ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಪ್ರಕ್ರಿಯೆ ನಡೆಯುತ್ತಿದೆ' ಎಂದರು.

ಸುದ್ದಿ 2 ನಿಮಿಷ

ಯುವಕರು ರಾಜಕಾರಣ ಮಾಡಬೇಕು: ಪ್ರಕಾಶ್ ರಾಜ್

ಕಲಬುರಗಿ: 'ರಾಜಕಾರಣಿಗಳು ದೇಶವನ್ನು ಹದಗೆಡಿಸಿದ್ದಾರೆ. ಹೀಗಾಗಿ ನೀವು (ಯುವಕರು) ಮತ್ತು ನಾವು ರಾಜಕಾರಣ ಮಾಡಬೇಕಿದೆ. ರಾಜಕಾರಣಿಗಳು ನಾವು ಹೇಳಿದಂತೆ ಕೆಲಸ ಮಾಡಬೇಕಿದೆ. ದೇಶದ ಪರಿಸ್ಥಿತಿ ಭಯಾನಕವಾಗಿದ್ದು, ಮುಂದಿನ ಪೀಳಿಗೆಗೆ ಉದ್ಯೋಗಗಳು ಸಿಗುತ್ತವೆ ಎಂಬ ಖಾತರಿ ಇಲ್ಲವಾಗಿದೆ' ಎಂದು ಚಿತ್ರನಟ ಪ್ರಕಾಶ್ ರಾಜ್ ಕಳವಳ ವ್ಯಕ್ತಪಡಿಸಿದರು.

ಇಲ್ಲಿನ ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಶನಿವಾರ ಮೂರು ದಿನಗಳ ಅಂತರ ಮಹಾವಿದ್ಯಾಲಯ ಯುವಜನೋತ್ಸವಕ್ಕೆ ಶನಿವಾರ ಚಾಲನೆ ನೀಡಿ ಅವರು ಮಾತನಾಡಿದರು.

'ಶಾಲೆಗಳಲ್ಲಿ ಬೇರೆ ಬೇರೆ ಸಿದ್ಧಾಂತಗಳನ್ನು ತರುತ್ತಿದ್ದಾರೆ. ಈ ಬಗ್ಗೆ ಎಲ್ಲರೂ ಎಚ್ಚರದಿಂದ ಇರಬೇಕು. ಸರ್ವಜನಾಂಗದ ಶಾಂತಿಯ ತೋಟದಲ್ಲಿ ಇರುವ ನಾವು ನಮ್ಮ ಮಧ್ಯೆ ಇರುವ ಭಿನ್ನಾಭಿಪ್ರಾಯಗಳನ್ನು ನಾವೇ ಬಗೆಹರಿಸಿಕೊಳ್ಳಬೇಕೇ ಹೊರತು ಬೇರೆಯವರು ಇಲ್ಲಿ ಬರಲು ಅವಕಾಶ ನೀಡಬಾರದು. ಬಸವಣ್ಣ, ಮಹಾತ್ಮ ಗಾಂಧಿ, ಡಾ.ಬಿ.ಆರ್. ಅಂಬೇಡ್ಕರ್, ಸಂವಿಧಾನಗಳೇ ನಮಗೆ ದಾರಿ ದೀಪ. ಇದರ ಆಧಾರದ ಮೇಲೆಯೇ ನಾವು ಮುನ್ನಡೆಯಬೇಕು. ಮಧ್ಯೆ ಯಾರೇ ಬಂದರೂ ತಲೆಕೆಡಿಸಿಕೊಳ್ಳಬಾರದು' ಎಂದರು.



ಹೆಲಿಕಾಪ್ಟರ್ ಹಾರಾಟಕ್ಕೆ ತಡೆ

ಚಿಕ್ಕಮಗಳೂರು: ಕ್ರಿಸ್‌ಮಸ್ ಮತ್ತು ವರ್ಷಾಂತ್ಯಕ್ಕೆ ಬರುವ ಪ್ರವಾಸಿಗರಿಗಾಗಿ ಜಿಲ್ಲಾಡಳಿತ ಆಯೋಜಿ ಸಿದ್ದ ಹೆಲಿ ಟೂರಿಸಂಗೆ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ತಾತ್ಕಾಲಿಕ ತಡೆ ನೀಡಿದೆ.


ಎ.ಯೋಗೇಶ್ವರನ್ ಮತ್ತು ಬಿ. ಪೂಂಗಳಲಿ ಎಂಬುವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮಂಡಳಿ, ಮಧ್ಯಂತರ ಆದೇಶ ಹೊರಡಿಸಿದೆ. ಮುಳ್ಳಯ್ಯನಗಿರಿ ಸೇರಿ ಚಂದ್ರದ್ರೋಣ ಪರ್ವತ ಸಾಲು, ಕಳಸ ಮತ್ತು ಮೂಡಿಗೆರೆ ಸುತ್ತಮುತ್ತ ಪ್ರವಾಸಿಗರಿಗೆ ಆಗಸದಿಂದ ಗಿರಿಗಳ ದರ್ಶನಕ್ಕೆ ಜಿಲ್ಲಾ ಪ್ರವಾಸೋದ್ಯಮ ಸಮಿತಿ ಮುಂದಾಗಿತ್ತು.

ಮುಳ್ಳಯ್ಯನಗಿರಿಗೆ ಹೊಂದಿಕೊಂಡಂತೆ ಭದ್ರಾ ವನ್ಯಜೀವಿ ಪ್ರದೇಶ ಇದೆ. ಕಳಸ ಮತ್ತು ಮೂಡಿಗೆರೆಗೆ ಕುದುರೆಮುಖ ರಾಷ್ಟ್ರೀಯ ಉದ್ಯಾನ ಹೊಂದಿಕೊಂಡಿದೆ. ಹೆಲಿ ಟೂರಿಸಂ ನಡೆಸಿದರೆ ವನ್ಯಜೀವಿಗಳ ಆವಾಸಕ್ಕೆ ತೊಂದರೆಯಾಗಲಿದೆ. ಪರಿಸರ ಸೂಕ್ಷ್ಮ ಪ್ರದೇಶ ಆಗಿರುವುದರಿಂದ ಹೆಲಿ ಟೂರಿಸಂಗೆ ಅವಕಾಶ ನೀಡಬಾರದು ಎಂದು ಅರ್ಜಿದಾರರು ವಾದ ಮಂಡಿಸಿದ್ದಾರೆ. ಪ್ರತಿವಾದಿ ವಕೀಲರು ವಿವರಣೆ ನೀಡಲು ಸಮಯ ಕೇಳಿದರು. ವಿಚಾರಣೆ ನಡೆಸಿದ ನ್ಯಾಯಮಂಡಳಿ, ಪರಿಸರ ಸೂಕ್ಷ್ಮ ವಿಷಯ ಆಗಿರುವುದರಿಂದ ಮಧ್ಯಂತರ ಆದೇಶ ನೀಡಲಾಗುತ್ತಿದೆ ಎಂದು ಆದೇಶದಲ್ಲಿ ತಿಳಿಸಿದೆ. ವಿಚಾರಣೆಯನ್ನು ಸೋಮವಾರಕ್ಕೆ ಮುಂದೂಡಿದೆ.

ಶನಿವಾರ ಮೂಡಿಗೆರೆಯಲ್ಲಿ ಹೆಲಿ ಟೂರಿಸಂ ಉದ್ಘಾಟನಾ ಕಾರ್ಯಕ್ರಮ ನಡೆಸಲು ಜಿಲ್ಲಾಡಳಿತ ಸಿದ್ಧತೆ ಮಾಡಿಕೊಂಡಿತ್ತು. ಸದ್ಯಕ್ಕೆ ಎಲ್ಲಾ ಪ್ರಕ್ರಿಯೆಗಳನ್ನು ಸ್ಥಗಿತಗೊಳಿಸಿದೆ.

ಚಿಟಿಕೆ ಸುದ್ದಿ

ಪ್ರಶಾಂತ ಭೂಷಣ್‌ಗೆ ಸಮಾಜ ಪರಿವರ್ತನ ಪ್ರಶಸ್ತಿ



ಧಾರವಾಡ: ನಗರದ ಕರ್ನಾಟಕ ವಿದ್ಯಾವರ್ಧಕ ಸಂಘವು ಸಮಾಜ ಪರಿವರ್ತನಾ ಸಮುದಾಯದ ದತ್ತಿಯಡಿ ನೀಡುವ 'ಮಹಾಸಂಗ್ರಾಮಿ ಎಸ್.ಆರ್.ಹಿರೇಮಠ ಸಮಾಜ ಪರಿವರ್ತನ ಪುರಸ್ಕಾರ'ಕ್ಕೆ ಸುಪ್ರೀಂ ಕೋರ್ಟ್ ವಕೀಲ ಪ್ರಶಾಂತ ಭೂಷಣ್ ಆಯ್ಕೆ ಆಗಿದ್ದಾರೆ.

ಪ್ರಶಸ್ತಿಯು ₹ 1 ಲಕ್ಷ ನಗದು, ಸ್ಮರಣಿಕೆ ಒಳಗೊಂಡಿದೆ. ಡಿಸೆಂಬರ್ 23ರಂದು ಪಾಟೀಲ ಪುಟ್ಟಪ್ಪ ಸಭಾಭವನದಲ್ಲಿ ನಡೆಯುವ ಸಮಾರಂಭದಲ್ಲಿ ನಿವೃತ್ತ ನ್ಯಾಯಮೂರ್ತಿ ಸಂತೋಷ ಹೆಗ್ಡೆ ಅವರು ಪ್ರಶಸ್ತಿ ಪ್ರದಾನ ಮಾಡುವರು ಎಂದು ಪ್ರಕಟಣೆ ತಿಳಿಸಿದೆ.

ಅವಹೇಳನಕಾರಿ ಪೋಸ್ಟ್: ವ್ಯಕ್ತಿ ಬಂಧನ

ಗದಗ: ಕಾನೂನು ಸಚಿವ ಎಚ್.ಕೆ.ಪಾಟೀಲ ಅವರ ವಿರುದ್ಧ ಫೇಸ್‌ಬುಕ್‌ನಲ್ಲಿ ಅವಹೇಳನಕಾರಿಯಾಗಿ ಬರೆಯುವುದರ ಜೊತೆಗೆ ಜೀವ ಬೆದರಿಕೆ ಹಾಕಿದ ಆರೋಪದ ಮೇಲೆ ವೀರಣ್ಣ ಬೀಳಗಿ ಎಂಬುವನನ್ನು ಪೊಲೀಸರು ಬಂಧಿಸಿದ್ದಾರೆ.

ರೋಣ ತಾಲ್ಲೂಕಿನ ಸೂಡಿ ಗ್ರಾಮದ ವೀರಣ್ಣ ಬೀಳಗಿ ಸಚಿವರ ವಿರುದ್ಧ ಫೇಸ್‌ಬುಕ್‌ನಲ್ಲಿ ಪ್ರಚೋದನಾಕಾರಿ ಪೋಸ್ಟ್ ಹಾಕಿರುವುದನ್ನು ಗಮನಿಸಿದ ಗದಗ ಶಹರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಬಿ.ಬಿ.ಅಸೂಟಿ ಅವರು ಬೆಟಗೇರಿ ಬಡಾವಣೆ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ರಕ್ಷಣೆ ಕೋರಿದ ಸಾಕ್ಷಿ ದೂರುದಾರ

ಮಂಗಳೂರು: ಧರ್ಮಸ್ಥಳ ಗ್ರಾಮದ ವ್ಯಾಪ್ತಿಯಲ್ಲಿ ಅಪರಾಧ ಪ್ರಕರಣಗಳ ಮೃತದೇಹಗಳನ್ನು ಹೂತುಹಾಕಲಾಗಿದೆ ಎಂದು ಆರೋಪಿಸಲಾದ ಪ್ರಕರಣದ ಸಾಕ್ಷಿ ದೂರುದಾರ ಜಾಮೀನಿನ ಮೇಲೆ ಬಿಡುಗಡೆಗೊಂಡ ಬಳಿಕ ಪೊಲೀಸ್ ರಕ್ಷಣೆ ಕೋರಿದ್ದಾರೆ.

'ಧರ್ಮಸ್ಥಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿ, ಬಳಿಕ ಎಸ್‌ಐಟಿಗೆ ವರ್ಗಾವಣೆಯಾಗಿರುವ (39/2025) ಪ್ರಕರಣದಲ್ಲಿ ಆರೋಪಿತನಾಗಿದ್ದ ಚಿನ್ನ ಸಿ.ಎನ್ ಎಂಬವರು, ತನಗೆ ಹಾಗೂ ತನ್ನ ಪತ್ನಿಗೆ ಮಹೇಶ್ ಶೆಟ್ಟಿ ತಿಮರೋಡಿ, ಗಿರೀಶ ಮಟ್ಟಣ್ಣವರ, ವಿಠಲ ಗೌಡ, ಜಯಂತ್, ಸಮೀರ್ ಎಂ.ಡಿ ಅವರು ಜೀವ ಬೆದರಿಕೆ ಹಾಕಬಹುದು. ಆದ್ದರಿಂದ ತನಗೆ ಹಾಗೂ ತನ್ನ ಪತ್ನಿಗೆ ರಕ್ಷಣೆ ನೀಡಬೇಕು ಎಂದು ಬೆಳ್ತಂಗಡಿ ಠಾಣೆಗೆ ಡಿ.18ರಂದು ಮನವಿ ಸಲ್ಲಿಸಿದ್ದಾರೆ' ಎಂದು ದಕ್ಷಿಣ ಕನ್ನಡ ಎಸ್‌ಪಿ ಕಚೇರಿಯ ಮೂಲಗಳು ತಿಳಿಸಿವೆ.

ಶಾಸಕ ಅಶೋಕ ರೈ ವಿರುದ್ಧ ಎಫ್‌ಐಆರ್

ವಿಟ್ಲ (ದಕ್ಷಿಣ ಕನ್ನಡ): ವಿಟ್ಲ ಪೊಲೀಸ್ ಠಾಣೆ ವ್ಯಾಪ್ತಿಯ ಕೇಪು ಗ್ರಾಮದಲ್ಲಿ ಕೋಳಿ ಅಂಕ ನಡೆಯುತ್ತಿದ್ದ ಸ್ಥಳಕ್ಕೆ ಪೊಲೀಸರು ಶನಿವಾರ ದಾಳಿ ನಡೆಸಿದ್ದು, 16 ಜನರನ್ನು ವಶಕ್ಕೆ ಪಡೆದಿದ್ದಾರೆ. ಕೋಳಿ ಅಂಕಕ್ಕೆ ಬಳಸಿದ್ದ 22 ಹುಂಜಗಳನ್ನು ಹಾಗೂ ಬಾಲುಗಳನ್ನು (ಚೂಪಾದ ಕತ್ತಿಗಳನ್ನು) ವಶಪಡಿಸಿಕೊಂಡಿದ್ದಾರೆ.

ಕೋಳಿ ಅಂಕದ ಸ್ಥಳದಲ್ಲಿ ಹಾಜರಿದ್ದ ಹಾಗೂ ಕಾನೂನು ಬಾಹಿರವಾದ ಕೋಳಿ ಅಂಕವನ್ನು ಮುಂದುವರಿಸುವಂತೆ ಜನರನ್ನು ಪ್ರಚೋದಿಸಿ ದುಷ್ಪ್ರೇರಣೆ ನೀಡಿದ ಆರೋಪದ ಮೇಲೆ ಪುತ್ತೂರು ಕ್ಷೇತ್ರದ ಕಾಂಗ್ರೆಸ್ ಶಾಸಕ ಅಶೋಕ್ ಕುಮಾರ್ ರೈ ವಿರುದ್ಧವೂ ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ.

ಯಾವುದೇ ಪರವಾನಗಿ ಪಡೆಯದೇ, ಕಾನೂನು ಬಾಹಿರ ಕೃತ್ಯಕ್ಕೆ ಅನುವು ಮಾಡಿಕೊಟ್ಟ ಆರೋಪದ ಮೇಲೆ ಜಾಗದ ಮಾಲೀಕ ಮರಳೀಧರ ರೈ ವಿರುದ್ಧವೂ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಸಾಹಿತಿ ಪ್ರೊ. ಬರಗೂರು ರಾಮಚಂದ್ರಪ್ಪ ಕಳವಳ
'ಸಮಯ ಸಾಧಕ ರಾಜಕಾರಣ ಮುನ್ನೆಲೆಗೆ'

ಪ್ರಜಾವಾಣಿ ವಾರ್ತೆ

ರಾಯಚೂರು: 'ಪ್ರಸ್ತುತ ದೇಶದಲ್ಲಿ ಸಮಯ ಸಾಧಕತನ ಹೆಚ್ಚಾಗಿದೆ. ಸೈದ್ಧಾಂತಿಕ ರಾಜಕಾರಣಿಗಳು ಹಿನ್ನೆಲೆಗೆ ಸರಿಯುವ ವಾತಾವರಣ ಸೃಷ್ಟಿಯಾಗಿದೆ. ಸಮಯ ಸಾಧಕ ರಾಜಕಾರಣ ಮುನ್ನೆಲೆಗೆ ಬಂದಿದೆ. ಇದು ರಾಜಕೀಯದಲ್ಲಿ ಅಲ್ಲದೇ, ಸಮಾಜದ ಎಲ್ಲ ಸ್ತರಗಳಲ್ಲೂ ಕ್ರಿಯೆಯ ರೂಪದಲ್ಲಿ ಮುನ್ನೆಲೆಗೆ ಬಂದಿದೆ' ಎಂದು ಸಾಹಿತಿ ಪ್ರೊ.ಬರಗೂರು ರಾಮಚಂದ್ರಪ್ಪ ಅವರು ಕಳವಳ ವ್ಯಕ್ತಪಡಿಸಿದರು.

ಇಲ್ಲಿಯ ಪಂಡಿತ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ದಲಿತ ಸಾಹಿತ್ಯ ಪರಿಷತ್ತಿನ ರಾಜ್ಯ ಘಟಕದ ವತಿಯಿಂದ ಶನಿವಾರ ಹಮ್ಮಿಕೊಂಡಿರುವ 11ನೇ ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

'ಮಾರಾಟಕ್ಕೆ ಕಟ್ಟೆಗಳಿವೆ. ಆದರೆ ಮೌಲ್ಯಗಳಿಗೆ ಜಾಗವೇ ಇಲ್ಲದಂತಾಗಿದೆ. ಲಾಭ–ನಷ್ಟವನ್ನಷ್ಟೇ ಯೋಚಿಸುತ್ತಿದ್ದೇವೆ. ಜಾತಿಯ ಬೇರು ಬಲವಾಗಿ ಬಿಟ್ಟಿದೆ. ನಮ್ಮವರು ತಪ್ಪು ಮಾಡಿದರೂ ಪರವಾಗಿಲ್ಲ ಎನ್ನುವಂತಹ ಮನಸ್ಥಿತಿಗಳು ಬಂದಿವೆ. ದಲಿತರು, ದಲಿತೇತರರು ಹಾಗೂ ಪ್ರಗತಿಪರರು ಆತ್ಮಾವಲೋಕನ ಮಾಡಿಕೊಳ್ಳುವ ಸನ್ನಿವೇಶ ಸೃಷ್ಟಿ ಯಾಗಿದೆ' ಎಂದು ಬೇಸರ ವ್ಯಕ್ತಪಡಿಸಿದರು.

'ಒಂದಂಶದ ಕಾರ್ಯಕ್ರಮದ ಮೂಲಕ ಪ್ರತಿಗಾಮಿಗಳು ಒಗ್ಗಟ್ಟಾಗಿದ್ದಾರೆ. ಪ್ರತಿಗಾಮಿಗಳಲ್ಲಿ ಇರುವಷ್ಟು ಒಗ್ಗಟ್ಟು ಪ್ರಗತಿಪರರಲ್ಲಿ ಕಾಣಿಸುತ್ತಿಲ್ಲ. ಇಂತಹ ಸಮ್ಮೇಳನಗಳು ಪ್ರಗತಿಪರರನ್ನು ಒಗ್ಗೂಡಿಸುವ ಸಮ್ಮೇಳನ ಆಗಬೇಕು' ಎಂದು ಹೇಳಿದರು.

ಮುಖ್ಯಾಂಶಗಳು
- 11ನೇ ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನಕ್ಕೆ ಚಾಲನೆ
- ಜಾತಿಯ ಬೇರು ಬಲವಾಗಿ ಬಿಟ್ಟಿದೆ
- ಪ್ರಗತಿಪರರನ್ನು ಒಗ್ಗೂಡಿಸುವ ಸಮ್ಮೇಳನವಾಗಬೇಕು


ರಾಯಚೂರಿನಲ್ಲಿ ಶನಿವಾರ ನಡೆದ 11ನೇ ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನದಲ್ಲಿ ಸಾಹಿತಿ ಪ್ರೊ.ಬರಗೂರು ರಾಮಚಂದ್ರಪ್ಪ ಮಾತನಾಡಿದರು

'ಸಂವಿಧಾನವೇ ಧರ್ಮ ಗ್ರಂಥವಾಗಲಿ'
'ಸಂವಿಧಾನ ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿದಿದೆ. ಸಂವಿಧಾನದಲ್ಲಿ ಎಲ್ಲ ವರ್ಗಗಳಿಗೆ ಪ್ರಾತಿನಿಧ್ಯ ನೀಡಲಾಗಿದೆ. ಹೀಗಾಗಿ ದೇಶದ ಧರ್ಮ ಗ್ರಂಥ ಸಂವಿಧಾನವೇ ಆಗಬೇಕು' ಎಂದು ಸಮ್ಮೇಳನದ ಅಧ್ಯಕ್ಷೆ ಜಯದೇವಿ ಗಾಯಕವಾಡ ಪ್ರತಿಪಾದಿಸಿದರು.

'ಸಂವಿಧಾನದಿಂದಲೇ ಪ್ರಭುಗಳಾದರೂ, ಬಹುತೇಕರು ಮಾತನಾಡುತ್ತಿಲ್ಲ. ಸಂವಿಧಾನ ಬದಲಾದರೆ ಮತ್ತೆ ವರ್ಣಾಶ್ರಮ ಜಾರಿಯಾಗುತ್ತದೆ. ಪ್ರಜಾಪ್ರಭುತ್ವ ಮಾಯವಾಗುತ್ತದೆ' ಎಂದು ಎಚ್ಚರಿಸಿದರು.

ಟಾಸ್ ಹಾಕಿದವರನ್ನೇ ಕೇಳಿ: ಸತೀಶ

ಪ್ರಜಾವಾಣಿ ವಾರ್ತೆ



ಬೆಳಗಾವಿ: 'ಕ್ಯಾಪ್ಟನ್ ಆಗಲು ಟಾಸ್ ಹಾಕಿದವರು ಅವರಿಬ್ಬರೇ. ಹೆಡ್ ಬಿದ್ದಿದೆಯೋ ಅಥವಾ ಟೇಲ್ ಬಿದ್ದಿದೆಯೋ ಅವರನ್ನೇ ಕೇಳಿ' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ 'ಮುಖ್ಯಮಂತ್ರಿ ಬದಲಾವಣೆ' ವಿಚಾರವಾಗಿ ಸೂಚ್ಯವಾಗಿ ಪ್ರತಿಕ್ರಿಯಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಕ್ಯಾಪ್ಟನ್ (ಮುಖ್ಯಮಂತ್ರಿ) ಆಗಲು ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಟಾಸ್ ಮಾಡಿದ್ದಾರೆ. ಪಕ್ಷದ ಹೈಕಮಾಂಡ್ ಅವರಿಗೆ ಏನು ಹೇಳಿದೆ ಎಂಬುದನ್ನು ಅವರನ್ನೇ ಕೇಳಬೇಕು. ಟಾಸ್ ಮಾಡಿದ ವಿಷಯ ದೆಹಲಿಯ ಫಿರೋಜ್ ಶಾ ಕೋಟ್ಲಾ ಮೈದಾನದಲ್ಲಿದೆ. ಕ್ಯಾಪ್ಟನ್ ಬದಲಾವಣೆ ಆಗುತ್ತಾರೋ ಅಥವಾ ಹಳೆಯ ಕ್ಯಾಪ್ಟನ್ ಮುಂದುವರೆಯುತ್ತಾರೋ ಅವರನ್ನೇ ಕೇಳಬೇಕು' ಎಂದರು. 'ಸದ್ಯ ನಾವು ಕ್ಯಾಪ್ಟನ್ ಜಾಗದಲ್ಲಿ ಇಲ್ಲ. ಅವರಿಬ್ಬರೂ ಕ್ಯಾಪ್ಟನ್ ಆಗಲು ಟಾಸ್ ಮಾಡುವಾಗ ಥರ್ಡ್ ಅಂಪೈರ್ ಕೂಡ ಇರಲಿಲ್ಲ. ಇಬ್ಬರಿಗೇ ಗೊತ್ತು' ಎಂದರು.

ಆರೋಪ ಸಾಬೀತಾದರೆ ನಿವೃತ್ತಿ: ಚಂದ್ರಪ್ಪ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: 'ಹೊಳಲ್ಕೆರೆ ತಾಲ್ಲೂಕು ಹಿರೇಕಂದವಾಡಿ ಗ್ರಾಮದಲ್ಲಿ ದಲಿತರಿಗೆ ಮಂಜೂರಾಗಿದ್ದ ಭೂಮಿಯನ್ನು ನಾವು ಖರೀದಿ ಮಾಡಿಲ್ಲ. ಕೆಪಿಸಿಸಿ ಉಪಾಧ್ಯಕ್ಷ ಎಚ್.ಆಂಜನೇಯ ಅವರ ಆರೋಪಗಳಲ್ಲಿ ಹುರುಳಿಲ್ಲ. ನಾನು ಮತ್ತು ಕುಟುಂಬದ ಸದಸ್ಯರು ಒಂದು ಇಂಚು ಭೂಮಿ ಕಬಳಿಸಿರುವುದನ್ನು ಅವರು ಸಾಬೀತು ಮಾಡಿದರೆ ರಾಜಕೀಯ ನಿವೃತ್ತಿ ಪಡೆಯುತ್ತೇನೆ' ಎಂದು ಶಾಸಕ ಎಂ.ಚಂದ್ರಪ್ಪ ಸವಾಲು ಹಾಕಿದರು.


ಎಂ.ಚಂದ್ರಪ್ಪ

'ಆಂಜನೇಯ ಆರೋಪಿಸಿರುವಂತೆ ಸರ್ವೆ ನಂಬರ್ 98ರಲ್ಲಿ ಯಾವ ಭೂಮಿಯನ್ನೂ ಖರೀದಿಸಿಲ್ಲ. 91/1ಬಿ2 ಸರ್ವೆ ನಂಬರ್‌ನ 12 ಎಕರೆ ಜಮೀನನ್ನು ನನ್ನ ಮಗ ಎಂ.ಸಿ. ದೀಪ್‌ಚಂದನ್ ಹೆಸರಿನಲ್ಲಿ ಶುದ್ಧ ಕ್ರಯಕ್ಕೆ ಪಡೆಯಲಾಗಿದೆ. ಇದು ಪಿಟಿಸಿಎಲ್ ಕಾಯ್ದೆ ವ್ಯಾಪ್ತಿಗೆ ಒಳಪಡುವುದಿಲ್ಲ. ಆದರೂ ಸುಳ್ಳು ಆರೋಪ ಮಾಡಿರುವುದು ಖಂಡನೀಯ' ಎಂದು ಸುದ್ದಿಗೋಷ್ಠಿಯಲ್ಲಿ ಆಕ್ರೋಶ ವ್ಯಕ್ತಪಡಿಸಿದರು.


'ಜಮೀನು ಖರೀದಿ ಸಂಬಂಧ 1910ರಿಂದಲೂ ಕೈ ಬದಲಾವಣೆಯಾದ ಮಾಲೀಕರ ವಿವರ ನಮ್ಮ ಬಳಿ ಇದೆ. ಐ.ಜಿ.ವೆಂಕಟೇಶ್ ಎಂಬುವವರಿಂದ ನಾವು 2021ರಲ್ಲಿ ಖರೀದಿ ಮಾಡಿದ್ದೇವೆ. ವೆಂಕಟೇಶ್ ಅವರು 2007ರಲ್ಲಿ ಆರ್.ಜಿ.ಬಸಪ್ಪ ಎಂಬುವವರಿಂದ ಖರೀದಿ ಮಾಡಿದ್ದರು. ಬೇರೊಬ್ಬ ವ್ಯಕ್ತಿಯ ಹೆಸರಿನಲ್ಲಿ ಮೊದಲು ಖರೀದಿಸಿ ನಂತರ ಮಗನ ಹೆಸರಿಗೆ ನೋಂದಣಿ ಮಾಡಿಸಿದ್ದಾರೆ ಎಂಬ ಆರೋಪ ಶುದ್ಧ ಸುಳ್ಳು' ಎಂದರು.

'ಗುಡ್ಡದ ಜಾಗದಲ್ಲಿ ಗಣಿಗಾರಿಕೆ ಮಾಡಿದ್ದಾರೆ, ಮಣ್ಣು ತೆಗೆದಿದ್ದಾರೆ ಎಂದೆಲ್ಲಾ ಆಂಜನೇಯ ಆರೋಪಿಸಿದ್ದಾರೆ. ಅದನ್ನು ಸಾಬೀತು ಮಾಡಿದರೆ ಈಗಲೇ ರಾಜೀನಾಮೆ ನೀಡುತ್ತೇನೆ. ನಮ್ಮ ಒಡೆತನದ ಭೂಮಿಯಲ್ಲಿ ನೀರಿಗಾಗಿ ತೊಟ್ಟಿ ಕಟ್ಟಿದ್ದೇವೆ. ಕಾರ್ಮಿಕರಿಗಾಗಿ ಮನೆ ನಿರ್ಮಿಸಿದ್ದೇವೆ, ಅದು ತಪ್ಪಾ? ಪೂರ್ವಪರ ಪರಿಶೀಲಿಸದೇ, ಸಂಬಂಧವೇ ಇಲ್ಲದ ಸರ್ವೆ ನಂಬರ್ ತಂದು ಭೂಮಿ ಕಬಳಿಸಿರುವುದಾಗಿ ಆರೋಪಿಸಿದ್ದಾರೆ' ಎಂದು ದೂರಿದರು.

12 ತಾಸು ಕಲಾಪ ನಡೆಸಿದ ಹೊರಟ್ಟಿ

ವಿಧಾನಸಭೆ ಅಧಿವೇಶನ ಸಮಾಪ್ತಿ ಬಳಿಕ ಪರಿಷತ್‌ನಲ್ಲಿ ರಾತ್ರಿವರೆಗೂ ಚರ್ಚೆ

ಪ್ರಜಾವಾಣಿ ವಾರ್ತೆ


ಬಸವರಾಜ ಹೊರಟ್ಟಿ

ಬೆಂಗಳೂರು: ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ನಡೆದ ವಿಧಾನ ಮಂಡಲದ ಅಧಿವೇಶನದ ಕಡೆಯ ದಿನವಾದ ಶುಕ್ರವಾರ ವಿಧಾನ ಪರಿಷತ್ತು ಸತತ 12 ತಾಸಿನ ಕಲಾಪಕ್ಕೆ ಸಾಕ್ಷಿಯಾಯಿತು. ಸಭಾಪತಿ ಬಸವರಾಜ ಹೊರಟ್ಟಿ ಬೆಳಿಗ್ಗೆಯಿಂದ ರಾತ್ರಿಯವರೆಗೂ ಬಿಡುವು ನೀಡದೆ ಕಲಾಪ ನಡೆಸಿದರು.

ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ಕಲಾಪ ಆರಂಭವಾಯಿತು. ಕಲಾಪ ಪಟ್ಟಿಯಲ್ಲಿ ಇದ್ದ ಪ್ರಶ್ನೋತ್ತರ, ತಡೆಹಿಡಿಯಲಾದ ಪ್ರಶ್ನೆಗಳನ್ನು ತ್ವರಿತವಾಗಿ ಮುಗಿಸಿದ ಸಭಾಪತಿ ಅವರು ಬೆಳಿಗ್ಗೆ 11.15ರ ವೇಳೆಗೆ, 'ದ್ವೇಷ ಭಾಷಣ ಮತ್ತು ದ್ವೇಷಾಪರಾಧ ತಡೆ ಪ್ರತಿಬಂಧಕ ಮಸೂದೆ–2025' ಅನ್ನು ಸದನದ ಪರ್ಯಾವಲೋಚನೆಗೆ ಹಾಕಿದರು.

ಈ ಒಂದು ಮಸೂದೆಯ ಮೇಲೆಯೇ 15 ಸದಸ್ಯರು ಮಾತನಾಡಿದರು. ಸಂಜೆ 6ವರೆಗೂ ಚರ್ಚೆ ನಡೆಯಿತು. ಮಸೂದೆ ಕುರಿತಾಗಿ ವಿರೋಧ ಪಕ್ಷದ ಸದಸ್ಯರು ಆಕ್ಷೇಪ ಎತ್ತುತ್ತಿದ್ದಾಗ, ಆಡಳಿತ ಪಕ್ಷದ ಸದಸ್ಯರು ಎದ್ದುನಿಂತು ಅಡ್ಡಿಪಡಿಸಿದರು. ಎಲ್ಲರು ಮಾತನಾಡುವಾಗಲೂ ಎದ್ದು ನಿಲ್ಲುತ್ತಿದ್ದ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ಅವರನ್ನು ಗದರಿಸಿ ಕೂರಿಸಿದ ಬಸವರಾಜ ಹೊರಟ್ಟಿ ಅವರು ಕಲಾಪ ಸುಗಮವಾಗಿ ನಡೆಯುವಂತೆ ಮಾಡುತ್ತಿದ್ದರು.

ಬಿಜೆಪಿಯ ಸಿ.ಟಿ.ರವಿ ಅವರು ಚರ್ಚೆಯ ವೇಳೆ, 'ಈ ಸದನಕ್ಕೆ ನಾನೂ ಶಾಶ್ವತ ಅಲ್ಲ, ನೀವೂ ಶಾಶ್ವತ ಅಲ್ಲ' ಎಂದು ಸಭಾಪತಿ ಅವರನ್ನು ಉದ್ದೇಶಿಸಿ ಹೇಳಿದರು. ಈ ಮಾತಿಗೆ ಸದನದಲ್ಲಿ ತೀವ್ರ ಗದ್ದಲ ಏರ್ಪಟ್ಟಿತು. ಸಭಾಪತಿ ಸೂಚನೆ ಬಳಿಕ ಗದ್ದಲ ತಹಬಂದಿಗೆ ಬಂತು.

ಮಧ್ಯಾಹ್ನ 2ರ ಹೊತ್ತಿಗೆ ಸದಸ್ಯರಲ್ಲಿ ಕೆಲವರು ಊಟಕ್ಕೆ ಬಿಡುವಂತೆ ಮನವಿ ಮಾಡಿದರು. 'ಎಲ್ಲರೂ ಗದ್ದಲ ಮಾಡುತ್ತಿರುವ ಕಾರಣಕ್ಕೆ ಈ ಮಸೂದೆ ಮೇಲಿನ ಚರ್ಚೆ ಮುಗಿಯುವವರೆಗೂ ಊಟಕ್ಕೆ ಬಿಡುವುದಿಲ್ಲ' ಎಂದು ಹೊರಟ್ಟಿ ಅವರು ಚರ್ಚೆಯನ್ನು ಮುಂದುವರೆಸಿದರು.

ಉತ್ತರ ಕರ್ನಾಟಕದ ಸಮಸ್ಯೆಗಳ ಬಗ್ಗೆ ಸದಸ್ಯರು ಎತ್ತಿದ್ದ ಪ್ರಶ್ನೆಗಳಿಗೆ ಉತ್ತರ ನೀಡಿದ ಸಿದ್ದರಾಮಯ್ಯ ಅವರು ಸುಮಾರು 6.30ರಿಂದ 9.40ರವರೆಗೂ ಸುದೀರ್ಘವಾಗಿ ಮಾತನಾಡಿದರು.

ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು, ಕೇಂದ್ರ ಸರ್ಕಾರವನ್ನು ಒತ್ತಾಯಿಸಲು ಕೈಗೊಂಡಿದ್ದ ನಿರ್ಣಯಗಳನ್ನು ಮಂಡಿಸಿದರು. ಈ ನಿರ್ಣಯಗಳಿಗೆ ಅಂಗೀಕಾರ ಪಡೆದು, ಅಧಿವೇಶನವನ್ನು ಅನಿರ್ದಿಷ್ಟಾವಧಿವರೆಗೆ ಮುಂದೂಡುವಷ್ಟರಲ್ಲಿ ರಾತ್ರಿ 10 ಕಳೆದಿತ್ತು.

5 ಹುಲಿ ಓಡಾಟ: ಗ್ರಾಮಸ್ಥರಲ್ಲಿ ಆತಂಕ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಗೊಳಪಡುವ ತಾಲ್ಲೂಕಿನ ನಂಜೇದೇವನಪುರ ಗ್ರಾಮದ ಜಮೀನಿನಲ್ಲಿ ಇತ್ತೀಚೆಗೆ ಐದು ಹುಲಿಗಳು ಕಾಣಿಸಿಕೊಂಡಿವೆ. ಇದು ಸ್ಥಳೀಯರು ಹಾಗೂ ಸುತ್ತಮುತ್ತಲ ಗ್ರಾಮಸ್ಥರ ಆತಂಕಕ್ಕೆ ಕಾರಣವಾಗಿದೆ.

ತಾಯಿ ಹುಲಿ ಹಾಗೂ ನಾಲ್ಕು ಹುಲಿ ಮರಿಗಳು ಸಮೀಪದ ಆನೆಮಡುವಿನ ಕೆರೆಯಲ್ಲಿ ನೀರು ಕುಡಿದು ತೆರಳುತ್ತಿರುವ ದೃಶ್ಯಗಳು ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿವೆ. 'ಅವು ಜನ, ಜಾನುವಾರು ಮೇಲೆ ದಾಳಿ ಮಾಡುವ ಮುನ್ನ ಅರಣ್ಯ ಇಲಾಖೆ ಅಧಿಕಾರಿಗಳು ಸೆರೆ ಹಿಡಿಯಬೇಕು' ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.


ಹುಲಿಗಳ ಓಡಾಟ ಕ್ಯಾಮೆರಾದಲ್ಲಿ ಸೆರೆ

'ಹುಲಿ ಹಾಗೂ ಮರಿಗಳನ್ನು ಸೆರೆ ಹಿಡಿಯಲು ಅರಣ್ಯ ಇಲಾಖೆ ಸಿದ್ಧತೆ ಮಾಡಿಕೊಂಡಿದೆ. ಅರಣ್ಯದೊಳಗೆ ಅಳವಡಿಸಿರುವ ಕ್ಯಾಮೆರಾಗಳಲ್ಲಿ ದಾಖಲಾಗಿರುವ ದೃಶ್ಯಗಳನ್ನು ಪರಿಶೀಲಿಸುತ್ತಿದ್ದೇವೆ. ಎನ್‌ಟಿಸಿಎ ಮಾರ್ಗಸೂಚಿಯಂತೆ ಎಸ್‌ಒಪಿ ಪ್ರಕಾರ ಹುಲಿಗಳ ಸೆರೆಗೆ ತಂಡ ರಚನೆ ಮಾಡಲಾಗುವುದು. ಎನ್‌ಟಿಸಿಎ ನಾಮನಿರ್ದೇಶನ ಸದಸ್ಯ, ಚೀಫ್ ವೈಲ್ಡ್‌ಲೈಫ್ ವಾರ್ಡನ್, ಆರ್‌ಎಫ್‌ಒ ಹಾಗೂ ವೈದ್ಯರನ್ನು ಒಳಗೊಂಡ ತಂಡ ಕಾರ್ಯಾಚರಣೆಯಲ್ಲಿ ಭಾಗವಹಿಸಲಿದೆ' ಎಂದು ಬಿಆರ್‌ಟಿ ಡಿಸಿಎಫ್ ಶ್ರೀಪತಿ ಮಾಹಿತಿ ನೀಡಿದರು.

ಮಕ್ಕಳ ಮೇಲೆ ಹಲ್ಲೆ: ವಿಡಿಯೊ ವೈರಲ್

ಬಾಗಲಕೋಟೆ: ಇಲ್ಲಿನ ನವನಗರದ ದಿವ್ಯ ಜ್ಯೋತಿ ಅಂಧಮಕ್ಕಳ ಶಾಲೆಯಲ್ಲಿ ಅಲ್ಲಿನ ಸಿಬ್ಬಂದಿ ಮಕ್ಕಳ ಮೇಲೆ ಹಲ್ಲೆ ಮಾಡುತ್ತಿರುವ ವಿಡಿಯೊ ವೈರಲ್ ಆಗಿದೆ. ಶಾಲೆಯಲ್ಲಿದ್ದ ಬುದ್ಧಿಮಾಂದ್ಯ ಬಾಲಕ ದೀಪಕ್ ರಾಠೋಡ (16) ಮೇಲೆ ಸಂಸ್ಥೆಯ ಅಧ್ಯಕ್ಷ ಅಕ್ಷಯ ಇಂದೊಲ್ಕರ್ ಎಂಬುವರು ಥಳಿಸುವ, ಅವರ ಪತ್ನಿ ಬಾಲಕನೊಬ್ಬನ ಕಣ್ಣಿಗೆ ಖಾರದ ಪುಡಿ ಎರೆಚಿರುವ ದೃಶ್ಯಗಳು ವಿಡಿಯೊದಲ್ಲಿವೆ.

'ಬಾಲಕನ ಕೈ, ಕಾಲುಗಳ ಮೇಲೆ ಬಾಸುಂಡೆ ಮೂಡಿವೆ. ಬಾಲಕ ಅರಚಾಡುತ್ತಿದ್ದರೂ ಹಲ್ಲೆ ನಡೆದಿದೆ. ಕೆಲ ಶಿಕ್ಷಕರು ಅಲ್ಲಿದ್ದರೂ ಬಿಡಿಸಲು ಹೋಗದೇ, ನೋಡುತ್ತ ನಿಂತಿದ್ದಾರೆ. ಮುಖ್ಯಸ್ಥ ಅಕ್ಷಯ ಮತ್ತು ಅವರ ಪತ್ನಿ ಜೊತೆಗೆ ಶಾಲೆಯ ಇನ್ನಿಬ್ಬರು ಸಿಬ್ಬಂದಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದೇವೆ. ಹಲ್ಲೆಗೆ ಸಂಬಂಧಿಸಿದಂತೆ ಬಾಲಕನ ತಂದೆ ದೂರು ನೀಡಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

ಅಧಿಕಾರಿಗಳ ಭೇಟಿ: ವಿಡಿಯೊ ವೈರಲ್ ಆಗುತ್ತಿದ್ದಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ಪ್ರಭಾಕರ್, ಜಿಲ್ಲಾ ವಿಕಲಚೇತನರ ಇಲಾಖೆ ಅಧಿಕಾರಿ ಗಿರಿಜಾ ಪಾಟೀಲ ಮತ್ತು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ವೀಣಾ ಸೇರಿ ವಿವಿಧ ಅಧಿಕಾರಿಗಳು ಶಾಲೆಗೆ ಭೇಟಿ ನೀಡಿ, ಪರಿಶೀಲಿಸಿದರು.

'ದಾಖಲೆಗಳನ್ನು ಪರಿಶೀಲಿಸಿದಾಗ ಶಾಲೆಯು ಸರ್ಕಾರ, ಇಲಾಖೆಯಿಂದ ಯಾವುದೇ ಪರವಾನಗಿ ತೆಗೆದುಕೊಳ್ಳದಿರುವುದು ಗಮನಕ್ಕೆ ಬಂದಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಶಾಲೆಯಲ್ಲಿ 49 ಮಕ್ಕಳು ಇದ್ದು, ಅವರೆಲ್ಲ ಬೇರೆ ಬೇರೆ ಜಿಲ್ಲೆ ಮತ್ತು ರಾಜ್ಯಗಳಿಂದ ಬಂದಿದ್ದಾರೆ. ಸಂಸ್ಥೆಯನ್ನು ಬಂದ್ ಮಾಡಿಸಿ, ಅಲ್ಲಿರುವ ಮಕ್ಕಳನ್ನು ಅವರ ಪಾಲಕರಿಗೆ ಒಪ್ಪಿಸುವ ಕೆಲಸ ಮಾಡಲಾಗುವುದು. ಇಲಾಖೆಯ ಶಾಲೆಗಳಿಗೆ ಸೇರಿಸುವ ವ್ಯವಸ್ಥೆ ಮಾಡಲಾಗುವುದು. ಘಟನೆ ಬಗ್ಗೆ ಇಲಾಖೆ ಹಿರಿಯ ಅಧಿಕಾರಿಗಳಿಗೆ ಸಮಗ್ರ ವರದಿ ಸಲ್ಲಿಸಲಾಗುವುದು' ಎಂದು ಪ್ರಭಾಕರ ಅವರು ತಿಳಿಸಿದರು.

ಅತ್ಯಾಚಾರ: ಸ್ವಾಮಿಗೆ 35 ವರ್ಷ ಶಿಕ್ಷೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಬಾಲಕಿ ಮೇಲೆ ಅತ್ಯಾಚಾರ ಎಸಗಿದ ಆರೋಪಿ ಜಿಲ್ಲೆಯ ರಾಯಬಾಗ ತಾಲ್ಲೂಕಿನ ಮೇಕಳಿ ಗ್ರಾಮದ ರಾಮಲಿಂಗ ಮಠದ ಹಠಯೋಗಿ ಲೋಕೇಶ್ವರ ಸ್ವಾಮೀಜಿಗೆ (30) ಜಿಲ್ಲಾ ಪೋಕ್ಸೊ ನ್ಯಾಯಾಲಯ 35 ವರ್ಷ ಕಠಿಣ ಕಾರಾಗೃಹ ಶಿಕ್ಷೆ ಮತ್ತು ₹1 ಲಕ್ಷ ದಂಡ ವಿಧಿಸಿದೆ.

ಕಲಬುರಗಿ ಜಿಲ್ಲೆ ಚಿತ್ತಾಪುರ ಲೋಕೇಶ್ವರ ಸಾಬಣ್ಣ ಜಂಬಗಿ ಎಂಬಾತ ಮೇಕಳಿ ಗ್ರಾಮದಲ್ಲಿ ಮಠ ಕಟ್ಟಿಕೊಂಡು ಸ್ವಾಮೀಜಿ ಎಂದು ಘೋಷಿಸಿಕೊಂಡಿದ್ದ. ಇದೇ ವರ್ಷದ ಮೇ 13ರಂದು ಬಾಲಕಿಯನ್ನು ತನ್ನ ಕಾರಿನಲ್ಲಿ ಮನೆಗೆ ಬಿಡುವ ನೆಪದಲ್ಲಿ ಅಪಹರಿಸಿದ್ದ. ನಂತರ ಮೇ 14 ಮತ್ತು 16ರಂದು ಕೃತ್ಯವೆಸಗಿದ್ದ. ಈ ಸಂಬಂಧ ಮೂಡಲಗಿ ಠಾಣೆಯಲ್ಲಿ ದೂರು ದಾಖಲಾಗಿತ್ತು.


ಹಠಯೋಗಿ ಲೋಕೇಶ್ವರ ಸ್ವಾಮಿ

ತನಿಖಾಧಿಕಾರಿ ಶ್ರೀಶೈಲ ಬ್ಯಾಕೋಡ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ವಿಶೇಷ ಸರ್ಕಾರಿ ಅಭಿಯೋಜಕ ಎಲ್.ವಿ.ಪಾಟೀಲ ವಾದ ಮಂಡಿಸಿದರು. ನ್ಯಾಯಾಧೀಶೆ ಸಿ.ಎಂ.ಪುಷ್ಪಲತಾ ಅವರು ಶನಿವಾರ ತೀರ್ಪು ಪ್ರಕಟಿಸಿದ್ದಾರೆ.

ಶೃಂಗೇರಿ ಭಾರತೀತೀರ್ಥ ಸ್ವಾಮೀಜಿ ಅವರ ಸನ್ಯಾಸ ಸ್ವೀಕಾರ ಸುವರ್ಣ ಮಹೋತ್ಸವ
ಅರಮನೆ ಬೆಳಕಿನಲ್ಲಿ 'ಸ್ತುತಿ ಶಂಕರ' ವೈಭವ

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಅಂಬಾವಿಲಾಸ ಅರಮನೆಯ ಜಗಮಗಿಸುವ ಬೆಳಕಿನ ವೇದಿಕೆ ಎದುರು ಸಾವಿರಾರು ಭಕ್ತರು 'ಸ್ತುತಿ ಶಂಕರ' ಸ್ತೋತ್ರ ಪಠಿಸಿ, ಶೃಂಗೇರಿ ಶಾರದಾ ಪೀಠದ ಭಾರತೀ ತೀರ್ಥ ಸ್ವಾಮೀಜಿ ಅವರ ಸನ್ಯಾಸ ಸ್ವೀಕಾರದ ಸುವರ್ಣ ಮಹೋತ್ಸವದ ವೈಭವಕ್ಕೆ ಸಾಕ್ಷಿಯಾದರು.

ನಾಡಿನ ವಿವಿಧ ಮೂಲೆಗಳಿಂದ ಬಂದಿದ್ದ ಭಕ್ತರು, ಆದಿ ಶಂಕರಾಚಾರ್ಯರು ರಚಿಸಿದ 'ಕಲ್ಯಾಣವೃಷ್ಟಿಸ್ತವ', 'ಶಿವಪಂಚಾಕ್ಷರ ನಕ್ಷತ್ರಮಾಲಾ ಸ್ತೋತ್ರ' ಹಾಗೂ 'ಲಕ್ಷ್ಮಿನೃಸಿಂಹಕರುಣಾರಸ ಸ್ತೋತ್ರ'ವನ್ನು ಶನಿವಾರ ಏಕಕಂಠದಲ್ಲಿ ಸುಶ್ರಾವ್ಯವಾಗಿ ವಾಚಿಸಿ ಭಕ್ತಿಯ ನುಡಿ ಬೆಳಕನ್ನು ಹರಿಸಿದರು.

ಶೃಂಗೇರಿ ಪೀಠದ ವಿಧುಶೇಖರ ಭಾರತೀ ಸ್ವಾಮೀಜಿ ಸಾನ್ನಿಧ್ಯದಲ್ಲಿ ವೇದಘೋಷ ಮತ್ತು ವಾಗ್ದೇವಿ ಸ್ತುತಿಯೊಂದಿಗೆ ಆರಂಭವಾದ ಕಾರ್ಯಕ್ರಮದಲ್ಲಿ, ವರ್ಷವಿಡೀ ಮನೆಯಲ್ಲಿ ಭಕ್ತಿಯಿಂದ ಅಭ್ಯಾಸ ಮಾಡಿದ್ದ ಶಂಕರಾಚಾರ್ಯರ ಸ್ತೋತ್ರಗಳನ್ನು ಹೇಳುವಾಗ, ಭಕ್ತಿಭಾವ ಸಂಚಾರದ ದಿವ್ಯಾನುಭೂತಿ ಪಡೆದರು.

ವಿಧುಶೇಖರ ಭಾರತೀ ಸ್ವಾಮೀಜಿ ಮಾತನಾಡಿ, 'ಸ್ತೋತ್ರಗಳಿಗೆ ಅಪಾರ ಮಹಿಮೆಯಿದ್ದು, ಆರಾಧ್ಯ ದೇವರ ಜೊತೆ ಮಾತನಾಡುವ ಭಾಷೆಯಾಗಿದೆ. ಸನಾತನ ಹಿಂದೂ ಧರ್ಮದ ಉದ್ಧಾರಕರಾದ ಆದಿಶಂಕರಾಚಾರ್ಯರು ದೇವರೊಂದಿಗೆ ಮಾತನಾಡಲು ಜನರಿಗೆ ನೀಡಿದ ಭಾಷೆಯೇ ಸ್ತೋತ್ರಗಳಾಗಿವೆ. ಅದ್ವೈತ ಸಿದ್ಧಾಂತ ಸಾಕ್ಷಾತ್ಕಾರ ಮಾಡಿಕೊಳ್ಳುವ ಸಾಧನಾ ಮಾರ್ಗವಾಗಿವೆ' ಎಂದರು.

ಕೃಷ್ಣರಾಜನಗರದ ಎಡತೊರೆ ಯೋಗಾನಂದೇಶ್ವರ ಸರಸ್ವತಿ ಮಠದ ಶಂಕರಭಾರತೀ ಸ್ವಾಮೀಜಿ ಮಾತನಾಡಿದರು.

ಬ್ರಹ್ಮಾನಂದ ಭಾರತೀ ಸ್ವಾಮೀಜಿ, ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ತ್ರಿಷಿಕಾ ಕುಮಾರಿ ಒಡೆಯರ್, ಜೆಡಿಎಸ್ ರಾಜ್ಯ ಘಟಕದ ಉಪಾಧ್ಯಕ್ಷ ಸುಧಾಕರ ಶೆಟ್ಟಿ, ಕೆಪಿಸಿಸಿ ಸದಸ್ಯ ಎಚ್.ವಿ.ರಾಜೀವ್, ಬಿಜೆಪಿ ರಾಜ್ಯ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ಆರ್.ರಘು (ಕೌಟಿಲ್ಯ) ಪಾಲ್ಗೊಂಡಿದ್ದರು.

ಮುಖ್ಯಾಂಶಗಳು
- ಶಂಕರಾಚಾರ್ಯ ರಚಿತ ಸ್ತೋತ್ರ ಪಠಣ
- 'ಅದ್ವೈತ' ಸಾಕ್ಷಾತ್ಕಾರದ ಸಾಧನಾ ಮಾರ್ಗ
- ವಿಧುಶೇಖರ ಭಾರತೀ ಸ್ವಾಮೀಜಿ ಸಾನ್ನಿಧ್ಯ


ಶೃಂಗೇರಿ ಶಾರದಾ ಪೀಠದ ಭಾರತೀ ತೀರ್ಥ ಸ್ವಾಮೀಜಿ ಅವರ ಸನ್ಯಾಸ ಸ್ವೀಕಾರದ ಸುವರ್ಣ ಮಹೋತ್ಸವ ಪ್ರಯುಕ್ತ ಮೈಸೂರಿನ ಅಂಬಾವಿಲಾಸ ಅರಮನೆ ಆವರಣದಲ್ಲಿ ಶನಿವಾರ ಆಯೋಜಿಸಿದ್ದ 'ಸ್ತುತಿ ಶಂಕರ' ಸ್ತೋತ್ರಾರ್ಪಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಭಕ್ತರು — ಚಿತ್ರ: ಹಂಪಾ ನಾಗರಾಜ

ಭಾನುವಾರ, ಡಿಸೆಂಬರ್ 21, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 351 | ಪುಟ 20
www.prajavani.net prajavani.net prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಕೌರ್ ಪಡೆ ಸಜ್ಜು
ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಭಾರತ ಮಹಿಳಾ ಕ್ರಿಕೆಟ್ ತಂಡವು ಭಾನುವಾರ ವಿಶಾಖಪಟ್ಟಣದಲ್ಲಿ ಶ್ರೀಲಂಕಾ ವಿರುದ್ಧ ಮೊದಲ ಟಿ20 ಪಂದ್ಯ ಆಡಲಿದೆ

‘ನಖಾಬ್ ವಿವಾದ ಬೇಸರ ತಂದಿದೆ’ 7
ಇಮ್ರಾನ್ ಖಾನ್, ಪತ್ನಿಗೆ 17 ವರ್ಷ ಜೈಲು 8

ಹಾವೇರಿಯ ಬೀಜ ಕ್ರಾಂತಿ

ರೈತರಿಂದ ವೈಜ್ಞಾನಿಕ ಹೈಬ್ರಿಡ್ ಬೀಜ ಉತ್ಪಾದನೆ
•ವ್ಯಾಪಾರಿಗಳಾದ ಸ್ಥಳೀಯರು • ಚಿಗುರಿದ ಆರ್ಥಿಕತೆ

• ಸಂತೋಷ ಜಿಗಳಿಕೊಪ್ಪ

ಒಳನೋಟ

ರಾಣೆಬೆನ್ನೂರಿನ ಬಿತ್ತನೆ ಬೀಜ ಕೃಷಿಗೆ ಬೇಡಿಕೆಯಿದೆ. ಹೊಸಬರು ಈ ಕ್ಷೇತ್ರಕ್ಕೆ ಬರುತ್ತಿದ್ದು, ಸಾಂಪ್ರದಾಯಕ ಬೆಳೆಗಳಿಗಿಂತಲೂ ಬೀಜ ಕೃಷಿಯಲ್ಲಿ ಉತ್ತಮ ಆದಾಯ ಗಳಿಸುತ್ತಿದ್ದಾರೆ
ಬಿ.ಎಚ್. ಜಂಬೂರು, ವ್ಯವಸ್ಥಾಪಕ, ಅಶೋಕ ಸೀಡ್ಸ್ ಕಂಪನಿ



ಹಾವೇರಿ ಜಿಲ್ಲೆಯ ಕದರಮಂಡಲಗಿ ಗ್ರಾಮದ ಪ್ಲಾಟ್‌ನಲ್ಲಿ ಟೊಮೆಟೊ ಗಿಡದಲ್ಲಿನ ಮೊಗ್ಗುಗಳನ್ನು ಬಿಡಿಸಿ ಪರಾಗ ಸ್ಪರ್ಶಕ್ಕೆ ಸಿದ್ಧಪಡಿಸುತ್ತಿರುವ ಕೃಷಿಕ ಮಹಿಳೆ ಪ್ರಜಾವಾಣಿ ಚಿತ್ರ: ಮಾಲತೇಶ ಇಚ್ಚಂಗಿ

ಹಾವೇರಿ: ‘1965ಕ್ಕೂ ಮುನ್ನ ನಮ್ಮ ಹಿರಿಯರು ಸಾಂಪ್ರದಾಯಿಕ ಬೆಳೆಗಳ ಬೀಜೋತ್ಪಾದನೆ ಮಾಡುತ್ತಿದ್ದರು. ಆದರೆ, ಅದು ನಮ್ಮೂರಿನ ಬಿತ್ತನೆ ಬೀಜವೆಂಬುದು ಯಾರಿಗೂ ಗೊತ್ತಾಗುತ್ತಿರಲಿಲ್ಲ. 1965ರ ಹಸಿರು ಕ್ರಾಂತಿ ಸಮಯದಲ್ಲಿ ಹೈಬ್ರೀಡ್ ಬೀಜಗಳು ಬಂದಾಗ ನಮ್ಮೂರಿನಲ್ಲೇ ಮೊದಲಿಗೆ ಬೀಜೋತ್ಪಾದನೆ ಶುರು ಆಯಿತು. ಅಂದಿನಿಂದ ಆರಂಭವಾದ ಬೀಜೋತ್ಪಾದನೆ ಕೆಲಸ, ಇಂದು ಹೆಮ್ಮರವಾಗಿ ಬೆಳೆದಿದೆ. ರಾಜ್ಯ–ಹೊರ ರಾಜ್ಯವಷ್ಟೇ ಅಲ್ಲದೇ ವಿಶ್ವದ ಹಲವು ದೇಶಗಳಿಗೆ ನಮ್ಮೂರಿನ ಬೀಜಗಳು ರಫ್ತಾಗುತ್ತಿದೆ. ನಮ್ಮ ಬದುಕಿನಲ್ಲೂ ಸುಧಾರಣೆ ಕಂಡಿದ್ದೇವೆ’...

ಏಷ್ಯಾ ಖಂಡದಲ್ಲಿಯೇ ಬೀಜೋತ್ಪಾದನೆಗೆ ಹೆಸರುವಾಸಿಯಾದ ಹಾವೇರಿ ಜಿಲ್ಲೆಯ ರಾಣೆಬೆನ್ನೂರಿನ ರೈತ ಶಂಭು ಶೆಟ್ಟರ ಅವರ ಅನುಭವದ ಮಾತಿದು.

ಹಸಿರು ಕ್ರಾಂತಿಗೆ ಮುನ್ನುಡಿ ಬರೆದ 1965ರಲ್ಲಿ ಹೆಚ್ಚಿನ ಇಳುವರಿ ನೀಡುವ ಹೈಬ್ರೀಡ್ ತಳಿ ಪರಿಚಯಿಸಲು ಸಜ್ಜಾಗಿದ್ದ ಕೃಷಿ ವಿಜ್ಞಾನಿಗಳು, ಗಂಡು–ಹೆಣ್ಣು ಸಸಿಗಳನ್ನು ಕೃತಕ ಪರಾಗ ಸ್ಪರ್ಶದಿಂದ ಬೆಳೆಸಲು ಮೊಟ್ಟಮೊದಲ ಬಾರಿಗೆ ರಾಣೆಬೆನ್ನೂರು ಆಯ್ಕೆ ಮಾಡಿಕೊಂಡರು. ‘ವಾತಾವರಣವೇ ವರದಾನ’ವಾಗಿದ್ದ ಈ ಪ್ರದೇಶದಲ್ಲಿ ಆರಂಭವಾದ ಬೀಜೋತ್ಪಾದನೆ, ಈಗ ಉದ್ಯಮವಾಗಿಯೂ ಮಾರ್ಪಟ್ಟಿದೆ. ಹೊರ ರಾಜ್ಯ ಮತ್ತು ವಿದೇಶಗಳಲ್ಲಿ ಮೊಳಕೆ ಒಡೆದು ಫಲ ನೀಡುತ್ತಿವೆ. ಬೀಜಗಳ ತವರೂರು ಆಗಿಯೂ ರಾಣೆಬೆನ್ನೂರು ಪ್ರಸಿದ್ಧಿ ಪಡೆದಿದೆ.

ಮೆಕ್ಕೆಜೋಳ, ಜೋಳ, ಸಜ್ಜೆ, ಮೇವಿನ ಜೋಳ, ಟೊಮೆಟೊ, ಚವಳಿಕಾಯಿ, ಬೆಂಡೆಕಾಯಿ, ಹಾಗಲ ಕಾಯಿ, ಹಿರೇಕಾಯಿ, ಸೌತೆಕಾಯಿ, ಮೆಣಸಿನಕಾಯಿ, ಕುಂಬಳಕಾಯಿ, ಕರಬೂಜ, ಕ್ಯಾರೆಟ್, ಕ್ಯಾಬೇಜ್, ಹೂಕೋಸು, ತರಹೇವಾರಿ ಹೂವುಗಳ ಬೀಜೋತ್ಪಾದನೆಗೆ ಹೇಳಿ ಮಾಡಿಸಿದ ವಾತಾವರಣ ವಿರುವ ರಾಣೆಬೆನ್ನೂರಿನಲ್ಲಿ 200ಕ್ಕೂ ಹೆಚ್ಚು ಕಂಪನಿಗಳು ಮೊಕ್ಕಾಂ ಹೂಡಿವೆ. ಇಲ್ಲಿ ಉತ್ಪಾದನೆ ಯಾಗುವ ಬೀಜಗಳು, ಭಾರತ ಮಾತ್ರವಲ್ಲದೇ ಚೀನಾ, ಜಪಾನ್, ಆಸ್ಟ್ರೇಲಿಯಾ, ಇಂಡೋನೇಷ್ಯಾ, ದಕ್ಷಿಣ ಕೊರಿಯಾ, ವಿಯೆಟ್ನಾಂ, ಸಿಂಗಪುರ, ನ್ಯೂಜಿಲೆಂಡ್, ತೈವಾನ್, ಮ್ಯಾನ್ಮಾರ್, ಥಾಯ್ಲೆಂಡ್, ಮಲೇಷ್ಯಾ, ಪಾಕಿಸ್ತಾನ, ಬಾಂಗ್ಲಾದೇಶ, ನೇಪಾಳ, ಶ್ರೀಲಂಕಾ, ಭೂತಾನ್ ಸೇರಿದಂತೆ ಹಲವು ದೇಶಗಳಿಗೆ ರಫ್ತಾಗುತ್ತಿವೆ.

▶6

ಏಜೆಂಟರ ಹಾವಳಿ

ರೈತರು ಹಾಗೂ ಕಂಪನಿಗಳ ನಡುವಿನ ವ್ಯವಹಾರದಲ್ಲಿ ಕೆಲ ಷರತ್ತುಗಳಿಗೆ ಚ್ಯುತಿ ಉಂಟಾಗಿದ್ದರಿಂದ, ಇತ್ತೀಚಿನ ದಿನಗಳಲ್ಲಿ ಏಜೆಂಟರ ಹಾವಳಿ ಹೆಚ್ಚಾಗಿದೆ. ಕಂಪನಿ ಹಾಗೂ ರೈತರ ನಡುವಿನ ಸಂಪರ್ಕ ಸೇತುವೆಯಾಗಿ ಕೆಲಸ ಮಾಡುತ್ತಿರುವ ಏಜೆಂಟರು, ಎರಡೂ ಕಡೆಯಿಂದಲೂ ಕಮಿಷನ್ ಪಡೆದುಕೊಂಡು ಲಾಭದ ದಾರಿಯಲ್ಲಿ ಸಾಗಿದ್ದಾರೆ.

‘ಕಂಪನಿಯವರು ನೀಡಿದ್ದ ಬೀಜಗಳನ್ನು ಉತ್ಪಾದಿಸಿದ್ದ ಕೆಲ ರೈತರು, ಅದನ್ನು ವಾಪಸು ಕಂಪನಿಗೆ ನೀಡದೇ ಮುಚ್ಚಿಟ್ಟುಕೊಂಡು ಖುದ್ದಾಗಿ ಮಾರಿದ್ದರು. ಹೀಗಾಗಿ, ಕಂಪನಿಯು ರೈತರ ಮೇಲಿನ ವಿಶ್ವಾಸ ಕಳೆದುಕೊಂಡಿತು. ಇದೇ ಏಜೆಂಟರ ಹುಟ್ಟಿಗೂ ಕಾರಣವಾಯಿತು. ಹಲವು ಕಂಪನಿಗಳು ರಾಣೆಬೆನ್ನೂರು ತೊರೆದು ಬೇರೆಡೆ ಹೋದವು. ಇದೊಂದು ಬೆಳವಣಿಗೆ, ಬೀಜಗಳ ತವರೂರಿಗೊಂದು ಕಪ್ಪು ಚುಕ್ಕೆಯಾಯಿತು’ ಎಂದು ರೈತ ಮುಖಂಡ ರವೀಂದ್ರಗೌಡ ಪಾಟೀಲ ಹೇಳಿದರು.

‘ಕೆಲ ರೈತರು ಮಾತ್ರ ಇಂದಿಗೂ ಕಂಪನಿಯವರ ವಿಶ್ವಾಸ ಉಳಿಸಿಕೊಂಡು ಬೀಜೋತ್ಪಾದನೆ ಮಾಡುತ್ತಿದ್ದಾರೆ. ಉಳಿದೆಲ್ಲ ಕಂಪನಿಗಳು ಇಂದು ಏಜೆಂಟರ ಮೂಲಕ ವ್ಯವಹಾರ ಮಾಡುತ್ತಿವೆ. ಏಜೆಂಟರೇ ಕಂಪನಿ ಪರವಾಗಿ ಗಂಡು–ಹೆಣ್ಣು ಸಸಿ ಕೊಡುತ್ತಿದ್ದಾರೆ. ರೈತರು ಬೆಳೆದ ಬೀಜಗಳನ್ನು ಖರೀದಿಸಿ, ಕಂಪನಿಗೆ ನೀಡುತ್ತಿದ್ದಾರೆ’ ಎಂದು ತಿಳಿಸಿದರು.


ರೈಲು ಡಿಕ್ಕಿ: 7 ಆನೆಗಳ ಸಾವು

ನಗಾಂವ್/ಗುವಾಹಟಿ (ಪಿಟಿಐ): ಅಸ್ಸಾಂನ ಹೋಜಾಯಿ ಜಿಲ್ಲೆಯಲ್ಲಿ ಶನಿವಾರ ತಡರಾತ್ರಿ ಸಾಯಿರಂಗ್–ನವದೆಹಲಿ ರಾಜಧಾನಿ ಎಕ್ಸ್‌ಪ್ರೆಸ್ ರೈಲು ಡಿಕ್ಕಿ ಹೊಡೆದು ಏಳು ಆನೆಗಳು ಮೃತಪಟ್ಟ ದಾರುಣ ಘಟನೆ ಸಂಭವಿಸಿದೆ.

ರಾತ್ರಿ 2.17ರ ಸುಮಾರಿಗೆ ಘಟನೆ ನಡೆದಿದೆ. ದಟ್ಟ ಮಂಜು ಆವರಿಸಿದ್ದರಿಂದ ಲೊಕೊ ಪೈಲಟ್‌ಗೆ ದೂರದಿಂದ ಆನೆ ಹಿಂಡು ಕಾಣಿಸಲಿಲ್ಲ. ರೈಲಿಗೆ ತೀರಾ ಸಮೀಪದಲ್ಲಿ ಆನೆಗಳನ್ನು ನೋಡಿದ ಲೊಕೊ ಪೈಲಟ್ ತಕ್ಷಣವೇ ಬ್ರೇಕ್ ಹಾಕಿದರೂ ಅಷ್ಟರಲ್ಲಾಗಲೇ ಅವಘಡ ಸಂಭವಿಸಿತ್ತು. ಹಿಂಡಿನಲ್ಲಿದ್ದ ಒಂದು ಆನೆ ಗಂಭೀರ ಗಾಯಗಳೊಂದಿಗೆ ಬದುಕುಳಿದಿದೆ. ರೈಲಿನ ಎಂಜಿನ್ ಒಳಗೊಂಡು ಐದು ಬೋಗಿಗಳು ಹಳಿ ತಪ್ಪಿವೆ.

▶7

ಘಟನೆ ವಿವರ



- **ಎಲ್ಲಿ:** ಗುವಾಹಟಿಯಿಂದ 126 ಕಿ.ಮೀ ದೂರದಲ್ಲಿರುವ ಈಶಾನ್ಯ ಗಡಿ ರೈಲ್ವೆಯ ಲುಮ್ಡಿಂಗ್ ವಲಯದ ಜಮುನಾಮುಖ್–ಕಾಂಪುರ ವಿಭಾಗದ ಚಂಗೋರಿ ಗ್ರಾಮದ ಸಮೀಪ
- **ಹೇಗೆ:** ದಟ್ಟ ಮಂಜು ಕವಿದಿದ್ದರಿಂದ ಲೊಕೊ ಪೈಲಟ್‌ಗೆ ಆನೆ ಹಿಂಡು ಕಾಣಿಸದೆ ಅವಘಡ
- **ಯಾವಾಗ:** ಶನಿವಾರ ರಾತ್ರಿ 2.17ರ ಸುಮಾರಿಗೆ
- **ಹಾನಿ:** 7 ಆನೆಗಳ ಸಾವು; ಒಂದು ಆನೆ ಗಂಭೀರ, ಹಳಿ ತಪ್ಪಿದ 5 ಬೋಗಿ

ಕಂಪನಿಗಳ ಮೇಲೆ ಪರಿಸರ ರಕ್ಷಣೆಯ ಹೊಣೆ: ‘ಸುಪ್ರೀಂ’

ನವದೆಹಲಿ (ಪಿಟಿಐ): ಕಾರ್ಪೊರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆಯನ್ನು (ಸಿಎಸ್‌ಆರ್) ಕಾರ್ಪೊರೇಟ್ ಪರಿಸರ ಜವಾಬ್ದಾರಿಯಿಂದ (ಸಿಇಆರ್) ಬೇರ್ಪಡಿಸಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿದೆ.

ಪರಿಸರ ಮತ್ತು ಪರಿಸರ ವ್ಯವಸ್ಥೆಯಲ್ಲಿನ ಇತರ ಜೀವಿಗಳ ಸಮಾನ ಹಕ್ಕುಗಳನ್ನು ನಿರ್ಲಕ್ಷಿಸುವಂತಿಲ್ಲ. ಅವುಗಳನ್ನು ನಿರ್ಲಕ್ಷಿಸುವ ಕಂಪನಿಗಳು ತಮ್ಮನ್ನು ಸಾಮಾಜಿಕವಾಗಿ ಹೊಣೆಗಾರರು ಎಂದು ಹೇಳಿಕೊಳ್ಳಲು ಆಗದು ಎಂದು ನ್ಯಾಯಮೂರ್ತಿಗಳಾದ ಪಿ.ಎಸ್.ನರಸಿಂಹ ಮತ್ತು ಎ.ಎಸ್. ಚಂದೂರ್ಕರ್ ಅವರ ಪೀಠ ಖಾರವಾಗಿ ಹೇಳಿದೆ .

▶7

‘ನುಸುಳುಕೋರರ ಮೇಲೆ ಎಸ್‌ಐಆರ್‌ನ ಪ್ರಹಾರ’



ಪ್ರಜಾವಾಣಿ ವಾರ್ತೆ/ ಪಿಟಿಐ

ಗುವಾಹಟಿ: ‘ಚುನಾವಣಾ ಆಯೋಗವು ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಮೂಲಕ ನುಸುಳುಕೋರರನ್ನು ಚುನಾವಣಾ ಪ್ರಕ್ರಿಯೆಯಿಂದ ಹೊರಗಿಡಲು ಯತ್ನಿಸುತ್ತಿದ್ದರೆ, ‘ದೇಶದ್ರೋಹಿ’ಗಳು ಈ ನುಸುಳುಕೋರರನ್ನು ರಕ್ಷಿಸಲು ಪ್ರಯತ್ನಿಸುತ್ತಿದ್ದಾರೆ’ ಎಂದು ಪ್ರಧಾನಿ ಮೋದಿ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು.

ಗುವಾಹಟಿ ವಿಮಾನ ನಿಲ್ದಾಣದಲ್ಲಿ ಹೊಸ ಟರ್ಮಿನಲ್ ಉದ್ಘಾಟನೆಯ ಬಳಿಕ ನಡೆದ ರ‍್ಯಾಲಿಯಲ್ಲಿ ಮಾತನಾಡಿದ ಅವರು, ‘ನುಸುಳುಕೋರರ ವಿರುದ್ಧ ಕೇಂದ್ರ ಸರ್ಕಾರ ಕಠಿಣ ಕ್ರಮ ಕೈಗೊಂಡಿದೆ. ಅರಣ್ಯವನ್ನು ಕಬಳಿಸಿ, ಅಸ್ಸಾಂನ ಭದ್ರತೆ ಮತ್ತು ಅಸ್ಮಿತೆಗೆ ಅಡ್ಡಿಯಾಗಿರುವ ನುಸುಳುಕೋರರನ್ನು ಕಾಂಗ್ರೆಸ್ ದಶಕಗಳಿಂದ ರಕ್ಷಿಸಿಕೊಂಡು ಬಂದಿದೆ. ಈಶಾನ್ಯ ರಾಜ್ಯಗಳಲ್ಲಿ ಕಾಂಗ್ರೆಸ್ ಮಾಡಿದ ಈ ತಪ್ಪನ್ನು ಬಿಜೆಪಿ ಈಗ ಸರಿಪಡಿಸುತ್ತಿದೆ’ ಎಂದರು.

‘ಅಸ್ಸಾಂ ಮತ್ತು ಈಶಾನ್ಯ ರಾಜ್ಯಗಳ ಅಭಿವೃದ್ಧಿಯು ಕಾಂಗ್ರೆಸ್‌ನ ಕಾರ್ಯಸೂಚಿಯ ಭಾಗವೇ ಆಗಿರಲಿಲ್ಲ’ ಎಂದು ದೂರಿದ ಅವರು, ದಶಕಗಳಿಂದ ಕಾಂಗ್ರೆಸ್‌ನ ನಿರ್ಲಕ್ಷ್ಯಕ್ಕೆ ತುತ್ತಾದ ಅಸ್ಸಾಂ, ಈಗ ದೇಶದ ಪ್ರಗತಿಯ ಹೆಬ್ಬಾಗಿಲಾಗಿ ವಿಕಸಿತಗೊಳ್ಳುತ್ತಿದೆ. ಈಶಾನ್ಯ ರಾಜ್ಯಗಳಲ್ಲಿ ಬಿಜೆಪಿಯ ‘ಡಬಲ್ ಎಂಜಿನ್’ ಸರ್ಕಾರದ ಅಭಿವೃದ್ಧಿಯ ವೇಗವು ಬ್ರಹ್ಮಪುತ್ರ ನದಿಯಂತೆ ಎಲ್ಲ ಅಡೆತಡೆಗಳನ್ನು ಮೀರಿ ಮುನ್ನುಗ್ಗುತ್ತಿದೆ’ ಎಂದರು.

ಪ್ರಧಾನಿ ಪಶ್ಚಿಮ ಬಂಗಾಳ, ಅಸ್ಸಾಂನಲ್ಲಿ ನಡೆದ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು. ಎರಡೂ ರಾಜ್ಯಗಳಲ್ಲಿ ಆರು ತಿಂಗಳ ಒಳಗಾಗಿ ವಿಧಾನಸಭೆ ಚುನಾವಣೆ ನಡೆಯಲಿದೆ.

‘ಅಸ್ಸಾಂ ವಿಭಜನೆ ಸಂಚು’: ‘ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷರು ಮತ್ತು ಮುಸ್ಲಿಂ ಲೀಗ್ ಭಾರತ ವಿಭಜನೆಗೆ ಕಣವನ್ನು ಸಿದ್ಧಪಡಿಸುವಾಗಲೇ, ಅಸ್ಸಾಂ ಅನ್ನು ಪೂರ್ವ ಪಾಕಿಸ್ತಾನದ ಭಾಗವಾಗಿಸುವ ಪಿತೂರಿ ನಡೆದಿತ್ತು. ಇದರಲ್ಲಿ ಕಾಂಗ್ರೆಸ್ ಕೂಡ ಭಾಗಿಯಾಗಲಿತ್ತು. ಆದರೆ, ಅಸ್ಸಾಂನ ಹೆಗ್ಗುರುತನ್ನು ನಾಶಮಾಡುವ ಸಂಚನ್ನು ವಿರೋಧಿಸಿ ತಮ್ಮದೇ ಪಕ್ಷದ ವಿರುದ್ಧ ಗೋಪಿನಾಥ್ ಬೋರ್ದೋಲೊಯಿ ಸೆಟೆದು ನಿಂತರು. ಇವರಿಂದ ಭಾರತದಿಂದ ಅಸ್ಸಾಂ ವಿಭಜನೆಯಾಗುವುದು ತಪ್ಪಿತು’ ಎಂದು ಹೇಳಿದರು.

ಚಿನಕುರುಳಿ ಪ್ರಕಾಶ್ ಶೆಟ್ಟಿ



ಭ್ರಷ್ಟಾಚಾರ: ಲೆಫ್ಟಿನೆಂಟ್ ಕರ್ನಲ್ ಸೆರೆ



ನವದೆಹಲಿ (ಪಿಟಿಐ): ರಕ್ಷಣಾ ಸಚಿವಾಲಯದ, ರಕ್ಷಣಾ ಉತ್ಪಾದನಾ ಇಲಾಖೆಗೆ ನಿಯೋಜನೆಗೊಂಡಿದ್ದ ಅಧಿಕಾರಿ ಲೆಫ್ಟಿನೆಂಟ್ ಕರ್ನಲ್ ದೀಪಕ್ ಕುಮಾರ್ ಶರ್ಮಾ ಅವರನ್ನು ಭ್ರಷ್ಟಾಚಾರ ಪ್ರಕರಣದಲ್ಲಿ ಸಿಬಿಐ ಬಂಧಿಸಿದೆ.

ಶರ್ಮಾ ಅವರು, ರಕ್ಷಣಾ ಉಪಕರಣಗಳ ತಯಾರಿಕೆ ಮತ್ತು ರಫ್ತಿಗೆ ಸಂಬಂಧಿಸಿದಂತೆ ಬೆಂಗಳೂರಿನ ಕಂಪನಿಯೊಂದರಿಂದ ₹3 ಲಕ್ಷ ಲಂಚಕ್ಕೆ ಬೇಡಿಕೆ ಇರಿಸಿದ್ದರು. ಸಿಬಿಐ ಶನಿವಾರ ಶರ್ಮಾ ಅವರಿಗೆ ಸಂಬಂಧಿಸಿದ ದೆಹಲಿ ನಿವಾಸದಲ್ಲಿ ಕೈಗೊಂಡ ಶೋಧ ಕಾರ್ಯಾಚರಣೆಯಲ್ಲಿ ₹3 ಲಕ್ಷ ಲಂಚದ ಹಣದ ಜೊತೆಗೆ ₹ 2.23 ಕೋಟಿಯಷ್ಟು ಬೃಹತ್ ಮೊತ್ತದ ನಗದನ್ನೂ ವಶಕ್ಕೆ ಪಡೆಯಲಾಯಿತು. ಗಂಗಾನಗರದಲ್ಲಿರುವ ಅವರ ಪತ್ನಿಯ ಮನೆಯಲ್ಲಿ ₹10 ಲಕ್ಷ ನಗದು ವಶಕ್ಕೆ ಪಡೆಯಲಾಗಿದೆ ಎಂದು ಸಿಬಿಐ ವಕ್ತಾರ ಮಾಹಿತಿ ನೀಡಿದ್ದಾರೆ.

ಶರ್ಮಾ ಅವರು ರಕ್ಷಣಾ ಸಚಿವಾಲಯದ ಉತ್ಪಾದನಾ ಇಲಾಖೆಯ ಸಹಾಯಕ ಯೋಜನಾ ಅಧಿಕಾರಿಯಾಗಿ (ಅಂತರ ರಾಷ್ಟ್ರೀಯ ಸಹಕಾರ ಮತ್ತು ರಫ್ತು) ಕಾರ್ಯ ನಿರ್ವಹಿಸುತ್ತಿದ್ದಾರೆ. ಅವರ ಪತ್ನಿ ಕರ್ನಲ್ ಕಾಜಲ್ ಬಾಲಿ ರಾಜಸ್ಥಾನದ ಗಂಗಾನಗರದಲ್ಲಿ ಭಾರತೀಯ ಸೇನೆಯ 16ನೇ ಪದಾತಿ ದಳ ಶಸ್ತ್ರ ಘಟಕದ (ಡಿಒಯು) ಅಧಿಕಾರಿ ಆಗಿದ್ದಾರೆ. ಇಬ್ಬರ ವಿರುದ್ಧವೂ ಸಿಬಿಐ ಪ್ರಕರಣ ದಾಖಲಿಸಿದೆ.

‘ಬೆಂಗಳೂರಿನ ಕಂಪನಿಯೊಂದರ ರಾಜೀವ್ ಯಾದವ್ ಮತ್ತು ರವಜೀತ್ ಸಿಂಗ್ ಯಾದವ್ ಎಂಬುವರು ಶರ್ಮಾ ಅವರಿಗೆ ನೀಡಲು, ವಿನೋದ್ ಕುಮಾರ್ ಎಂಬುವರ ಮೂಲಕ ₹3 ಲಕ್ಷ ಲಂಚದ ಹಣ ತಲುಪಿಸಲಿದ್ದಾರೆ ಎಂಬ ಮಾಹಿತಿ ಲಭಿಸಿತ್ತು. ಸಿಂಗ್ ಮತ್ತು ಯಾದವ್ ನಿರಂತರವಾಗಿ ಲೆಫ್ಟಿನೆಂಟ್ ಕರ್ನಲ್ ಶರ್ಮಾ ಹಾಗೂ ಇತರರ ಜೊತೆ ಸಂಪರ್ಕದಲ್ಲಿದ್ದರು. ಶರ್ಮಾ ಮೂಲಕ ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳು, ಸಚಿವಾಲಯಗಳಲ್ಲಿ ತಮ್ಮ ಕಂಪನಿಗಾಗಿ ಅನುಕೂಲ ಪಡೆದಿದ್ದರು. ಆ ಕಂಪನಿಯ ಪರವಾಗಿ ವಿನೋದ್ ಕುಮಾರ್ ಎಂಬ ವ್ಯಕ್ತಿಯು ಡಿ.18ರಂದು ₹3 ಲಕ್ಷ ಲಂಚವನ್ನು ಶರ್ಮಾ ಅವರಿಗೆ ತಲುಪಿಸಿದ್ದ’ ಎಂದು ಸಿಬಿಐ ಪ್ರಕಟಣೆ ತಿಳಿಸಿದೆ.

ಬಂಧಿತರಾಗಿರುವ ಶರ್ಮಾ ಮತ್ತು ವಿನೋದ್ ಕುಮಾರ್ ಇಬ್ಬರನ್ನೂ ಸಿಬಿಐ ಪ್ರಕರಣಗಳ ವಿಶೇಷ ನ್ಯಾಯಾಲಯದ ಎದುರು ಹಾಜರುಪಡಿಸಲಾಯಿತು. ಇಬ್ಬರೂ ಆರೋಪಿಗಳನ್ನು ಡಿ.23ರವರೆಗೆ ಸಿಬಿಐ ವಶಕ್ಕೆ ನೀಡಿ ನ್ಯಾಯಾಲಯ ಆದೇಶ ಹೊರಡಿಸಿದೆ ಎಂದು ತಿಳಿಸಿದ್ದಾರೆ.

‘ಮೊಟ್ಟೆ ಸೇವನೆ ಸುರಕ್ಷಿತ’



ನವದೆಹಲಿ (ಪಿಟಿಐ): ‘ಮೊಟ್ಟೆಗಳು ಸೇವನೆಗೆ ಸುರಕ್ಷಿತ. ಮೊಟ್ಟೆಯಲ್ಲಿ ಕ್ಯಾನ್ಸರ್‌ಕಾರಕವಾಗುವ ಯಾವುದೇ ಅಂಶ ಪತ್ತೆಯಾಗಿಲ್ಲ’ ಎಂದು ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರವು (ಎಫ್‌ಎಸ್‌ಎಸ್‌ಎಐ) ಶನಿವಾರ ಹೇಳಿದೆ.

‘ದೇಶದಲ್ಲಿ ಉತ್ಪಾದನೆಯಾಗುವ ಮೊಟ್ಟೆಗಳು ಮಾನವನ ಸೇವನೆಗೆ ಸುರಕ್ಷಿತವಾಗಿವೆ. ಮೊಟ್ಟೆಗಳಲ್ಲಿ ಕ್ಯಾನ್ಸರ್‌ಕಾರಕ ಅಂಶಗಳಿವೆ ಎಂದು ಆರೋಪಿಸುವ ವರದಿಗಳು ವೈಜ್ಞಾನಿಕ ಆಧಾರವನ್ನು ಹೊಂದಿಲ್ಲ. ಈ ವದಂತಿಗಳು ಜನರನ್ನು ತಪ್ಪುದಾರಿಗೆ ಎಳೆಯುವುದಲ್ಲದೆ, ಆತಂಕವನ್ನು ಸೃಷ್ಟಿ ಮಾಡಿವೆ’ ಎಂದು ಎಫ್‌ಎಸ್‌ಎಸ್‌ಎಐ ಪ್ರಕಟಣೆ ತಿಳಿಸಿದೆ.

‘ಮೊಟ್ಟೆಗಳಲ್ಲಿ ‘ನೈಟ್ರೊಫ್ಯೂರಾನ್’ ಅಂಶ ಪತ್ತೆಯಾಗಿದೆ. ಇದು ಕ್ಯಾನ್ಸರ್‌ಗೆ ಕಾರಣವಾಗುತ್ತದೆ’ ಎಂದು ಸಾಮಾಜಿಕ ಮಾಧ್ಯಮಗಳಲ್ಲಿ ವರದಿಗಳು ಹರಿದಾಡಿದ್ದವು. ಈ ಬಗ್ಗೆ ಸ್ಪಷ್ಟೀಕರಣ ನೀಡಿದ ಎಫ್‌ಎಸ್‌ಎಸ್‌ಎಐ, ‘ಆಹಾರ ಸುರಕ್ಷತೆ ಮತ್ತು ಮಾನದಂಡಗಳ ಪ್ರಕಾರ, ಕೋಳಿ ಸಾಕಾಣಿಕೆ ಮತ್ತು ಮೊಟ್ಟೆ ಉತ್ಪಾದನೆಯ ಎಲ್ಲ ಹಂತದಲ್ಲಿ ನೈಟ್ರೊಫ್ಯೂರಾನ್ ಬಳಕೆಯನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ’ ಎಂದು ತಿಳಿಸಿದೆ.

‘ಯಾವುದೇ ರಾಷ್ಟ್ರೀಯ ಅಥವಾ ಅಂತರರಾಷ್ಟ್ರೀಯ ಆರೋಗ್ಯ ಸಂಸ್ಥೆಯು ಮೊಟ್ಟೆ ಸೇವನೆಯು ಕ್ಯಾನ್ಸರ್‌ಗೆ ಕಾರಣ ವಾಗುತ್ತದೆ ಎಂಬುದಾಗಿ ಹೇಳಿಲ್ಲ’ ಎಂದು ಎಫ್‌ಎಸ್‌ಎಸ್‌ಎಐ ತಿಳಿಸಿದೆ.

‘ಆಹಾರ ಉತ್ಪನ್ನಗಳಿಗೆ ಸಂಬಂಧಿಸಿದ ಭಾರತದಲ್ಲಿನ ನಿಯಮಾವಳಿಗಳು ಅಂತರರಾಷ್ಟ್ರೀಯ ಕಾನೂನುಗಳಿಗೆ ಪೂರಕವಾಗಿವೆ. ಯುರೋಪ್ ಒಕ್ಕೂಟ ಮತ್ತು ಅಮೆರಿಕವು ಆಹಾರಕ್ಕೆ ಬಳಕೆಯಾಗುವ ಪ್ರಾಣಿ–ಪಕ್ಷಿಗಳಲ್ಲಿ ನೈಟ್ರೊಫ್ಯೂರಾನ್ ಬಳಕೆಯನ್ನು ನಿಷೇಧಿಸಿವೆ’ ಎಂದು ತಿಳಿಸಿದೆ. ನಿರ್ದಿಷ್ಟ ಬ್ರ್ಯಾಂಡ್‌ಗೆ ಸಂಬಂಧಿಸಿದ ಮೊಟ್ಟೆಗಳ ಪರೀಕ್ಷಾ ವರದಿಯಿಂದ ಉಂಟಾಗಿರುವ ವದಂತಿಗಳ ಬಗ್ಗೆ ಪ್ರತಿಕ್ರಿಯಿಸಿದ ಎಫ್‌ಎಸ್‌ಎಸ್‌ಎಐ, ‘ಸ್ವಚ್ಛತೆ ಮತ್ತು ಆಹಾರಕ್ಕೆ ಸಂಬಂಧಿಸಿದ ವ್ಯತ್ಯಾಸದಿಂದ ನಿರ್ದಿಷ್ಟ ಬ್ರ್ಯಾಂಡ್‌ನ ಮೊಟ್ಟೆಯಲ್ಲಿ ಕ್ಯಾನ್ಸರ್ ಕಾರಕ ಅಂಶ ಪತ್ತೆಯಾಗಿದೆ. ಈ ಒಂದು ಪ್ರಕರಣದಿಂದ ದೇಶದ ಒಟ್ಟು ಮೊಟ್ಟೆ ಉತ್ಪಾದನೆಯ ಗುಣಮಟ್ಟವನ್ನು ನಿರ್ಧರಿಸಲಾಗುವುದಿಲ್ಲ’ ಎಂದು ತಿಳಿಸಿದೆ.

▶8

‘ಬರಲಿದೆ ಇಬ್ಬರಿಗೂ ಬುಲಾವ್’

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಯಾವುದೇ ಒಪ್ಪಂದವಾಗಿಲ್ಲ. ಐದು ವರ್ಷ ನಾನೇ ಮುಖ್ಯಮಂತ್ರಿ’ ಎಂದು ಸಿದ್ದರಾಮಯ್ಯ ಅವರು ವಿಧಾನಸಭೆಯಲ್ಲಿ ಘೋಷಿಸಿದ ಬೆನ್ನಲ್ಲೇ ‘ನಾಯಕತ್ವ’ ವಿಷಯ ಮತ್ತಷ್ಟು ಬಿಗಡಾಯಿಸುವ ಲಕ್ಷಣ ಕಾಣಿಸುತ್ತಿದ್ದು, ‘ಸೂಕ್ತ ಸಮಯದಲ್ಲಿ ಇಬ್ಬರನ್ನೂ ಕರೆಯಿಸುವುದಾಗಿ ಹೈಕಮಾಂಡ್ ಹೇಳಿದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿರುವುದು ಚರ್ಚೆಗೆ ಕಾರಣವಾಗಿದೆ.

ಸುದ್ದಿಗಾರರ ಪ್ರಶ್ನೆಗೆ ಶನಿವಾರ ಪ್ರತಿಕ್ರಿಯಿಸಿದ ಶಿವಕುಮಾರ್, ‘ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ನನ್ನನ್ನು ಸೂಕ್ತ ಸಮಯದಲ್ಲಿ ಕರೆಯಿಸುತ್ತೇವೆ ಎಂದು ಹೈಕಮಾಂಡ್ ನಾಯಕರು ನಮಗಿಬ್ಬರಿಗೂ ಹೇಳಿದ್ದಾರೆ’ ಎಂದರು.

‘ದೆಹಲಿ ನಾಯಕರು ನಿಮಗೆ ಆಹ್ವಾನ ನೀಡಿದ್ದಾರೆಯೇ’ ಎಂಬ ಮರು ಪ್ರಶ್ನೆಗೆ ಅವರು, ‘ಕರೆದಾಗ ನಾವು ಹೋಗುತ್ತೇವೆ’ ಎಂದು ಹೇಳಿದರು.



ಶಿವಕುಮಾರ್

ಬೆಳಗಾವಿ ಅಧಿವೇಶನದ ಮೊದಲ ದಿನದಿಂದ ಶುರುವಾಗಿದ್ದ ಕಾಂಗ್ರೆಸ್‌ನ ‘ಕುರ್ಚಿ ಕದನ’ ಕೊನೆಯ ದಿನವಾದ ಶುಕ್ರವಾರ ತಾರಕಸ್ತರ ಮುಟ್ಟಿತ್ತು. ವಿರೋಧ ಪಕ್ಷದ ಸದಸ್ಯರ ಕಾಲೆಳೆಯುವ ಪ್ರಶ್ನೆಗಳಿಗೆ ಉತ್ತರಿಸಿದ್ದ ಸಿದ್ದರಾಮಯ್ಯ, ‘ಎರಡೂವರೆ ವರ್ಷದ ಕುರಿತು ಒಪ್ಪಂದ, ತೀರ್ಮಾನ ಯಾವುದೂ ಆಗಿಲ್ಲ. ಐದು ವರ್ಷಕ್ಕೆ ನನ್ನನ್ನು ಆಯ್ಕೆ ಮಾಡಲಾಗಿದೆ. ನನ್ನ ಪ್ರಕಾರ ಹೈಕಮಾಂಡ್ ನನ್ನ ಪರವಾಗಿದೆ’ ಎಂದು ಅಬ್ಬರಿಸಿದ್ದರು.

ಇದಕ್ಕೆ ಪ್ರತ್ಯುತ್ತರವೆಂಬಂತೆ ಅಂಕೋಲಾ ಹಾಗೂ ಗೋಕರ್ಣದಲ್ಲಿ ಮಾತನಾಡಿದ್ದ ಶಿವಕುಮಾರ್, ‘ನನ್ನ ಮತ್ತು ಸಿದ್ದರಾಮಯ್ಯ ನಡುವೆ ಒಪ್ಪಂದ ಆಗಿದೆ. ಹೈಕಮಾಂಡ್ ಅವರ ಪರವಾಗಿದ್ದ ಕಾರಣಕ್ಕೆ ಅವರು ಮುಖ್ಯಮಂತ್ರಿಯಾಗಿದ್ದಾರೆ’ ಎಂದು ಹೇಳುವ ಮೂಲಕ ‘ಒಪ್ಪಂದ’ದ ರಹಸ್ಯವನ್ನು ಹೊರಗೆಡಹಿದ್ದರು.

‘ಸೂಕ್ತ ಸಮಯದಲ್ಲಿ ಕರೆಯಿಸುವುದಾಗಿ ಇಬ್ಬರಿಗೂ ಹೇಳಿದ್ದಾರೆ’ ಎನ್ನುವ ಮುಖೇನ, ‘ಗೊಂದಲ ಮುಗಿದಿಲ್ಲ. ಈ ಚರ್ಚೆ ಜೀವಂತವಾಗಿದೆ’ ಎನ್ನುವ ಸಂದೇಶವನ್ನು ರವಾನಿಸಿದ್ದಾರೆ.

ದೆಹಲಿಗೆ ಮಂಗಳವಾರ: ‘ಮಂಗಳವಾರ ದೆಹಲಿಗೆ ಹೋಗುತ್ತಿದ್ದು, ನದಿ ಜೋಡಣೆ ವಿಚಾರವಾಗಿ ಕೇಂದ್ರ ಜಲಶಕ್ತಿ ಸಚಿವರು ಕರೆದಿರುವ ಸಭೆಯಲ್ಲಿ ಭಾಗವಹಿಸುತ್ತೇನೆ. ಮಹದಾಯಿ, ಕೃಷ್ಣಾ ಮೇಲ್ದಂಡೆ, ಮೇಕೆದಾಟು, ಭದ್ರಾ ಮೇಲ್ದಂಡೆ ಯೋಜನೆ ವಿಚಾರವಾಗಿ ಚರ್ಚೆ ಮಾಡುತ್ತೇನೆ’ ಎಂದರು.

ರಾಜಣ್ಣ–ಡಿಕೆಶಿ ಮಾತುಕತೆ

ಸಿದ್ದರಾಮಯ್ಯ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ ಶಾಸಕ ಕೆ.ಎನ್. ರಾಜಣ್ಣ ಮತ್ತು ಡಿ.ಕೆ. ಶಿವಕುಮಾರ್ ಶನಿವಾರ ಸಂಜೆ ಪರಸ್ಪರ ಮಾತುಕತೆ ನಡೆಸಿರುವುದು ಕುತೂಹಲಕ್ಕೆ ಕಾರಣವಾಗಿದೆ.

ಬೆಂಗಳೂರಿನ ಹೈಗ್ರೌಂಡ್ ಪೊಲೀಸ್ ಠಾಣೆಯ ಬಳಿ ಇರುವ ಖಾಸಗಿ ವ್ಯಕ್ತಿಯೊಬ್ಬರಿಗೆ ಸೇರಿದ ಅತಿಥಿಗೃಹದಲ್ಲಿ ಉಭಯ ನಾಯಕರು ಭೇಟಿ ಮಾಡಿದ್ದಾರೆ ಎಂದು ಹೇಳಲಾಗಿದೆ. ಮತ ಕಳ್ಳತನ ವಿರುದ್ಧ ಟೀಕೆ ಮಾಡಿದ ಕಾರಣಕ್ಕೆ ರಾಜಣ್ಣ ಸಚಿವ ಸ್ಥಾನ ಕಳೆದುಕೊಂಡಿದ್ದರು.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮಂಜು ಕವಿದ ವಾತಾವರಣ ಇರಲಿದೆ.

ತಾಂತ್ರಿಕ ಸಮಸ್ಯೆ: ಮೆಟ್ರೊ ಸಂಚಾರ ವಿಳಂಬ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊ ಹಳದಿ ಮಾರ್ಗದ ಒಂದು ರೈಲಿನಲ್ಲಿ ಶನಿವಾರ ಸಂಜೆ ತಾಂತ್ರಿಕ ಸಮಸ್ಯೆ ಉಂಟಾಗಿದ್ದರಿಂದ ಮೆಟ್ರೊ ರೈಲುಗಳ ಸಂಚಾರ ವಿಳಂಬವಾಯಿತು.

ಸಂಜೆ 4.45ಕ್ಕೆ ಒಂದು ರೈಲಿನಲ್ಲಿ ತಾಂತ್ರಿಕ ದೋಷ ಉಂಟಾಯಿತು. ಇದರಿಂದಾಗಿ ರಾಷ್ಟ್ರೀಯ ವಿದ್ಯಾಲಯ ರಸ್ತೆ–ಬೊಮ್ಮಸಂದ್ರ ನಡುವೆ ಸಂಚರಿಸುವ ರೈಲುಗಳ ಸಂಖ್ಯೆ 4ಕ್ಕಿಳಿಯಿತು. ಪ್ರತಿ ಟ್ರಿಪ್‌ನ ನಡುವಿನ ಅಂತರವನ್ನು 15 ನಿಮಿಷದ ಬದಲು 19 ನಿಮಿಷಕ್ಕೆ ಹೆಚ್ಚಿಸಲಾಯಿತು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಭಾನುವಾರ 8ಕ್ಕೆ ಸಂಚಾರ: ಹಳದಿ ಮಾರ್ಗದಲ್ಲಿ ತುರ್ತು ನಿರ್ವಹಣೆ ಮತ್ತು ನವೀಕರಣ ಕಾರ್ಯಗಳನ್ನು ಹಮ್ಮಿಕೊಂಡಿರುವುದರಿಂದ ಡಿ.21 ರಂದು ಬೆಳಿಗ್ಗೆ 7ರ ಬದಲು 8 ಗಂಟೆಗೆ ಮೆಟ್ರೊ ರೈಲು ಸಂಚಾರ ಆರಂಭಗೊಳ್ಳಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ನೇರಳೆ ಹಾಗೂ ಹಸಿರು ಮಾರ್ಗಗಳಲ್ಲಿ ಮೆಟ್ರೊ ರೈಲು ಸಂಚಾರದ ವೇಳಾಪಟ್ಟಿಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಎಂದಿದ್ದಾರೆ.

‘ತಂತ್ರಜ್ಞಾನಕ್ಕೆ ಅನುಗುಣವಾಗಿ ಕಾರ್ಯನಿರ್ವಹಿಸಿ’

ನಾಗರಿಕ ಪೊಲೀಸ್ ಕಾನ್‌ಸ್ಟೆಬಲ್‌ಗಳ ನಿರ್ಗಮನ ಪಥಸಂಚಲನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇಶದ ಭದ್ರತೆ ಮತ್ತು ಸುರಕ್ಷತೆ ಕಾಪಾಡುವಲ್ಲಿ ಪೊಲೀಸರ ಪಾತ್ರ ಮಹತ್ವದ್ದು. ಪೊಲೀಸರು ಪ್ರಾಮಾಣಿಕ ಹಾಗೂ ನಿಷ್ಪಕ್ಷಪಾತವಾಗಿ ಕಾರ್ಯ ನಿರ್ವಹಿಸಬೇಕು’ ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ. ಸಲೀಂ ತಿಳಿಸಿದರು.

ಥಣಿಸಂದ್ರದ ಪೊಲೀಸ್ ತರಬೇತಿ ಶಾಲಾ ಆವರಣದಲ್ಲಿ ಆಯೋಜಿಸಿದ್ದ 8ನೇ ತಂಡದ 416 ನಾಗರಿಕ ಪೊಲೀಸ್ ಕಾನ್‌ಸ್ಟೆಬಲ್‌ಗಳ ನಿರ್ಗಮನ ಪಥ ಸಂಚಲನದಲ್ಲಿ ಗೌರವ ವಂದನೆ ಸ್ವೀಕರಿಸಿ ಅವರು ಮಾತನಾಡಿದರು.

‘ಆಧುನಿಕ ಯುಗದಲ್ಲಿ ತಂತ್ರಜ್ಞಾನ ಬದಲಾಗುತ್ತಿದೆ. ಮೌಲ್ಯಗಳು, ಆದರ್ಶಗಳು ಸದಾ ಮಾರ್ಗದರ್ಶನ ಆಗಬೇಕು. ಉತ್ತಮ ಮೌಲ್ಯಗಳನ್ನು ಆದರ್ಶವಾಗಿ ತೆಗೆದುಕೊಂಡಾಗ ಮಾತ್ರ ಪೊಲೀಸ್ ಇಲಾಖೆ ಉತ್ತಮ ಸ್ಥಾನ ಪಡೆಯಲು ಸಾಧ್ಯವಾಗುತ್ತದೆ’ ಎಂದರು.

‘ತಂತ್ರಜ್ಞಾನ ಬೆಳವಣಿಗೆ ಆದಂತೆ ಅಪರಾಧಗಳ ಸ್ವರೂಪವೂ ಸಹ ಬದಲಾಗಿದೆ. ಸೈಬರ್ ಅಪರಾಧ, ದರೋಡೆ, ಕೊಲೆಯಂತಹ ಗಂಭೀರ ಪ್ರಕರಣಗಳನ್ನು ಪತ್ತೆ ಹಚ್ಚಲು ಸನ್ನದ್ಧರಾಗಿರಬೇಕು. ಸೈಬರ್ ಅಪರಾಧ ನಿಯಂತ್ರಿಸಲು ಹೊಸ ತಂತ್ರಜ್ಞಾನಕ್ಕೆ ಅನುಗುಣವಾಗಿ ಕಾರ್ಯ ನಿರ್ವಹಿಸಲು ಪ್ರಶಿಕ್ಷಣಾರ್ಥಿಗಳು ಸಜ್ಜಾಗಬೇಕು’ ಎಂದರು.

ಥಣಿಸಂದ್ರ ಪೊಲೀಸ್ ತರಬೇತಿ ಶಾಲೆಯ ಎಸ್‌ಪಿ ಎಂ. ಬಾಬು ಅವರು ಪ್ರತಿಜ್ಞಾವಿಧಿ ಬೋಧಿಸಿದರು. ನಂತರ, ವಿವಿಧ ವಿಭಾಗಗಳಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ ಪ್ರಶಿಕ್ಷಣಾರ್ಥಿಗಳಿಗೆ ಸಲೀಂ ಅವರು ಬಹುಮಾನ ವಿತರಿಸಿದರು. ನಂತರ, ‘ಹೆಜ್ಜೆ ಗುರುತು’ ಸ್ಮರಣ ಸಂಚಿಕೆ ಬಿಡುಗಡೆ ಮಾಡಿದರು.



ಥಣಿಸಂದ್ರದ ಪೊಲೀಸ್ ತರಬೇತಿ ಶಾಲೆಯಲ್ಲಿ ನಾಗರಿಕ ಪೊಲೀಸ್ ಕಾನ್‌ಸ್ಟೆಬಲ್‌ಗಳ 8ನೇ ತಂಡದ ನಿರ್ಗಮನ ಪಥಸಂಚಲನ ಶನಿವಾರ ನಡೆಯಿತು

ಇಂದು ಪಲ್ಸ್ ಪೋಲಿಯೊ

ಬೆಂಗಳೂರು: ಆರೋಗ್ಯ ಇಲಾಖೆಯು ರಾಜ್ಯದಾದ್ಯಂತ ಭಾನುವಾರ (ಡಿ.21) ಪಲ್ಸ್ ಪೋಲಿಯೊ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, 5 ವರ್ಷದೊಳಗಿನ 62.40 ಲಕ್ಷ ಮಕ್ಕಳನ್ನು ತಲುಪುವ ಗುರಿ ಹಾಕಿಕೊಂಡಿದೆ.

> **5 ವರ್ಷದೊಳಗಿನ ಎಲ್ಲ ಮಕ್ಕಳಿಗೂ ಲಸಿಕೆ ಹಾಕಿಸಬೇಕು. ಪೋಲಿಯೊ ವಿರುದ್ಧದ ಹೋರಾಟದಲ್ಲಿ ವಿಜಯ ಸಾಧಿಸುವುದನ್ನು ಮುಂದುವರಿಸಲು ಕೈಜೋಡಿಸಬೇಕು**
> **ದಿನೇಶ್ ಗುಂಡೂರಾವ್**
> ಆರೋಗ್ಯ ಸಚಿವ



ಪೋಲಿಯೊ ಹನಿ ಹಾಕಲು 33,258 ಬೂತ್‌ಗಳನ್ನು ಗುರುತಿಸಲಾಗಿದೆ. 1,030 ಸಂಚಾರಿ ತಂಡಗಳು ರೈಲ್ವೆ ನಿಲ್ದಾಣ, ಬಸ್ ನಿಲ್ದಾಣ ಸೇರಿದಂತೆ ವಿವಿಧ ಸಾರ್ವಜನಿಕ ಪ್ರದೇಶಗಳಲ್ಲಿ ಲಸಿಕೆ ವಿತರಿಸಲಿವೆ. 2,096 ಟ್ರಾನ್ಸಿಟ್ ತಂಡಗಳನ್ನೂ ರಚಿಸಲಾಗಿದೆ. ಈ ಕಾರ್ಯಕ್ರಮಕ್ಕೆ 1.13 ಲಕ್ಷ ಕಾರ್ಯಕರ್ತರನ್ನು ಬಳಸಿಕೊಳ್ಳಲಾಗುತ್ತಿದೆ. 7,322 ಮೇಲ್ವಿಚಾರಕರನ್ನು ನೇಮಿಸಲಾಗಿದೆ.

ರಾಜ್ಯದ ಎಲ್ಲ ಆಸ್ಪತ್ರೆಗಳು, ಗ್ರಾಮೀಣ ಪ್ರದೇಶ, ಗುಡ್ಡಗಾಡು ಪ್ರದೇಶ ಸೇರಿದಂತೆ ವಿವಿಧೆಡೆ ಲಸಿಕೆ ಹಾಕಲು ವ್ಯವಸ್ಥೆ ಮಾಡಲಾಗಿದೆ. ಹತ್ತಿರದ ಲಸಿಕಾ ಕೇಂದ್ರ ಪತ್ತೆಗೆ ‘Nearby Vaccination centre Karnataka’ ಆ್ಯಪ್ ಇನ್‌ಸ್ಟಾಲ್ ಮಾಡಿಕೊಂಡು, ಕೇಂದ್ರ ಹುಡುಕಬಹುದು.

21ರಂದು ಪೋಲಿಯೊ ಹನಿ ಪಡೆಯದ ಮಕ್ಕಳಿಗೆ, ಡಿ.22 ಮತ್ತು ಡಿ.23ರಂದು ಮನೆ ಮನೆಗೆ ತೆರಳಿ ಕಾರ್ಯಕರ್ತರು ಪೋಲಿಯೊ ಹನಿ ಹಾಕುತ್ತಾರೆ. ಸಾರ್ವಜನಿಕರು ಸಹಕರಿಸಬೇಕು ಎಂದು ಆರೋಗ್ಯ ಇಲಾಖೆ ತಿಳಿಸಿದೆ.

‘ಅರಣ್ಯ ಇಲಾಖೆ ಅಧಿಸೂಚನೆ ವಾಪಸ್ ಖಂಡನೀಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈಲ್ವೆ ಕಂಟೋನ್ಮೆಂಟ್ ಕಾಲೊನಿಯಲ್ಲಿ 371 ಮರಗಳಿರುವ ಎಂಟು ಎಕರೆಗೂ ಹೆಚ್ಚು ಪ್ರದೇಶವನ್ನು ‘ಜೀವವೈವಿಧ್ಯ ಪಾರಂಪರಿಕ ತಾಣ’ ಎಂದು ಘೋಷಿಸಿ, ಅರಣ್ಯ ಇಲಾಖೆ ಹೊರಡಿಸಿದ್ದ ಅಧಿಸೂಚನೆ ಹಿಂಪಡೆದಿರುವುದನ್ನು ‘ಪರಿಸರಕ್ಕಾಗಿ ನಾವು’ ಸಂಘಟನೆ ಖಂಡಿಸಿದೆ.

‘ಮೂರು ನಾಲ್ಕು ದಶಕಗಳ ಹಿಂದೆ ಉದ್ಯಾನ ನಗರಿ ಆಗಿದ್ದ ಬೆಂಗಳೂರು ಈಗ ಅಧ್ವಾನ ನಗರಿಯಾಗಿದೆ. ನಗರದಲ್ಲಿ ಇರುವ ಮರಗಳನ್ನು ಉಳಿಸಿಕೊಂಡು, ಇನ್ನೂ ಹೆಚ್ಚಿನ ಗಿಡಗಳನ್ನು ನೆಟ್ಟು, ಬೆಳೆಸಿ ಹಸಿರು ಹೊದಿಕೆ ಹೆಚ್ಚಿಸಬೇಕಾದ ಅನಿವಾರ್ಯತೆ ಇದೆ. ಈ ಕೆಲಸವನ್ನು ಅರಣ್ಯ ಇಲಾಖೆ ಮಾಡಬೇಕು’ ಎಂದು ಸಂಘಟನೆಯ ಅಧ್ಯಕ್ಷ ಎ.ಟಿ. ರಾಮಸ್ವಾಮಿ ಆಗ್ರಹಿಸಿದ್ದಾರೆ.

‘ಖಾಸಗಿ ಕಂಪನಿ ಕಟ್ಟಡ ಕಟ್ಟಲು ರೈಲ್ವೆ ಭೂ ಪ್ರಾಧಿಕಾರವು ತನ್ನ ಸುಪರ್ದಿಯಲ್ಲಿರುವ ಬೇರೆ ಜಾಗವನ್ನು (ಮರಗಳು ಇರದಿರುವ ಜಾಗ) ಕೊಡಲಿ ಅಥವಾ ಹಳೆಯ ಕ್ವಾರ್ಟರ್ಸ್‌ಗಳನ್ನು ಕೆಡವಿ ಅಲ್ಲಿ ಬಹುಮಹಡಿ ಕಟ್ಟಡ ಕಟ್ಟಲು ಅಥವಾ ವಿದೇಶಗಳಲ್ಲಿ ಕಟ್ಟಿರುವಂತೆ ರೈಲು ನಿಲ್ದಾಣಗಳ ಮೇಲೆ ಬಹು ಮಹಡಿ ಕಟ್ಟಡ ಕಟ್ಟಲು ಅವಕಾಶ ನೀಡಲಿ’ ಎಂದು ತಿಳಿಸಿದ್ದಾರೆ.

ಕಂಟೋನ್ಮೆಂಟ್ ಪ್ರದೇಶದಲ್ಲಿ ಈಗಿರುವ ಜೀವ ಪರಿಸರ ವ್ಯವಸ್ಥೆಯನ್ನು ಹಾಳು ಮಾಡಿ, ಪುನರ್ ನಿರ್ಮಾಣ ಮಾಡಲು ನೂರಾರು ವರ್ಷಗಳು ಬೇಕು. ಅರಣ್ಯ ಸಚಿವರಿಗೆ ಈ ವಿಷಯಗಳ ಅರಿವಿಲ್ಲದೆ ಮರಗಳನ್ನು ಕಡಿಯಲು ಅನುಮತಿ ಕೊಡುತ್ತಾರೆಯೇ? ವೃಕ್ಷ ಪ್ರಾಧಿಕಾರ ರಚಿಸಲು ಬಹಳ ಹಿಂದೆಯೇ ಹೈಕೋರ್ಟ್ ಆದೇಶ ನೀಡಿದ್ದರೂ, ಸರ್ಕಾರ ಇನ್ನೂ ಆ ಆದೇಶವನ್ನು ಪಾಲಿಸಿಲ್ಲ. ಮರಗಳ ರಕ್ಷಣೆ ವಿಷಯದಲ್ಲಿ ನ್ಯಾಯಾಲಯಗಳಿಗೆ ಇರುವ ಕಾಳಜಿ ಅರಣ್ಯ ಇಲಾಖೆಗೆ ಇಲ್ಲ. ಕೂಡಲೇ ವೃಕ್ಷ ಪ್ರಾಧಿಕಾರ ರಚಿಸಲು ಅರಣ್ಯ ಸಚಿವರು ಆದೇಶ ಹೊರಡಿಸಬೇಕು ಎಂದು ಒತ್ತಾಯಿಸಿದ್ದಾರೆ.

ವಹ್ನಿಕುಲ ಕ್ಷತ್ರಿಯ: ಹೇಳಿಕೆ ಹಿಂಪಡೆಯಲು ಆಗ್ರಹ

ಪ್ರಜಾವಾಣಿ ವಾರ್ತೆ


ಬೆಂಗಳೂರು: ‘ಗೌಂಡರ್ ಹಾಗೂ ವಹ್ನಿಕುಲ ಕ್ಷತ್ರಿಯ ಜಾತಿಗಳನ್ನು ಪ್ರತ್ಯೇಕ ಮಾಡಬೇಕು ಎಂಬ ಶಾಸಕಿ ಶಾರದಾ ಪೂರ್ಯಾನಾಯ್ಕ ಅವರ ಹೇಳಿಕೆ ಖಂಡನೀಯ’ ಎಂದು ಧರ್ಮರಾಜ ಎಜುಕೇಷನಲ್ ಆ್ಯಂಡ್ ಕಲ್ಚರಲ್ ಟ್ರಸ್ಟ್ ತಿಳಿಸಿದೆ.

‘ಬೆಳಗಾವಿಯ ಸುವರ್ಣಸೌಧದಲ್ಲಿ ನಡೆದ ಅಧಿವೇಶನದಲ್ಲಿ ತಿಗಳ ಕ್ಷತ್ರಿಯ ಗುಂಪಿನಲ್ಲಿ ಬರುವ ಶಂಭುಕುಲ ಕ್ಷತ್ರಿಯ, ಅಗ್ನಿಕುಲ ಕ್ಷತ್ರಿಯ, ಗೌಂಡರ್ ಹಾಗೂ ವಹ್ನಿಕುಲ ಕ್ಷತ್ರಿಯ ಉಪ ಜಾತಿಗಳನ್ನು ಒಡೆಯುವಂತಹ ಹೇಳಿಕೆ ನೀಡಿರುವ ಶಾರದಾ ಅವರ ನಡೆ ಖಂಡನೀಯ. ಅವರು ಕೂಡಲೇ ತಮ್ಮ ಹೇಳಿಕೆ ಹಿಂಪಡೆಯಬೇಕು. ಇಲ್ಲದಿದ್ದರೆ ಅವರ ವಿರುದ್ಧ ರಾಜ್ಯದಾದ್ಯಂತ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು’ ಎಂದು ಟ್ರಸ್ಟ್‌ನ ಸಂಸ್ಥಾಪಕ ಕಾರ್ಯದರ್ಶಿ ಗೋವಿಂದರಾಜು ಎಂ. ಸಾರಕ್ಕಿ ತಿಳಿಸಿದ್ದಾರೆ.


‘ಹಿಂದುಳಿದ ವರ್ಗಗಳ ಒಳ ಮೀಸಲಾತಿಯಲ್ಲಿ ಗೌಂಡರ್ ಹಾಗೂ ವಹ್ನಿಕುಲ ಜಾತಿಗಳಿಗೆ ಪ್ರತ್ಯೇಕ ಒಳ ಮೀಸಲಾತಿ ನೀಡುವಂತೆ ಹೇಳಿರುವುದು ಸರಿಯಲ್ಲ. ತಿಗಳ ಕ್ಷತ್ರಿಯ ಗುಂಪಿನಲ್ಲಿ ಬರುವ ಉಪ ಜಾತಿಗಳ ಆಂತರಿಕ ವಿಷಯದಲ್ಲಿ ಅನಗತ್ಯವಾಗಿ ಮಾತನಾಡಿರುವುದು ಖಂಡನೀಯ. ನಮ್ಮ ಸಮುದಾಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಉಪ ಜಾತಿಗಳು ಆರ್ಥಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಹಾಗೂ ಔದ್ಯೋಗಿಕವಾಗಿ ಹಿಂದುಳಿದಿವೆ. ಆದ್ದರಿಂದ ನಮ್ಮ ಸಮುದಾಯಗಳ ಅಭಿವೃದ್ಧಿಗೆ ಆದ್ಯತೆ ನೀಡಬೇಕು’ ಎಂದು ತಿಳಿಸಿದ್ದಾರೆ.

ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ

ಪ್ರಜಾವಾಣಿ ವಾರ್ತೆ



ರವಿಚಂದ್ರ ಆರ್.



ಮಂಗಳ

ಯಲಹಂಕ: ಹುಣಸಮಾರನಹಳ್ಳಿಯಲ್ಲಿರುವ ಅಕ್ಷಯ ಕ್ರೆಡಿಟ್ ಸೌಹಾರ್ದ ಸಹಕಾರ ಸಂಘದ ಅಧ್ಯಕ್ಷರಾಗಿ ರವಿಚಂದ್ರ ಆರ್. ಹಾಗೂ ಉಪಾಧ್ಯಕ್ಷರಾಗಿ ಮಂಗಳ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಐದು ವರ್ಷಗಳ ಅವಧಿಗಾಗಿ ಆಡಳಿತ ಮಂಡಳಿಯ ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ನಿರ್ದೇಶಕರ ಸ್ಥಾನಗಳಿಗಾಗಿ ಶನಿವಾರ ಚುನಾವಣೆ ನಡೆಯಿತು.

ನಿರ್ದೇಶಕರಾಗಿ ಬೈರೇಗೌಡ ಬಿ.ಆರ್, ಹನುಮಂತರಾಯ ಆರ್, ನಾರಾಯಣಗೌಡ ಕೆ.ಸಿ, ಸಣ್ಣವೀರಣ್ಣ ಎ, ಗೋವಿಂದಸ್ವಾಮಿ ಟಿ.ಎಸ್, ಚಂದ್ರಶೇಖರಯ್ಯ ಎಂ, ಶಿವಕುಮಾರ್.ಪಿ, ನಾಗರತ್ನ, ಸುರೇಶ್ ಡಿ, ಸರಸ್ವತಿ ಎಚ್.ಜಿ, ಲತಾ, ಆದಿನಾರಾಯಣ ಹಾಗೂ ಲತಾರಾಣಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.



ಬಿಡ್ ಮಾಡಿ

ಪ್ರತಿ ಚ.ಮೀ.ಗೆ ರೂ. 500/- ಗಳ ಗುಣಕಗಳಲ್ಲಿ ಬಿಡ್ ದರದ ಕನಿಷ್ಠ ಏರಿಕೆ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ವಾಸಯೋಗ್ಯ ವಸತಿ ಹಾಗೂ ವಾಣಿಜ್ಯ ಮೂಲೆ / ಮಧ್ಯಂತರ ನಿವೇಶನಗಳ ಇ-ಹರಾಜು ಪ್ರಕಟಿಸಿದೆ. ಈ ನಿವೇಶನಗಳ ಹರಾಜು ಹಾಗೂ ಮಾರಾಟವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮೂಲೆ ನಿವೇಶನಗಳು, ಮಧ್ಯಂತರ ನಿವೇಶನಗಳು ಮತ್ತು ಇತರೆ ಹರಾಜು ಮಾಡಬಹುದಾದ ನಿವೇಶನಗಳ ವಿಲೇವಾರಿ ನಿಯಮಾವಳಿ 1984ರ ಅನುಸಾರ ನಡೆಸಲಾಗುವುದು. ನಿವೇಶನಗಳನ್ನು **"ಎಲ್ಲಿ ಹೇಗಿವೆಯೋ ಹಾಗಿರುವ ಸ್ಥಿತಿಯಲ್ಲಿ"** ಹರಾಜು ಮಾಡಲಾಗುವುದು.

ಇ-ಹರಾಜನ್ನು ಆರಂಭಿಸುವ ದಿನಾಂಕ: 05.01.2026.

ಇ-ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ ಮತ್ತು ಸಮಯ: 19.01.2026, ಸಂಜೆ 5.00 ಗಂಟೆಗೆ

ಇ-ಹರಾಜಿನ ನೇರ ಬಿಡ್ಡಿಂಗ್ ಆರಂಭಿಸುವ ದಿನಾಂಕ (ಕ್ರ.ಸಂ. 1ರಿಂದ 45): 21.01.2026ರ ಬೆಳಿಗ್ಗೆ 11.00 ಗಂಟೆಯಿಂದ
ನೇರ ಬಿಡ್ಡಿಂಗ್ ಅಂತಿಮಗೊಳ್ಳುವ ದಿನಾಂಕ: 22.01.2026ರ ಸಂಜೆ 5.00 ಗಂಟೆಯವರೆಗೆ (ಡೆಲ್ಟಾ ಟೈಮ್ 5.00 ನಿಮಿಷ)

ಕ್ರ. ಸಂ.	ನಿವೇಶನ ಸಂಖ್ಯೆ	ಅಳತೆ (ಮೀ.ಗಳಲ್ಲಿ)		ವಿಸ್ತೀರ್ಣ ಚ.ಮೀ.ಗಳಲ್ಲಿ
		ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ	
ಅರ್ಕಾವತಿ ಲೇಔಟ್, 7ನೇ ಬ್ಲಾಕ್, ಜಕ್ಕೂರು				
1	2486	9.00	(7.50+7.10)/2	65.70
2	3132E	23.40	3.40	79.56
ಅರ್ಕಾವತಿ ಲೇಔಟ್, 1ನೇ ಬ್ಲಾಕ್, ಜಕ್ಕೂರು				
3	1018	(11.00+4.60)/2	18.00	140.40
ಅರ್ಕಾವತಿ ಲೇಔಟ್, 2ನೇ ಬ್ಲಾಕ್, ಜಕ್ಕೂರು				
4	JK330	11.50	12.00	138.00
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 73500/-, ಸಂಪರ್ಕಿಸಿ: 7349388238				
ಅರ್ಕಾವತಿ ಲೇಔಟ್, 11ನೇ ಬ್ಲಾಕ್, ರಾಚೇನಹಳ್ಳಿ				
5	RH-179	9.00	12.00	108.00
6	RH-194	9.00	12.00	108.00
7	1410	9.00	12.00	108.00
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 82500/-, ಸಂಪರ್ಕಿಸಿ: 9980402882				
ಅರ್ಕಾವತಿ ಲೇಔಟ್, 7ನೇ ಬ್ಲಾಕ್, ಜಕ್ಕೂರು				
8	1946	(7.00+5.50)/2	9.00	56.25
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 73500/-, ಸಂಪರ್ಕಿಸಿ: 7349388238				
ಅರ್ಕಾವತಿ ಲೇಔಟ್, 2ನೇ ಬ್ಲಾಕ್, ಸಂಪಿಗೇಹಳ್ಳಿ				
9	290	12.00	(8.80+8.90)/2	106.20
10	246	18.00	(8.60+7.20)/2	142.20
11	245A	12.00	(7.40+7.00)/2	86.40
12	790	12.00	(10.60+10.30)/2	125.40
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 87500/-, ಸಂಪರ್ಕಿಸಿ: 7349388238				
ಈಸ್ಟ್ ಆಫ್ ಎನ್.ಜಿ.ಇ.ಎಫ್., ಬಾಣಸವಾಡಿ				
13	2BM742	21.70	18.20	197.47
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 1,40,000/-, ಸಂಪರ್ಕಿಸಿ: 8722433608				
ಆರ್‌ಎಂವಿ, ಗೆದ್ದಲಹಳ್ಳಿ				
14	63	(24.50+7.30)/2	18.70	297.33
15	48/A	12.00	5.00	60.00
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 1,76,500/-, ಸಂಪರ್ಕಿಸಿ: 8722433608				
ಆರ್‌ಎಂವಿ, ಭೂಪಸಂದ್ರ				
16	6	24.38	(15.24+18.44)/2	410.55
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 1,66,500/-, ಸಂಪರ್ಕಿಸಿ: 8722433608				
ಹೆಚ್‌ಬಿಆರ್ 1ನೇ ಹಂತ, 3ನೇ ಬ್ಲಾಕ್, ಕಾಡುಗೊಂಡನಹಳ್ಳಿ				
17	1165	8.60	(9.00+7.50)/2	70.95
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 1,72,000/-, ಸಂಪರ್ಕಿಸಿ: 8722433608				
ಸರ್ ಎಂ.ವಿ. ಲೇಔಟ್, 1ನೇ ಬ್ಲಾಕ್, ರಾಮಸಂದ್ರ				
18	1138	9.40	12.00	112.80
19	1446	18.00	11.10	199.80
20	3388	6.00	12.00	72.00
ಸರ್ ಎಂ.ವಿ. ಲೇಔಟ್, 4ನೇ ಬ್ಲಾಕ್, ರಾಮಸಂದ್ರ				
21	1465	24.00	16.50	396.00
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 87500/-, ಸಂಪರ್ಕಿಸಿ: 6362956998				
ಸರ್ ಎಂ.ವಿ. ಲೇಔಟ್, 4ನೇ ಬ್ಲಾಕ್, ರಾಮಸಂದ್ರ				
22	1474	18.00	8.20	147.60
23	1484	18.00	10.60	190.80
24	2937	18.00	20.10	361.80
ಸರ್ ಎಂ.ವಿ. ಲೇಔಟ್, 3ನೇ ಬ್ಲಾಕ್, ರಾಮಸಂದ್ರ				
25	2208	7.30	9.00	65.70
ಸರ್ ಎಂ.ವಿ. ಲೇಔಟ್, 4ನೇ ಬ್ಲಾಕ್, ರಾಮಸಂದ್ರ				
26	1365	12.00	6.50	78.00
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 87500/-, ಸಂಪರ್ಕಿಸಿ: 6362956998				
ಸರ್ ಎಂ.ವಿ. ಲೇಔಟ್, 6ನೇ ಬ್ಲಾಕ್, ಉಲ್ಲಾಳು				
27	2609	(13.10+18.80)/2	18.00	287.10
28	3549	(13.9+24.0)/2	16.40	310.78
29	3624	11.20	(8.0+11.0)/2	106.40
30	3623	12.00	8.10	97.40
31	3578	12.00	8.20	98.40
32	3511	24.00	14.40	345.60
ಸರ್ ಎಂ.ವಿ. ಲೇಔಟ್, 3ನೇ ಬ್ಲಾಕ್, ಉಲ್ಲಾಳು				
33	503A	12.00	(7.50+8.30)/2	94.80
34	1087/1	9.20	12.00	111.40
ಸರ್ ಎಂ.ವಿ. ಲೇಔಟ್, 5ನೇ ಬ್ಲಾಕ್, ಉಲ್ಲಾಳು				
35	658	11.20	17.40	194.88
36	1090	11.50	5.00	57.50
37	1262	8.00	11.80	94.40
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 84000/-, ಸಂಪರ್ಕಿಸಿ: 7975861995				
ಸರ್ ಎಂ.ವಿ. ಲೇಔಟ್, 3ನೇ ಬ್ಲಾಕ್, ಉಲ್ಲಾಳು & ಸೊನ್ನೇನಹಳ್ಳಿ				
38	1999/C	18.00	16.00	288.00
39	1999/D	18.00	16.00	288.00
40	1237	(5.70+6.40)//2	12.00	72.60
ಸರ್ ಎಂ.ವಿ. ಲೇಔಟ್, 3ನೇ ಬ್ಲಾಕ್, ಸೊನ್ನೇನಹಳ್ಳಿ				
41	2385/1	12.00	10.40	124.80
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 84000/-, ಸಂಪರ್ಕಿಸಿ: 6362956998				
ಸರ್ ಎಂ.ವಿ. ಲೇಔಟ್, 1ನೇ ಬ್ಲಾಕ್, ಕೆಂಗೇರಿ				
42	36	12.00	(18.00+14.10)/2	192.60
43	51	12.00	7.00	84.00
44	75	12.00	(7.10+12.70)/2	118.80
45	323	9.10	12.00	109.20
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 87500/-, ಸಂಪರ್ಕಿಸಿ: 8147510380				

ಇ-ಹರಾಜಿನ ನೇರ ಬಿಡ್ಡಿಂಗ್ ಆರಂಭಿಸುವ ದಿನಾಂಕ (ಕ್ರ.ಸಂ. 46ರಿಂದ 90): 22.01.2026ರ ಬೆಳಿಗ್ಗೆ 11.00 ಗಂಟೆಯಿಂದ
ನೇರ ಬಿಡ್ಡಿಂಗ್ ಅಂತಿಮಗೊಳ್ಳುವ ದಿನಾಂಕ: 23.01.2026ರ ಸಂಜೆ 5.00 ಗಂಟೆಯವರೆಗೆ (ಡೆಲ್ಟಾ ಟೈಮ್ 5.00 ನಿಮಿಷ)

ಕ್ರ. ಸಂ.	ನಿವೇಶನ ಸಂಖ್ಯೆ	ಅಳತೆ (ಮೀ.ಗಳಲ್ಲಿ)		ವಿಸ್ತೀರ್ಣ ಚ.ಮೀ.ಗಳಲ್ಲಿ
		ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ	
ಸರ್ ಎಂ.ವಿ. ಲೇಔಟ್, 1ನೇ ಬ್ಲಾಕ್, ಕೆಂಗೇರಿ				
46	324	11.30	12.00	135.60
47	335	6.80	12.00	81.60
48	347	10.30	12.00	123.60
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 87500/-, ಸಂಪರ್ಕಿಸಿ: 8147510380				
ಜ್ಞಾನಭಾರತಿ ನಾಗದೇವನಹಳ್ಳಿ, 2ನೇ ಬ್ಲಾಕ್, ನಾಗದೇವನಹಳ್ಳಿ				
49	644	9.87	12.00	118.44
50	603	(19.00+18.73)/2	(14.31+13.20)/2	259.32
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 1,00,000/-, ಸಂಪರ್ಕಿಸಿ: 8147510380				
ಸರ್ ಎಂ.ವಿ. ಲೇಔಟ್, 4ನೇ ಬ್ಲಾಕ್, ಉಲ್ಲಾಳು				
51	43	(12.10+17.80)/2	18.00	269.10
ಸರ್ ಎಂ.ವಿ. ಲೇಔಟ್, 4ನೇ ಬ್ಲಾಕ್, ರಾಮಸಂದ್ರ				
52	2915	12.00	11.60	139.20
53	2925	12.00	10.20	122.40
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 87500/-, ಸಂಪರ್ಕಿಸಿ: 6362956998				
ಜೆಪಿ ನಗರ 9ನೇ ಫೇಸ್, 4ನೇ ಬ್ಲಾಕ್, ತಿಪ್ಪಸಂದ್ರ				
54	179	12.19	8.90	108.49
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 1,22,000/-, ಸಂಪರ್ಕಿಸಿ: 8310525317				
ಅಂಜನಾಪುರ ಟೌನ್‌ಶಿಪ್, 2ನೇ ಬ್ಲಾಕ್, ಅಂಜನಾಪುರ				
55	93	8.70	12.00	104.40
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 66000/-, ಸಂಪರ್ಕಿಸಿ: 8310525317				
ಮುಂದುವರೆದ ಅಂಜನಾಪುರ ಬಡಾವಣೆ, 5ನೇ ಜಿ ಬ್ಲಾಕ್, ಗೊಲ್ಲಹಳ್ಳಿ				
56	135	(10.50+7.50)/2	18.00	162.00
57	190	(8.30+6.90)/2	12.00	91.20
58	341	12.00	8.20	98.40
59	342	12.00	8.30	99.60
60	365	12.00	8.00	96.00
61	366	9.00	6.00	54.00
62	399	9.00	5.50	49.50
63	400	9.00	5.50	49.50
64	432	9.00	(6.00+5.20)/2	50.40
65	433	9.00	(5.40+6.00)/2	51.30
66	463	5.70	9.00	51.30
67	493	9.00	5.70	51.30
68	494	9.00	5.70	51.30
69	506	9.00	6.00	54.00
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 67500/-, ಸಂಪರ್ಕಿಸಿ: 8310525317				
ಬನಶಂಕರಿ (ಮೂಲೆ) 10ನೇ ಬ್ಲಾಕ್, ಹೆಮ್ಮಿಗೇಪುರ				
70	831	18.00	(12.00+13.50)/2	229.00
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 62300/-, ಸಂಪರ್ಕಿಸಿ: 9844916955				
ಬನಶಂಕರಿ 6ನೇ ಹಂತ (ಮೂಲೆ), 1ನೇ ಬ್ಲಾಕ್, ತೂರಹಳ್ಳಿ				
71	38	6.00	12.00	72.00
ಬನಶಂಕರಿ 6ನೇ ಹಂತ (ಮೂಲೆ), 2ನೇ ಬ್ಲಾಕ್, ತೂರಹಳ್ಳಿ				
72	1001	(11.00+12.00)/2	18.00	207.00
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 69000/-, ಸಂಪರ್ಕಿಸಿ: 8147799282				
ಬನಶಂಕರಿ 6ನೇ ಹಂತ (ಕಡೇ ನಿವೇಶನ), 11ನೇ ಬ್ಲಾಕ್, ಗಣಕಲ್ಲು				
73	868/A	24.00	15.00	360.00
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 84000/-, ಸಂಪರ್ಕಿಸಿ: 8147799282				
ಬನಶಂಕರಿ 6ನೇ ಹಂತ (ಮೂಲೆ), 5ನೇ ಬ್ಲಾಕ್, ಲಿಂಗಧೀರನಹಳ್ಳಿ				
74	1038	9.00	(8.80+5.00)/2	62.10
ಬನಶಂಕರಿ 6ನೇ ಹಂತ (ಮೂಲೆ), 5ನೇ ಬ್ಲಾಕ್, ಹೆಮ್ಮಿಗೇಪುರ				
75	1150	(6.00+7.00)/2	9.00	58.50
76	1175	9.00	(6.00+7.40)/2	60.30
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 69300/-, ಸಂಪರ್ಕಿಸಿ: 8147799282				
ಜ್ಞಾನಭಾರತಿ, 2ನೇ ಬ್ಲಾಕ್, ನಾಗದೇವನಹಳ್ಳಿ				
77	588	15.50	9.40	145.70
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 1,00,000/-, ಸಂಪರ್ಕಿಸಿ: 8147510380				
ಸರ್ ಎಂ.ವಿ. ಲೇಔಟ್, 1ನೇ ಬ್ಲಾಕ್, ನಾಗದೇವನಹಳ್ಳಿ				
78	1553/A	13.20	24.00	316.80
79	1574/A	13.60	24.00	326.40
80	1682	18.00	(16.30+15.60)/2	287.10
81	1709	18.00	14.00	252.00
82	1531/A	12.30	24.00	295.20
83	1605A	24.00	10.00	240.00
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 87500/-, ಸಂಪರ್ಕಿಸಿ: 8147510380				
ಅರ್ಕಾವತಿ ಲೇಔಟ್, 7ನೇ ಬ್ಲಾಕ್, ಜಕ್ಕೂರು				
84	JK334	1)(10.00+9.80)/2m. 2) 9.80m	1)8.00m 2)0.5*15.00	152.80
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 73500/-, ಸಂಪರ್ಕಿಸಿ: 7349388238				
ಹೆಚ್‌ಬಿಆರ್, 2ನೇ ಬ್ಲಾಕ್, ಕಾಡುಗೊಂಡನಹಳ್ಳಿ				
85	1249	18.28m	12.19m	222.83
ಹೆಚ್‌ಬಿಆರ್, 4ನೇ ಬ್ಲಾಕ್, ಹೆಣ್ಣೂರು				
86	1154	(8.70+16.50)/2m	18.40m	231.84
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 1,72,000/-, ಸಂಪರ್ಕಿಸಿ: 8722433608				
ಅರ್ಕಾವತಿ, 8ನೇ ಬ್ಲಾಕ್, ಶ್ರೀರಾಂಪುರ				
87	SP282	11.00	18.00	198.00
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 87500/-, ಸಂಪರ್ಕಿಸಿ: 7349388238				
ಸರ್ ಎಂ.ವಿ. ಲೇಔಟ್, 1ನೇ ಬ್ಲಾಕ್, ರಾಮಸಂದ್ರ				
88	3265	11.30	24.00	271.20
ಸರ್ ಎಂ.ವಿ. ಲೇಔಟ್, 4ನೇ ಬ್ಲಾಕ್, ರಾಮಸಂದ್ರ				
89	819	18	12	216
90	818	18	12	216
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 87500/-, ಸಂಪರ್ಕಿಸಿ: 6362956998				

ಇ-ಹರಾಜಿನ ಸಾಮಾನ್ಯ ಷರತ್ತು ಮತ್ತು ನಿಯಮ-ನಿಬಂಧನೆಗಳು ಈ ಕೆಳಕಂಡಂತೆ ಇರುತ್ತವೆ.

(1) ಹರಾಜಿನಲ್ಲಿ ಭಾಗವಹಿಸುವವರು ಭಾರತೀಯ ಪ್ರಜೆಯಾಗಿರಬೇಕು.

(2) ವಿಳಾಸದ ಸಾಬೀತಿಗಾಗಿ ಕೆಳಕಂಡ ಯಾವುದಾದರು ಒಂದು ದಾಖಲೆಯನ್ನು ಇ-ಹರಾಜಿನ ಪೋರ್ಟಲ್‌ನಲ್ಲಿ Upload ಮಾಡಬೇಕು [ಗೆಜೆಟೆಡ್ ಅಧಿಕಾರಿ / ನೋಟರಿಯಿಂದ / ಭಾರತೀಯ ಅನಿವಾಸಿಯಾಗಿದ್ದಲ್ಲಿ (ಎನ್.ಆರ್.ಐ) ಎಂಬೆಸ್ಸಿ ಕಛೇರಿಯಿಂದ ದೃಢೀಕೃತಗೊಂಡಿರಬೇಕು]. ಅ) ಮತದಾರರ ಗುರುತಿನ ಚೀಟಿ, ಆ) ವಾಹನ ಚಾಲನೆಯ ಪರವಾನಗಿ, ಇ) ಪಾಸ್ ಪೋರ್ಟ್, ಈ) ವಿಶಿಷ್ಟ ಗುರುತಿನ ಸಂಖ್ಯೆ (ಆಧಾರ್).

(3) ಪ್ಯಾನ್ ಕಾರ್ಡ್‌ನ್ನು ಕಡ್ಡಾಯವಾಗಿ ಇ-ಹರಾಜಿನ ಪೋರ್ಟಲ್‌ನಲ್ಲಿ Upload ಮಾಡಬೇಕು [ಗೆಜೆಟೆಡ್ ಅಧಿಕಾರಿ / ನೋಟರಿಯಿಂದ /ಭಾರತೀಯ ಅನಿವಾಸಿಯಾಗಿದ್ದಲ್ಲಿ (ಎನ್.ಆರ್.ಐ) ಎಂಬೆಸ್ಸಿ ಕಛೇರಿಯಿಂದ ದೃಢೀಕೃತಗೊಂಡಿರಬೇಕು].

(4) ಸಹಿ ಮತ್ತು ಭಾವಚಿತ್ರದ ಗುರುತನ್ನು ಇ-ಹರಾಜಿನ ಪೋರ್ಟಲ್‌ನಲ್ಲಿ Upload ಮಾಡಬೇಕು. ಇದಕ್ಕೆ ನಿಗದಿಪಡಿಸಿದ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಳ್ಳಬೇಕು [ಗೆಜೆಟೆಡ್ ಅಧಿಕಾರಿ / ನೋಟರಿಯಿಂದ/ ಭಾರತೀಯ ಅನಿವಾಸಿಯಾಗಿದ್ದಲ್ಲಿ (ಎನ್.ಆರ್.ಐ) ಎಂಬೆಸ್ಸಿ ಕಛೇರಿಯಿಂದ ದೃಢೀಕೃತಗೊಂಡಿರಬೇಕು].

(5) ಹರಾಜು ಖರೀದಿದಾರರು ಸರಿಯಾದ ಇ-ಮೇಲ್ ವಿಳಾಸ, ಮೊಬೈಲ್ ಸಂಖ್ಯೆ ಮತ್ತು ಸ್ಥಿರ ದೂರವಾಣಿಯನ್ನು (ಲ್ಯಾಂಡ್ ಲೈನ್) ಇ-ಹರಾಜಿನಲ್ಲಿ ಭಾಗವಹಿಸುವಾಗ ನಮೂದಿಸಬೇಕು. ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಹೆಸರು ನೋಂದಾಯಿಸಿರುವ ಬಿಡ್‌ದಾರರು ಅಂತಿಮವಾಗಿರುತ್ತಾರೆ ಮತ್ತು ನಿವೇಶನವನ್ನು ಬೇರೆ ಯಾವುದೇ ಹೆಸರಿಗೆ ವರ್ಗಾಯಿಸುವುದಿಲ್ಲ.

(6) **ಅಪ್ರಾಪ್ತ ವಯಸ್ಕರು /ಗಣಕಯಂತ್ರದ ಜ್ಞಾನ (Computer Knowledge) ಇಲ್ಲದೇ ಇರುವವರು ತಮ್ಮ ಪಾಲಕರ /ಹತ್ತಿರದ ಸ್ನೇಹಿತರ ಮೂಲಕ ಇ-ಹರಾಜಿನಲ್ಲಿ ಭಾಗವಹಿಸಬಹುದು. ಇ-ಹರಾಜಿನಲ್ಲಿ ಭಾಗವಹಿಸುವಾಗ ಯಾರು ನಿವೇಶನವನ್ನು ಖರೀದಿಸುತ್ತಾರೆಯೋ ಅವರ ಹೆಸರನ್ನು ಮಾತ್ರ ನಮೂದಿಸಿ, ಅವರಿಗೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸಬೇಕು /ಇ-ಹರಾಜಿನ ಪೋರ್ಟಲ್‌ನಲ್ಲಿ Upload ಮಾಡಬೇಕು.**

(7) ಪಾಲುದಾರ ಸಂಸ್ಥೆಯು ಹರಾಜಿನಲ್ಲಿ ಭಾಗವಹಿಸಬಹುದಾಗಿದೆ. ಹೀಗೆ ಭಾಗವಹಿಸುವ ಪಾಲುದಾರ ಸಂಸ್ಥೆಯು ಹರಾಜಿನಲ್ಲಿ ಭಾಗವಹಿಸುವ ಮುನ್ನ ತನ್ನ ಪಾಲುದಾರಿಕೆ ಸಂಸ್ಥೆಯ ನೋಂದಾವಣೆಯನ್ನು ಭಾರತ ದೇಶದಲ್ಲಿ ಮಾಡಿಕೊಂಡಿರಬೇಕು.

(8) ಪ್ರತಿ ನಿವೇಶನಕ್ಕೆ ಇಎಂಡಿ ಮೊತ್ತವನ್ನು ರೂ. 4.00 ಲಕ್ಷ (ನಾಲ್ಕು ಲಕ್ಷ ರೂಪಾಯಿಗಳು ಮಾತ್ರ) ಎಂದು ನಿಗದಿಪಡಿಸಲಾಗಿದೆ ಮತ್ತು ಈ ಮೊತ್ತವನ್ನು ಇ-ಹರಾಜು ಶುಲ್ಕದೊಂದಿಗೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಉಲ್ಲೇಖಿಸಿದಂತೆ ಪಾವತಿಸಬೇಕು. ಇ-ಹರಾಜು ಪೋರ್ಟಲ್ ಬದಲಿಗೆ ಬಿಡಿಎ ಖಾತೆಗೆ ಪಾವತಿಸಿದರೆ ಮರುಪಾವತಿ ಸಮಯದಲ್ಲಿ ಇಎಂಡಿಯ ಮೇಲಿನ 5% ಸೇವಾ ಶುಲ್ಕವನ್ನು ಕಡಿತಗೊಳಿಸಲಾಗುತ್ತದೆ.

(9) ಹರಾಜು ನಿವೇಶನಗಳಿಗೆ ಸಂಬಂಧಿಸಿದ ಎಲ್ಲಾ ಕಾನೂನು ಪ್ರಕರಣಗಳು ಬೆಂಗಳೂರಿನ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುತ್ತವೆ.

(10) ಇ-ಹರಾಜು ಕೊನೆಯ ಕ್ಷಣದಲ್ಲಿ ಬರುತ್ತಿರುವ ಬಿಡ್ಡುಗಳಿಗೆ ಡೆಲ್ಟಾ ಟೈಮ್ ಐದು ನಿಮಿಷಗಳ ಕಾಲ ವಿಸ್ತರಣೆಯಾಗುತ್ತದೆ.

(11) ಯಾವುದೇ ಕಾರಣ ನೀಡದೇ ಹರಾಜು ಅವಧಿಯ ಯಾವುದೇ ಸಮಯದಲ್ಲಿ ಹರಾಜಿಗೆ ಪ್ರಕಟಿಸಿದ ನಿವೇಶನಗಳನ್ನು ಹಿಂಪಡೆಯುವ ಹಕ್ಕನ್ನು ಬಿಡಿಎ ಕಾಯ್ದಿರಿಸಿಕೊಂಡಿದೆ.

(12) ಯಾವುದೇ ಕಾರಣ ನೀಡದೇ ಯಶಸ್ವಿ ಬಿಡ್ಡುದಾರರ ಬಿಡ್ಡನ್ನು ಪುರಸ್ಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಬಿಡಿಎ ಕಾಯ್ದಿರಿಸಿಕೊಂಡಿದೆ.

(13) **ಬ್ಯಾಂಕ್‌ನ ಹೆಸರು :- ಕೆನರಾ ಬ್ಯಾಂಕ್, ಬಿಡಿಎ ಸಂಕೀರ್ಣ ಶಾಖೆ, ಕುಮಾರಕೃಪಾ ಪಶ್ಚಿಮ, ಬೆಂಗಳೂರು-560020. ಉಳಿತಾಯ ಖಾತೆಯ ಹೆಸರು:- ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು. ಉಳಿತಾಯ ಖಾತೆ ಸಂಖ್ಯೆ:- 2828101053014 ಐ.ಎಫ್.ಎಸ್.ಸಿ ಕೋಡ್:- CNRB0002828. ಪಾವತಿಯ ವಿಧಾನ:- ಆರ್.ಟಿ.ಜಿ.ಎಸ್ /ಎನ್.ಇ.ಎಫ್.ಟಿ**

(14) ಯಶಸ್ವಿ ಬಿಡ್‌ದಾರರಿಗೆ (ಅತಿ ಹೆಚ್ಚು ಬಿಡ್‌ದಾರರು) ಇ-ಹರಾಜಿನ ಮುಕ್ತಾಯ ಸಮಯದಿಂದ 72 ಗಂಟೆಗಳ ಒಳಗೆ (ಬ್ಯಾಂಕ್ ರಜಾದಿನಗಳನ್ನು ಹೊರತುಪಡಿಸಿ) ಒಟ್ಟು ಬೆಲೆಯ 25% ಮೊತ್ತವನ್ನು ರೂ.4.00 ಲಕ್ಷಗಳ ಇಎಂಡಿ ಮೊತ್ತವನ್ನು ಕಳೆದು ಉಳಿದ ಮೊತ್ತವನ್ನು ಕೆಳಗೆ ತಿಳಿಸಲಾದ ಬಿಡಿಎ ಬ್ಯಾಂಕ್ ಖಾತೆಗೆ ಜಮಾ ಮಾಡಲು ಸಲಹೆ ಪತ್ರಗಳನ್ನು ಇ-ಮೇಲ್ ಮೂಲಕ ಕಳುಹಿಸಲಾಗುತ್ತದೆ; ಬ್ಯಾಂಕ್ ಖಾತೆಗೆ ಹಣ ಸಂದಾಯ ಮಾಡಿದ್ದಕ್ಕೆ ಪಡೆದ ಚಲನ್ ಅನ್ನು ಲೆಕ್ಕಾಧಿಕಾರಿ ಹಣಕಾಸು ಇಲಾಖೆ ('ಡಿ' ಬ್ಲಾಕ್, 2ನೇ ಮಹಡಿ, ಕೊಠಡಿ ಸಂಖ್ಯೆ 308) ಇವರಿಗೆ ಸಲ್ಲಿಸಬೇಕು. ನಿಗದಿತ ಸಮಯದ ಒಳಗೆ 25% ಹಣವನ್ನು ಸಂದಾಯ ಮಾಡಲು ವಿಫಲವಾದ ಪಕ್ಷದಲ್ಲಿ ಇಎಂಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಯಶಸ್ವಿ ಬಿಡ್ಡುದಾರರು ಶೇ.25 ರಷ್ಟು ಬಿಡ್ ಹಣವನ್ನು ಪಾವತಿಸಿದ ಬಳಿಕ ಉಳಿದ ಹಣ ಶೇ.75 ಹಣವನ್ನು ಬಿ.ಡಿ.ಎ.ಯಿಂದ ಪತ್ರ ತಲುಪಿದ 45 ದಿನಗಳೊಳಗಾಗಿ ಪಾವತಿಸತಕ್ಕದು.

(15) ಯಶಸ್ವಿಯಾಗದ ಬಿಡ್ಡುದಾರರ ಇಎಂಡಿ ಮೊತ್ತ ರೂ. 4 ಲಕ್ಷಗಳನ್ನು 30 ಕೆಲಸದ ದಿನಗಳಲ್ಲಿ ಅವರ ಖಾತೆಗೆ ಜಮಾ ಮಾಡಲಾಗುವುದು.

(16) ಹರಾಜು ಖರೀದಿದಾರರು ಜಂಟಿಯಾಗಿ ನಿವೇಶನಗಳನ್ನು ನೋಂದಾಯಿಸಲು ಬಯಸಿದ್ದಲ್ಲಿ, ಅದಕ್ಕೆ ಸಂಬಂಧಪಟ್ಟ ವ್ಯಕ್ತಿಗಳ ವಿವರಗಳನ್ನು ಇ-ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು. ಹರಾಜು ಖರೀದಿದಾರರೊಂದಿಗೆ ರಕ್ತಸಂಬಂಧಿಗಳು ಅಂದರೆ ಸಂಗಾತಿ, ಪುತ್ರರು ಅಥವಾ ಅವಿವಾಹಿತ ಹೆಣ್ಣುಮಕ್ಕಳು ಮಾತ್ರ ಜಂಟಿ ನೋಂದಣಿಗೆ ಅರ್ಹರಾಗಿರುತ್ತಾರೆ. ಅರ್ಜಿಯಲ್ಲಿ ಅಂತಹ ವ್ಯಕ್ತಿಯ ಸಂಬಂಧವನ್ನು ಸ್ಪಷ್ಟವಾಗಿ ನಮೂದಿಸಬೇಕು ಮತ್ತು ಯಾವುದೇ ಸರ್ಕಾರಿ ಗುರುತಿನ ಚೀಟಿಯನ್ನು ಲಗತ್ತಿಸತಕ್ಕದ್ದು. ನಂತರ ಅಂತಹ ವಿನಂತಿಯನ್ನು ತಿರಸ್ಕರಿಸಲಾಗುತ್ತದೆ.

(17) ಬಿಡ್ಡಿಂಗ್ ಸಮಯದಲ್ಲಿ, ಒಂದೇ ನಿವೇಶನಕ್ಕೆ ಅಡ್ಡಹೆಸರುಗಳ ಯಾವುದೇ ನಕಲು ಇದ್ದಲ್ಲಿ, ಅಂತಹ ಬಿಡ್ ಅನ್ನು ಯಾವುದೇ ಕಾರಣಗಳನ್ನು ನೀಡದೆ ತಿರಸ್ಕರಿಸಲಾಗುತ್ತದೆ.

(18) **ಯಶಸ್ವಿ ಬಿಡ್ಡುದಾರರು /ಅತಿ ಹೆಚ್ಚಿನ ಬಿಡ್ಡುದಾರರು ಇ-ಹರಾಜು ಮುಕ್ತಾಯಗೊಂಡ ಅವಧಿಯ ನಿಗದಿತ 72 ಘಂಟೆಯೊಳಗೆ ನಿವೇಶನದ ಒಟ್ಟು ಮೌಲ್ಯದ ಪೈಕಿ ಶೇ.25 ರಷ್ಟು ಮೌಲ್ಯವನ್ನು ಪ್ರಾಧಿಕಾರದ ಖಾತೆಗೆ ಪಾವತಿ ಮಾಡದೇ ಇದ್ದಲ್ಲಿ ಅಥವಾ ನಿಗದಿತ ಅವಧಿಯ ನಂತರ ಅಂದರೆ ತಡವಾಗಿ ಪಾವತಿಸಿದ್ದಲ್ಲಿ, ಇ.ಎಂ.ಡಿ. ಮೊತ್ತವಾದ ರೂ.4.00 ಲಕ್ಷಗಳನ್ನು ಪ್ರಾಧಿಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.**

(19) ಆದಾಯ ತೆರಿಗೆ ಕಾಯ್ದೆ 1961 ರ ಕಲಂ 194 ಐಎ ಪ್ರಕಾರ ಹರಾಜು ನಿವೇಶನದ ಒಟ್ಟು ಮೌಲ್ಯವು ರೂ.50.00 ಲಕ್ಷ ಮೀರಿದ ಪ್ರಕರಣಗಳಲ್ಲಿ, ಹರಾಜು ಖರೀದಿದಾರರು ನಿವೇಶನದ ಒಟ್ಟು ಮೌಲ್ಯದಲ್ಲಿ ಶೇ.1 ರಷ್ಟು ಮೌಲ್ಯವನ್ನು ಕಟಾಯಿಸಿ, ಆದಾಯ ತೆರಿಗೆ ಇಲಾಖೆಗೆ ಪಾವತಿಸತಕ್ಕದ್ದು.

(20) ಒಂದು ವೇಳೆ ನಿವೇಶನದ ಅಳತೆಯಲ್ಲಿ ವ್ಯತ್ಯಾಸವಿದ್ದರೆ (ಕಡಿಮೆ/ಹೆಚ್ಚು) ಮೊದಲು ಇ-ಹರಾಜು ಅಧಿಸೂಚನೆ / ಹರಾಜು ನಿವೇಶನದ ಸ್ಥಿರೀಕರಣ ಪತ್ರದನ್ವಯ ನಿವೇಶನದ ಪೂರ್ಣ ಮೌಲ್ಯವನ್ನು (TDS ಹೊರತುಪಡಿಸಿ) ನಿಗದಿತ ಅವಧಿಯೊಳಗೆ ಪಾವತಿಸಬೇಕು. ನಿಗದಿತ ಅವಧಿಯೊಳಗೆ ಪಾವತಿಸದೇ ಇದ್ದಲ್ಲಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಮೂಲೆ, ಮಧ್ಯಂತರ & ವಾಣಿಜ್ಯ ನಿವೇಶನಗಳ ವಿಲೇವಾರಿ) ನಿಯಮ 1984 ರನ್ವಯ ಕ್ರಮ ಕೈಗೊಳ್ಳಲಾಗುವುದು. ಒಂದು ವೇಳೆ ನಿವೇಶನದ ಅಳತೆಯಲ್ಲಿ ವ್ಯತ್ಯಾಸವಿದ್ದರೆ (ಕಡಿಮೆ / ಹೆಚ್ಚು):- ನಿವೇಶನದ ಮೌಲ್ಯವನ್ನು ಹೆಚ್ಚಾಗಿ ಪಾವತಿಸಿದ್ದರೆ, ಕಡಿಮೆಯಾದ ವಿಸ್ತೀರ್ಣಕ್ಕೆ ನಿವೇಶನದ ಮೌಲ್ಯವನ್ನು ಬಡ್ಡಿರಹಿತವಾಗಿ ಮರುಪಾವತಿಸಲು ಕ್ರಮ ಕೈಗೊಳ್ಳಲಾಗುವುದು. ಹೆಚ್ಚುವರಿಯಾದ ವಿಸ್ತೀರ್ಣಕ್ಕೆ ಪ್ರಾಧಿಕಾರದಿಂದ ಹರಾಜು ಖರೀದಿದಾರರಿಗೆ ಬರೆಯುವ ಪತ್ರದಂತೆ ನಿವೇಶನದ ಮೌಲ್ಯವನ್ನು ಪಾವತಿಸಬೇಕು.

(21) ಬಿಡ್ಡುದಾರರು/ಹರಾಜು ಖರೀದಿದಾರರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಮೂಲೆ, ಮಧ್ಯಂತರ & ವಾಣಿಜ್ಯ ನಿವೇಶನಗಳ ವಿಲೇವಾರಿ) ನಿಯಮ 1984 ನ್ನು ಪಾಲಿಸಬೇಕಾಗುತ್ತದೆ (ಇ-ಹರಾಜಿನ ದಾಖಲೆಯ ಭಾಗವಾಗಿ ಈ ದಾಖಲೆಯನ್ನು ಲಗತ್ತಿಸಲಾಗಿದೆ).

(22) ಇ-ಹರಾಜಿನಲ್ಲಿ ಭಾಗವಹಿಸುವ ವಿಧಾನಗಳನ್ನು ತಿಳಿಯಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕೇಂದ್ರ ಕಛೇರಿಯನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ಹರಾಜಿನ ವಿಧಾನ ತಿಳಿಸುವ ಸಮಯದಲ್ಲಿ ಬಿಡಿಎ, ಬಿಡ್ಡುದಾರರ ಪರವಾಗಿ ಬಿಡ್ ಮಾಡುವುದಿಲ್ಲ.

(23) ಇ-ಹರಾಜಿನಲ್ಲಿ ಭಾಗವಹಿಸುವಾಗ ಬಿಡ್ ಮೊತ್ತವು ಮೂಲ ದರಕ್ಕಿಂತ 10% ಹೆಚ್ಚಾಗಿರಬೇಕು. ಅಂದರೆ 108 m^2 ನಿವೇಶನದ ವಿಸ್ತೀರ್ಣದ ಮೂಲ ದರ ರೂ.45,000/m^2 ಆಗಿರುತ್ತದೆ. ಬಿಡ್‌ದಾರರು ರೂ..45,000x1.1=ರೂ.49,500/m^2 ಕ್ಕಿಂತ ಹೆಚ್ಚು ಕೋಟ್ ಮಾಡಬೇಕು (ರೂ.49,500 ಕೋಟ್ ಮಾಡಿದರೆ ಅದನ್ನು ತಿರಸ್ಕರಿಸಲಾಗುವುದು). ಆದಾಗ್ಯೂ, ಯಾವುದೇ ಕಾರಣ ನೀಡದೇ ಬಿಡ್ಡನ್ನು ಪುರಸ್ಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಬಿಡಿಎ ಕಾಯ್ದಿರಿಸಿಕೊಂಡಿದೆ.

(24) ಪ್ರತಿ ನಿವೇಶನಕ್ಕೆ ಕನಿಷ್ಠ 2 ಬಿಡ್‌ದಾರರುಗಳು ಇರಬೇಕು. ಏಕ ಬಿಡ್‌ದಾರನನ್ನು ತಿರಸ್ಕರಿಸಲಾಗುವುದು.

(25) ವೆಬ್‌ಸೈಟ್ ವಿಳಾಸ: www.bdakarnataka.in

(26) ಇ-ಹರಾಜಿನಲ್ಲಿ ಭಾಗವಹಿಸುವ ಬಿಡ್‌ದಾರರು ವೆಬ್‌ಸೈಟ್: www.bdakarnataka.in ಇಲ್ಲಿಗೆ ಲಾಗ್‌ಆನ್ ಆಗಿ ಹೊಸ ಇ-ಹರಾಜು ಬಿಡ್ಡಿಂಗ್ ಬಳಕೆದಾರ ಕೈಪಿಡಿಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್:080-46010000 ಮತ್ತು 080-68948777 ಸಂಪರ್ಕಿಸುವುದು.

(27) ಹರಾಜು ಮಾಡಿದ ನಿವೇಶನಗಳನ್ನು ಯಶಸ್ವಿ ಬಿಡ್‌ದಾರರಿಗೆ ಅವುಗಳು ಇರುವ ಸ್ಥಿತಿಯಲ್ಲಿಯೇ ಹಂಚಿಕೆ ಮಾಡಲಾಗುವುದು. ಇ-ಹರಾಜಿನಲ್ಲಿ ಭಾಗವಹಿಸುವ ಬಿಡ್‌ದಾರರು ನಿವೇಶನದ ಸ್ಥಳ, ರಸ್ತೆಯ ಅಗಲ ಇತ್ಯಾದಿಗಳನ್ನು ಬಿಡ್ ಮಾಡುವ ಮುನ್ನ ಭೌತಿಕವಾಗಿ ಪರಿಶೀಲಿಸತಕ್ಕದ್ದು. ಇ-ಹರಾಜಿನಲ್ಲಿ ಹಂಚಿಕೆ ಮಾಡಿದ ನಿವೇಶನಗಳನ್ನು ರದ್ದುಪಡಿಸಲಾಗುವುದಿಲ್ಲ/ಪರ್ಯಾಯ ನಿವೇಶನ ನೀಡಲಾಗುವುದಿಲ್ಲ.

(28) ಇ-ಹರಾಜಿನಲ್ಲಿ ಭಾಗವಹಿಸುವ ಬಿಡ್‌ದಾರರು ಮೇಲೆ ನಿರ್ದಿಷ್ಟಪಡಿಸಿರುವ ಎಲ್ಲಾ ನಿಯಮಗಳು ಮತ್ತು ನಿಬಂಧನೆಗಳಿಗೆ ಬದ್ಧರಾಗಿರಬೇಕು.

(29) ಇ-ಹರಾಜಿನ ಬಗ್ಗೆ, ಬಿಡ್‌ದಾರರು ಪ್ರಾಧಿಕಾರವನ್ನು ನೇರವಾಗಿ ಸಂಪರ್ಕಿಸಬೇಕು. ಯಾವುದೇ ಮಧ್ಯವರ್ತಿಗಳನ್ನು ಸಂಪರ್ಕಿಸಬಾರದು.

(30) ನಿವೇಶನಗಳ ಜಿಯೊ ಟ್ಯಾಗ್ ಕೇವಲ ಪರಾಮರ್ಶನೆಗೆ ಮಾತ್ರ. ಅದರಲ್ಲಿ ಯಾವುದೇ ವ್ಯತ್ಯಾಸಗಳಿದ್ದರೂ ಆ ಬಗ್ಗೆ ಯಾವುದೇ ಹಕ್ಕನ್ನು ಮಾನ್ಯ ಮಾಡುವುದಿಲ್ಲ.

ಬಿಡ್‌ದಾರರು ಬಿಡ್ ಮಾಡುವ ಮೊದಲು ಎಲ್ಲಾ ನಿಯಮಗಳು ಮತ್ತು ಷರತ್ತುಗಳನ್ನು ಓದಬೇಕು ಮತ್ತು ಅದರ ಪ್ರಕಾರ ಭಾಗವಹಿಸಬೇಕು.

ಇ-ಹರಾಜಿನ ಇತರೆ ಮಾಹಿತಿ ಮತ್ತು ನಿಯಮ ನಿಬಂಧನೆಗಳಿಗೆ **www.bdakarnataka.in** ಲಾಗಾನ್ ಆಗಿ

ಬಿಡಿಎ ನಿವೇಶನ ವಿವರಗಳಿಗೆ ಸಂಬಂಧಿಸಿದಂತೆ **080-23368435 /23368036** ಹಾಗೂ
ಕೆಪಿಪಿಪಿನ ತಾಂತ್ರಿಕ ವಿಚಾರಣೆಗೆ ಸಂಬಂಧಿಸಿದಂತೆ **080-46010000 /68948777** ಸಂಪರ್ಕಿಸಿ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020.

ನಂ. ಬೆಂಅಪ್ರಾ/ಅಸ/ಇ-ಹರಾಜು/ಟಿ-14/2025-26, ದಿನಾಂಕ: 12.12.2025

ಸಹಿ/- ಅಭಿಯಂತರ ಸದಸ್ಯರು

ಕ್ಲಾಸಿಫೈಡ್ಸ್

ಪ್ರಜಾವಾಣಿ

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331











REAL ESTATE SELLING

Sites

Bannerghatta Road

KHB Sites in Bangalore
Land Owner Share
Prime Location, Fully Developed Layout, Ready for Registration, SBI & Nationalised Bank Loan
Call : 70260 13388

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

BANASHANKARI 6TH Stage 7th Block BDA 30x40 E/F Site For Sale 14500/- P.Sqft Owner- 9900115519

Hesaraghatta

1280 SQFT. Site SALE, HESARAGATTA, ROAD AGB Layout ATTACH, Site No. 12, NORTH FACING. 9986313708

Hebbal

HEBBAL 30X35 House Sale, Ground 1 BHK, Two Carparking, 1st 2 BHK, 2nd 2 BHK 9845623970/ 9739400838

Jayanagar

PRIME Properties Sale Jayanagar 1st & 2nd Block 40x60 Corner & 45x90 50feet Road "GOLDLINE" 9845033756

J P Nagar

"J.P.NAGAR, SRINIDHI_LAYOUT 30x51 Residential Site, East_Facing, BBMP A_Katha, Full White, Direct Owner: 9845249799/ 9845088449"

Kempegowda Layout

NADAPRABHU KEMPEGOWDA LAYOUT BDA SITES SELLING/ BUYING 20x30, 30x40, 40x60, 50x80. Genuine Buyers Call: 9632146784, 9731162167.

DIRECT OWNER 30x40 BDA Site Sale, KEMPEGWODA LAYOUT 5th 'L' SECTOR,near Mysore Road. Rs.8100/-. 9632966556

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80. Contact Kumar 9945119449

BDA SITE South facing, measuring 50x80, 1st K Sector, 60 ft Double Road (Commercial), Connects Business Corridor, Kempegowda Layout, Site Sale. 13000/- psqft. +919353534340.

Magadi Road

"BEL 2ND_STAGE Magadi_Main Road 1425_Sqft x 2 Sites South West Corner 60`ft Road. 9845500019/ 7019314962"

Vijayanagar

SITE FOR SALE 60x90 RPC LAYOUT VIJAYANAGAR
SALE: 60X90 West Facing Only Genuine Buyers Contact: 6363250343 9845038343

SITE FOR SALE: 60X90 WEST FACING WOC ROAD RPC LAYOUT ONLY GENUINE BUYERS: 6363250343/ 9845038343

Multiple Locations

SITES SALE Sadhashivnagar, Manyata, Jakkur, BTM Jayanagar Commercial, Residential 45x60, 50x80, 60x90, 80x120, 200x200. 9845004307.

SMV 6TH Block 40×67 Corner, A.G.S. 30×50, BSK 8th 50×80, 11th 20×30, MUDA 60x90. 9448448432

Nagarabhavi

"40X65 SEMI_COMMERCIAL West-facing site_sale at Vinayaka_Layout opposite Park behind_Swathi Hotel just`10`minutes drive`to Metro. 9880031654"

R T Nagar

R.T.NAGAR HMT LAYOUT 40X60 Site Close to CBI MAIN ROAD Excellent Location, For-Sale Call: 9986281337

R.T.NAGAR 40X60 BDA Site Excellent Location With 2 Floor Old Building For Sale Call: 7829203369

RMV

DOLLARS COLONY RMV 2nd Stage 50X90 West Facing, Old House BDA Excellent Location For-Sale Call:7829203369

Vishweshwariah Layout

30 x 40 BDA Site for Sale
East facing, 30 ft/rd, Rs 13500/- per sq/ft Negotiable, Vishweshwaraiah Layout, near Kengeri Metro Station.
Contact: 9916826976

DIRECT OWNER 30x40 CORNER SIDE BDA Site Sale,40ft Road, VISHWESHWARAIAH LAYOUT, Rs.11000/-. 9742681666, 9886634578

BUYING/ SELLING 20x30, 30x40, 40x60, 50x80 BDA Sites VISHVESHWARAIAH LAYOUT, KEMPEGOWDA LAYOUT, Contact: 9035470616

BDA SITE SALE VISHWESHWARAIAH LAYOUT 2ND BLOCK 40X60 NORTH FACE, NEAR 100FT ROAD, GOOD LOCATION CONTACT: 8892901567

30X40 SITE For Sale VVS 2nd Block, West Facing, 11300/ Sqft, Slightly Negotiable. Komghatta 7892059756

Singsandra

PLOT FOR SALE in AECS Layout 'B' Block Singsandra, Five Minutes Drive to Kudlu Gate Metro Station. Contact: 7022389881

Out-Station

PENUKONDA NEAR KIA Car-Factory Madakasira Highway 50X100 (2-SITES) ResiConverted, Gated Community, 499/- PSft 8310681025

House

BTM Layout

HOUSE AND Site for sale 30×40,40×60 East &North Facing For sale BTM 2nd Stage 9945377119 /9844099557

Kengeri

HOUSE FOR SALE 30x40 dimension, 2 bhk fully furnished 30/3, K Gollahalli, Kengeri, Bangalore South, 99 lakhs, slightly negotiable. CALL : 98451 95504

Kanakapura Road

KANAKAPURA ROAD,BCC Layout,30x50, G+3 Brand New House 4.60cr/ 900Sft, 3BHK Duplex 2.50cr 9845704509

Mysore Road

SALE BEAUTIFUL_HOUSE Mysore Road, Near RRHospital, Under Construction Site`30x50,Facing East in a Gated_Community BDA`Approved Layout Basement Parking 1st&2nd Floor Independent 3`BHK, 3&4`Floor Duplex with,Open Terrace, Lift,Till Top`Floor. Call:9632224247

Nagarabhavi

"NAGARABHAVI BDA_COMPLEX 40x60 North, East_Door 4BHK Luxury Newly Grand Duplex House 40`feet Road. 9448432633"

Vishweshwariah Layout

"VISHVESWARAIAH 6TH-BLOCK 60`ft_Road 75 Squares Building on 50x80 South facing for sale. 9845500019/ 7019314962"

FOR SALE Luxurious G+2 House Vishweshwariah Layout 5th Block 40x60 Plot 5cr Negotiable Owner: 7676175045

Jayanagar

SALE 40X54 Duplex_3BHK House on_40feet Road Jayanagar 4th 'T' Block Contact: 9844134068

Flat

Banashankari

"BANASHANKARI 2ND_STAGE 2BHK high rise Apartment with club house "Sri.Ganesh Estate"- 9845286505"

Malleshwaram

17TH CROSS Near Cloud9 Hospital Flat for Sale 2BHK (1100sft) West facing,1st floor. Carparking. Contact Genuine buyers only: 7013351639/ 9945617455

Nagarbhavi

FLATS FOR-SALE @ Nagarabhavi Chandra Layout 2 & 3BHK Ready to Move In Good Location Call:9538472420 9845066608

Uttarahalli

4BHK NEW FLATS SALE Ready to Move, A_Khatha, E-swathu, Carparking_Lift Vaasthu, Maruthi_Layout. Rs.1.10.Cr. 9945224058 6363181276.

Agricultural Land Converted

Magadi Road

MAGADI ROAD TAVAREKERE, OPPOSITE SALAR PURIYA SATTVA LAYOUT 10-ACRE CONVERTION LAND FOR SALE. Contact:9845059407

Commercial Land

Nelamangala

BANGALORE-SOLUR HIGHWAY 2 acres 17 guntas Commercial Land for SALE. Genuine Buyers CONTACT: 9845780996

Commerical

Sarjapur Road

FOR SALE: Sarjapur Road Near RGA Tech Park Furnished 47 PG ROOMS 6.60Crs. JP.NAGAR 4BHK Furnished HOUSE on 40X60. 8Crs. Interested Buyers Call: 91489-11131/ 9343728200.

Vijayanagar

450-SQFT COMMERCIAL Office Space Floor Wise For Sale Opposite to Vijayanagar Metro Station Contact: 7676900174 9945569909

Vishweshwariah Layout

SMV LAYOUT 4th Block 875.Sqft. BDA Commercial North East`Corner Site`Sale Near 100`Feet Road. 1.30cr. Negotiable. Call:9164089633 9663226688.

Industrial & Factory

Jigani

2300 SQ.FT plot at Jigani industrial area, clear title, 100m from main road, priced @90 Lakhs. Call 8310273250

Peenya

IMMEDIATE SALE. KIADB Vaccant Land 5000, 10000, 20000 sqft, Peenya 3rd phase. Prime Location. PEENYA ESTATES: 9844039416

Tumkur Road

SALE/ BUILT to suit, 9.5 Acres Industrial Land near Dabaspet. Suitable for Industry, Warehouse. 9972636255

MORE Classifieds Ads on Subsequent Pages

Yeshwanthpur

INDUSTRIAL SUBURB, commercial premises consisting of basement, ground, first, second floor each measuring 3500sft with 40HP power and lift. Vaastu complaint for rent. Rate 40 per'sft. Call: 9535479091, 9611044455

Villas/Bunglows

Kanakapura Road

SALE 30X50 CORNER Brand-New 3BHK Duplex-Villa Gated Community @ Nanda Prakruthi E-katha Off Kanakapura Road Near`Nice`Road Rs.1.89cr Negotiable Call:9901011122 9845064043

REAL ESTATE BUYING

Agricultural Land

Hosur Road

AGRICULTURAL LAND Wanted 1-to-2Acres Anekal to Mayasandra Road (Athibele) Samandoor Road Clear Title. Contact 9845036826

Joint Development

South

JOINT DEVELOPMENT Invester Required with Shortime Good Returns, (Buy Back Secured) SouthBangalore, Multiple Location: 8892731813

Sites

Anjanapura

WANTED BDA SITES ANJANAPURA JP-NAGAR 8TH & 9TH PHASE ROYAL PARK BCC LAYOUT CONTACT: 9880776950

Banashankari

BDA SITES WANTED ARKAVATHY ANJANAPURA BANASHANKARI 6TH STAGE VISHVESHWARAIAH KEMPEGOWDA ANY BDA LAYOUT: 9845062822/ 8660751654

Kanakapura Road

"WANTED 30X40,30X50 BMRDA Approved Site Near Kaglipura, Harohalli, Jigini Surrounding Areas, Immediate Settlement. 9845178335"

Mysore

WANTED MUDA_SITES Vijayanagara Dattagalli Kuvempunagara Saraspathipuram Ramakrisnanagar Jayalakshmipuram Srirampura, Bhogadi_Satagalli Siddharthnagar Rajiv_Nagara. 9845608259.

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

RENTAL PROPERTIES

Accommodation Available

Commercial

AVAILABE FOR Rent 2000 sqft. 100 mtrs to K.R. Market Metro Station, opposite Vani Vilas Hospital suitable for Diagnostic Centre or surgicals. Contact: 9845310066.

PRIME COMMERCIAL 4,000 Sqft. CORNER PROPERTY AVAILABLE FOR RENT/LEASE @ RAJARAJESHWARI NAGAR JAYANNA CIRCLE. Contact: 8147618891.

Flats

"LUXURY 3BHK Fat for Rent/Lease with servant quarter Rent:_Rs.1`Lakh, Lease:_Rs.1`Crore. "Sri.Ganesh Estate"- 9845286505"

Industrial And Factory

FOR RENT 3000+4000 Sft (Combined7000) PEB Sheds in Whitefield near Prestige Shantinikatan. 9448385580

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

ವನಿತೆಯರ ಸಮ್ಮಿಲನ: ‘ಜುಂಬಾ’ ಡಾನ್ಸ್ ಸಂಭ್ರಮ

‘ಪ್ರಜಾವಾಣಿ’ ಹಾಗೂ ‘ಡೆಕ್ಕನ್ ಹೆರಾಲ್ಡ್’ ಹಮ್ಮಿಕೊಂಡಿದ್ದ ‘ಭೂಮಿಕಾ ಕ್ಲಬ್’ ವಿಶೇಷ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್ಲವನ್ನೂ ಮರೆತು ಚಲನಚಿತ್ರ ಗೀತೆಗಳಿಗೆ ‘ಜುಂಬಾ ಡಾನ್ಸ್’ ಮಾಡಿದ ವಿವಿಧ ವಯೋಮಾನದ ಮಹಿಳೆಯರು, ಇಂಪಾದ ಗೀತೆಗಳು ಮತ್ತು ಆರೋಗ್ಯ ಸಲಹೆಗಳಿಗೆ ಕಿವಿಯಾಗುವ ಜತೆಗೆ ಅಚ್ಚರಿ ಬಹುಮಾನಗಳನ್ನೂ ಗೆದ್ದು ಸಂಭ್ರಮಿಸಿದರು.

‘ಪ್ರಜಾವಾಣಿ’ ಹಾಗೂ ‘ಡೆಕ್ಕನ್ ಹೆರಾಲ್ಡ್’ ಮಹಿಳೆಯರಿಗಾಗಿ ಸ್ಥಾಪಿಸಿರುವ ‘ಭೂಮಿಕಾ ಕ್ಲಬ್’ ವೇದಿಕೆಯ 33ನೇ ಆವೃತ್ತಿಯ ವಿಶೇಷ ಕಾರ್ಯಕ್ರಮ ಇಂದಿರಾನಗರ ಕ್ಲಬ್‌ನಲ್ಲಿ ನಡೆಯಿತು. ಕ್ರಿಸ್‌ಮಸ್ ಪ್ರಯುಕ್ತ ‘ಫ್ರೀಡಂ ಹೆಲ್ತಿ ಕುಕ್ಕಿಂಗ್ ಆಯಿಲ್’ ಮತ್ತು ಮಣಿಪಾಲ್ ಆಸ್ಪತ್ರೆಯ ಸಹಯೋಗದಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಇಂಪಾದ ಚಿತ್ರಗೀತೆಗಳು, ಭರತನಾಟ್ಯ, ಪಾಶ್ಚಾತ್ಯ ನೃತ್ಯ, ಘಮಘಮಿಸುವ ಕೇಸರಿಬಾತ್, ಸ್ಟ್ಯಾಂಡ್ ಅಪ್ ಕಾಮಿಡಿ, ಆರೋಗ್ಯ ಕಾಳಜಿಯ ಮಾತುಗಳು ಸೇರಿ ಹಲವು ವಿಶೇಷತೆಯನ್ನು ಈ ಕಾರ್ಯಕ್ರಮ ಒಳಗೊಂಡಿತ್ತು. ನಿರೂಪಕ ಆರ್.ಜೆ. ಅಕ್ಷಯ್ ಅವರು ನಡೆಸಿಕೊಟ್ಟ ವಿವಿಧ ಚಟುವಟಿಕೆಗಳು ಮಹಿಳೆಯರ ಸಕ್ರಿಯ ಪಾಲ್ಗೊಳ್ಳುವಿಕೆಗೆ ಸಹಕಾರಿಯಾಯಿತು.

‘ಪ್ರಜಾವಾಣಿ’ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಅವರು ದಿಕ್ಸೂಚಿ ಭಾಷಣ ಮಾಡಿದರು. ಪದ್ಮಿನಿ ಪ್ರಿಯ ನೃತ್ಯ ಕಲಾ ಅಕಾಡೆಮಿಯ ವಿದ್ಯಾರ್ಥಿಗಳು ಉಷಾ ಬಸಪ್ಪ ಅವರ ಮಾರ್ಗದರ್ಶನದಲ್ಲಿ ಭರತನಾಟ್ಯ ಪ್ರದರ್ಶಿಸಿದರು.

ಚಂದನಾ ಲಕ್ಷ್ಮೀಕಾಂತ್ ಅವರು ‘ಜುಂಬಾ ಡಾನ್ಸ್’ ನಡೆಸಿಕೊಟ್ಟರು. ಅವರ ಜತೆಗೆ ನೆರೆದಿದ್ದ ಪ್ರೇಕ್ಷಕರು ವಿವಿಧ ಗೀತೆಗಳಿಗೆ ಉತ್ಸಾಹದಿಂದ ಹೆಜ್ಜೆ ಹಾಕಿದರು. ಪ್ರೇಕ್ಷಕರಲ್ಲಿ ಉತ್ತಮವಾಗಿ ನೃತ್ಯ ಮಾಡಿದವರನ್ನು ವೇದಿಕೆಗೆ ಆಹ್ವಾನಿಸಿ, ಅವರೊಂದಿಗೆ ‘ಬ್ಯಾಂಗಲ್ ಬಂಗಾರಿ...’ ಗೀತೆಗೆ ಚಂದನಾ ಹೆಜ್ಜೆ ಹಾಕಿದರು. ಆಯ್ದ ಪ್ರೇಕ್ಷಕರಲ್ಲಿ ಅತ್ಯುತ್ತಮ ವಾಗಿ ನೃತ್ಯ ಮಾಡಿದ ಇಬ್ಬರಿಗೆ ಬಹುಮಾನವನ್ನೂ ನೀಡಲಾಯಿತು.

ಅನಘಾ ಅವರು ವಿವಿಧ ಚಿತ್ರಗೀತೆಗಳನ್ನು ಹಾಡಿ ರಂಜಿಸಿದರು. ನೆರೆದಿದ್ದ ಮಹಿಳೆಯರು ಕೂಡ ಆಗಾಗ ಕೆಲ ಸಾಲುಗಳನ್ನು ಗುನುಗಿದರು. ವರ್ಷಿಣಿ ಅವರು ಸ್ಟ್ಯಾಂಡ್ ಅಪ್ ಕಾಮಿಡಿ ಮಾಡಿದರು. ಪ್ರೇಕ್ಷಕರನ್ನು ಸಕ್ರಿಯವಾಗಿ ತೊಡಗಿಸಿಕೊಂಡು ಹಾಸ್ಯದ ಕಚಗುಳಿ ನೀಡಿದರು. ಲಕ್ಕಿ ವಿಜೇತರಲ್ಲಿ ಸುಧಾ ಸಾಗರಿ ಅವರು ವಾಟರ್ ಪ್ಯೂರಿಫೈಯರ್ ತಮ್ಮದಾಗಿಸಿಕೊಂಡರೆ, ಗಾಯತ್ರಿ ಸಿ.ಎಸ್. ಅವರು ‘ಪ್ರಜಾವಾಣಿ ಸಿನಿ ಸಮ್ಮಾನ’ ಸಮಾರಂಭದ ಎರಡು ವಿವಿಐಪಿ ಪಾಸ್‌ಗಳನ್ನು ಪಡೆದುಕೊಂಡರು.

10 ಅದೃಷ್ಟ ಪ್ರೇಕ್ಷಕರಿಗೆ ಮಲ್ಟಿಪ್ಲೆಕ್ಸ್‌ನಲ್ಲಿ ಚಲನಚಿತ್ರ ವೀಕ್ಷಣೆಗೆ ತಲಾ ಎರಡು ಟಿಕೆಟ್‌ಗಳನ್ನು ವಿತರಿಸಲಾಯಿತು. ತುಳಸಿ ಶಿವಕುಮಾರ್, ಸುಮಿತ್ರಾ ಎಂ., ಚಂಪಕಾ, ಸ್ವಾತಿ ಎಂ.ವಿ., ಶರ್ಮಿಳಾ, ಪ್ರಿಯಾ, ವಿಜಯಶ್ರೀ, ವಿದ್ಯಾ, ಸರಸ್ವತಿ ಮತ್ತು ಚಂದ್ರಕಲಾ ಹೆಗಡೆ ಅವರು ಟಿಕೆಟ್‌ಗಳನ್ನು ಪಡೆದ ಅದೃಷ್ಟಶಾಲಿಗಳು.



ಚಂದನಾ ಲಕ್ಷ್ಮೀಕಾಂತ್ ಅವರು ‘ಜುಂಬಾ ಡಾನ್ಸ್’ ಮಾಡಿದರು





ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಮಹಿಳೆಯರು ಜುಂಬಾ ಡಾನ್ಸ್ ಮಾಡಿದರು (ಎಡಚಿತ್ರ). ಪದ್ಮಿನಿ ಪ್ರಿಯ ನೃತ್ಯ ಕಲಾ ಅಕಾಡೆಮಿಯ ವಿದ್ಯಾರ್ಥಿಗಳು ನೃತ್ಯ ಪ್ರದರ್ಶಿಸಿದರು —ಚಿತ್ರಗಳು: ಎಂ.ಎಸ್. ಮಂಜುನಾಥ್

ಅಡುಗೆ ತಯಾರಿ ಸ್ಪರ್ಧೆ

ಮಹಿಳೆಯರಿಗೆ ಅಡುಗೆ ತಯಾರಿ ಸ್ಪರ್ಧೆಯನ್ನೂ ಆಯೋಜಿಸಲಾಗಿತ್ತು. ಚೀಟಿ ಎತ್ತುವ ಮೂಲಕ ಪ್ರೇಕ್ಷಕರಲ್ಲಿ ಇಬ್ಬರನ್ನು ಆಯ್ಕೆ ಮಾಡಲಾಯಿತು. ಈ ಸ್ಪರ್ಧೆಗೆ ಆಯ್ಕೆಯಾಗಿದ್ದ ಅನುಪಮಾ ಮತ್ತು ರೂಪಾ ಬಲ್ಲಾಳ್ ಅವರು ಲಭ್ಯ ಸಾಮಗ್ರಿಗಳಲ್ಲಿ ಕೇಸರಿ ಬಾತ್ ಮಾಡಿದರು. ಇಬ್ಬರಿಗೂ ತಲಾ 15 ನಿಮಿಷಗಳನ್ನು ನೀಡಲಾಗಿತ್ತು.

ಚೀಟಿ ಎತ್ತುವ ಮೂಲಕ, ನೆರೆದಿದ್ದ ಪ್ರೇಕ್ಷಕರಲ್ಲಿ ಮೂವರನ್ನು ನಿರ್ಣಾಯಕರನ್ನಾಗಿ ಆಯ್ಕೆ ಮಾಡಲಾಗಿತ್ತು. ಈ ಸ್ಪರ್ಧೆಯಲ್ಲಿ ರೂಪಾ ಅವರು ವಿಜೇತರಾಗಿ, ಬಹುಮಾನ ಪಡೆದರು. ಇಬ್ಬರೂ ಸ್ಪರ್ಧಿಗಳು ತಾವು ತಯಾರಿಸಿದ ಕೇಸರಿ ಬಾತ್‌ನ ರುಚಿ ಆಸ್ವಾದಿಸಲು ಪ್ರೇಕ್ಷಕರಿಗೂ ನೀಡಿದರು.



ಅಡುಗೆ ಮಾಡುತ್ತಿರುವ ರೂಪಾ ಬಲ್ಲಾಳ್ ಮತ್ತು ಅನುಪಮಾ ಜತೆಗೆ ಆರ್‌.ಜೆ.ಅಕ್ಷಯ್ ಸಮಾಲೋಚನೆ ನಡೆಸಿದರು

ಸ್ತನ ಕ್ಯಾನ್ಸರ್ ಬಗ್ಗೆ ಅರಿವು



ಡಾ. ಪೂನಂ ಪಾಟೀಲ್

ಮಣಿಪಾಲ್ ಆಸ್ಪತ್ರೆಯ ವೈದ್ಯಕೀಯ ತಜ್ಞರಾದ ಡಾ. ಪೂನಂ ಪಾಟೀಲ್ ಅವರು ಸ್ತನ ಕ್ಯಾನ್ಸರ್ ಬಗ್ಗೆ ಮಾಹಿತಿ ನೀಡಿದರು.

‘ಸ್ತನ ಕ್ಯಾನ್ಸರ್ ಭಾರತೀಯ ಮಹಿಳೆಯರಲ್ಲಿ ಸಾಮಾನ್ಯವಾಗಿದೆ. ಸ್ತನ ಕ್ಯಾನ್ಸರ್ ತಡೆಗೆ ತಪಾಸಣೆಯೇ ಪರಿಹಾರವಾಗಿದ್ದು, ಆರಂಭಿಕ ಹಂತದಲ್ಲಿಯೇ ರೋಗ ಪತ್ತೆ ಮಾಡಿದಲ್ಲಿ ಚಿಕಿತ್ಸೆ ಸುಲಭ ಸಾಧ್ಯವಾಗಲಿದೆ. ಸ್ತನ ಕ್ಯಾನ್ಸರ್ ಎಲ್ಲ ವಯೋಮಾನದ ಮಹಿಳೆಯರಲ್ಲಿಯೂ ಕಾಣಿಸಿಕೊಳ್ಳುತ್ತಿದೆ. ಆದ್ದರಿಂದ ಪ್ರತಿ ತಿಂಗಳು ಸ್ವಯಂ ತಪಾಸಣೆ ಮಾಡಿಸಿಕೊಳ್ಳಬೇಕು. ಕ್ಯಾನ್ಸರ್ ಶಂಕೆ ಇದ್ದಲ್ಲಿ ವೈದ್ಯರನ್ನು ಸಂಪರ್ಕಿಸಬೇಕು. ವರ್ಷಕ್ಕೆ ಒಮ್ಮೆ ‘ಮ್ಯಾಮೋಗ್ರಾಮ್’ ಪರೀಕ್ಷೆಗೆ ಒಳಪಡಬೇಕು. ಆರೋಗ್ಯಕರ ಜೀವನಶೈಲಿ ಅಳವಡಿಕೆಯಿಂದ ಕ್ಯಾನ್ಸರ್ ತಡೆ ಸಾಧ್ಯ. ಪ್ರತಿನಿತ್ಯ ಕನಿಷ್ಠ 30 ನಿಮಿಷಗಳಾದರೂ ವ್ಯಾಯಾಮ ಮಾಡಬೇಕು’ ಎಂದು ಹೇಳಿದರು.



‘ಗುಬ್ಬಿ ವೀರಣ್ಣ ಹೆಸರಿನಲ್ಲಿ ಎಲ್ಲೂ ಕೆಲಸ ಕೇಳಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತಾತ ಗುಬ್ಬಿ ವೀರಣ್ಣ ಹೆಸರಿನಲ್ಲಿ ಎಲ್ಲೂ ಕೆಲಸ ಕೇಳಿಕೊಂಡು ಹೋಗಲಿಲ್ಲ, ಯಾವುದೇ ಕೆಲಸ ಮಾಡಿಲ್ಲ. ನಾನೇನಾದರೂ ತಪ್ಪು ಹೆಜ್ಜೆ ಇಟ್ಟರೆ ಅವರಿಗೆ ಕೆಟ್ಟ ಹೆಸರು ಬರುವುದು ಇಷ್ಟವಿರಲಿಲ್ಲ’ ಎಂದು ರಂಗಕರ್ಮಿ ಬಿ.ಜಯಶ್ರೀ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಶನಿವಾರ ಆಯೋಜಿಸಿದ್ದ ಮನೆಯಂಗಳದಲ್ಲಿ ಮಾತುಕತೆ ಕಾರ್ಯಕ್ರಮದ ತಿಂಗಳ ಅತಿಥಿಯಾಗಿದ್ದ ಅವರು, ‘ರಾಜ್ಯಸಭೆಗೆ ನಾಮನಿರ್ದೇಶನ ಮಾಡುವಾಗಲೂ ಗುಬ್ಬಿ ವೀರಣ್ಣ ಅವರ ಹೆಸರನ್ನು ಬಳಸಿಲ್ಲ’ ಎಂದರು.

‘ರಂಗಭೂಮಿ ಎಂಬುದೇ ಕಣ್ಣಾಮುಚ್ಚೆ ಕಾಡೇಗೂಡೇ ಇದ್ದಂತೆ. ಹರಿಯುವ ನೀರು ಇದ್ದಂತೆ. ಆದರೆ, ಬಣ್ಣ, ಆಕಾರ ಇಲ್ಲ. ರಂಗದ ಮೇಲೆ ಬಣ್ಣ ಹಾಕಿದಾಗಲೇ ಕಾಣುವುದು. ಕಲಾವಿದರೆಲ್ಲರೂ ಕಣ್ಣಾಮುಚ್ಚೆ ಕಾಡೇಗೂಡೇ ಆಡುತ್ತಿದ್ದೆವು. ಇದೇ ನೆನಪಿನಲ್ಲಿ ಆತ್ಮಕತೆಗೆ ‘ಕಣ್ಣಾಮುಚ್ಚೆ ಕಾಡೇಗೂಡೇ’ ಹೆಸರಿಟ್ಟಿದ್ದೇನೆ’ ಎಂದು ತಿಳಿಸಿದರು.

‘ಇಷ್ಟವಾದ ಪಾತ್ರ ಹಾಗೂ ಹಾಡು ಯಾವುದು’ ಎಂಬ ಪ್ರೇಕ್ಷಕರ ಪ್ರಶ್ನೆಗೆ ಉತ್ತರಿಸಿದ ಅವರು, ‘ಈ ರೀತಿ ಕೇಳಿದರೆ ಏನು ಹೇಳುವುದು? ದೇಹದಲ್ಲಿ ಯಾವ ಅಂಗ ಇಷ್ಟವಾಯಿತು ಎಂದು ಕೇಳಿದಂತೆ. ಎಲ್ಲ ಪಾತ್ರ, ಹಾಡು ಮುಖ್ಯ. ಎಲ್ಲದ್ದಕ್ಕೂ ಅದರದೇ ವ್ಯಕ್ತಿತ್ವ ಮತ್ತು ಬಣ್ಣ ಇರುತ್ತದೆ’ ಎಂದು ಸ್ಪಷ್ಟಪಡಿಸಿದರು.

‘ರಾಷ್ಟ್ರೀಯ ರಂಗ ಶಾಲೆ ಸಾಗರವಿದ್ದಂತೆ. ಹಿಂದಿ, ಇಂಗ್ಲಿಷ್ ಬಿಟ್ಟರೆ ಬೇರೆ ಭಾಷೆ ಮಾತನಾಡುತ್ತಿರಲಿಲ್ಲ. ಒಂದೂವರೆ ತಿಂಗಳು ಮೂಕಾಭಿನಯದಲ್ಲೇ ಕಾಲ ಕಳೆಯಬೇಕಾಯಿತು. ನಂತರ ಹಿಂದಿ ಮಾತನಾಡುವುದು ಕಲಿತೆ. ಜ್ಯೋತಿ ದೇಶಪಾಂಡೆ, ಓಂ ಪುರಿ, ನಾಸಿರುದ್ದೀನ್ ಶಾ, ಛಾಯಾ ಆನಂದ್ ಸಹಪಾಠಿಗಳಾಗಿದ್ದರು. ದಕ್ಷಿಣ ಭಾರತದವರು ಎಂಬ ಕಾರಣಕ್ಕೆ ನನಗೆ ಮತ್ತು ಜ್ಯೋತಿಗೆ ನಾಟಕದಲ್ಲಿ ಪಾತ್ರವೇ ಕೊಡುತ್ತಿರಲಿಲ್ಲ. ಆದರೂ ಛಲ ಬಿಡದೇ, ಭಾಷೆ ಕಲಿತು, ನಾಟಕದಲ್ಲಿ ಅಭಿನಯಿಸಿ, ನಿರ್ದೇಶಕರಾಗಿದ್ದ ಇಬ್ರಾಹಿಂ ಅಲ್ಕಾಜಿ ಅವರಿಂದ ಪ್ರಶಂಸೆ ಪಡೆದಿದ್ದೆವು’ ಎಂದು ನೆನಪಿಸಿಕೊಂಡರು.

‘ಯುವಜನರಿಗೆ ಬುದ್ಧಿಹೇಳುವ ಶಕ್ತಿ ನಮ್ಮಲ್ಲಿಲ್ಲ. ಅವರು ಮೊಬೈಲ್‌ನಲ್ಲಿ ಮುಳುಗಿ ಸಂಬಂಧವನ್ನು ಕಳೆದುಕೊಂಡಿದ್ದಾರೆ. ನಾಟಕ ಕಲೆ ಸಮಾಜದಲ್ಲಿ ಬದುಕುವ ದಾರಿ ತೋರಿಸುತ್ತದೆ. ಅದೊಂದೆ ಜೀವಂತ ಕಲೆ. ಬೇರೆ ಮಾಧ್ಯಮದಲ್ಲಿ ಜೀವಂತ ಕಲೆ ಇಲ್ಲ. ರಂಗಭೂಮಿ ಮೇಲೆ ತಂತ್ರಜ್ಞಾನ ತಂದು, ಸೃಜನಶೀಲತೆ ಹಾಳು ಮಾಡಬಾರದು’ ಎಂದರು.

‘ಸಿನಿಮಾ ಗೀತೆ ಹಾಡುವುದಿಲ್ಲ ಎಂದು ಹೇಳಿಲ್ಲ. ಆದರೆ, ರಂಗ ಗೀತೆ ಹಾಡುವ ಜಾಗದಲ್ಲಿ ಸಿನಿಮಾ ಗೀತೆ ಹಾಡಲು ಕೇಳಿದರೆ ಹೇಗೆ? ಸಿನಿಮಾ ವಾದ್ಯಗಳೇ ಬೇರೆ. ಇದು ಸಿನಿಮಾ ವೇದಿಕೆ ಅಲ್ಲ ಎಂದು ಪ್ರೇಕ್ಷಕರಿಗೆ ಹಲವು ಬಾರಿ ಸ್ಪಷ್ಟಪಡಿಸಿದ್ದೇನೆ. ಜೀವನದಲ್ಲಿ ಸಾಧಿಸುವುದು ಇನ್ನೂ ಇದೆ. ತಪ್ಪು ಮಾಡಿದ್ರೆ ಹೊಟ್ಟೆಗೆ ಹಾಕಿಕೊಂಡು, ಬೆನ್ನುತಟ್ಟಿ ಪ್ರೋತ್ಸಾಹಿಸಿ’ ಎಂದು ಹಾಡು ಹೇಳುವಂತೆ ಒತ್ತಾಯಿಸಿದ ಪ್ರೇಕ್ಷಕರಿಗೆ ಉತ್ತರಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಕೆ.ಎಂ. ಗಾಯಿತ್ರಿ, ಜಂಟಿ ನಿರ್ದೇಶಕರಾದ ಬನಶಂಕರಿ, ಬಲವಂತ ರಾವ್ ಪಾಟೀಲ್ ಉಪಸ್ಥಿತರಿದ್ದರು.



‘ಮನೆಯಂಗಳದಲ್ಲಿ ಮಾತುಕತೆ’ಯಲ್ಲಿ ಬಿ.ಜಯಶ್ರೀ ಅವರನ್ನು ಕೆ.ಎಂ. ಗಾಯಿತ್ರಿ ಗೌರವಿಸಿದರು — ಪ್ರಜಾವಾಣಿ ಚಿತ್ರ

‘ಸಮಾನವಾಗಿ ಅನುದಾನ ಹಂಚಿರುವೆ’

‘ನಾನು ಒಬ್ಬ ಕಲಾವಿದೆ. ರಾಜಕಾರಣಿ ಅಲ್ಲ. ಎಲ್ಲ ಪಕ್ಷಕ್ಕೂ ಸೇರಿದವಳು. ರಾಜ್ಯಸಭೆ ಸದಸ್ಯೆಯಾಗಿದ್ದಾಗ ಅನುದಾನವನ್ನು ಸಮಾನವಾಗಿ ಹಂಚಿದ್ದೇನೆ. ಶಾಲೆ, ಆಸ್ಪತ್ರೆ ಮತ್ತು ಹೆಣ್ಣುಮಕ್ಕಳಿಗೆ ಹೆಚ್ಚು ಅನುದಾನ ನೀಡಿದೆ. ದೇವಸ್ಥಾನ, ಸಮುದಾಯ ಭವನ, ರಸ್ತೆ, ಚರಂಡಿ ಕಾಮಗಾರಿಗೆ ನೀಡಲಿಲ್ಲ’ ಎಂದು ಬಿ.ಜಯಶ್ರೀ ಹೇಳಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PERSONAL

Change of Name

I, VENKATA LAKSHMI PRIYA CHITTIBOINA D/o Venkatarathnam Chittiboina R/at No.25, 6th Cross, Vinayaka Layout, Kodipalya Kengeri Bengaluru- 560060 have changed my name to LAKSHMI PRIYA CHITTIBOINA HARISH vide affidavit dated: 18/12/2025 Before Notary Onkarappa N.R Bangalore.

I, NAGACHAITANYA CHEVULA D/o Ramanaiah Christaiah R/at No.25, 6th Cross, Vinayaka Layout, Kodipalya Kengeri Bengaluru- 560060 have changed my name to NAGACHAITANYA RAMANAIAH CHEVULA HARISH vide affidavit dated: 18/12/2025 Before Notary Onkarappa N.R Bangalore.

CHANGE OF NAME
I, **Prasath R,** residing at # 3466/26, 3rd Cross Road, 2nd Stage, ‘C’ Block, Gayathrinagar, Bengaluru - 560021, have changed our minor daughter's name from **RISHA. P** to **R. P. TARISHA**, vide affidavit dated: 19.12.2025 before notary Onkarappa N R, Bengaluru. Henceforth, she shall be called as **R. P. TARISHA** only.

I, RAJANNA GARI ARCHANA residing at Balenahalli Village, Dasarahalli Post, Koratagere Taluk, Tumkur District-572129 have changed my name to R ARCHANA vide affidavit dated 19/12/2025 sworn before notary K.M.Gopal, Bangalore

CHANGE OF NAME
I, **VINAYAK HAMPANNAVAR** residing at # 06, Sy. No. 18, Kalki Nilaya, Prakruthi Urban Ville layout, Panathur, Bengaluru-560087 have changed my name to **VINAYAK YALLAPPA HAMPANNAVAR** vide affidavit dated 20/12/2025, before notary S.I.Balaguru, Bengaluru.

I, KUMARI CHITTIBOINA W/o Venkataratnam Chittiboina R/at No.25, 6th Cross, Vinayaka Layout, Kodipalya Kengeri Bengaluru- 560060 have changed my name to KUMARI CHITIBOINA HARISH vide affidavit dated: 18/12/2025 Before Notary Onkarappa N.R Bangalore.

I, VENKATA HEMANTH CHITTIBOINA S/o Venkataratnam Chittiboina R/at No.25, 6th Cross, Vinayaka Layout, Kodipalya Kengeri Bengaluru- 560060 have changed my name to HEMANTH CHITTIBOINA HARISH vide affidavit dated: 18/12/2025 Before Notary Onkarappa N.R Bangalore

JOB OPPORTUNITIES

Teachers/ Professors

TEACHER REQUIRED for High School for Hindi and Science Contact The kenmore School Basavanagudi Ph 9901501185

THE MYSORE EDUCATION SOCIETY
“Brahmi”, KISHORA KENDRA, 10th MAIN, 15th CROSS, MALLESWARAM, BANGALORE – 560 003

Applications are invited for the post of teaching faculty for the following departments in MES College of Arts, Commerce & Science, 15th Cross, Malleswaram, Bengaluru- 560 003

Administrator for Mysore Education Society:
Essential Qualification: (i) Post-graduate in relevant discipline from a recognized university with a minimum of 55% marks or equivalent grade. (Preferably MBA)
Experience: Experience of minimum 10 years.
Desirable: Experience in handling IT, HR, Finance, Admissions, Estate & Maintenance

I MES College of Arts, Commerce & Science
A. Professor (Full Time):
Subject: **Computer Applications/Commerce**
Essential Qualification: (i) Post-graduate in relevant discipline from a recognized university with a minimum of 55% marks or equivalent grade (ii) Should have Ph.D. degree from a recognized university by UGC in the relevant subject (with course work included as part of doctoral program).
Experience: Teaching experience of minimum 12 years.
Desirable: NET/SLET qualification, Research Publications, Funded Projects, Post-doctoral experience, knowledge of computer applications, usage of ICT in teaching

B. Associate Professor (Full Time):
Subject: **Computer Applications/Commerce**
Essential Qualification: (i) Post-graduate in relevant discipline from a recognized university with a minimum of 55% marks or equivalent grade (ii) Should have Ph.D. degree from a recognized university by UGC in the relevant subject (with course work included as part of doctoral program).
Experience: Teaching experience of minimum 8 years.
Desirable: NET/SLET qualification, Research Publications, Funded Projects, Post-doctoral experience, knowledge of computer applications, usage of ICT in teaching.

II MES College of ACS and MES Institute of Management
C. Assistant Professor (Full Time):
Subject:English/Journalism/Psychology/Mathematics/Chemistry/ ComputerApplications/ Commerce/ Management
Essential Qualification: (i) Post-graduate in relevant discipline from a recognized university with a minimum of 55% marks or equivalent grade (ii) with NET/SLET examination or Ph.D. degree from a recognized university by UGC in the relevant subject. (with course work included as part of doctoral program).
Desirable: (i) 3 years of teaching experience (ii) Knowledge of Computers. Usage of ICT in teaching.

D. Assistant Professor (Part Time):
Subjects: History/Hindi/English/Sanskrit/Kannada
Essential Qualification: (i) Post-graduate in relevant discipline from a recognized university with a minimum of 55% marks or equivalent grade (ii) with NET/SLET examination or Ph.D. degree from a recognized university by UGC in the relevant subject. (with course work included as part of doctoral program).
Desirable: (i) 3 years of teaching experience (ii) Knowledge of Computers. Usage of ICT in teaching.

1. Attractive salary commensurates with qualification & experience.
2. Applications with BIO-DATA and copies of certificates of qualifications and experience etc., should reach the Chief Executive Officer, MES at the above address on or before 31/12/2025 duly superscribing the envelope with “Application for the post of ____________”.
3. Decision of the selection committee is final.
4. Resorting to any sort of influence will be deemed as a disqualification of the candidature.
5. Download the application form from the MES website: https://mesinstitutions.in

Advt. No. MES/19-3/ADM-1/2025 Dated 21.12.2025 CHIEF EXECUTIVE OFFICER

Dr. Sri. Sri. Sri. Shivakumara Mahaswamy College of Engineering & Polytechnic
(Affiliated to VTU, Belgaum & Approved by AICTE, New Delhi)
Byranayakanahalli, Nelamangala Taluk, Bangalore Rural District - 562 132
Email: recruitdrsmce2211@gmail.com Website: www.drsmce.org

FACULTY POSITIONS REQUIRED

Applications are invited for the post of Professors, Associate Professors and Asst. Professors in the following Disciplines...

- Computer Science & Engineering
- Information Science & Engineering
- Electronics & Communication Engineering
- Electrical & Electronics Engineering
- Physical Education Director

Non Teaching Posts
- Warden for Boys Hostel & Girls' Hostel
- Accountant

Qualification and Pay Scale: As per AICTE norms

Note: For the post of Professor & Associate Professor, Candidates having Ph.D is mandatory. Apply Via email and send hard copy of your detailed CV & Supporting documents to the college address, so as to reach before 7days from the date of advertisement.

Dr. K.S. Jagadeesh Gowda, Principal, 98455 83294
Sri D.C. Venugopal, Chairman

Accounts & Finance

SENIOR ACCOUNTANT or Senior - Advisory Services vacancy in Papua New Guinea An exciting opportunity exists for an English speaking, hardworking professional with a Bachelor's or Master's Commerce degree, with 3 - 5 years' experience in an Accounting/Auditing Practice, managing the work of 4 - 5 junior Accountants and Admin. staff, with organised, methodical and good work habits. Preference will be given to single status male applicants. Car driving ability essential. Remuneration will consist of a salary commensurate with your qualifications, experience and skills. Furnished housing, a motor vehicle and medical and repatriation insurance are provided plus one return airfare to Bangalore after twelve (12) months of service. Email your bio data with your photograph and 3 latest pay slips to pvnnpng@gmail.com by 26 December 2025. Interviews to be conducted in Bangalore on 29 and 30 December 2025.

WANTED-TALLY PROFESSIONAL In Accounts Department, Location, Siddaiah Road Near Shanti Nagar Bus Stand Ct: 9535218502 9845351200.

ACCOUNTANT WITH 5yrs Exp. Knowledge of Tally, Excel & M.S Office Must. Salary 25k To 30k Jakkur 8123243297 info@behlconstruction.com

Engg/ Production Technical

AEROSPACE COMPONENTS Mfg Company requires VMC_PROGRAMMER (Programing Software: Autodesk Powermill and Solidcam) Qualification: ITI/ Diploma/ BE. Good Salary. 'MAP SYSTEM (I) PVT LTD' Peenya Industrial Area. Contact: 8310411192

General

FACTORY AT Bommasandra needs personal assistants, computer operators.Free food and accommodation.kandoi@indiagranite.com

Hospital & Medical Jobs

WANTED NURSE, LAB TECHNICIAN (DMLT), MARKETING EXECUTIVE. KRISHNA LABS, BSK 3rd stage, Bangalore. Phone: 9980179502/ 9740272756 krishnalabs2025@gmail.com

Marketing & Sales

WANTED SALES Managers (Male & Female), Sales Executives, Deliver Boys and Telecallers. Contact 8867627879

PRESTIGE GROUP OF INSTITUTIONS
ARKAWATHI LAYOUT | RAMPURA | GEDDALAHALLI
AFFILIATED TO CISCE
KINDERGARTEN | MONTESSORI | PRIMARY SECONDARY EDUCATION
Invite Applications For 2026- 27
- **Principal,** with ICSE school experience; Postgraduate with B.Ed and Min. 5 years of administrative experience
- **Teaching Faculty,** Qualified & Experienced

Interested Candidate apply
CALL : 9611745454 | 7899295545
prestigeschoolblr@gmail.com | info@pisrampura.edu.in

OUR BRANCHES
PRESTIGE SCHOOL Hennur-Baglur Main Road, Geddalahalli, Bengaluru-77
PRESTIGE INTERNATIONAL SCHOOL Avalahalli-Byrathi Main Road, Rampura, Bengaluru-49
PRESTIGE PU COLLEGE Hennur-Baglur Main Road, Geddalahalli, Bengaluru-77

Security & Detectives

WANTED SECURITY FIELD OFFICER SUPERVISOR, GUARDS, LADY GUARDS FOR YELAHANKA, RAJANUKUNTE 9972214845 / 8105606860

BUSINESS

Business Offers

General

BUSINESS PROPOSAL–DIGI Monte Pvt Ltd invites investors and partners for a scalable, future-ready, high-profit business model. Call 7207915007

PUBLIC NOTICE

IN THE COURT OF THE HON'BLE FAMILY COURT, TRICHY
H.M.O.P.No:104/2024

Mahendran, S/o Dhevaraj, No-407, Pandiyan Street, Kamarajar Nagar, Airport, Trichy. ...Petitioner

VS

Mehana, D/o Renu Kavundar, No-E-355, Aasraiyar Barange, Pommankatte, Shimoha, Vinoba Nagar, Karnataka. ...Respondent

PUBLIC NOTICE

Please take notice that my clients Mahendran Son of Dhevaraj have filed a Divorce Petition against you. On the file of Hon'ble Family Court, Thiruchirappalli in H.M.O.P.No. 104/2024 and the same is posted to for your appearance. As per the order of the Hon'ble court this notice is issued and you are hereby called upon to appear before the Hon'ble Family Court, Thiruchirappalli on 12.01.2026 either in person or through a counsel, failing which the matter will be decided exparte in your absence.

T.A. OMPRAKASH & P.SHEELA
Advocates
Thiruchirapalli

ಸಂಕ್ಷಿಪ್ತ ಸುದ್ದಿ

‘ಕಾಂಗ್ರೆಸ್ಸಿಗರು ಗಾಂಧಿ ಹೆಸರಿನ ಫಲಾನುಭವಿಗಳು’

ಬೆಂಗಳೂರು: ‘ಜಿ ರಾಮ್ ಜಿ’ ಮಸೂದೆಯಲ್ಲಿ ರಾಮನನ್ನು ಮಹಾತ್ಮ ಗಾಂಧಿಯಿಂದ ಬೇರೆ ಮಾಡಲು ಕಾಂಗ್ರೆಸ್ ಬಯಸುತ್ತಿದೆ. ಕಾಂಗ್ರೆಸ್ಸಿಗರು ಗಾಂಧಿ ಹೆಸರಿನ ರಾಜಕೀಯ ಫಲಾನುಭವಿಗಳು’ ಎಂದು ಬಿಜೆಪಿ ಸಂಸದ ಬಸವರಾಜ ಬೊಮ್ಮಾಯಿ ಟೀಕಿಸಿದ್ದಾರೆ.

ಸುದ್ದಿ ಮಾಧ್ಯಮವೊಂದರ ಪಾಡ್ ಕಾಸ್ಟ್‌ನಲ್ಲಿ ಮಾತನಾಡಿರುವ ಅವರು, ‘ನರೇಗಾ ಯೋಜನೆಯಲ್ಲಿನ ಲೋಪಗಳನ್ನು ಸರಿಪಡಿಸುವ ದಿಟ್ಟ ನಿರ್ಧಾರವನ್ನು ಪ್ರಧಾನಿ ತೆಗೆದು ಕೊಂಡಿದ್ದಾರೆ’ ಎಂದಿದ್ದಾರೆ.

‘ಸದನದಲ್ಲಿ ವಿರೋಧ ಪಕ್ಷವಾಗಿ ಚರ್ಚೆಯಲ್ಲಿ ಭಾಗವಹಿಸಿ ಸರ್ಕಾರದ ಉತ್ತರ ಕೇಳದೆ ಗದ್ದಲ ಮಾಡುವ ಮೂಲಕ ಕಾಂಗ್ರೆಸ್ ಕ್ಷಮಿಸಲಾರದ ತಪ್ಪು ಮಾಡಿದೆ. ಕಾಂಗ್ರೆಸ್‌ನವರು ಸಂಬಂಧವೇ ಇಲ್ಲದ ಎಸ್‌ಐಆರ್ ಬಗ್ಗೆ ಗೊಂದಲ ಸೃಷ್ಟಿಸಿ ಕಲಾಪ ಹಾಳು ಮಾಡಿದರು’ ಎಂದೂ ಹೇಳಿದ್ದಾರೆ.

‘ಗಾಂಧೀಜಿಯ ಆತ್ಮ ಮತ್ತು ಹೃದಯ ಎರಡೂ ರಾಮ ಆಗಿದ್ದ. ಅದು ಈಗ ಸಾಕಾರಗೊಂಡಿದೆ. ನರೇಗಾ ಯೋಜನೆ ಅನುಷ್ಠಾನದಲ್ಲಿ ಸಾಕಷ್ಟು ಲೋಪಗಳು ಕಂಡುಬಂದಿದ್ದವು. ಹೊಸ ಮಸೂದೆಯಲ್ಲಿ ಸಾಕಷ್ಟು ಪ್ರಗತಿಪರ ಚಿಂತನೆಗಳನ್ನು ಅಳವಡಿಸಲಾಗಿದೆ. ಪ್ರತಿ ವರ್ಷ ₹ 1 ಲಕ್ಷ ಕೋಟಿಯನ್ನು ಈ ಯೋಜನೆಗೆ ನೀಡಲಾಗುತ್ತಿದೆ’ ಎಂದಿದ್ದಾರೆ.

‘ಡಿಫಾಲ್ಟ್ ಗುತ್ತಿಗೆದಾರರ’ ಮೇಲೆ ಕ್ರಮ

6 ಸಾವಿರ ಪೌರ ಕಾರ್ಮಿಕರಿಗೆ ಭವಿಷ್ಯ ನಿಧಿ ಪಾವತಿಸದ ತ್ಯಾಜ್ಯ ಗುತ್ತಿಗೆದಾರರ ಪ್ರಕರಣ

• ಆರ್. ಮಂಜುನಾಥ್

ಬೆಂಗಳೂರು: ಆರು ಸಾವಿರ ಪೌರ ಕಾರ್ಮಿಕರ ಭವಿಷ್ಯ ನಿಧಿ (ಪಿಎಫ್) ಕಂತುಗಳನ್ನು ಪಾವತಿಸದ ‘ಡಿಫಾಲ್ಟ್ ಗುತ್ತಿಗೆದಾರರ’ ಮೇಲೆ ಕ್ರಮ ಕೈಗೊಳ್ಳಲು ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ನಿರ್ಧರಿಸಿದೆ.

ಬಿಬಿಎಂಪಿ ಪಾವತಿ ಮಾಡಿದ್ದರೂ ತ್ಯಾಜ್ಯ ನಿರ್ವಹಣೆ ಗುತ್ತಿಗೆದಾರರು ಆರು ಸಾವಿರ ಪೌರಕಾರ್ಮಿಕರಿಗೆ 2011ರಿಂದ 2017ರ ಅವಧಿಯಲ್ಲಿ ಪಿಎಫ್ ಪಾವತಿಸಿರಲಿಲ್ಲ. ಬಿಬಿಎಂಪಿ ಖಾತೆಯನ್ನು ಮುಟ್ಟುಗೋಲು ಹಾಕಿಕೊಂಡು, ₹90 ಕೋಟಿಯನ್ನು ‘ಕಾರ್ಮಿಕರ ಭವಿಷ್ಯನಿಧಿ ಸಂಘಟನೆ’ (ಇಪಿಎಫ್‌ಒ) ತನ್ನ ಅಧೀನದಲ್ಲಿರಿಸಿಕೊಂಡಿದೆ.


ಇಪಿಎಫ್ ಕಾಯ್ದೆ ಸೆಕ್ಷನ್ 14 ‘ಬಿ’ ಮತ್ತು 7 ‘ಕ್ಯೂ’ ನಂತೆ ದಂಡ ವಿಧಿಸುವ ನಿರ್ಧಾರ ಕೈಗೊಂಡು, ವಿಳಂಬಕ್ಕಾದ ಬಡ್ಡಿಯನ್ನೂ ಡಿಫಾಲ್ಟ್ ಗುತ್ತಿಗೆದಾರರಿಂದ ವಸೂಲಿ ಮಾಡುವಂತೆ ಬೆಂಗಳೂರು ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತರು 2025ರ ಸೆಪ್ಟೆಂಬರ್ 15ರಂದು ಆದೇಶ ಹೊರಡಿಸಿದ್ದರು. ಅವರಿಗೆ ಯಾವುದೇ ರೀತಿಯ ಗುತ್ತಿಗೆಯನ್ನು ನೀಡಬಾರದು ಎಂದು ಆ ಆದೇಶದಲ್ಲಿ ತಿಳಿಸಿದ್ದರು.

‘ಈ ಬಗ್ಗೆ ಇಪಿಎಫ್‌ಒಗೆ ಬಿಬಿಎಂಪಿ ಮೇಲ್ಮನವಿ ಸಲ್ಲಿಸಿದರೂ ₹ 90.18 ಕೋಟಿಗಳ ಮೌಲ್ಯಮಾಪನವನ್ನು ಬದಲಿಸದೆ, ಅಂತಿಮ ಆದೇಶ ಹೊರಡಿಸಲಾಗಿದೆ. ಐದೂ ನಗರ ಪಾಲಿಕೆಗಳಿಂದ, ಕೇಂದ್ರ ಸರ್ಕಾರದ ಕೈಗಾರಿಕಾ ನ್ಯಾಯ ಮಂಡಳಿ/ ಕಾರ್ಮಿಕ ನ್ಯಾಯಾಲಯಕ್ಕೆ (ಸಿಜಿಐಟಿ) ಅಪೀಲು ಸಲ್ಲಿಸಲಾಗಿದೆ. ಈ ಪ್ರಕರಣದಲ್ಲಿ ನ್ಯಾಯ ಮಂಡಳಿಯ ಮೌಖಿಕ ಸೂಚನೆಯಂತ ಡಿಫಾಲ್ಟ್ ಗುತ್ತಿಗೆದಾರರನ್ನೂ ಸಹ ಪಾರ್ಟಿಯನ್ನಾಗಿ ಮಾಡಲು ಕ್ರಮ ಕೈಗೊಳ್ಳಲಾಗಿದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ವಿಧಾನಸಭೆಯಲ್ಲಿ ಬಿಜೆಪಿ ಶಾಸಕ ಸಿ.ಎನ್. ಅಶ್ವತ್ಥನಾರಾಯಣ ಅವರ ಪ್ರಶ್ನೆಗೆ ಸ್ಪಷವಾಗಿ ಉತ್ತರಿಸಿದ್ದಾರೆ.

‘ಇಪಿಎಫ್‌ಒ ಆದೇಶದಂತೆ ಡಿಫಾಲ್ಟ್ ಆಗಿರುವ ಗುತ್ತಿಗೆದಾರರನ್ನು ಪಟ್ಟಿ ಮಾಡಿರುವ ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ (ಬಿಎಸ್‌ಡಬ್ಲ್ಯುಎಂಎಲ್), ಅವರನ್ನು ಪಾರ್ಟಿ ಮಾಡುವ ಪ್ರಕ್ರಿಯೆ ಆರಂಭಿಸಿದೆ. ಹೀಗಾಗಿ, ತ್ಯಾಜ್ಯ ನಿರ್ವಹಣೆಯ 33 ಹೊಸ ಪ್ಯಾಕೇಜ್‌ನಲ್ಲಿ ಈ ಡಿಫಾಲ್ಟ್ ಗುತ್ತಿಗೆದಾರರು ಇರುವ ಬಗ್ಗೆಯೂ ಪರಿಶೀಲನೆ ನಡೆಸಲಾಗುತ್ತಿದೆ. ಒಂದು ವೇಳೆ ಡಿಫಾಲ್ಟ್ ಗುತ್ತಿಗೆದಾರರಿಗೆ ಮತ್ತೆ ಹೊಸ ಗುತ್ತಿಗೆಯನ್ನು ನೀಡಿದರೆ ಕಾನೂನು ತೊಡಕಾಗುತ್ತದೆ ಎಂದು ಕಾನೂನು ವಿಭಾಗ ಮೌಖಿಕವಾಗಿ ಹೇಳಿರುವುದರಿಂದ ಹೊಸ ಪ್ಯಾಕೇಜ್ ಅಂತಿಮಗೊಳಿಸುವುದು ವಿಳಂಬವಾಗಿದೆ’ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಮುಖ್ಯಾಂಶಗಳು

- ಇಪಿಎಫ್‌ಒ ಆದೇಶ ಪಾಲನೆಯಲ್ಲಿ ಅಧಿಕಾರಿಗಳಿಂದ ವಿಳಂಬ
- ಅತಿಹೆಚ್ಚು ದಂಡ ಪಾವತಿಸಬೇಕಾದ ಗುತ್ತಿಗೆದಾರರು
- ಹೊಸ ಗುತ್ತಿಗೆ ಪಡೆಯಲೂ ಸಾಧ್ಯವಿಲ್ಲ



ಪಿಎಫ್ ವಿಳಂಬ: ಬಡ್ಡಿ, ದಂಡ, ಶಿಕ್ಷೆ ಎಷ್ಟು?

ಡಿಫಾಲ್ಟ್	ಸೆಕ್ಷನ್	ದಂಡ/ ಬಡ್ಡಿ	ದರ/ ಪ್ರಮಾಣ	ಷರಾ
ತಡ ಪಾವತಿ	ಇಪಿಎಫ್ ಕಾಯ್ದೆ ಸೆಕ್ಷನ್ 7‘ಕ್ಯೂ’	ಬಡ್ಡಿ	ವಾರ್ಷಿಕ ಶೇ 12	ಕಡ್ಡಾಯ
ತಡದಿಂದಾದ ನಷ್ಟ	ಇಪಿಎಫ್ ಕಾಯ್ದೆ ಸೆಕ್ಷನ್ 14‘ಬಿ’	ನಷ್ಟ ಪರಿಹಾರ	ಶೇ 5ರಿಂದ ಶೇ 25ರಷ್ಟು	ವಿಳಂಬದ ಅವಧಿಗೆ
ಪಾವತಿ ಮಾಡದಿದ್ದರೆ	ಸೆಕ್ಷನ್ 14	ಕಾನೂನು ಕ್ರಮ	ದಂಡ + ಒಂದು ವರ್ಷ ಜೈಲು	ಮರುಕಳಿಸಿದರೆ ದ್ವಿಗುಣ
ತಪ್ಪು/ ಕಡಿಮೆ ಪಾವತಿ	ಸೆಕ್ಷನ್ 7ಎ	ಮರುಮೌಲ್ಯಮಾಪನ	ದಂಡ + ಪರಿಹಾರ	ಇಪಿಎಫ್‌ಒ ತೀರ್ಮಾನ
ಉದ್ಯೋಗದಾತರ ಪಾಲು ಪಾವತಿಸದಿದ್ದರೆ	ಬಿಎನ್‌ಎಸ್ + ಇಪಿಎಫ್ ಕಾಯ್ದೆ	ಕ್ರಿಮಿನಲ್ ಅಪರಾಧ	3 ವರ್ಷದವರೆಗೆ ಜೈಲು	ನಂಬಿಕೆ ಉಲ್ಲಂಘನೆ

‘ಅಧಿಕಾರಿಗಳಿಂದ ಗುತ್ತಿಗೆದಾರರ ರಕ್ಷಣೆ’

‘ಪೌರ ಕಾರ್ಮಿಕರ ಭವಿಷ್ಯ ನಿಧಿ ಪಾವತಿಸದ ಡಿಫಾಲ್ಟ್ ಗುತ್ತಿಗೆದಾರರ ಮೇಲೆ ಇಪಿಎಫ್‌ಒ ಕ್ರಮ ಕೈಗೊಳ್ಳಲು ಆದೇಶಿಸಿದೆ. ಅಲ್ಲದೆ, ನಗರಾಭಿವೃದ್ಧಿ ಇಲಾಖೆ, ಜಿಬಿಎ ಮುಖ್ಯ ಆಯುಕ್ತರೂ ಡಿಫಾಲ್ಟ್ ಗುತ್ತಿಗೆದಾರರ ಮೇಲೆ ಕ್ರಮಕ್ಕೆ ಜರುಗಿಸಲು ಸೂಚಿಸಿದ್ದಾರೆ. ಇಷ್ಟಾದರೂ, ಬಿಎಸ್‌ಡಬ್ಲ್ಯು-ಎಂಎಲ್ ಅಧಿಕಾರಿಗಳು ಯಾವುದೇ ಪ್ರಕ್ರಿಯೆ ನಡೆಸದೆ, ಅತಿ ಹೆಚ್ಚು ದಂಡ ಕಟ್ಟಬೇಕಾದ ಗುತ್ತಿಗೆದಾರರನ್ನು ರಕ್ಷಿಸುತ್ತಿದ್ದಾರೆ’ ಎಂದು ಬೆಂಗಳೂರು ನಗರ ಸ್ವಚ್ಛತೆ ಮತ್ತು ಲಾರಿ ಮಾಲೀಕರು–ಗುತ್ತಿಗೆದಾರರ ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ಎನ್. ಬಾಲಸುಬ್ರಮಣಿಯಂ ಆರೋಪಿಸಿದರು.



‘ಗುತ್ತಿಗೆದಾರರು ಅಕ್ರಮ ನಡೆಸಿ, ಪಾಲಿಕೆ ಹಣವನ್ನು ಲೂಟಿ ಮಾಡಿದ್ದಾರೆ. ಅಂತಹವರ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳದೆ, ಬಿಲ್‌ಗಳನ್ನು ಬಿಡುಗಡೆ ಮಾಡಲಾಗುತ್ತಿದೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ತಪ್ಪು ಮಾಹಿತಿ ನೀಡಿ ದಿಕ್ಕು ತಪ್ಪಿಸುತ್ತಿದ್ದಾರೆ. ಡಿಫಾಲ್ಟ್ ಗುತ್ತಿಗೆದಾರರೇ ಅವರನ್ನು ಸುತ್ತುವರಿದಿದ್ದು, ನಿಯಮಗಳಂತೆ ಕೆಲಸ ಮಾಡುತ್ತಿರುವ ಗುತ್ತಿಗೆದಾರರಿಗೆ ತೊಂದರೆ ನೀಡಲಾಗುತ್ತಿದೆ. ಡಿಫಾಲ್ಟ್ ಗುತ್ತಿಗೆದಾರರ ಮೇಲೆ ಕ್ರಿಮಿನಲ್ ಕ್ರಮ ಕೈಗೊಳ್ಳದಿದ್ದರೆ ಮುಂದೆ ಹೋರಾಟ ತೀವ್ರಗೊಳಿಸಲಾಗುವುದು’ ಎಂದು ಎಚ್ಚರಿಸಿದರು.



‘ನೆಮ್ಮದಿ’ ಉಚಿತ ಕ್ಯಾನ್ಸರ್ ಉಪಶಾಮಕ ಕೇಂದ್ರ

‘ನೆಮ್ಮದಿ’ ಕೇಂದ್ರ ಉದ್ಘಾಟನೆ ಇಂದು

ಪ್ರಜಾವಾಣಿ ವಾರ್ತೆ

ನೆಲಮಂಗಲ: ಸಮೀಪದ ರಾವುತ್ತನ ಹಳ್ಳಿ ರಸ್ತೆಯ (ಆರ್‌ಟಿಒ ಬಳಿ) ಶಿವನಪುರದ ಇ.ಕೆ.ಎಸ್ಟೇಟ್‌ನಲ್ಲಿ ಸುಕೃತಿ ಚಾರಿಟಬಲ್ ಟ್ರಸ್ಟ್, ಬೆಂಗಳೂರಿನ ಮಿಡ್‌ಟೌನ್ ರೋಟರಿ ಸಂಸ್ಥೆ ಹಾಗೂ ದಾನಿಗಳ ಸಹಯೋಗದೊಂದಿಗೆ ಕ್ಯಾನ್ಸರ್ ರೋಗಿಗಳಿಗೆ ಉಚಿತ ಆರೈಕೆ ಕೇಂದ್ರ ‘ನೆಮ್ಮದಿ’ ಭಾನುವಾರ ಆರಂಭವಾಗಲಿದೆ.

55 ಹಾಸಿಗೆಗಳ ಸಾಮರ್ಥ್ಯದ ಕೇಂದ್ರಕ್ಕೆ ಪ್ರವೇಶ ಉಚಿತ. ₹20 ಕೋಟಿ ವೆಚ್ಚದಲ್ಲಿ ಅತ್ಯಾಧುನಿಕ ಪರಿಕರಗಳು, ಸೌಲಭ್ಯಗಳೊಂದಿಗೆ ಕ್ಯಾನ್ಸರ್ ಪೀಡಿತರಿಗೆ ಆಶಾಕಿರಣವಾಗಿ ನೆಮ್ಮದಿಯ ಆರೈಕೆ ನೀಡಲು ಸಜ್ಜಾಗಿದೆ ಎಂದು ರೋಟರಿ ಮಿಡ್‌ಟೌನ್ ಅಧ್ಯಕ್ಷ ರಾಜೇಶ್ ಶಾ ತಿಳಿಸಿದ್ದಾರೆ.

ಕೇಂದ್ರದ ಕಟ್ಟಡಕ್ಕೆ ವಿಧಾನ ಪರಿಷತ್ ಮಾಜಿ ಸದಸ್ಯ ಇ.ಕೃಷ್ಣಪ್ಪ ಅವರು ಭೂಮಿ ದಾನ ಮಾಡಿದ್ದಾರೆ. ಪ್ರೆಸ್ಟೀಜ್ ಫೌಂಡೇಷನ್, ಸನ್ಸೆರಾ ಫೌಂಡೇಷನ್, ಫೆದರ್‌ಲೈಟ್ ಸಮೂಹ, ವೆಸ್ಮಾರ್ಕ್ ಡೋರ್ಸ್, ಮಲ್ಲೇಶ್ವರಂನ ಸಾಯಿ ಮಂಡಳಿ ಟ್ರಸ್ಟ್, ಕುಮಾರ್ ಎಲೆಕ್ಟ್ರಿಕಲ್ಸ್ ಹಾಗೂ ಸಂಘ– ಸಂಸ್ಥೆಗಳು ಸಹಕಾರ ನೀಡಿವೆ.

ಪ್ರತಿವರ್ಷ ದೇಶದಲ್ಲಿ 60 ಲಕ್ಷದಿಂದ 80 ಲಕ್ಷ ಜನರು ಕ್ಯಾನ್ಸರ್‌ಗೆ ತುತ್ತಾಗಿ ಆರೈಕೆಯ ಕೊರತೆಯಿಂದ ನರಳುತ್ತಿದ್ದಾರೆ. ಶೇ2 ರಷ್ಟು ರೋಗಿಗಳು ಮಾತ್ರ ಉಪಶಾಮಕ ಸಾಮರ್ಥ್ಯ ಹೊಂದಿದ್ದಾರೆ. ಈ ಅಂತರ ಕಡಿಮೆ ಮಾಡುವುದು ಕೇಂದ್ರದ ಪ್ರಯತ್ನ ಎಂದು ಟ್ರಸ್ಟ್ ಧರ್ಮದರ್ಶಿ ರೋಟೇರಿಯನ್ ಬಿ.ಎಸ್. ನಾಗರಾಜನ್ ತಿಳಿಸಿದರು.

ಜಾಗತಿಕ ಮಾನವೀಯ ಮಿಷನ್ ಸ್ಥಾಪಕ ಮಧುಸೂದನ ಸಾಯಿ ಅವರು ಕೇಂದ್ರ ಉದ್ಘಾಟಿಸಲಿದ್ದು, ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಲೋಕಸಭಾ ಸದಸ್ಯರಾದ ಡಾ.ಸಿ.ಎನ್.ಮಂಜುನಾಥ್, ಡಾ.ಕೆ.ಸುಧಾಕರ್, ಶಾಸಕ ಎಸ್. ಆರ್.ವಿಶ್ವನಾಥ್, ವಿಧಾನ ಪರಿಷತ್ ಮಾಜಿ ಸದಸ್ಯ ಯು.ಬಿ.ವೆಂಕಟೇಶ್ ಭಾಗವಹಿಸುವರು. ಮಾಹಿತಿಗೆ ಮೊ. 9980832062 ಸಂಪರ್ಕಿಸಬಹುದು.

ಶೀತಜ್ವರ: ಪೂರ್ವಸಿದ್ಧತೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನವರಿ ಮತ್ತು ಮಾರ್ಚ್ ಅವಧಿಯಲ್ಲಿ ತಲೆದೋರುವ ಶೀತಜ್ವರ (ಇನ್‌ಫ್ಲುಯೆನ್ಸ್) ಪ್ರಕರಣಗಳ ನಿರ್ವಹಣೆಗೆ ಈಗಿನಿಂದಲೇ ಪೂರ್ವ ಸಿದ್ಧತೆ ಮಾಡಿಕೊಳ್ಳಿ ಎಂದು ಆರೋಗ್ಯ ಸೇವೆಗಳ ಆಯುಕ್ತಾಲಯವು ಎಲ್ಲ ಜಿಲ್ಲಾ ಆರೋಗ್ಯಾಧಿಕಾರಿ ಗಳಿಗೆ ಸೂಚಿಸಿದೆ.

ಚಳಿಗಾಲದಲ್ಲಿ ಶೀತಜ್ವರದ ಪ್ರಕರಣಗಳು ಹೆಚ್ಚಾಗುತ್ತವೆ. ಸಾಮಾನ್ಯ ಪರಿಸ್ಥಿತಿಯಲ್ಲಿ ಇದು ಮಾರಣಾಂತಿಕ ಅಲ್ಲದಿದ್ದರೂ, ಉಸಿರಾಟ ಮತ್ತು ಹೃದಯ ಸಂಬಂಧಿ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿ ರುವವರು, ಗರ್ಭಿಣಿಯರು, ವೃದ್ಧರು ಮತ್ತು ಮಕ್ಕಳಲ್ಲಿ ಅಪಾಯಕಾರಿ ಆಗಬಲ್ಲದು. ಹೀಗಾಗಿ ಶೀತಜ್ವರ ಹರಡುವುದನ್ನು ತಡೆಗಟ್ಟಲು ಮತ್ತು ಚಿಕಿತ್ಸೆಗೆ ಅಗತ್ಯವಿರುವ ಸಿದ್ಧತೆ ಗಳನ್ನು ಮಾಡಿಕೊಳ್ಳಿ ಎಂದು ಸುತ್ತೋಲೆಯಲ್ಲಿ ವಿವರಿಸಿದೆ.



ಸೋಂಕು ತಗುಲಿದವರ ಗಂಟಲು ಮತ್ತು ಮೂಗಿನ ದ್ರವಗಳಿಂದ ಶೀತಜ್ವರವು ಒಬ್ಬರಿಂದ ಒಬ್ಬರಿಗೆ ಸುಲಭವಾಗಿ ಹರಡುತ್ತದೆ. ಸೋಂಕು ತಗುಲಿದವರು ಸೀನಿದಾಗ ಕೆಮ್ಮಿದಾಗ ಅಕ್ಕಪಕ್ಕದವರಿಗೆ ಹರಡಿಕೊಳ್ಳುವ ಅಪಾಯವಿರುತ್ತದೆ. ಹೀಗಾಗಿ, ಸೋಂಕು ತಗುಲಿದವರನ್ನು ಪತ್ತೆ ಮಾಡಿ, ಅದು ಹರಡದಂತೆ ಮುನ್ನೆಚ್ಚರಿಕೆ ವಹಿಸಬೇಕು ಎಂದು ವಿವರಿಸಿದೆ.

ಶೀತಜ್ವರವು ಸಾಮಾನ್ಯವಾಗಿ 5–7 ದಿನಗಳಲ್ಲಿ ಕಡಿಮೆಯಾಗುತ್ತದೆ. ಆದರೆ ಈ ಅವಧಿಯಲ್ಲಿ ಸೋಂಕಿತರ ಸಂಪರ್ಕಕ್ಕೆ ಆರೋಗ್ಯವಂತ ವ್ಯಕ್ತಿಗಳು ಬರದಂತೆ ನೋಡಿಕೊಳ್ಳಬೇಕು. ಉತ್ತಮ ಗುಣಮಟ್ಟದ ಮಾಸ್ಕ್ ಬಳಕೆ, ಕೈಗಳನ್ನು ಆಗಾಗ್ಗೆ ಸೋಪಿನಿಂದ ಸ್ವಚ್ಛಗೊಳಿಸುವುದನ್ನು ರೂಢಿಸಬೇಕು. ಎಲ್ಲೆಂದರಲ್ಲಿ ಉಗುಳುವುದನ್ನು ತಡೆಗಟ್ಟಬೇಕು. ಈ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ಪ್ರಚಾರ ನಡೆಸಬೇಕು ಎಂದು ತಿಳಿಸಿದೆ.

ಸೋಂಕು ಪತ್ತೆ ಪರೀಕ್ಷೆಗಾಗಿ ರಾಜ್ಯದಾದ್ಯಂತ ಒಂಬತ್ತು ಪ್ರಯೋಗಾಲಯಗಳನ್ನು ಗೊತ್ತು ಮಾಡಿದ್ದು, ಸಂಬಂಧಿತ ಜಿಲ್ಲೆಗಳಿಂದ ಅವೇ ಪ್ರಯೋಗಾಲಯಕ್ಕೆ ಮಾದರಿಗಳನ್ನು ಕಳುಹಿಸಬೇಕು ಎಂದು ಸೂಚಿಸಿದೆ.

ಏನೆಲ್ಲಾ ಸಿದ್ಧತೆ...

- ಎಲ್ಲ ಆಸ್ಪತ್ರೆಗಳಲ್ಲಿ ಶೀತಜ್ವರ ಚಿಕಿತ್ಸೆಗೆ ಅಗತ್ಯವಾದ ಇನ್‌ಫ್ಲುಯೆನ್ಸ ಔಷಧಗಳನ್ನು ಅಗತ್ಯ ಪ್ರಮಾಣದಲ್ಲಿ ದಾಸ್ತಾನು ಮಾಡಬೇಕು. ಎನ್‌95 ಮಾಸ್ಕ್‌ಗಳ ದಾಸ್ತಾನು ಇರಬೇಕು
- ಆರೋಗ್ಯ ಸೇವಾ ಸಿಬ್ಬಂದಿಗೆ ಅಗತ್ಯವಾದ ಪಿಪಿಇ ಕಿಟ್‌ಗಳನ್ನು ಸಂಗ್ರಹಿಸಿ ಇರಿಸಿಕೊಳ್ಳಬೇಕು. ಅಗತ್ಯ ಸಿಬ್ಬಂದಿ ದೈನಂದಿನ ಕೆಲಸದ ವೇಳೆ ಪಿಪಿಇ ಕಿಟ್‌ಗಳನ್ನು ಧರಿಸಿರಬೇಕು
- ಸಾಮಾನ್ಯ ಜ್ವರ ಪ್ರಕರಣಗಳಲ್ಲಿ ಶೇ 5ರಷ್ಟು ಮತ್ತು ತೀವ್ರ ಉಸಿರಾಟದ ತೊಂದರೆ ಪ್ರಕರಣಗಳಲ್ಲಿ ಶೇ 100ರಷ್ಟು ಮಾದರಿಗಳನ್ನು ಕಡ್ಡಾಯವಾಗಿ ಶೀತಜ್ವರ ಪತ್ತೆ ಪರೀಕ್ಷೆಗೆ ಕಳುಹಿಸಬೇಕು
- ಅಗತ್ಯ ಸಂದರ್ಭ ಎದುರಾದಲ್ಲಿ ಆರೋಗ್ಯ ಇಲಾಖೆಯ ಮುಂಚೂಣಿ ಸಿಬ್ಬಂದಿಗೆ ಶೀತಜ್ವರ ಲಸಿಕೆಯನ್ನು ಹಾಕಿಸಬೇಕು

₹80 ಕೋಟಿ ಮೌಲ್ಯದ 5 ಎಕರೆ ಒತ್ತುವರಿ ತೆರವು

150ಕ್ಕೂ ಅಧಿಕ ಶೆಡ್ ನೆಲಸಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಉತ್ತರ ನಗರ ಪಾಲಿಕೆ ವ್ಯಾಪ್ತಿಯ ಕೋಗಿಲು ಬಂಡೆ ಬಳಿ 5 ಎಕರೆ ಜಾಗದಲ್ಲಿದ್ದ 150ಕ್ಕೂ ಅಧಿಕ ಶೆಡ್‌ಗಳನ್ನು ತೆರವುಗೊಳಿಸಿ, ಜಾಗ ವಶಪಡಿಸಿಕೊಳ್ಳಲಾಗಿದೆ ಎಂದು ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕರೀಗೌಡ ತಿಳಿಸಿದ್ದಾರೆ.

ಯಲಹಂಕ ಹೋಬಳಿಯ ಕೋಗಿಲು ಗ್ರಾಮದ ಸರ್ವೆ ನಂ. 99 ರಲ್ಲಿ ಲಭ್ಯವಿರುವ ಒಟ್ಟು 14 ಎಕರೆ 36 ಗುಂಟೆ ವಿಸ್ತೀರ್ಣದ ಜಮೀನಿನಲ್ಲಿ, ಬಿಎಸ್‌ಡಬ್ಲ್ಯುಎಂಎಲ್ ವತಿಯಿಂದ ಪ್ರಸ್ತಾವಿತ ಬಯೋ ಮೆಥನೈಸೇಶನ್ ಪ್ಲಾಂಟ್, ಅನಿಮಲ್ ರೆಂಡರಿಂಗ್, ಎಳನೀರು ಬುರುಡೆ ಸಂಸ್ಕರಣಾ ಮತ್ತು ಸ್ಯಾನಿಟರಿ ತ್ಯಾಜ್ಯ ಸಂಸ್ಕರಣಾ ಸೌಲಭ್ಯಗಳನ್ನು ಕಾರ್ಯಗತಗೊಳಿಸಲು ಯೋಜಿಸಲಾಗಿತ್ತು.

ಬಿಎಸ್‌ಡಬ್ಲ್ಯುಎಂಎಲ್‌ಗೆ ಮೀಸಲಿರಿಸಿದ್ದ ಜಾಗದಲ್ಲಿ 150ಕ್ಕೂ ಹೆಚ್ಚು ಶೆಡ್/ ಮನೆಗಳನ್ನು ನಿರ್ಮಾಣ ಮಾಡಿಕೊಂಡಿದ್ದರು. ಅಧಿಕಾರಿಗಳ ತಂಡವು ಶನಿವಾರ ಒಂಬತ್ತು ಟ್ರ್ಯಾಕ್ಟರ್, ಒಂಬತ್ತು ಜೆಸಿಬಿ ಯಂತ್ರಗಳನ್ನು ಬಳಸಿ ಒತ್ತುವರಿ ತೆರವುಗೊಳಿಸಿತು. ಬಿಎಸ್‌ಡಬ್ಲ್ಯುಎಂಎಲ್, ಅಗ್ನಿಶಾಮಕ, ಪಾಲಿಕೆ, ಕಂದಾಯ ಇಲಾಖೆ, ಬಿಎಂಟಿಎಫ್ ಅಧಿಕಾರಿಗಳು, 70 ಮಾರ್ಷಲ್‌ಗಳು ಹಾಗೂ 200 ಮಂದಿ ಪೊಲೀಸ್ ಭದ್ರತೆಯೊಂದಿಗೆ ಒತ್ತುವರಿ ತೆರವು ಕಾರ್ಯಾಚರಣೆ ನಡೆಸಿದರು.



ಕೋಗಿಲು ಬಂಡೆ ಬಳಿ 5 ಎಕರೆ ಜಾಗದಲ್ಲಿದ್ದ ಶೆಡ್‌ಗಳನ್ನು ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ ತೆರವುಗೊಳಿಸಿತು

ನಿರ್ಮಾಣ ಹಂತದ ಅಕ್ರಮ ಕಟ್ಟಡ ತೆರವು

ಬೆಂಗಳೂರು ಪೂರ್ವ ನಗರ ಪಾಲಿಕೆಯ ದೊಡ್ಡನೆಕ್ಕುಂದಿ ವಾರ್ಡ್‌ನ ಚಿನ್ನಪ್ಪನಹಳ್ಳಿ, 6ನೇ ‘ಸಿ’ ಅಡ್ಡರಸ್ತೆಯಲ್ಲಿ ಯಾವುದೇ ಅನುಮತಿ ಪಡೆಯದೇ ನಿರ್ಮಿಸುತ್ತಿದ್ದ ಕಟ್ಟಡವನ್ನು ಶನಿವಾರ ತೆರವುಗೊಳಿಸಲಾಗಿದೆ ಎಂದು ಪೂರ್ವ ನಗರ ಪಾಲಿಕೆ ಆಯುಕ್ತ ಡಿ.ಎಸ್. ರಮೇಶ್ ತಿಳಿಸಿದ್ದಾರೆ.

ನಗರ ಪಾಲಿಕೆಯಿಂದ ನಕ್ಷೆ ಮಂಜೂರಾತಿ ಪಡೆಯದೇ ಮಾಲೀಕರಾದ ರಮೇಶ್ ಮತ್ತು ವೀಣಾ ಅವರು ಕಟ್ಟಡ ನಿರ್ಮಿಸುತ್ತಿದ್ದರು. ಅನುಮತಿ ಪಡೆಯುವವರೆಗೆ ನಿರ್ಮಾಣ ಕಾಮಗಾರಿ ಸ್ಥಗಿತಗೊಳಿಸುವಂತೆ ನೋಟಿಸ್ ನೀಡಲಾಗಿತ್ತು. ಕಟ್ಟಡ ತೆರವುಗೊಳಿಸಬೇಕು. ಇಲ್ಲವೇ ಸರಿಯಾದ ಸಮಜಾಯಿಷಿ ನೀಡಬೇಕು ಎಂದು ಸೂಚಿಸಲಾಗಿತ್ತು. ಕಟ್ಟಡ ಮಾಲೀಕರು ಯಾವುದೇ ವಿವರಣೆ ನೀಡಿರಲಿಲ್ಲ.

ಪಾಲಿಕೆಯ ಕಾಮಗಾರಿ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ನೇತೃತ್ವದಲ್ಲಿ ಕಾರ್ಯಾಚರಣೆಯನ್ನು ನಡೆಸಲಾಯಿತು. ಮೊದಲ ಹಂತವಾಗಿ ಕಟ್ಟಡದ ಮೂರನೇ ಮಹಡಿಯನ್ನು ತೆರವುಗೊಳಿಸಲಾಯಿತು. ಮುಂದಿನ ಹಂತದಲ್ಲಿ ಪೂರ್ಣ ಕಟ್ಟಡ ತೆರವುಗೊಳಿಸಲಾಗುವುದು ಎಂದು ಡಿ.ಎಸ್.ರಮೇಶ್ ಮಾಹಿತಿ ನೀಡಿದರು.

₹50 ಕೋಟಿ ಮೌಲ್ಯದ ಸ್ವತ್ತು ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಕಾರ್ಯಾಚರಣೆ ನಡೆಸಿ, ಒ.ಎಂ.ಬಿ.ಆರ್. ಬಡಾವಣೆಯಲ್ಲಿ ಸುಮಾರು ₹ 50 ಕೋಟಿ ಮೌಲ್ಯದ ಆಸ್ತಿಯನ್ನು ವಶಪಡಿಸಿಕೊಂಡಿದೆ.

ಬಾಣಸವಾಡಿ ಗ್ರಾಮದ ಸರ್ವೆ ನಂಬರ್ 227/2 ಮತ್ತು 227/4ರಲ್ಲಿ 1 ಎಕರೆ 24 ಗುಂಟೆ ಪ್ರದೇಶದಲ್ಲಿ ಅಕ್ರಮವಾಗಿ ನಿರ್ಮಿಸಿದ್ದ ಶೆಡ್‌ಗಳನ್ನು ಜೆಸಿಬಿ ಯಂತ್ರದ ಸಹಾಯದಿಂದ ತೆರವುಗೊಳಿಸಿ, ₹50 ಕೋಟಿ ಬೆಲೆ ಬಾಳುವ ಪ್ರದೇಶವನ್ನು ವಶ ಪಡಿಸಿಕೊಂಡಿತು. ಅದೇ ರೀತಿ ರಾಜೀವ್ ಗಾಂಧಿನಗರ, ನಂದಿನಿ ಬಡಾವಣೆಯಲ್ಲೂ ಕಾರ್ಯಾಚರಣೆ ನಡೆಸಿ, ₹2.5 ಕೋಟಿ ಮೌಲ್ಯದ ಆಸ್ತಿಯನ್ನು ವಶಪಡಿಸಿಕೊಂಡಿದೆ.

ಬೆಂಗಳೂರು ಉತ್ತರ ತಾಲ್ಲೂಕಿನ ಯಶವಂತಪುರ ಹೋಬಳಿಯ ಜಾರಕಬಂಡೆ ಕಾವಲು ಗ್ರಾಮದ ಸರ್ವೆ ನಂ. 1ರ 2,500 ಚದರ ಅಡಿ ಪ್ರದೇಶಗಳಲ್ಲಿ ಶೆಡ್‌ಗಳನ್ನು ತೆರವುಗೊಳಿಸಿ, ಸುಮಾರು ₹2.5 ಕೋಟಿ ಬೆಲೆ ಬಾಳುವ ಪ್ರದೇಶವನ್ನು ಜಪ್ತಿ ಮಾಡಿದೆ.



ಒ.ಎಂ.ಬಿ.ಆರ್ ಬಡಾವಣೆಯಲ್ಲಿ ನಿರ್ಮಿಸಿದ್ದ ಶೆಡ್‌ಗಳನ್ನು ಬಿಡಿಎ ಅಧಿಕಾರಿಗಳು ತೆರವು ಮಾಡಿದರು

ಶಾಸಕ ಬೈರತಿಗೆ ಸಿಐಡಿ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಕ್ಲು ಶಿವು ಕೊಲೆ ಪ್ರಕರಣ ದಲ್ಲಿ ಕೆ.ಆರ್. ಪುರ ವಿಧಾನಸಭೆ ಕ್ಷೇತ್ರದ ಬಿಜೆಪಿ ಶಾಸಕ ಬೈರತಿ ಬಸವರಾಜ ಅವರಿಗೆ ಬಂಧನದ ಭೀತಿ ಎದುರಾಗಿದ್ದು, ಅವರು ಹೊರ-ರಾಜ್ಯದಲ್ಲಿ ತಲೆಮರೆಸಿಕೊಂಡಿ-ರುವ ಶಂಕೆ ವ್ಯಕ್ತವಾಗಿದೆ.



ಬೈರತಿ ಬಸವರಾಜ

ಸಿಐಡಿ ಪೊಲೀಸರು ಶಾಸಕರಿಗೆ ಹುಡುಕಾಟ ನಡೆಸು ತ್ತಿದ್ದಾರೆ ಎಂದು ಗೊತ್ತಾಗಿದೆ.

ರೌಡಿ ಶೀಟರ್ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವು ಕೊಲೆ ಪ್ರಕರಣ ದಲ್ಲಿ ಬೈರತಿ ಬಸವರಾಜ ಸೇರಿದಂತೆ ಐವರ ವಿರುದ್ಧ ಭಾರತೀನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಬಸವರಾಜ ಅವರು ನಿರೀಕ್ಷಣಾ ಜಾಮೀನು ಕೋರಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಆ ಅರ್ಜಿಯನ್ನು ಹೈಕೋರ್ಟ್ ಶುಕ್ರವಾರ ತಿರಸ್ಕರಿಸಿತ್ತು. ಅರ್ಜಿ ತಿರಸ್ಕಾರದ ಬೆನ್ನಲ್ಲೇ ಶಾಸಕರನ್ನು ವಶಕ್ಕೆ ಪಡೆದುಕೊಂಡು ವಿಚಾರಣೆ ನಡೆಸಲು ಸಿಐಡಿ ಪೊಲೀಸರು ಸಿದ್ಧತೆ ನಡೆಸಿದ್ದಾರೆ ಎಂದು ಮೂಲಗಳು ಹೇಳಿವೆ.

ಕೊಲೆ ಪ್ರಕರಣ

‘ಬಸವರಾಜ ಅವರು ಬೆಳಗಾವಿಯಲ್ಲಿ ನಡೆದಿದ್ದ ಚಳಿಗಾಲದ ಅಧಿವೇಶನ ದಲ್ಲಿ ಪಾಲ್ಗೊಂಡಿದ್ದರು. ಅರ್ಜಿ ವಜಾ ಆಗುತ್ತಿದ್ದಂತೆಯೇ ಶಾಸಕರು ತಲೆಮರೆಸಿ ಕೊಂಡಿರುವ ಶಂಕೆಯಿದೆ. ತನಿಖೆಗೆ ವಿಶೇಷ ತಂಡಗಳನ್ನು ಈ ಹಿಂದೆಯೇ ರಚಿಸಲಾಗಿತ್ತು. ಶಾಸಕರು ಪುಣೆಯಲ್ಲಿ ಇರುವ ಮಾಹಿತಿಯಿದೆ. ಅಲ್ಲಿಗೂ ಒಂದು ತಂಡವನ್ನು ಕಳುಹಿಸಲಾಗಿದೆ. ಜನಪ್ರತಿನಿಧಿಗಳ ಕೋರ್ಟ್‌ನಲ್ಲೂ ನಿರೀಕ್ಷಣಾ ಜಾಮೀನು ಕೋರಿ ಶಾಸಕರು ಅರ್ಜಿ ಸಲ್ಲಿಸಿರುವ ಮಾಹಿತಿ ಸಿಕ್ಕಿದೆ. ನ್ಯಾಯಾಲಯದ ಮುಂದಿನ ಆದೇಶ ಗಮನಿಸಿ, ಕಾನೂನು ಪ್ರಕ್ರಿಯೆ ನಡೆಸಲಾಗುವುದು’ ಎಂದು ಸಿಐಡಿ ಮೂಲಗಳು ತಿಳಿಸಿವೆ.

ಜುಲೈ 15ರ ರಾತ್ರಿ ಮನೆ ಎದುರು ನಿಂತಿದ್ದಾಗ ಬಿಕ್ಲು ಶಿವು ಅವರ ಕೊಲೆ ನಡೆದಿತ್ತು. ಮೃತ ಶಿವಪ್ರಕಾಶ್ ತಾಯಿ ವಿಜಯಲಕ್ಷ್ಮಿ ಅವರು ನೀಡಿದ ದೂರು ಆಧರಿಸಿ ಜಗದೀಶ್ (ಎ1), ಕಿರಣ್ (ಎ2), ವಿಮಲ್ (ಎ3), ಅನಿಲ್ (ಎ4), ಬೈರತಿ ಬಸವರಾಜ (ಎ5) ಅವರ ವಿರುದ್ಧ ಪ್ರಕರಣ ದಾಖಲಾಗಿತ್ತು. ಈ ಪ್ರಕರಣದಲ್ಲಿ 17 ಮಂದಿಯನ್ನು ಭಾರತೀನಗರ ಠಾಣೆಯ ಪೊಲೀಸರು ಬಂಧಿಸಿದ್ದರು. ಅದಾದ ಮೇಲೆ ಪ್ರಕರಣದ ಮುಂದಿನ ತನಿಖೆಯನ್ನು ಸಿಐಡಿಗೆ ವರ್ಗಾಯಿಸಿ ರಾಜ್ಯ ಸರ್ಕಾರವು ಆದೇಶಿಸಿತ್ತು.

‘ಜಾಗದ ವಿಚಾರವಾಗಿ ಜಗದೀಶ್, ಕಿರಣ್, ವಿಮಲ್, ಅನಿಲ್ ಮತ್ತು ಇತರರು ಬೈರತಿ ಬಸವರಾಜ ಅವರ ಕುಮ್ಮಕ್ಕಿನಿಂದ ಕೊಲೆ ಮಾಡಿದ್ದಾರೆ’ ಎಂಬ ವಿಜಯಲಕ್ಷ್ಮಿ ಅವರ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿತ್ತು.

‘ಕನ್ನಡಿಗರಿಗೆ ಉದ್ಯೋಗ ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕ ಸಾರಿಗೆ ನಿಗಮ, ಮೈಸೂರು ಸ್ಯಾಂಡಲ್ ಸೋಪ್ ಸಂಸ್ಥೆಗಳಲ್ಲಿ ಕನ್ನಡಿಗರಿಗೆ ಆದ್ಯತೆ ಸಿಕ್ಕಿದೆ. ಇನ್ನುಳಿದ ಎಲ್ಲ ಸಂಸ್ಥೆಗಳಲ್ಲಿ ಕನ್ನಡಿಗರಿಗೆ ಉದ್ಯೋಗ ಸಿಗಬೇಕು’ ಎಂದು ಚಿತ್ರ ನಿರ್ಮಾಪಕ ಸಾ.ರಾ. ಗೋವಿಂದು ಆಗ್ರಹಿಸಿದರು.

ಕೆಎಸ್‌ಆರ್‌ಟಿಸಿ ಕನ್ನಡ ಕ್ರಿಯಾ ಸಮಿತಿ ಶನಿವಾರ ಹಮ್ಮಿಕೊಂಡಿದ್ದ ಕರ್ನಾಟಕ ರಾಜ್ಯೋತ್ಸವ ಮತ್ತು ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

‘ರಾಜ್ಯದ ಉದ್ಯೋಗಗಳಲ್ಲಿ ಕನ್ನಡಿಗರಿಗೆ ಆದ್ಯತೆ ಎಂದು ಈ ಸರ್ಕಾರ ಆದೇಶ ಹೊರಡಿಸಿತು. ಪರಭಾಷಿಕರು ಎಷ್ಟು ಪ್ರಬಲರಾಗಿದ್ದಾರೆ ಎಂದರೆ ಬೆಳಿಗ್ಗೆ ಹೊರಡಿಸಿದ್ದ ಈ ಆದೇಶವನ್ನು ಸರ್ಕಾರ ಸಂಜೆ ವಾಪಸ್ ಪಡೆಯಿತು. ಪರಭಾಷಿಕರು ಕನ್ನಡಿಗರ ಮೇಲೆ ದಬ್ಬಾಳಿಕೆ ಮಾಡುತ್ತಿದ್ದಾರೆ’ ಎಂದರು.

ಕನ್ನಡ ಕ್ರಿಯಾ ಸಮಿತಿ ಗೌರವ ಅಧ್ಯಕ್ಷ ವ.ಚ. ಚನ್ನೇಗೌಡ ಮಾತನಾಡಿ, ‘ಕನ್ನಡ ಬಲ್ಲವರಿಗೆ ಉದ್ಯೋಗ ಕೊಡಬೇಕು ಎಂದು 33 ವರ್ಷಗಳ ಹಿಂದೆ 12 ದಿನ ಹಗಲು-ರಾತ್ರಿ ನಿರಂತರ ಹೋರಾಟ ಮಾಡಲಾಗಿತ್ತು. ಅದರ ಫಲದಿಂದ ಕೆಎಸ್‌ಆರ್‌ಟಿಸಿಯಲ್ಲಿ ಕನ್ನಡಿಗರಿಗೆ ಹೆಚ್ಚಿನ ಉದ್ಯೋಗ ಲಭಿಸುವಂತಾಯಿತು’ ಎಂದರು.

ನಿವೃತ್ತ ಐಪಿಎಸ್ ಅಧಿಕಾರಿ, ಸಾಹಿತಿ ಡಿ.ವಿ. ಗುರುಪ್ರಸಾದ್, ಕನ್ನಡ ಪರಿಚಾರಕ ಎಚ್.ಎನ್. ರಮೇಶ್ ಬಾಬು, ಸಂಗೀತ ಗಮಕ ವಿದ್ವಾನ್ ಎಂ.ಖಾಸೀಮ್ ಮಲ್ಲಿಗೆಮಡುವು ಅವರನ್ನು ಸನ್ಮಾನಿಸಲಾಯಿತು. ಕೆಎಸ್‌ಆರ್‌ಟಿಸಿ ಮುಖ್ಯ ಸಂಚಾರ ವ್ಯವಸ್ಥಾಪಕ ಜೆ.ಅಂತೋನಿ ಜಾರ್ಜ್, ವಿಭಾಗೀಯ ನಿಯಂತ್ರಣಾಧಿಕಾರಿ ಬಿ.ಎಸ್. ನಾಗರಾಜ್ ಮೂರ್ತಿ, ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಟಿ.ಎಸ್. ಲತಾ, ಕನ್ನಡ ಕ್ರಿಯಾ ಸಮಿತಿ ರಾಜ್ಯ ಘಟಕದ ಅಧ್ಯಕ್ಷ ಕೆ.ಎಸ್. ಪ್ರಭುಸ್ವಾಮಿ, ಕಾರ್ಯಾಧ್ಯಕ್ಷ ಕೆ.ಎಸ್. ಎಂ. ಹುಸೇನ್, ಕೇಂದ್ರೀಯ ವಿಭಾಗ ಸಮಿತಿಯ ಅಧ್ಯಕ್ಷ ಆರ್.ಟಿ. ಶಾಂತರಾಜು, ಪ್ರಧಾನ ಕಾರ್ಯದರ್ಶಿ ಲಿಂಗರಾಜು, ಖಜಾಂಚಿ ರಮೇಶ್ ಡಿ.ಎಲ್. ಉಪಸ್ಥಿತರಿದ್ದರು.




ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಖಾಸೀಮ್ ಮಲ್ಲಿಗೆಮಡುವು, ಡಿ.ವಿ. ಗುರುಪ್ರಸಾದ್, ಎಚ್.ಎನ್.ರಮೇಶ್‌ಬಾಬು ಅವರಿಗೆ ‘ಕನ್ನಡಶ್ರೀ ಪ್ರಶಸ್ತಿ’ ನೀಡಿ ಗೌರವಿಸಲಾಯಿತು ಪ್ರಜಾವಾಣಿ ಚಿತ್ರ

ತೇಜಸ್ವಿ ಜೀವನ ಫಲಪುಷ್ಪದಲ್ಲಿ ಅನಾವರಣ

ಗಣರಾಜ್ಯೋತ್ಸವ ಅಂಗವಾಗಿ ತೋಟಗಾರಿಕೆ ಇಲಾಖೆಯಿಂದ ಲಾಲ್‌ಬಾಗ್‌ನಲ್ಲಿ 219ನೇ ಫಲಪುಷ್ಪ ಪ್ರದರ್ಶನಕ್ಕೆ ಸಿದ್ಧತೆ

• ಖಲೀಲಅಹ್ಮದ ಶೇಖ


ಪೂರ್ಣಚಂದ್ರ ತೇಜಸ್ವಿ

ಬೆಂಗಳೂರು: ಗಣರಾಜ್ಯೋತ್ಸವದ ಅಂಗವಾಗಿ ತೋಟಗಾರಿಕೆ ಇಲಾಖೆ ಲಾಲ್‌ಬಾಗ್‌ನಲ್ಲಿ ಆಯೋಜಿಸುವ ಫಲಪುಷ್ಪ ಪ್ರದರ್ಶನದಲ್ಲಿ ಈ ಬಾರಿ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ ಬದುಕು-ಬರಹಗಳು 'ತೇಜಸ್ವಿ ವಿಸ್ಮಯ' ಶೀರ್ಷಿಕೆಯಲ್ಲಿ ಹೂವಿನಲ್ಲಿ ಅರಳಲಿವೆ.

2026ರ ಜನವರಿ 15ರಿಂದ 26ರವರೆಗೆ ಲಾಲ್‌ಬಾಗ್‌ನಲ್ಲಿ ಫಲಪುಷ್ಪ ಪ್ರದರ್ಶನ ನಡೆಯಲಿದೆ. ಇದಕ್ಕಾಗಿ ತೋಟಗಾರಿಕೆ ಇಲಾಖೆ ಈಗಾಗಲೇ ವಿವಿಧ ಬಗೆಯ ಆಲಂಕಾರಿಕ, ದೇಶಿ-ವಿದೇಶಿ ಹೂವುಗಳ ಸಿದ್ಧತೆ ಮಾಡಿಕೊಳ್ಳುತ್ತಿದೆ.

50 ಸಾವಿರ ಹೂವಿನ ಕುಂಡ

'ಫಲಪುಷ್ಪ ಪ್ರದರ್ಶನಕ್ಕಾಗಿ ಕಬ್ಬನ್ ಉದ್ಯಾನ, ಕೆಮ್ಮಣ್ಣುಗುಂಡಿ, ಊಟಿಯ ಉದ್ಯಾನಗಳಲ್ಲಿ 50 ಸಾವಿರಕ್ಕೂ ಹೆಚ್ಚು ಹೂವಿನ ಕುಂಡಗಳನ್ನು ಬೆಳೆಸಲಾಗುತ್ತಿದೆ. ಇದರ ಜೊತೆಗೆ ಹೊರರಾಜ್ಯ ಮತ್ತು ವಿದೇಶಗಳಿಂದ ವಿವಿಧ ಬಗೆಯ ಹೂವುಗಳನ್ನು ತರಿಸಲಾಗುತ್ತದೆ. ಸೇವಂತಿ, ಗುಲಾಬಿ, ಪಾಯಿನ್ಸೆಟಿಯಾ, ಪೆಟೂನಿಯಾ, ಜರ್ಬೆರಾ, ಜೆರೇನಿಯಂ ಸೇರಿ ಹೂವುಗಳು ನೋಡುಗರನ್ನು ಸೆಳೆಯಲಿವೆ' ಎಂದು ಎಂ. ಜಗದೀಶ್ ತಿಳಿಸಿದರು.

ಗಾಜಿನ ಮನೆಯಲ್ಲಿ ತೇಜಸ್ವಿ ಅವರ ಪುತ್ಥಳಿ, 'ನಿರುತ್ತರ'ದ ಅವರ ಮನೆ, ನಿಸರ್ಗದ ಮಡಿಲಲ್ಲಿ ಇರುವ ಬೃಹತ್ ಬೆಟ್ಟದ ಮಾದರಿ ನಿರ್ಮಾಣ, ಕೃತಕವಾಗಿ ನಿರ್ಮಿಸುವ ಕಾಡಿನಲ್ಲಿ ತೇಜಸ್ವಿ ಅವರ ಭಾವಚಿತ್ರ ರೂಪಿಸಲಾಗುತ್ತದೆ. ಇದರ ಜೊತೆಗೆ ಜೇನುಗೂಡು, ಝರಿ, ಕೆರೆ, ತೇಜಸ್ವಿ ಅವರು ಶಿಕಾರಿಗೆ ತೆರಳುವ ಮಾದರಿಗಳನ್ನು ನಿರ್ಮಿಸುವ ಬಗ್ಗೆ ಚರ್ಚೆಗಳು ನಡೆಯುತ್ತಿವೆ' ಎಂದು ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ತಿಳಿಸಿದರು.

'ಕಾಡು, ಚಿಟ್ಟೆ, ಕೀಟ ಪ್ರಪಂಚ, ಹಕ್ಕಿಗಳು, ಕರ್ವಾಲೊ ಕಾದಂಬರಿಯಲ್ಲಿ ಬರುವ [illegible] ಎಂಬ ನಾಯಿ, ಕೃಷ್ಣೇಗೌಡರ ಆನೆ, ತೇಜಸ್ವಿ ಅವರ ಸ್ಕೂಟರ್, ಜೀಪು ಸೇರಿದಂತೆ ಅವರ ಜೀವನದ ಪ್ರಮುಖ ಘಟನೆಗಳ ಮಾಹಿತಿ ನೀಡುವ ಛಾಯಾಚಿತ್ರಗಳು, ಸಂಕ್ಷಿಪ್ತ ಮಾಹಿತಿ ಒದಗಿಸುವ ಬ್ಯಾನರ್‌ಗಳನ್ನು ಅಳವಡಿಸಲಾಗುತ್ತದೆ' ಎಂದು ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಎಂ. ಜಗದೀಶ್ 'ಪ್ರಜಾವಾಣಿ'ಗೆ ತಿಳಿಸಿದರು.

'ತೇಜಸ್ವಿ ಅವರು ರಚಿಸಿದ ನಾಟಕಗಳ ಪ್ರದರ್ಶನ, ತೇಜಸ್ವಿ ಒಡನಾಡಿಗಳು, ಕುಟುಂಬದವರೊಂದಿಗೆ ಸಂವಾದ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ. ತೇಜಸ್ವಿ ಅವರ ಮಾಯಾಲೋಕವನ್ನು ಇಂದಿನ ಯುವ ಸಮುದಾಯಕ್ಕೆ ಪರಿಚಯಿಸಲಾಗುತ್ತದೆ' ಎಂದು ಹೇಳಿದರು.


ಲಾಲ್‌ಬಾಗ್‌ನ ಗಾಜಿನಮನೆ –ಪ್ರಜಾವಾಣಿ ಚಿತ್ರ

'ತೇಜಸ್ವಿ ಅವರ ಜೀವನಾಧಾರಿತ ಪುಷ್ಪ ಪ್ರದರ್ಶನದಲ್ಲಿ ಯಾವ ರೀತಿಯ ಕಾರ್ಯಕ್ರಮಗಳನ್ನು ರೂಪಿಸಬೇಕು ಎಂಬುದರ ಕುರಿತು ತೇಜಸ್ವಿ ಪ್ರತಿಷ್ಠಾನ ಹಾಗೂ ಕುವೆಂಪು ಪ್ರತಿಷ್ಠಾನದ ಪದಾಧಿಕಾರಿಗಳು, ತೇಜಸ್ವಿ ಅವರ ಮಕ್ಕಳು ಹಾಗೂ ಒಡನಾಡಿಗಳೊಂದಿಗೆ ಮಂಗಳವಾರ ನಡೆದ ಸಭೆಯಲ್ಲಿ ಚರ್ಚಿಸಲಾಗಿದೆ.

> ವಿಶಿಷ್ಟ ಬರಹದ ಮೂಲಕ ಅಕ್ಷರಾರ್ಥ ಓದುಗರನ್ನು ಸೆಳೆದಿರುವ ತೇಜಸ್ವಿ ಸಾಹಿತ್ಯದ ಜೊತೆಗೆ ಹತ್ತಾರು ಮುಖಗಳನ್ನು ನೋಡಬಹುದು. ಅವರ ಬದುಕನ್ನು ನಿಸರ್ಗದೊಂದಿಗೆ ಪ್ರಸ್ತುತ ಪಡಿಸಲಾಗುವುದು
> **ಎಂ. ಜಗದೀಶ್**
> ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ

ಒಂದು ವಾರದಲ್ಲಿ ರೂಪುರೇಷೆಗಳನ್ನು ಸಿದ್ಧಪಡಿಸಲಾಗುವುದು' ಎಂದರು.

'ತೇಜಸ್ವಿ ಅವರಿಗೆ ಸಂಬಂಧಿಸಿದ ವ್ಯಂಗ್ಯಚಿತ್ರಗಳ ಪ್ರದರ್ಶನ, ಅವರ ಪುಸ್ತಕಗಳ ಪ್ರದರ್ಶನ ಹಾಗೂ ಮಾರಾಟಕ್ಕೆ ವ್ಯವಸ್ಥೆ ಮಾಡಲಾಗುತ್ತದೆ. ಅಲ್ಲದೆ, ಅವರು ನೀಡಿರುವ ಸಂದರ್ಶನಗಳನ್ನು ಎಲ್‌ಇಡಿ ಪರದೆಗಳ ಮೇಲೆ ಪ್ರಸಾರ ಮಾಡಲಾಗುತ್ತದೆ' ಎಂದರು.

'ನಿಸರ್ಗದ ಮಡಿಲಲ್ಲಿ ತೇಜಸ್ವಿ ಅವರ ಬದುಕಿನ ಪರಿಯನ್ನು ಪುಷ್ಪಗಳ ಮೂಲಕ ಅನಾವರಣ ಮಾಡಲಾಗುತ್ತದೆ' ಎಂದು ಹೇಳಿದರು.

ಸುದ್ದಿ 2 ನಿಮಿಷ

ರಾಜ್ಯದಲ್ಲಿ ಅಘೋಷಿತ ತುರ್ತು ಪರಿಸ್ಥಿತಿ: ಶೋಭಾ ಆರೋಪ

ಬೆಂಗಳೂರು: ರಾಜ್ಯದ ಕಾಂಗ್ರೆಸ್ ಸರ್ಕಾರವು ದ್ವೇಷ ಭಾಷಣ ಮತ್ತು ದ್ವೇಷಾಪರಾಧ ತಡೆ ಮಸೂದೆ ಹೆಸರಿನಲ್ಲಿ ಅಘೋಷಿತ ತುರ್ತುಪರಿಸ್ಥಿತಿ ಜಾರಿಗೆ ಮುಂದಾಗಿದೆ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಆರೋಪಿಸಿದರು.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪ್ರತಿಪಕ್ಷಗಳ ಭಾರಿ ವಿರೋಧದ ಮಧ್ಯೆ ಸರ್ಕಾರವು ವಿಧಾನಮಂಡಲದಲ್ಲಿ ಈ ಮಸೂದೆಗೆ ಅಂಗೀಕಾರ ಪಡೆದುಕೊಂಡಿದೆ. ಆದರೆ ಈ ಮಸೂದೆಗೆ ಅಂಕಿತ ಹಾಕಬೇಡಿ ಎಂದು ಕೋರಿ, ರಾಜ್ಯಪಾಲರಿಗೆ ಪತ್ರ ಬರೆದಿದ್ದೇನೆ' ಎಂದರು.

'ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಕೆಲಸವನ್ನು ಈ ಸರ್ಕಾರ ಮಾಡುತ್ತಲೇ ಇದೆ. ಫ್ಯಾಕ್ಟ್‌ಚೆಕ್ ಹೆಸರಿನಲ್ಲಿ ಜನರ ಬಾಯಿಮುಚ್ಚಿಸಲು ಐಟಿಸೆಲ್ ಒಂದನ್ನು ತೆರೆದಿದೆ. ಸಚಿವ ಪ್ರಿಯಾಂಕ್ ಖರ್ಗೆ ಅವರ ಆಪ್ತರು, ಖಾಸಗಿ ವ್ಯಕ್ತಿಗಳನ್ನು, ಸರ್ಕಾರದ ಪರವಾದ ಸಂಸ್ಥೆಗಳನ್ನು ಈ ಐಟಿಸೆಲ್‌ನಲ್ಲಿ ಕೂರಿಸಿದೆ. ಅದರ ಮುಂದುವರಿದ ಭಾಗವಾಗಿ ಈ ಮಸೂದೆ ತರುತ್ತಿದ್ದಾರೆ' ಎಂದು ದೂರಿದರು.



'ಫ್ಯಾಕ್ಟ್‌ಚೆಕ್ ಐಟಿಸೆಲ್‌ನಲ್ಲಿ ಟೂಲ್‌ಕಿಟ ಟೆಕ್ನಾಲಜೀಸ್‌ನ ಸಾಗರ್ ಮಿಶ್ರಾ, ರಾಜ್ಯಪಾಲರ ಗೋವಿಂದ ರೆಡ್ಡಿ, ಸ್ಪೆಕ್ಟ್ ರಾಯ್, ಗೌರಿ ಮೀಡಿಯಾ ಟ್ರಸ್ಟ್‌ನ ಗುರುಪ್ರಸಾದ್ ಡಿ.ಎನ್. ಮತ್ತು ನ್ಯೂಸ್ ಪ್ಲಸ್‌ನ ಪುನೀತ್ ಇದ್ದಾರೆ. ಸರ್ಕಾರದ ವಿರುದ್ಧ ಮಾತನಾಡಿದರೆ, ಇವರು ಸರ್ಕಾರಕ್ಕೆ ವರದಿ ಕೊಡುತ್ತಾರೆ. ಆಗ ಸರ್ಕಾರ ಪ್ರಕರಣ ದಾಖಲಿಸುತ್ತಿದೆ. ನಮ್ಮ ಹಲವು ಶಾಸಕರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ' ಎಂದರು.

ಕಾಂಗ್ರೆಸ್‌ನಲ್ಲಿ ಹೈ ಇದೆ, ಕಮಾಂಡ್ ಉಳಿದಿಲ್ಲ: ಜೋಶಿ

ಚಿಕ್ಕಮಗಳೂರು: 'ಕಾಂಗ್ರೆಸ್ ಒಳಜಗಳದಿಂದ ಕರ್ನಾಟಕದಲ್ಲಿ ಅಸ್ಥಿರ ವಾತಾವರಣ ನಿರ್ಮಾಣವಾಗಿದೆ. ಕಾಂಗ್ರೆಸ್‌ನಲ್ಲಿ ಈಗ 'ಹೈ' ಇದೆ, ಆದರೆ 'ಕಮಾಂಡ್' ಎಂಬುದು ಉಳಿದಿಲ್ಲ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಟೀಕಿಸಿದರು.

ಬಾಳೆಹೊನ್ನೂರಿನಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮುಖ್ಯಮಂತ್ರಿ ಬದಲಾವಣೆ ವಿಷಯದಲ್ಲಿ ಒಪ್ಪಂದ ಆಗಿಲ್ಲ ಎಂದು ಸಿದ್ದರಾಮಯ್ಯ ಹೇಳುತ್ತಾರೆ. ಡಿ.ಕೆ. ಶಿವಕುಮಾರ್ ಅವರು ಆಗಿದೆ ಎನ್ನುತ್ತಾರೆ. ಕಾಂಗ್ರೆಸ್ ಹೈಕಮಾಂಡ್‌ಗೆ ಈ ಗೊಂದಲ ಸರಿಪಡಿಸಲು ಏಕೆ ಆಗುತ್ತಿಲ್ಲ' ಎಂದು ಪ್ರಶ್ನಿಸಿದರು.

'ಇಂತಹ ಗೊಂದಲಗಳಿಂದ ರಾಜ್ಯದಲ್ಲಿ ಅರಾಜಕತೆ ಉಂಟಾಗಿದೆ. ಆಡಳಿತ ಯಂತ್ರ ಕುಸಿದಿದೆ. ಪರಿಣಾಮವಾಗಿ ಭ್ರಷ್ಟಾಚಾರ ಮತ್ತಷ್ಟು ಹೆಚ್ಚಾಗಿದೆ. ಕಾಂಗ್ರೆಸ್ ಎಂದರೆ ಭ್ರಷ್ಟಾಚಾರ, ಭ್ರಷ್ಟಾಚಾರ ಎಂದರೆ ಕಾಂಗ್ರೆಸ್ ಎಂಬಂತಾಗಿದೆ' ಎಂದರು.



ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್ ಆಯೋಜಿಸಿದ್ದ ಯುವ ಸಂಭ್ರಮ ಕಾರ್ಯಕ್ರಮದಲ್ಲಿ ಧನ್ಯದಿನೇಶ್ ರುದ್ರಪಟ್ಟಣಂ ಹಾಗೂ ಕಾರ್ತಿಕೇಯ ಶರ್ಮಾ ಅವರಿಗೆ 'ಅನನ್ಯ ನಾದಜ್ಯೋತಿ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಎನ್‌. ರಘು, ಅನನ್ಯ ಆರ್‌. ವಿ. ರಾಘವೇಂದ್ರ, ಗಾಯಕಿ ಪಂಕಜಾ ರಾಮಚಂದ್ರ ಉಪಸ್ಥಿತರಿದ್ದರು

ಜೀವನ್‌ಬಿಮಾ ನಗರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು

ಜೀಪ್ ಡಿಕ್ಕಿ: ಪಾದಚಾರಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ಜೀವನ್‌ಬಿಮಾ ನಗರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ರಸ್ತೆಯಲ್ಲಿ ಶುಕ್ರವಾರ ರಾತ್ರಿ ಸಂಭವಿಸಿದ ಅಪಘಾತದಲ್ಲಿ ಪಾದಚಾರಿಯೊಬ್ಬರು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

ಜೆ.ಬಿ. ನಗರದ ಆನಂದಪುರದ ನಿವಾಸಿ ಜಯಪಾಲ (60) ಮೃತಪಟ್ಟವರು.

ಮಹಿಳೆಯೊಬ್ಬರು ವೇಗವಾಗಿ ಜೀಪ್ ಚಾಲನೆ ಮಾಡಿಕೊಂಡು ಬರುತ್ತಿದ್ದರು. ಹಳೆ ವಿಮಾನ ನಿಲ್ದಾಣ ರಸ್ತೆಯ ಮರುಗೇಶ್‌ಪಾಳ್ಯದ ರಾಜೇಶ್ವರಿ ಚಿತ್ರಮಂದಿರದ ಬಳಿ ಜಯಪಾಲ ಅವರು ರಸ್ತೆ ದಾಟುತ್ತಿದ್ದಾಗ ಜೀಪ್ ಡಿಕ್ಕಿ ಹೊಡೆದಿದೆ. ಗಂಭೀರವಾಗಿ ಗಾಯಗೊಂಡಿದ್ದ ಅವರು ಮೃತಪಟ್ಟಿದ್ದಾರೆ ಎಂದು ಸಂಚಾರ ಪೊಲೀಸರು ಹೇಳಿದರು.

ಐಎಸ್‌ಆರ್‌ಒ ಜಂಕ್ಷನ್ ಕಡೆಯಿಂದ ಎಚ್‌ಎಎಲ್ ಕಡೆಗೆ ಜೀಪ್ ತೆರಳುತ್ತಿತ್ತು. ಅತಿವೇಗ ಹಾಗೂ ಅಜಾಗರೂಕತೆಯ ಚಾಲನೆಯಿಂದ ಅಪಘಾತ ಸಂಭವಿಸಿದೆ ಎಂಬುದು ಕಂಡುಬಂದಿದೆ. ಜೀಪ್ ವಶಕ್ಕೆ ಪಡೆದು, ಚಾಲನೆ ಮಾಡುತ್ತಿದ್ದ ಅಂಜಲಿ ನರೇಂದ್ರನ್ ಅವರನ್ನು ವಿಚಾರಣೆಗೆ ಒಳಪಡಿಸಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಜಯಪಾಲ ಅವರ ಪುತ್ರ ಶಿವಕುಮಾರ್ ಅವರು ನೀಡಿದ ದೂರು ಆಧರಿಸಿ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದೂ ತಿಳಿಸಿದರು.

ಗುಂಡಿ ತಪ್ಪಿಸಲು ಯತ್ನ: ಸವಾರ ಸಾವು

ನೆಲಮಂಗಲ: ರಸ್ತೆ ಗುಂಡಿ ತಪ್ಪಿಸಲು ಹೋಗಿ ನಿಯಂತ್ರಣ ತಪ್ಪಿ, ಕೆಳಗೆ ಬಿದ್ದ ಪರಿಣಾಮ ದ್ವಿಚಕ್ರ ವಾಹನ ಸವಾರ ಮೃತಪಟ್ಟಿರುವ ಘಟನೆ ಶುಕ್ರವಾರ ನಡೆದಿದೆ.


ತಬ್ರೇಜ್

ತಬ್ರೇಜ್(29) ಮೃತ ಯುವಕ. ಪಟ್ಟಣದ ಬಿ.ಎಚ್ ರಸ್ತೆಯ ಲಯನ್ಸ್ ಕ್ಲಬ್ ಬಳಿ ನೀರಿನ ಪೈಪ್‌ಲೈನ್ ಅಳವಡಿಸಲು ರಸ್ತೆಗೆ ಅಡ್ಡಲಾಗಿ ಅಗೆದಿದ್ದ ಗುಂಡಿಯನ್ನು ಸರಿಯಾಗಿ ಮುಚ್ಚಿರಲಿಲ್ಲ. ಬುಧವಾರ ಬೈಕ್‌ನಲ್ಲಿ ಹೋಗುವಾಗ ಕೆಳಗೆ ಬಿದ್ದು ಗಾಯಗೊಂಡಿದ್ದ ಅವರನ್ನು ನಿಮ್ಹಾನ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು.

'ಅಪಘಾತಕ್ಕೆ ನಗರಸಭೆ ನಿರ್ಲಕ್ಷ್ಯವೇ ಕಾರಣವಾಗಿದೆ' ಆರೋಪಿಸಿ ಕುಟುಂಬಸ್ಥರು, ಸ್ನೇಹಿತರು ಪ್ರತಿಭಟಿಸಿದರು. 'ಅವರಿಗೆ ಪತ್ನಿ ಮತ್ತು ಇಬ್ಬರು ಮಕ್ಕಳಿದ್ದಾರೆ. ಅವರನ್ನು ಯಾರು ನೋಡಿಕೊಳ್ಳುತ್ತಾರೆ' ಎಂದು ಪ್ರಶ್ನಿಸಿದರು.

ಅಪರಾಧ ಸುದ್ದಿ

ಟ್ರಾವೆಲ್ಸ್ ಏಜೆನ್ಸಿ ಮಾಲೀಕ ಆತ್ಮಹತ್ಯೆ

ನಗರದ ಕೃಷ್ಣದೇವರಾಯ ರೈಲು ನಿಲ್ದಾಣದ ಬಳಿ ಟ್ರಾವೆಲ್ಸ್ ಏಜೆನ್ಸಿ ಮಾಲೀಕರೊಬ್ಬರು ಚಲಿಸುತ್ತಿದ್ದ ರೈಲಿಗೆ ತಲೆಕೊಟ್ಟು ಶುಕ್ರವಾರ ರಾತ್ರಿ ಆತ್ಮಹತ್ಯೆ ಮಾಡಿದ್ದಾರೆ.

ಉಡುಪಿ ಜಿಲ್ಲೆ ಬ್ರಹ್ಮಾವರದ ಕಿಶೋರ್ ಕುಮಾರ್ ಶೆಟ್ಟಿ(40) ಆತ್ಮಹತ್ಯೆ ಮಾಡಿಕೊಂಡವರು.

ಕಿಶೋರ್ ಕುಮಾರ್ ಶೆಟ್ಟಿ ಅವರು ಉಡುಪಿಯಿಂದ ಹಲವು ವರ್ಷಗಳ ಹಿಂದೆಯೇ ಬೆಂಗಳೂರಿಗೆ ಬಂದು ಗೋವಿಂದರಾಜ ನಗರದಲ್ಲಿ ಕುಟುಂಬದವರ ಜತೆಗೆ ವಾಸವಾಗಿದ್ದರು.

ಟ್ರಾವೆಲ್ಸ್ ಏಜೆನ್ಸಿಯಲ್ಲಿ ಉಂಟಾದ ನಷ್ಟದಿಂದ ಆರ್ಥಿಕ ಸಮಸ್ಯೆಗೆ ಸಿಲುಕಿದ್ದರು. ಮತ್ತೊಂದೆಡೆ ಈ ಹಿಂದೆ ಪಾಲುದಾರಿಕೆಯಲ್ಲಿ ಲಕ್ಷಾಂತರ ರೂಪಾಯಿ ವಂಚನೆ ಆಗಿತ್ತು. ಈ ಸಂಬಂಧ ಗೋವಿಂದರಾಜನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು ಎಂದು ಮೂಲಗಳು ತಿಳಿಸಿವೆ.

ಈ ಮಧ್ಯೆಯೂ ಟ್ರಾವೆಲ್ಸ್‌ನ ಸಿಬ್ಬಂದಿಗೆ ವೇತನ ನೀಡಬೇಕಾಗಿತ್ತು. ಆದರೆ, ಅಷ್ಟೊಂದು ಹಣ ಅವರ ಬಳಿ ಇರಲಿಲ್ಲ. ಹೀಗಾಗಿ ಆರ್ಥಿಕ ಸಮಸ್ಯೆಯಿಂದ ಬೇಸತ್ತು ಅವರು ಶುಕ್ರವಾರ ರಾತ್ರಿ ಕೃಷ್ಣದೇವರಾಯ ರೈಲು ನಿಲ್ದಾಣದ ಬಳಿ ಬಂದು ಚಲಿಸುತ್ತಿದ್ದ ರೈಲಿಗೆ ತಲೆಕೊಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ತನಿಖೆ ನಡೆಯುತ್ತಿದೆ ಎಂದು ಮೂಲಗಳು ತಿಳಿಸಿವೆ.

ಸಿಟಿ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಾಳು ಬಾವಿಗೆ ಬಿದ್ದು ವ್ಯಕ್ತಿ ಸಾವು

ದೊಡ್ಡಬಳ್ಳಾಪುರ: ತಾಲ್ಲೂಕಿನ ಪುಟ್ಟಯ್ಯನ ಅಗ್ರಹಾರದಲ್ಲಿ ಶುಕ್ರವಾರ ರಾತ್ರಿ ವ್ಯಕ್ತಿಯೊಬ್ಬರು ಸುಮಾರು 40 ಅಡಿ ಆಳದ ಪಾಳುಬಾವಿಗೆ ಬಿದ್ದು ಮೃತಪಟ್ಟಿದ್ದಾರೆ.

ಘಟನೆ ಶನಿವಾರ ಬೆಳಕಿಗೆ ಬಂದಿದ್ದು, ದೊಡ್ಡಬೆಳವಂಗಲ ಠಾಣೆ ಪೊಲೀಸರು, ಅಗ್ನಿಶಾಮಕ ಸಿಬ್ಬಂದಿ ತರಳಿ ಶವವನ್ನು ಹೊರಕ್ಕೆ ತೆಗೆದಿದ್ದಾರೆ.

ಮೃತರ ಬಳಿ ಇದ್ದ ಮೊಬೈಲ್ ಪರಿಶೀಲಿಸಿದಾಗ ಅವರು ಬೆಂಗಳೂರಿನ ಎಂ.ಎಸ್.ಪಾಳ್ಯ ವಾಸಿ ಮೊಣ್ಣಯ್ಯ ಮುತ್ತು (59) ಎಂದು ಗುರುತಿಸಲಾಗಿದೆ. ದೊಡ್ಡಬೆಳವಂಗಲ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕರ್ತವ್ಯ ಲೋಪ: ಪಿಎಸ್‌ಐ ಅಮಾನತು

ಬೆಂಗಳೂರು: ರೌಡಿಶೀಟರ್ ದಾಸನ ಜತೆಗೆ ಕೇಕ್ ಕತ್ತರಿಸಿ ಉಡುಗೊರೆ ಪಡೆದುಕೊಂಡಿದ್ದ ಯಲಹಂಕ ಉಪನಗರ ಪೊಲೀಸ್ ಠಾಣೆಯ ಪಿಎಸ್‌ಐ ನಾಗರಾಜ್ ಅವರನ್ನು ಅಮಾನತುಗೊಳಿಸಿ ಪೂರ್ವ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಆದೇಶಿಸಿದ್ದಾರೆ.

ಯಲಹಂಕ ಉಪ ವಿಭಾಗದ ಸಹಾಯಕ ಕಮಿಷನರ್, ಪೊಲೀಸ್ ಇನ್‌ಸ್ಪೆಕ್ಟರ್ ಸಲ್ಲಿಸಿದ ವರದಿ ಹಾಗೂ ಅದರ ಜತೆಗೆ ಲಗತ್ತಿಸಿರುವ ದಾಖಲೆಗಳನ್ನು ಆಧರಿಸಿ ಅಮಾನತು ಮಾಡಲಾಗಿದೆ ಎಂದು ಪೊಲೀಸ್ ಮೂಲಗಳು ಹೇಳಿವೆ.

'ರಿಯಲ್ ಎಸ್ಟೇಟ್‌ಗೆ ಸಂಬಂಧಿಸಿದಂತೆ ಅಕ್ರಮ ಚಟುವಟಿಕೆಯಲ್ಲಿ ದಾಸ ಭಾಗಿ ಆಗಿದ್ದಾನೆ. ಆತನ ಜತೆಗೆ ಫೋಟೊ ತೆಗೆಸಿಕೊಂಡಿದ್ದು, ಸಮವಸ್ತ್ರದಲ್ಲಿ ಆತನ ಜತೆಗೆ ಜನ್ಮದಿನಾಚರಣೆಯ ಕೇಕ್ ಇಟ್ಟುಕೊಂಡು ಉಡುಗೊರೆ ಪಡೆಯುತ್ತಿರುವ ಫೋಟೊಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿವೆ. ಈ ಘಟನೆಯಿಂದ ಇಲಾಖೆಗೆ ಕೆಟ್ಟಹೆಸರು ಬರುವುದರ ಜತೆಗೆ ಸಮಾಜಕ್ಕೆ ಕೆಟ್ಟ ಸಂದೇಶ ನೀಡಿದಂತಾಗುತ್ತದೆ. ನಾಗರಾಜ್ ಅವರು ದುರ್ನಡತೆ ತೋರಿ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಇಲಾಖೆ ವಿಚಾರಣೆ ಕಾಯ್ದಿರಿಸಿ ಅಮಾನತು ಮಾಡಲಾಗಿದೆ' ಎಂದು ಆದೇಶದಲ್ಲಿ ತಿಳಿಸಲಾಗಿದೆ.

ನಿಧನ ವಾರ್ತೆ

ದೊಡ್ಡಬೊಮಯ್ಯ




ಬೆಂಗಳೂರು: ಕರ್ನಾಟಕ ಪತ್ರಕರ್ತರ ಸಹಕಾರ ಸಂಘದ ಉಪಾಧ್ಯಕ್ಷ ದೊಡ್ಡಬೊಮಯ್ಯ (63) ಅವರು ಶನಿವಾರ ನಿಧನರಾದರು.

ಅವರಿಗೆ ಪತ್ನಿ, ಪುತ್ರ, ಪುತ್ರಿ ಇದ್ದಾರೆ. ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನ ರೊಪ್ಪ ಗ್ರಾಮದಲ್ಲಿ ಸಂಜೆ ಅಂತ್ಯಕ್ರಿಯೆ ನೆರವೇರಿತು.

ಸಂಜೆವಾಣಿ, ಇಂದು ಸಂಜೆಯಲ್ಲಿ ವರದಿಗಾರ, ಆಕಾಶವಾಣಿ ಮತ್ತು ದೂರದರ್ಶನದಲ್ಲಿ ಅರೆಕಾಲಿಕ ಸಹಾಯಕ ಸುದ್ದಿ ಸಂಪಾದಕರಾಗಿ ಕೆಲಸ ಮಾಡಿದ್ದರು. ಬೆಳಗಾವಿಯಲ್ಲಿ ನಡೆದ ವಿಧಾನಮಂಡಲ ಕಲಾಪಗಳ ವರದಿ ಮುಗಿಸಿ, ಶನಿವಾರ ಬೆಳಿಗ್ಗೆ ಬೆಂಗಳೂರಿಗೆ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ವಾಪಸ್ ಆಗಿದ್ದರು. ಮೆಜೆಸ್ಟಿಕ್‌ನಿಂದ ಬಾಗಲೂರಿನಲ್ಲಿರುವ ತಮ್ಮ ನಿವಾಸಕ್ಕೆ ತೆರಳಲು ಬಿಎಂಟಿಸಿ ಬಸ್‌ಗೆ ಹತ್ತಿದ್ದ ಸಂದರ್ಭದಲ್ಲಿ ಹೃದಯಸ್ತಂಭನವಾಗಿ ಕುಸಿದು ಬಿದ್ದಿದ್ದರು. ಸಹ ಪ್ರಯಾಣಿಕರು ಉಪಚರಿಸಿದರೂ ಬಸ್‌ನಲ್ಲೇ ಅವರು ನಿಧನರಾದರು.

ಗೋಪಿಸ್ವಾಮಿ



ಬೆಂಗಳೂರು: ಟಿಪಿಎಂಎಲ್ ಮುದ್ರಣ ವಿಭಾಗದಲ್ಲಿ ಕೆಲಸ ಮಾಡಿ ನಿವೃತ್ತರಾಗಿದ್ದ ಆರ್.ಟಿ. ನಗರದ ಚೋಳನಾಯಕನಹಳ್ಳಿ ನಿವಾಸಿ ಗೋಪಿಸ್ವಾಮಿ (81) ಅಲ್ಪಕಾಲದ ಅನಾರೋಗ್ಯದಿಂದ ಶನಿವಾರ ನಿಧನರಾದರು.

ಅವರಿಗೆ ಪುತ್ರಿ ಇದ್ದಾರೆ. ಮಧ್ಯಾಹ್ನ ಹೆಬ್ಬಾಳದ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಬಿ.ಲಲಿತಾ



ನೆಲಮಂಗಲ: ಅನಾರೋಗ್ಯದಿಂದ ಬಳಲುತ್ತಿದ್ದ ಬಿ.ಲಲಿತಾ (51) ಅವರು ಶುಕ್ರವಾರ ರಾತ್ರಿ ನಿಧನರಾದರು.

ಇವರಿಗೆ ಪತಿ, ನಿವೃತ್ತ ಗ್ರಂಥಪಾಲಕ ಬಿ.ಲಕ್ಷ್ಮೀನಾರಾಯಣ, ಪುತ್ರಿ, ಇಬ್ಬರು ಪುತ್ರರು ಇದ್ದಾರೆ. ತಾಲ್ಲೂಕಿನ ಗುರುವನ ಹಳ್ಳಿಯ ಜಮೀನಿನಲ್ಲಿ ಶನಿವಾರ ಮಧ್ಯಾಹ್ನ ಅಂತ್ಯಕ್ರಿಯೆ ನಡೆಯಿತು.

ನಗರದಲ್ಲಿ ಇಂದು

ಸುವರ್ಣ ಮಹೋತ್ಸವ: ಶ್ರೀಮದ್ ಭಗವದ್ಗೀತಾ ಹೋಮ, ಅತಿಥಿಗಳು: ಎಸ್.ಆರ್. ಲೀಲಾ, ಅಶೋಕ ಹಾರನಹಳ್ಳಿ, ಆಯೋಜನೆ: ಪಿ.ಎನ್. ರಾಮಚಂದ್ರ ಅಯ್ಯರ್ ಟ್ರಸ್ಟ್, ಸ್ಥಳ: ಟಿಟಿಡಿ ಕಲ್ಯಾಣ ಮಂಟಪ, ಮಲ್ಲೇಶ್ವರ, ಬೆಳಿಗ್ಗೆ 6ರಿಂದ

ಸೇವಾ ಸಂಕಲ್ಪ: ರಾಮ ಮಂದಿರದಲ್ಲಿ ಗಣಪತಿ ಪೂಜೆ, ಆಯ್ದ ತಂಡಗಳ ನೃತ್ಯ ಸ್ಪರ್ಧೆ, ಹುಲಿ ಹೆಜ್ಜೆ, ಸೇವಾ ಸಂಕಲ್ಪ ಮೆರವಣಿಗೆ, ಜನಪದ ಜಾತ್ರೆ, ಹೋಳಿ ಕುಣಿತ, ಪಂಜಿನ ಮೆರವಣಿಗೆ, ಆಯೋಜನೆ: ಅಭಯ ಸೇವಾ ಫೌಂಡೇಷನ್, ಸ್ಥಳ: ಶ್ರೀರಾಮ ಮಂದಿರ ಆಟದ ಮೈದಾನ, ರಾಜಾಜಿನಗರ, ಬೆಳಿಗ್ಗೆ 7ರಿಂದ

21ನೇ ವಾರ್ಷಿಕೋತ್ಸವದ ಅಂಗವಾಗಿ ಮಹಾರುದ್ರಯಾಗ: ಉಪಸ್ಥಿತಿ: ಕೆ. ಗೋಪಾಲಯ್ಯ , ಅಸಗೋಡು ಜಯಸಿಂಹ, ಮಲ್ಲಾರಿರಾವ್, ಬಿ.ಎಸ್. ರಾಘವೇಂದ್ರ ಭಟ್, ಆಯೋಜನೆ: ಮಹಾಲಕ್ಷ್ಮೀಪುರ ಬ್ರಾಹ್ಮಣ ಸಭಾ, ಸ್ಥಳ: ವಾಸವಿ ಕನ್ನಿಕಾ ಪರಮೇಶ್ವರಿ ದೇವಸ್ಥಾನ, ಮಹಾಲಕ್ಷ್ಮೀ ಲೇಔಟ್, ಬೆಳಿಗ್ಗೆ 7ರಿಂದ

ವಾಕಥಾನ್‌ಗೆ ಚಾಲನೆ: ಎಸ್. ಸುರೇಶ್ ಕುಮಾರ್, ಅತಿಥಿಗಳು: ಜನಾರ್ದನ್ ಪಿ.ಎಸ್., ಬಾಬು ಯು.ವಿ., ಎನ್. ರವಿಶಂಕರ್, ಮಂಜುನಾಥ್ ಹೆಗಡೆ, ನಮಿತಾ ದೇಸಾಯಿ, ಆಯೋಜನೆ: ಪ್ರಶಾಂತಿ ಆಯುರ್ವೇದಿಕ್ ಸೆಂಟರ್, ಸ್ಥಳ: ಎಸ್‌ಎಚ್‌ವಿಎನ್‌ಎಂ ಸರ್ಕಾರಿ ಬಾಲಕಿಯರ ಪದವಿಪೂರ್ವ ಕಾಲೇಜು, ಮಲ್ಲೇಶ್ವರ,

ವಿಜ್ಞಾನ ಮತ್ತು ಕಲಾ ಮೇಳದ ಉದ್ಘಾಟನೆ: ಎಂ. ಕೃಷ್ಣಪ್ಪ, ಅತಿಥಿಗಳು: ಡಿ. ಶಶಿಕುಮಾರ್, ಗಿರಿಜಮ್ಮ, ಕೃಷ್ಣ, ಮಹೇಂದ್ರ ಮುನ್ನೋತ್, ಆಯೋಜನೆ ಮತ್ತು ಸ್ಥಳ: ಗುರುಕುಲ ಇಂಟರ್ ನ್ಯಾಷನಲ್ ಶಾಲೆ, ಮಾಗಡಿ ರಸ್ತೆ, ಬೆಳಿಗ್ಗೆ 8.30

ಎಸ್.ವಿ. ನಾರಾಯಣಸ್ವಾಮಿ ರಾವ್ ಜನ್ಮ ಶತಮಾನೋತ್ಸವದ ಸಮಾರೋಪ, 101 ಜನ್ಮದಿನದ ಸಂಭ್ರಮಾಚರಣೆ, 'ಎಸ್.ವಿ.ಎನ್ ರಾವ್ ಜನ್ಮ ಶತಮಾನೋತ್ಸವ' ಸ್ಮಾರಕ ಜೀವಮಾನ ಸಾಧನೆ ಪ್ರಶಸ್ತಿ ಪ್ರದಾನ: ಅತಿಥಿಗಳು: ಸಿ.ಜಿ. ಕೃಷ್ಣದಾಸ್ ನಾಯರ್, ಎಸ್.ಟಿ. ಸೋಮಶೇಖರ್, ಡಿ.ವಿ. ಗುರುಪ್ರಸಾದ್, ಸಂಪತ್ ರಾಜು, ಪ್ರಶಸ್ತಿ ಸ್ವೀಕರಿಸುವವರು: ಎ.ವಿ. ಆನಂದ್, ಬಿ.ಜಿ. ಶ್ರೀನಿವಾಸ್, ಜಿ. ಮಲ್ಲಿಕಾರ್ಜುನ ರಾವ್, ಡಿ. ಸುರೇಂದ್ರ ಕುಮಾರ್, ಎಚ್.ಎನ್. ಸುರೇಶ್, ವಾಸುದೇವ ಮೂರ್ತಿ, ವಿ. ಮಣಿ, ಎಂ. ವಾಸುದೇವ ರಾವ್, ರವೀಂದ್ರ ಯಾವಗಲ್, ಆಯೋಜನೆ: ಶ್ರೀ ರಾಮಸೇವಾ ಮಂಡಲಿ ಟ್ರಸ್ಟ್, ಸ್ಥಳ: ಎಸ್. ವಿ.ಎನ್. ಸ್ಮಾರಕ ಸಭಾಂಗಣ, ನೆಟ್ಟಿಗೆರೆ ಗ್ರಾಮ, ಸೋಮನಹಳ್ಳಿ, ಬೆಳಿಗ್ಗೆ 9.30


ರಮೇಶ್ ಅರವಿಂದ್

ವಿಂಟೇಜ್ ಕಾರ್ ರ್‍ಯಾಲಿಗೆ ಚಾಲನೆ: ರಮೇಶ್ ಅರವಿಂದ್, ಅತಿಥಿಗಳು: ರವಿಪ್ರಕಾಶ್, ಉಮೇಶ್ ಕೆ.ಜಿ., ಶರತ್ ಸುತ್ರವೆ, ಅಭಿಷೇಕ್ ಎಂ.ಸಿ., ಆಯೋಜನೆ: ಪ್ರಶಾಂತಿ ಆಯುರ್ವೇದಿಕ್ ಸೆಂಟರ್, ಸ್ಥಳ: ಪುರಭವನದಿಂದ ಅರಮನೆ ಮೈದಾನ ಗೇಟ್ ಸಂಖ್ಯೆ 6ರವರೆಗೆ, ಬೆಳಿಗ್ಗೆ 8.15

ಪಿ. ಜಯಲಕ್ಷ್ಮಿ ಅಭಯಕುಮಾರ್ ಅವರ 'ಬೆಂಕಿಯಲ್ಲಿ ಅರಳಿದ ಹೂವು' ಪುಸ್ತಕ ಬಿಡುಗಡೆ: ಎಂ. ವೀರಪ್ಪ ಮೊಯಿಲಿ, ಉದ್ಘಾಟನೆ: ಸುರೇಂದ್ರಕುಮಾರ್, ಅಧ್ಯಕ್ಷತೆ: ನೀಲಾವರ ಸುರೇಂದ್ರ ಅಡಿಗ, ಪುಸ್ತಕದ ಕುರಿತು: ಜಾಣಗೆರೆ ವೆಂಕಟರಾಮಯ್ಯ, ಆಯೋಜನೆ: ನಿಖಿಲ್ ನಿಶ್ಚಲ್ ಪ್ರಕಾಶನ, ಸ್ಥಳ: ಮಂಜುನಾಥೇಶ್ವರ ಸ್ವಾಮಿ ಕಲ್ಯಾಣ ಮಂಟಪ, ಬಸವನಗುಡಿ, ಬೆಳಿಗ್ಗೆ 10


ಎಚ್.ಎಸ್. ಶಿವಪ್ರಕಾಶ್

'ಸಾಹಿತ್ಯ ಲೋಕದಲ್ಲಿ ಎಚ್.ಎಸ್. ಶಿವಪ್ರಕಾಶ್' ವಿಚಾರಸಂಕಿರಣ, ಗಾಯನ, ಪುಸ್ತಕ ಬಿಡುಗಡೆ, ರಂಗಗೌರವ: ಅನ್ವರ್ ಅಲಿ, ಉಪಸ್ಥಿತಿ: ಅಜಯ್ ಕುಮಾರ್ ಸಿಂಗ್, ಅಧ್ಯಕ್ಷತೆ: ಎಸ್.ಜಿ. ಸಿದ್ಧರಾಮಯ್ಯ, ಪ್ರಾಸ್ತಾವಿಕ ನುಡಿ: ಎಲ್. ಹನುಮಂತಯ್ಯ, 'ಎಚ್.ಎಸ್. ಶಿವಪ್ರಕಾಶ್–ಬದುಕು, ಬರಹ' ಗೋಷ್ಠಿ: ಸಿರಾಜ್ ಅಹಮದ್, ಎಂ.ಎಸ್. ಆಶಾದೇವಿ, ಅಧ್ಯಕ್ಷತೆ: ಎಲ್. ಎನ್. ಮುಕುಂದರಾಜ್, ಆಯೋಜನೆ: ಭಾಗವತರು, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10ರಿಂದ

'ಜಿ.ವಿ. ಅಯ್ಯರ್' ಒಂದು ನೆನಪು, ಪ್ರಥಮ ವರ್ಷದ ವಾರ್ಷಿಕೋತ್ಸವ: ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಚಾಲನೆ: ಡಿ. ಸುರೇಶ್ ಗೌಡ, ಜಿ.ವೈ. ಪದ್ಮನಾಗರಾಜ್, ಅತಿಥಿಗಳು: ಜಿ. ಬಾಬು, ಅನೂಪ್ ಅಯ್ಯಂಗಾರ್, ಪದ್ಮಾ ಮೂರ್ತಿ, ಸೋಮಸುಂದರಂ, ಎನ್.ಆರ್. ಹೆಗಡೆ, ರಾಘವೇಂದ್ರ, ವೈರಮುಡಿ, ವೈ.ಎಸ್. ಪ್ರಭಾಕರ್, ಆಯೋಜನೆ: ಮಂದಗೆರೆ, ಸ್ಥಳ: ಶೇಷಾದ್ರಿಪುರಂ ಶಿಕ್ಷಣ ದತ್ತಿ ಸಂಸ್ಥೆಯ ಸಭಾಂಗಣ, ಶೇಷಾದ್ರಿಪುರ, ಬೆಳಿಗ್ಗೆ 10

ನರಸಿಂಹ ಪ್ರಶಸ್ತಿ ಪ್ರದಾನ, ಪ್ರತಿಭಾ ಪುರಸ್ಕಾರ ಸಮಾರಂಭ: ಅತಿಥಿಗಳು: ವಿ. ಶ್ರೀಶಾನಂದ, ಉಪಸ್ಥಿತಿ: ಇ. ಗೋಪಾಲಕೃಷ್ಣ ಹೇರ್ಳೆ, ಅಧ್ಯಕ್ಷತೆ: ಪಿ.ಎಂ. ಗಿರಿಧರ ಉಪಾಧ್ಯಾಯ, ಪ್ರಶಸ್ತಿ ಸ್ವೀಕರಿಸುವವರು: ಚಿನ್ಮಯಿ ಬಿ., ಪುಷ್ಪ ಕಪ್ರಿ, ಜಿ. ಪ್ರಕಾಶ ಮಯ್ಯ, ಡಾ.ಎ.ಎಸ್. ಕೃಷ್ಣಮೂರ್ತಿ ಕಾರಂತ, ಕೆ. ತಾರಾನಾಥ ಹೊಳ್ಳ, ಸುದರ್ಶನ ಉರಾಳ, ಆಯೋಜನೆ: ಕೂಟ ಮಹಾಜಗತ್ತು ಸಾಲಿಗ್ರಾಮ–ಬೆಂಗಳೂರು ಅಂಗ ಸಂಸ್ಥೆ, ಸ್ಥಳ: ಗುರುನರಸಿಂಹ ಕಲ್ಯಾಣ ಮಂದಿರ, ದೊಡ್ಡಬಸವಣ್ಣ ದೇವಸ್ಥಾನ ರಸ್ತೆ, ಸಂಜೆ 4

ಕರ್ನಾಟಕ ರಾಜ್ಯೋತ್ಸವ: ಅಧ್ಯಕ್ಷತೆ: ರವಿ ಸುಬ್ರಹ್ಮಣ್ಯ, ಅತಿಥಿಗಳು: ಕೆ. ಬಾಗೇಗೌಡ, ತೇಜಸ್ವಿ ಸೂರ್ಯ, ಎನ್. ಚಲುವರಾಯಸ್ವಾಮಿ, ಎಲ್. ಶ್ರೀನಿವಾಸ್, ಆಯೋಜನೆ: ಶ್ರೀನಗರ ನಾಗರಿಕರ ಹಿತರಕ್ಷಣಾ ವೇದಿಕೆ, ಸ್ಥಳ: ಶ್ರೀನಗರ ಬಸ್ ತಂಗುದಾಣ, ಬೆಳಿಗ್ಗೆ 10ರಿಂದ

ನೂರ್ ಅಹಮದ್ ಅಲಿ ಖಾನ್ ಸ್ಮಾರಕ ದತ್ತಿ 'ಗುರೂಜಿ ಮತ್ತು ರಾಷ್ಟ್ರೀಯ ಚಾರಿತ್ರ್ಯ' ಉಪನ್ಯಾಸ: ಸುಧೀರ್, ಅಧ್ಯಕ್ಷತೆ: ವಿ. ನಾಗರಾಜ್, ಆಯೋಜನೆ ಮತ್ತು ಸ್ಥಳ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 11

ಸಂಗೀತ ಕಛೇರಿ: ಗಾಯನ: ಟಿ.ಎಸ್. ಪಟ್ಟಾಭಿರಾಮ ಪಂಡಿತ್, ಪಿಟೀಲು: ಕೇಶವ್ ಮೋಹನ್ ಕುಮಾರ್, ಮೃದಂಗ: ಬೆಂಗಳೂರು ವಿ. ಪ್ರವೀಣ್, ಮೋರ್ಸಿಂಗ್: ಭಾರದ್ವಾಜ್ ಎಸ್., ಆಯೋಜನೆ: ನಾದ ಸುರಭಿ, ಸ್ಥಳ: ಲೆಕ್ಚರ್ ಥಿಯೇಟರ್, ಗೋಲ್ಡನ್ ಜುಬಿಲಿ ಬ್ಲಾಕ್, ಸೇಂಟ್ ಜಾನ್ಸ್ ಮೆಡಿಕಲ್ ಕಾಲೇಜು ಕ್ಯಾಂಪಸ್, ಕೋರಮಂಗಲ, ಸಂಜೆ 4.15

ವಾರ್ಷಿಕೋತ್ಸವ, ಪೂರ್ವಿ ಪುರಸ್ಕಾರ ಪ್ರದಾನ: ಪುರಸ್ಕಾರ ಸ್ವೀಕರಿಸುವವರು: ನಂದಕುಮಾರ್ ಕುರುಡಿ, ಆಯೋಜನೆ: ಪೂರ್ವಿ ಸಂಗೀತ ಅಕಾಡೆಮಿ, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 4.30

ಸೇಂಟ್ ಮಾರ್ಕ್ಸ್ ಕಲೋತ್ಸವ: ಅತಿಥಿಗಳು: ಅಮೃತಾ ನಾಯ್ಡು, ರಕ್ಷಿತಾ ಕೆ.ಬಿ., ಕಂನಾಡಿಗ ನಾರಾಯಣ್, ಕೆ.ಎಂ. ರೇವಣ್ಣ, ಆಯೋಜನೆ: ಸೇಂಟ್ ಮಾರ್ಕ್ಸ್ ಇಂಗ್ಲಿಷ್ ಶಾಲೆ, ಸ್ಥಳ: ಎಂ.ಇ.ಐ ಗ್ರೌಂಡ್, ಬಾಗಲಗುಂಟೆ, ಹೆಸರಘಟ್ಟ ಮುಖ್ಯರಸ್ತೆ, ಟಿ. ದಾಸರಹಳ್ಳಿ, ಸಂಜೆ 5

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಸ್ತುತಿ ಎಸ್. ಅಣ್ಣಿಗೇರಿ, ಉಪಸ್ಥಿತಿ: ವಸುಂಧರಾ ಸಂಪತ್ ಕುಮಾರ್, ಕಾಮಾಕ್ಷಿ, ವೈ.ಕೆ. ಸಂಧ್ಯಾ ಶರ್ಮಾ, ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ, ಸಂಜೆ 5

ಡಿ.ಪಿ. ಬುರಡೆ ಅವರ ಜನ್ಮ ಶತಾಬ್ದಿ–ನಾದ ನಮನ: ಗಾಯನ: ಧನಂಜಯ ಹೆಗಡೆ, ತಬಲಾ: ರವೀಂದ್ರ ಯಾವಗಲ್, ಹಾರ್ಮೋನಿಯಂ: ವ್ಯಾಸಮೂರ್ತಿ ಕಟ್ಟಿ, ಗಾಯನ: ವೆಂಕಟೇಶ್ ಕುಮಾರ್, ತಬಲಾ: ಕೇಶವ ಜೋಶಿ, ವ್ಯಾಸಮೂರ್ತಿ ಕಟ್ಟಿ, ಆಯೋಜನೆ: ಸಪ್ತಕ್, ಸ್ಥಳ: ಅಖಿಲ ಹವ್ಯಕ ಮಹಾಸಭಾ, ಮಲ್ಲೇಶ್ವರ, ಸಂಜೆ 5.30

ಮಾರ್ಗಶೀರ್ಷೋತ್ಸವ: ಹರಿಕಥೆ: ವಿಶಾಖಾ ಹರಿ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಸುರ ಭಾರತೀ, ಎಚ್‌ಆರ್‌ಬಿಆರ್ ಲೇಔಟ್, ಸಂಜೆ 6.30

ನಾಟಕಗಳ ಪ್ರದರ್ಶನ: ಸಂಜೆ 4ಕ್ಕೆ ಟಿ.ಪಿ. ಕೈಲಾಸಂ ಅವರ 'ಅಮ್ಮಾವ್ರ ಗಂಡ' ನಾಟಕ ಪ್ರದರ್ಶನ: ರಾಜೇಂದ್ರ ಕಾರಂತ್ ಅವರ 'ಮುದ್ದಣ್ಣನ ಪ್ರಮೋಷನ್ ಪ್ರಸಂಗ' ನಾಟಕ ಪ್ರದರ್ಶನ: ಸ್ಥಳ: ಡಾ.ಸಿ. ಅಶ್ವಥ್ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 7

'ಅರಿವಿದ್ದ ದಿನ ನಾನು ಇರುವೆ' ನಾಟಕ ಪ್ರದರ್ಶನ: ನಿರ್ದೇಶನ: ಜಿ.ಕೆ. ಜಯರಾಮ್, ಆಯೋಜನೆ: ಏಕಲವ್ಯ ಪ್ಲೇಯರ್ಸ್, ಸ್ಥಳ: ನ್ಯಾಷನಲ್ ಕಾಲೇಜು, ಜಯನಗರ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಅಂಗವಿಕಲರಿಗೆ ಉದ್ಯೋಗ: ಶೀಘ್ರ ಹೊಸ ನೀತಿ

ಎಸ್‌ಡಿಎ, ಕೆಎಸ್‌ಡಿಸಿ ಮತ್ತು ಅಸಿಸ್‌ಟೆಕ್ ಫೌಂಡೇಷನ್ ಜಂಟಿ ಆಯೋಜನೆಯ 'ಜಾಬ್ ಹಬ್ಬ'ದಲ್ಲಿ ಕೌಶಲಾಭಿವೃದ್ಧಿ ಸಚಿವ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ರಾಜ್ಯದಲ್ಲಿ 20 ಲಕ್ಷಕ್ಕೂ ಹೆಚ್ಚು ಅಂಗವಿಕಲರು
- ಕಾರ್ಪೊರೇಟ್ ಕ್ಷೇತ್ರದಲ್ಲಿ ಅಂಗವಿಕಲರ ಸಂಖ್ಯೆ ಕಡಿಮೆ: ಸಚಿವ

ಬೆಂಗಳೂರು: ಅಂಗವಿಕಲರಿಗೆ ಕೌಶಲ ತರಬೇತಿ ನೀಡಿ ಉದ್ಯೋಗ ಕಲ್ಪಿಸಲು ಸರ್ಕಾರ ಬದ್ಧವಾಗಿದೆ. ಶಿಕ್ಷಣ ಮತ್ತು ಉದ್ಯೋಗದಲ್ಲಿ ಅವಕಾಶ ಕಲ್ಪಿಸಲು ಹೊಸ ನೀತಿಯನ್ನು ರೂಪಿಸಲಾಗುವುದು ಎಂದು ಕೌಶಲಾಭಿವೃದ್ಧಿ ಸಚಿವ ಶರಣಪ್ರಕಾಶ ಪಾಟೀಲ ತಿಳಿಸಿದರು.

ಎಸ್‌ಡಿಎ, ಕೆಎಸ್‌ಡಿಸಿ ಮತ್ತು ಅಸಿಸ್‌ಟೆಕ್ ಫೌಂಡೇಷನ್ ಜಂಟಿಯಾಗಿ ಬಿಎಂಎಸ್ ಮಹಿಳಾ ಕಾಲೇಜಿನಲ್ಲಿ ಅಂಗವಿಕಲರಿಗಾಗಿ ಶನಿವಾರ ಆಯೋಜಿಸಿದ್ದ 'ಜಾಬ್ ಹಬ್ಬ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ರಾಜ್ಯದಲ್ಲಿ 20 ಲಕ್ಷಕ್ಕೂ ಹೆಚ್ಚು ಅಂಗವಿಕಲರಿದ್ದಾರೆ. ಕಾರ್ಪೊರೇಟ್ ಕ್ಷೇತ್ರದಲ್ಲಿ ಅಂಗವಿಕಲರ ಸಂಖ್ಯೆ ಕಡಿಮೆ ಇದೆ. ಈ ನಿಟ್ಟಿನಲ್ಲಿ ಕೆಲವೊಂದು ಬದಲಾವಣೆ ತರುವ ತುರ್ತು ಇದೆ. ಖಾಸಗಿ ವಲಯದಲ್ಲಿ ಅಂಗವಿಕಲರಿಗೆ ಶೇ 5ರಷ್ಟು ಉದ್ಯೋಗ ಮೀಸಲಾತಿ ಕಲ್ಪಿಸಲು ಸರ್ಕಾರ ಈಗಾಗಲೇ 'ಕರ್ನಾಟಕ ಉದ್ಯೋಗ ಮತ್ತು ಶಿಕ್ಷಣದಲ್ಲಿ ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಮಸೂದೆ–2025' ರೂಪಿಸಿದೆ. ಇದು ದೇಶದಲ್ಲಿಯೇ ಪರಿಣಾಮಕಾರಿ ಕಾನೂನಾಗಲಿದೆ. ಇದಲ್ಲದೇ ಕರ್ನಾಟಕ ಕೌಶಲ ಅಭಿವೃದ್ಧಿ ನೀತಿ 2025–32 ಅನ್ನು ಕೂಡ ರೂಪಿಸಿದ್ದೇವೆ' ಎಂದು ವಿವರ ನೀಡಿದರು.


'ಜಾಬ್ ಹಬ್ಬ' ಕಾರ್ಯಕ್ರಮದಲ್ಲಿ ಅಂಗವಿಕಲರೊಂದಿಗೆ ಶರಣಪ್ರಕಾಶ ಪಾಟೀಲ ಚರ್ಚಿಸಿದರು

ಕೌಶಲ, ಕೈಗಾರಿಕಾ ಪಾಲುದಾರಿಕೆ, ಮೂಲಸೌಕರ್ಯ ಮತ್ತು ತಂತ್ರಜ್ಞಾನಕ್ಕೆ ಪೂರಕವಾದ ತರಬೇತಿ ನೀಡಲು ಸರ್ಕಾರ ಮುಂದಾಗಿದೆ. ಮುಖ್ಯಮಂತ್ರಿಯವರ ಕೌಶಲ ಕರ್ನಾಟಕ ಯೋಜನೆಯು (ಸಿಎಂಕೆಕೆವೈ) ಅಂಗವಿಕಲರಿಗೆ ತರಬೇತಿ ನೀಡಲು ಅವಕಾಶ ಒದಗಿಸಿದೆ. 'ಜಾಬ್ ಹಬ್ಬ'ದ ಮೂಲಕ ಕರ್ನಾಟಕದಿಂದ ಕೆಲವು ಯಶಸ್ವಿ ಕಥೆಗಳು ಹೊರಹೊಮ್ಮಲಿ ಎಂದು ಆಶಿಸಿದರು.

ಕೌಶಲಾಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಎನ್.ಎಂ. ನಾಗರಾಜ, ಅಸಿಸ್ ಟೆಕ್ ಸಹ ಸಂಸ್ಥಾಪಕ ಪ್ರತೀಕ್, ಭಾರತ ಅಂಧರ ಕ್ರಿಕೆಟ್ ತಂಡದ ನಾಯಕ ಶೇಖರ್ ನಾಯ್ಕ್, ಬಿಎಂಎಸ್ ಮಹಿಳಾ ಕಾಲೇಜಿನ ಪ್ರಾಂಶುಪಾಲ ಎನ್. ರಘುಕುಮಾರ್ ಉಪಸ್ಥಿತರಿದ್ದರು.

ಸ್ಯಾನಿಟರಿ ಪ್ಯಾಡ್ ವಿತರಣೆಗೆ ₹10 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶುಚಿ ಕಾರ್ಯಕ್ರಮದಡಿ ಶಾಲಾ-ಕಾಲೇಜು ಮಕ್ಕಳಿಗೆ ಮೂರು ತಿಂಗಳು ಸ್ಯಾನಿಟರಿ ಪ್ಯಾಡ್ ವಿತರಿಸಲು ₹10 ಕೋಟಿಯನ್ನು ಜಿಲ್ಲೆಗಳಿಗೆ ಆರೋಗ್ಯ ಇಲಾಖೆ ಬಿಡುಗಡೆ ಮಾಡಿದೆ.

ರಾಜ್ಯದ 31 ಜಿಲ್ಲೆಗಳಲ್ಲಿ 6ನೇ ತರಗತಿಯಿಂದ ದ್ವಿತೀಯ ಪಿಯುಸಿ ವರೆಗಿನ ಹದಿಹರೆಯದ ವಿದ್ಯಾರ್ಥಿನಿಯರು 19.64 ಲಕ್ಷ ಇದ್ದಾರೆ. ಸ್ಯಾನಿಟರಿ ನ್ಯಾಪ್‌ಕಿನ್ ದಾಸ್ತಾನು ಕೊರತೆ ಇದೆ.

ಕೆಎಸ್‌ಎಂಎಸ್‌ಸಿಎಲ್‌ನಿಂದ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡು ಸರಬರಾಜು ಪ್ರಾರಂಭವಾಗುವವರೆಗೆ ಮಧ್ಯಂತರ ಅವಧಿಗೆ ಸ್ಯಾನಿಟರಿ ನ್ಯಾಪ್‌ಕಿನ್ ಖರೀದಿಸಿ, ವಿತರಿಸಲು ಜಿಲ್ಲಾವಾರು ಅನುದಾನ ಬಿಡುಗಡೆ ಮಾಡಲಾಗಿದೆ ಎಂದು ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ
ಸಮಾಜ ಕಲ್ಯಾಣ ಇಲಾಖೆ
ಸಮಾಜ ಕಲ್ಯಾಣ ಆಯುಕ್ತರವರ ಕಚೇರಿ
5ನೇ ಮಹಡಿ, ಬಹು ಮಹಡಿಗಳ ಕಟ್ಟಡ, ಡಾ|| ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು–560001 ದೂರವಾಣಿ ಸಂಖ್ಯೆ: 22253783, 22254071

ಸಂಖ್ಯೆ: ಸಕನಿ/ಇಡಿ–4/ಸಿಆರ್/2025–26 ದಿನಾಂಕ: 19–12–2025

ಇ–ಟೆಂಡರ್ ಪ್ರಕಟಣೆ

ಸಮಾಜ ಕಲ್ಯಾಣ ಇಲಾಖೆಯ ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ವಸತಿ ಶಾಲೆ ಹಾಗೂ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ವಿದ್ಯಾರ್ಥಿಗಳಿಗೆ ಟೂ ಟಯರ್ ಕಾಟ್‌ಗಳನ್ನು ಅರ್ಹ ಉತ್ಪಾದಕರು / ಅಧಿಕೃತ ಡೀಲರ್‌ಗಳಿಂದ ಹಾಗೂ ಕಾಯರ್ ಮ್ಯಾಟ್ರಸ್ ಮತ್ತು ದಿಂಬುಗಳನ್ನು ಅರ್ಹ ಉತ್ಪಾದಕರುಗಳಿಂದ ಖರೀದಿಸಲು ಇ–ಪೋರ್ಟಲ್ ಮೂಲಕ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದ್ದು, ವಿವರ ಕೆಳಕಂಡಂತಿದೆ.

ಕ್ರ. ಸಂ.	ವಿವರ	ವಿಭಾಗ	ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ
01	ಟೂ ಟಯರ್ ಕಾಟ್‌ಗಳು	ಉತ್ತರ ಕರ್ನಾಟಕ ವಿಭಾಗದ ಜಿಲ್ಲೆಗಳಿಗೆ	4070	10.00 ಕೋಟಿಗಳು
02	ಕಾಯರ್ ಮ್ಯಾಟ್ರಸ್ ಮತ್ತು ದಿಂಬುಗಳು	ಉತ್ತರ ಕರ್ನಾಟಕ ವಿಭಾಗದ ಜಿಲ್ಲೆಗಳಿಗೆ	18150	10.00 ಕೋಟಿಗಳು
03		ದಕ್ಷಿಣ ಕರ್ನಾಟಕ ವಿಭಾಗದ ಜಿಲ್ಲೆಗಳಿಗೆ	18188	10.00 ಕೋಟಿಗಳು

ಸದರಿ ಟೆಂಡರ್ ದಸ್ತಾವೇಜು ವಿವರಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ (ವಿಳಾಸ: http://kppp.karnataka.gov.in.) ನಿಂದ ದಿನಾಂಕ: 20–12–2025 ರಿಂದ ಪಡೆಯಬಹುದಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ ಮತ್ತು ಸಮಯ 03–01–2026 ಸಂಜೆ 5.00 ಗಂಟೆ.

ಸಹಿ/– ಅಪರ ನಿರ್ದೇಶಕರು (ಶಿಕ್ಷಣ)
ಹಾಗೂ ಟೆಂಡರ್ ಆಹ್ವಾನ ಪ್ರಾಧಿಕಾರ
ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು

ಡಿಐಪಿಆರ್/ಸಿಪಿ/4595/ಸಿಸಿಎಲ್/2025–26

ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ
ಕಲ್ಯಾಣ ಸುರಕ್ಷಾ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560029
ದೂರವಾಣಿ ಸಂಖ್ಯೆ: 080–29753354/56,
ಇ–ಮೇಲ್– Karbuildworkerswelfare@gmail.com

No: KBOCWWB/NOTIFICATION/2025-26 Dated: 19-12-2025

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಈ ಅಧಿಸೂಚನೆ ಮತ್ತು ಟೆಂಡರ್ ದಾಖಲೆಯಲ್ಲಿ ವಿವರಿಸಿದ ನಿಯಮಗಳ ಪ್ರಕಾರ (ಮೂರು ಬಿಡ್ ವ್ಯವಸ್ಥೆ ಪೂರ್ವಅರ್ಹತಾ, ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳು) ಟೆಂಡರ್‌ಗನ್ನು ಈ ಮೂಲಕ ಆಹ್ವಾನಿಸಲಾಗಿದೆ.

1. ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ನೋಂದಾಯಿತ ಕಟ್ಟಡ ಕಾರ್ಮಿಕರು ಮತ್ತು ಅವರ ಅವಲಂಬಿತರಿಗೆ ಮಂಡಳಿಯ 35 ಸ್ಮಾರ್ಟ್ ಮೊಬೈಲ್ ವೈದ್ಯಕೀಯ ಘಟಕಗಳು (MMU) ನಿರ್ವಹಿಸಲು ಮತ್ತು Preventive Health Checkup ಅನುಸರಣೆ ಮತ್ತು ಚಿಕಿತ್ಸೆಗಾಗಿ ಏಜೆನ್ಸಿಯ ಆಯ್ಕೆಗಾಗಿ ಟೆಂಡರ್.
2. "ಮಂಡಳಿಯ 35 ಅಸ್ತಿತ್ವದಲ್ಲಿರುವ ಮೊಬೈಲ್ ವೈದ್ಯಕೀಯ ಘಟಕ ವಾಹನಗಳಲ್ಲಿ ಸಂಪರ್ಕಿತ ಆರೋಗ್ಯ ಪರಿಸರ ವ್ಯವಸ್ಥೆಯ ಏಕೀಕರಣದೊಂದಿಗೆ ನವೀಕರಣ ಮತ್ತು ಮಾರ್ಪಾಡುಗಳಿಗಾಗಿ ಸೇವಾ ಪೂರೈಕೆದಾರರ ಆಯ್ಕೆಗಾಗಿ ಟೆಂಡರ್‌ಅನ್ನು ಈ ಮೂಲಕ ಆಹ್ವಾನಿಸಲಾಗಿದೆ" (ಕಾಲ್–3).

ಸದರಿ ಟೆಂಡರ್‌ಗಳಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಏಜೆನ್ಸಿಯವರು ಕೆ.ಪಿ.ಪಿ.ಪೋರ್ಟಲ್ www.kppp.karnataka.gov.in ಮೂಲಕ ತಮ್ಮ ಬಿಡ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಸದರಿ ಇ–ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕವು ಕೆ.ಪಿ.ಪಿ.ಪೋರ್ಟಲ್‌ನಂತೆ ಇರುತ್ತದೆ. ಹೆಚ್ಚಿನ ವಿವರಗಳು ಬೇಕಾಗಿದ್ದಲ್ಲಿ ಜಂಟಿ ಕಾರ್ಯದರ್ಶಿಗಳು, ಕ.ಕ&ಇ.ನಿ.ಕಾ.ಕ.ಮಂಡಳಿ ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–
ಜಂಟಿ ಕಾರ್ಯದರ್ಶಿ
ಕ.ಕ.ಇ.ನಿ.ಕಾ.ಕ. ಮಂಡಳಿ

ವಾ.ಸಾ.ಸಂ.ಇ/ವಾಪ್ರ/4590/ಆಕಾರ್/2025–26

ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.
ಶ್ರೀ ಡಿ.ದೇವರಾಜ ಅರಸು ಬಡಾವಣೆ, 'ಎ' ಬ್ಲಾಕ್, ದಾವಣಗೆರೆ–06

ನಂ.ದಾಹನಪ್ರಾ:ನಿ4:ವಾಸೌನಿ:ನಿಹಂಪ್ರ–03/2025–26/2953 ದಿನಾಂಕ: 19.12.2025

ನಾಗರೀಕ ಸೌಲಭ್ಯ ನಿವೇಶನಗಳ ಹಂಚಿಕೆಗಾಗಿ ಅರ್ಜಿ ಆಹ್ವಾನ

ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರವು ತನ್ನ ವ್ಯಾಪ್ತಿಯಲ್ಲಿರುವ ಖಾಸಗಿ ವಸತಿ ವಿನ್ಯಾಸಗಳಲ್ಲಿನ ನಾಗರೀಕ ಸೌಲಭ್ಯ ನಿವೇಶನಗಳನ್ನು ಶೈಕ್ಷಣಿಕ ಸಂಸ್ಥೆಗಳಿಗೆ, ವಿಶೇಷಚೇತನರ ಕ್ಷೇಮಾಭಿವೃದ್ಧಿ ಸಂಸ್ಥೆ ಹಾಗೂ ವೃದ್ಧಾಶ್ರಮ ಸಂಸ್ಥೆಗಳಿಗೆ ಹಾಗೂ ನೋಂದಾಯಿತ ಇತರೆ ಸಂಘ ಸಂಸ್ಥೆಗಳಿಗೆ ಹಂಚಿಕೆ ಮಾಡಲು ಅರ್ಜಿ ಆಹ್ವಾನಿಸಲಾಗಿದೆ. ಶೈಕ್ಷಣಿಕ ಸಂಸ್ಥೆಗಳಿಗೆ(ಕನ್ನಡ ಮಾಧ್ಯಮ), ವಿಶೇಷಚೇತನರಿಗೆ ಮೊದಲ ಆದ್ಯತೆ ಮೇರೆಗೆ ಸರ್ಕಾರದ ಆದೇಶದಂತೆ ಮಾರುಕಟ್ಟೆ ಬೆಲೆಯ ಶೇ.50 ರ ದರದಲ್ಲಿ ನಿವೇಶನಗಳನ್ನು ಹಂಚಿಕೆ ಮಾಡಲಾಗುವುದು. ಇತರೆ ಸಂಘ ಸಂಸ್ಥೆಗಳಿಗೆ ಹಾಗೂ ಶೈಕ್ಷಣಿಕ ಸಂಸ್ಥೆಗಳಿಗೆ ಸರ್ಕಾರ ನಿಗಧಿಪಡಿಸಿರುವ ಮಾರುಕಟ್ಟೆ ದರದಂತೆ ಹಂಚಿಕೆ ಮಾಡಲಾಗುವುದು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಸೇರಿದ ಸಂಘ ಸಂಸ್ಥೆಗಳಿಗೆ ಸರ್ಕಾರದ ನಿಯಮಗಳಂತೆ ಮೀಸಲಾತಿ ಆಧಾರದ ಮೇಲೆ ಹಂಚಿಕೆ ಮಾಡಲಾಗುವುದು. ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ 1991ರ ರೀತ್ಯಾ ಮಂಜೂರು ಮಾಡಲು, ನಿಗಧಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಲಭ್ಯವಿರುವ ನಾಗರೀಕ ಸೌಲಭ್ಯ ನಿವೇಶನಗಳ ಅಳತೆ, ದರ ಹಾಗೂ ನಿಬಂಧನೆಗಳ ವಿವರ ಪ್ರಾಧಿಕಾರ ಸೂಚನಾ ಫಲಕದಲ್ಲಿ ಪ್ರಚುರಪಡಿಸಲಾಗಿದೆ. ಆಸಕ್ತ ಸಂಘ/ಸಂಸ್ಥೆಗಳು ಪ್ರಾಧಿಕಾರದಲ್ಲಿ ನೋಂದಾಯಿಸಿಕೊಂಡು ನಿವೇಶನಕ್ಕೆ ನಿಗಧಿಪಡಿಸಿದ ಶೇ.10ರಷ್ಟು ಪ್ರಾರಂಭಿಕ ಮೊತ್ತದೊಂದಿಗೆ ಅರ್ಜಿ ಸಲ್ಲಿಸಬಹುದು. ಅರ್ಜಿಗಳನ್ನು ದಿನಾಂಕ:21–01–2026ರಂದು ಸಂಜೆ 5.00ಗಂಟೆಯೊಳಗಾಗಿ ಪ್ರಾಧಿಕಾರದ ಕಛೇರಿಗೆ ಸಲ್ಲಿಸುವುದು. ಹೆಚ್ಚಿನ ಮಾಹಿತಿಗಾಗಿ ನಗರಾಭಿವೃದ್ಧಿ ಪ್ರಾಧಿಕಾರದ ಕಛೇರಿಯನ್ನು ಸಂಪರ್ಕಿಸುವುದು.

ವಾಸಾಇ/ದಾವಣಗೆರೆ/572/ಕೆಎಸ್‌ಎಂಸಿಎ/2025–26
ಸಹಿ/– ಆಯುಕ್ತರು, ದಾ–ಹ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.

ಇ–ಆಡಳಿತ ಕೇಂದ್ರ
CENTRE FOR e-GOVERNANCE e-Enabling Government
ಕೊಠಡಿ ಸಂಖ್ಯೆ: 141, 1ನೇ ಮಹಡಿ, 2ನೇ ಗೇಟ್, ಬಹುಮಹಡಿ ಕಟ್ಟಡ, ಬೆಂಗಳೂರು–560 001. ದೂ: 080–22373840

ಸಂ. CEG-15011/23/2020-PD(KSWAN)-CEG ದಿನಾಂಕ: 20.12.2025

ಪ್ರಕಟಣೆ

ನಿಯೋಜನೆ ಆಧಾರದ ಮೇಲೆ ಕೆಸ್ವಾನ್ ಯೋಜನಾ ವ್ಯವಸ್ಥಾಪಕರ ಹುದ್ದೆಗಾಗಿ ಆಹ್ವಾನ

ಇ–ಆಡಳಿತ ಕೇಂದ್ರವು, ಕರ್ನಾಟಕ ಸರ್ಕಾರದ ಸಿ.ಆ.ಸು.ಇ(ಇ–ಆಡಳಿತ) ಅಡಿಯಲ್ಲಿ ಸ್ಥಾಪಿತಗೊಂಡ ಸೊಸೈಟಿ ಹಾಗೂ ಕರ್ನಾಟಕ ಸಂಘ ಸಂಸ್ಥೆಗಳ ನೊಂದಾಯಿತ ಅಧಿನಿಯಮ 1960ರ ಪ್ರಕಾರ ನೊಂದಾಯಿತ ಸಂಸ್ಥೆಯಾಗಿದ್ದು ಕರ್ನಾಟಕ ರಾಜ್ಯ ವಿಸ್ತೃತ ಜಾಲ ಯೋಜನೆಗೆ **ಯೋಜನಾ ವ್ಯವಸ್ಥಾಪಕರ ಹುದ್ದೆಗೆ (PM, KSWAN) ನಿಯೋಜನೆ ಆಧಾರದ ಮೇಲೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸದರಿ ಹುದ್ದೆಗೆ E-5 (CPSU) and above Rs. 32,000-58,000 ಅಥವಾ ತತ್ಸಮಾನದ ವೇತನ ಶ್ರೇಣಿ ಇರುತ್ತದೆ.** ಅಭ್ಯರ್ಥಿಗಳು ಸದರಿ ಹುದ್ದೆಗೆ ಅಗತ್ಯವಿರುವ ವಿದ್ಯಾರ್ಹತೆ, ಅನುಭವ, ಅರ್ಜಿ ಸಲ್ಲಿಕೆ, ನಿಯಮ ಮತ್ತು ಷರತ್ತುಗಳು, ಇತ್ಯಾದಿ ವಿವರಗಳಿಗಾಗಿ (**https://ceg.karnataka.gov.in**). ಅನ್ನು ವೀಕ್ಷಿಸಬಹುದು.

ಈ ಜಾಹಿರಾತು ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಅರ್ಜಿ ಸಲ್ಲಿಸತಕ್ಕದ್ದು.

ಸಹಿ/–
ಆಡಳಿತಾಧಿಕಾರಿ.
ಇ–ಆಡಳಿತ ಕೇಂದ್ರ

ವಾಸಾಸಂಇ/ವಾಪ್ರ/ಜೆಎ/4568/2025–26

ಪುರಸಭಾ ಕಾರ್ಯಾಲಯ, ಮಧುಗಿರಿ
ಟೌನ್‌ಹಾಲ್ ರಸ್ತೆ, ಮಧುಗಿರಿ, ತುಮಕೂರು ಜಿಲ್ಲೆ 572132
ದೂರವಾಣಿ : 08137 – 282328, 283866,
ಇ–ಮೇಲ್ : ka.madhugiri.tmc@gmail.com
ವೆಬ್‌ಸೈಟ್ : www.madhugiritown.town.gov.in

ಸಂಖ್ಯೆ : ಪು.ಮ./ಕಿ.ಅ./ಟೆಂಡರ್ ಪ್ರಕಟಣೆ/ಸಿ.ಆರ್./07/2025–26
ದಿನಾಂಕ : 19–12–2025

ಟೆಂಡರ್ ಪ್ರಕಟಣೆ

ಮಧುಗಿರಿ ಪುರಸಭೆಯಲ್ಲಿ ಟೆಂಡರ್ ಮೂಲಕ ಕಾಮಗಾರಿಗಳನ್ನು ಕೈಗೊಳ್ಳಲು ಅರ್ಹ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಸಿವಿಲ್ ಗುತ್ತಿಗೆದಾರರು ಭಾಗವಹಿಸಬಹುದಾಗಿರುತ್ತದೆ. ಕಾಮಗಾರಿಯ ವಿವರ ಈ ಕೆಳಕಡಂತೆ ಇರುತ್ತದೆ.

2018–19 ನೇ ಸಾಲಿನ ಎಸ್.ಎಫ್.ಸಿ. ವಿಶೇಷ ಅನುದಾನದಲ್ಲಿ ಕೈಗೊಂಡಿರುವ ಕಾಮಗಾರಿ ಇಂಡೆಂಟ್ ನಂ. : 01) DMA/2025-26/BD/WORK-INDENT-52067/Call-2, ಅಂದಾಜು ಮೊತ್ತ : ರೂ. 55.00 ಲಕ್ಷ, ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ : 03–01–2026 ರ ಸಂಜೆ 5.30 ಗಂಟೆವರೆಗೆ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 05–01–2026 ರ ಸಂಜೆ 5.30 ಗಂಟೆಗೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ : 06–01–2026 ರ ಸಂಜೆ 5.30 ಗಂಟೆಗೆ.

ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆ ಖುದ್ದಾಗಿ ಅಥವಾ ವಿಳಾಸ : www.kppp.karnataka.gov.in ರಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/– ಶ್ರೀ. ಗೋಟೂರು ಶಿವಪ್ಪ, ಆಡಳಿಧಾರಿಕಾರಿ, ಪುರಸಭೆ ಮಧುಗಿರಿ.
ಸಹಿ/– ಶ್ರೀ. ಸುರೇಶ್ ಎಸ್. ಮುಖ್ಯಾಧಿಕಾರಿ, ಪುರಸಭೆ ಮಧುಗಿರಿ.

ಡಿಐಪಿಆರ್/ತುಮಕೂರು/63/ಮಣಿಪಾಲ್/25–26

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ

ನಂ.ಲೋ.ಇ./ಚಿ.ವಿ./ಸ.ಇಂ.–1/ಟೆಂಡರ/2025–26/5476 ದಿನಾಂಕ: 19/12/2025

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ/Call-2

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2025–26 ನೇ ಸಾಲಿನ ಲೆಕ್ಕ ಶಿರ್ಷಿಕೆ 5054–80–190–0–01–132 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ – ಬಂಡವಾಳ ವೆಚ್ಚ:– ನಿರ್ವಹಣಾ ವೆಚ್ಚ ಅಡಿ 1 ಕಾಮಗಾರಿ ಗುತ್ತಿಗೆ ಇಟ್ಟ ಮೊತ್ತ ರೂ. 160.00 ಲಕ್ಷ ಇರುವ ಕಾಮಗಾರಿಗಳಿಗೆ KPP Portal ಮುಖಾಂತರ Services ನಲ್ಲಿ ಟೆಂಡರ್ ಆವ್ಹಾನಿಸಲಾಗಿದೆ.

ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು
1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ದಿನಾಂಕ:22–12–2025. ರಂದು (ಪೂರ್ವಹ್ನ 11.00 ಗಂಟೆ), 2)ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:24–12–2025(ಸಾಯಂಕಾಲ 5.30 ಗಂಟೆಯ ವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 26–12–2025 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 29–12–2025 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ", 6)ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ–ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.

ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬಸೈಟ್ kppp.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.

DIPR/BGM/RO-NO-1513/KSMCA/2025-26

ನಗರಸಭಾ ಕಾರ್ಯಾಲಯ
ದೊಡ್ಡಬಳ್ಳಾಪುರ – 561203
ಸ್ವಚ್ಛ ಭಾರತ · ಸ್ವಚ್ಛ ದೊಡ್ಡಬಳ್ಳಾಪುರ
City Municipal Council, Doddaballapur - 561203
E-mail:cmr_doddaballapur@yahoo.com Website:www.doddaballapurcity.gov.in

ಕ್ರ.ಸಂ: ನಸ/ದೊ.ಬ.ಪುರ/ಆ.ಶಾ/ಸಿಆರ್/40/2025–26 ದಿನಾಂಕ: 17.12.2025

–:ಪತ್ರಿಕಾ ಪ್ರಕಟಣೆ:–

ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸ್ವಯಂ ಪ್ರೇರಿತ ರಿಟ್ ಅರ್ಜಿ ಸಂಖ್ಯೆ 5/2025 ರಲ್ಲಿ ನೀಡಿರುವ ನಿರ್ದೇಶನದಂತೆ ದೊಡ್ಡಬಳ್ಳಾಪುರ ನಗರಭೆ ವ್ಯಾಪ್ತಿಯ ಬೀದಿ ನಾಯಿಗಳ ಪಾಲನಾ/ಆಶ್ರಯ ಕೇಂದ್ರಗಳ ನಿರ್ವಹಣೆಯನ್ನು ಮಾಡಲು ಆಸಕ್ತ ಎನ್.ಜಿ.ಓ./ ಪ್ರಾಣಿ ಕಲ್ಯಾಣ ಸಂಸ್ಥೆ /ಪ್ರಾಣಿದಯಾ ಸಂಘದವರಿಂದ ಹಾಗೂ ಬೀದಿ ನಾಯಿಗಳ ಪಾಲನಾ/ಆಶ್ರಯ ಕೇಂದ್ರಗಳಲ್ಲಿರುವ ಬೀದಿನಾಯಿಗಳನ್ನು ದತ್ತು ಪಡೆಯಲು ಅರ್ಜಿಯನ್ನು ಆಹ್ವಾನಿಸಿದ್ದು, ಆಸಕ್ತರು ಈ ಕೆಳಕಾಣಿಸಿದ ವಿವರಗಳಂತೆ ಅರ್ಜಿಯನ್ನು ನಗರಸಭೆ, ಕಾರ್ಯಾಲಯ ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿಗೆ ಸಲ್ಲಿಸಬಹುದಾಗಿದೆ.

1) ನಗರಸಭೆಯ ಬೀದಿ ನಾಯಿಗಳ ಪಾಲನಾ/ಆಶ್ರಯ ಕೇಂದ್ರಗಳ ನಿರ್ವಹಣೆಯನ್ನು ಮಾಡಲು ಆಸಕ್ತ ಎನ್.ಜಿ.ಓ./ ಪ್ರಾಣಿ ಕಲ್ಯಾಣ ಸಂಸ್ಥೆ /ಪ್ರಾಣಿ ಕಲ್ಯಾಣ ಸಂಸ್ಥೆಯವರಿಂದ ಪ್ರತಿಯೊಂದು ನಾಯಿಗೆ ಆಹಾರ ಸೇರಿದಂತೆ ವಾರ್ಷಿಕ ನಿರ್ವಹಣೆ ವೆಚ್ಚದ ಮಾಹಿತಿಯೊಂದಿಗೆ ಸಲ್ಲಿಸುವುದು.
2) ಎನ್.ಜಿ.ಓ./ಪ್ರಾಣಿ ಕಲ್ಯಾಣ ಸಂಸ್ಥೆ /ಪ್ರಾಣಿದಯಾ ಸಂಘದವರು ಈಗಾಗಲೇ ಬೀದಿ ನಾಯಿಗಳ ಪಾಲನಾ/ಆಶ್ರಯ ಕೇಂದ್ರಗಳ ನಿರ್ವಹಣೆಯನ್ನು ಮಾಡುತ್ತಿದ್ದರೆ ತಮ್ಮ ಸ್ಥಳದಲ್ಲಿಯೇ ಬೀದಿ ನಾಯಿಗಳ ನಿರ್ವಹಣೆಗೆ ಸರ್ಕಾರದಿಂದ ನಿಗಧಿಪಡಿಸಿದ ಶುಲ್ಕವನ್ನು ಪಡೆಯಲು ಅರ್ಜಿಯನ್ನು ನೀಡುವುದು.
3) ಬೀದಿನಾಯಿಗಳನ್ನು ದತ್ತು ಪಡೆಯುವವರು ಇವುಗಳ ಆರೈಕೆ ಮಾಡುವ ಮಾಹಿತಿಯೊಂದು ಅರ್ಜಿ ಸಲ್ಲಿಸುವುದು.

ಸಹಿ/–	ಸಹಿ/–	ಸಹಿ/–	ಸಹಿ/–
ಅಧ್ಯಕ್ಷರು ನಗರಸಭೆ, ದೊಡ್ಡಬಳ್ಳಾಪುರ	ಉಪಾಧ್ಯಕ್ಷರು ನಗರಸಭೆ, ದೊಡ್ಡಬಳ್ಳಾಪುರ	ಸ್ಥಾಯಿ ಸಮಿತಿ ಅಧ್ಯಕ್ಷರು ನಗರಸಭೆ, ದೊಡ್ಡಬಳ್ಳಾಪುರ	ಪೌರಾಯುಕ್ತರು ನಗರಸಭೆ, ದೊಡ್ಡಬಳ್ಳಾಪುರ

ಡಿಐಪಿಆರ್/ಸಿಪಿ/4587/ಸಿಸಿಎಲ್/2025–26

ಕರ್ನಾಟಕ ಸರ್ಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು – 560001.
ದೂರವಾಣಿ: 080–22215601, 22211246 ಫ್ಯಾಕ್ಸ್ : 22215602

ಸಂಖ್ಯೆ: ಡಿವೈಇಎಸ್/ಕ್ರೀ.ಚ.ಪ್ರೋ/ಕ್ರೀ.ವಿ.ಕೇಂ/02/2025–26 ದಿನಾಂಕ: 20.12.2025

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ವಿಷಯ: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಮೈಸೂರು ಮತ್ತು ಬೆಳಗಾವಿ ಕ್ರೀಡಾ ವಿಜ್ಞಾನ ಕೇಂದ್ರಕ್ಕೆ ಉಪಕರಣಗಳನ್ನು ಸರಬರಾಜು ಮಾಡಲು ಟೆಂಡರ್ ಆಹ್ವಾನಿಸಿರುವ ಕುರಿತು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅಧೀನದಲ್ಲಿ ಬರುವ ಮೈಸೂರು ಮತ್ತು ಬೆಳಗಾವಿ ಕ್ರೀಡಾ ವಿಜ್ಞಾನ ಕೇಂದ್ರಕ್ಕೆ ಉಪಕರಣಗಳನ್ನು ಸರಬರಾಜು ಮಾಡಲು ಅರ್ಹ ಸಂಸ್ಥೆಯವರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000ರ ಪ್ರಕಾರ ಅರ್ಹ ಸಂಸ್ಥೆಯಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅಲಾವಧಿ ಇ–ಟೆಂಡರ್ ನ್ನು ಆಹ್ವಾನಿಸಲಾಗಿದೆ.

1) ಟೆಂಡರ್ ವಿವರ : ಮೈಸೂರು ಮತ್ತು ಬೆಳಗಾವಿ ಕ್ರೀಡಾ ವಿಜ್ಞಾನ ಕೇಂದ್ರಕ್ಕೆ ಉಪಕರಣಗಳನ್ನು ಸರಬರಾಜು ಮಾಡುವ ಕುರಿತು. ಟೆಂಡರ್ ಮೊತ್ತ : ರೂ.83,05,993/–. 2) ಇ ಎಂ ಡಿ ಮೊತ್ತ : ರೂ. 1,66,120/–. 3) ಟೆಂಡರ್ ಆಹ್ವಾನಿಸುವ ಪ್ರಾಧಿಕಾರ : ಉಪ ನಿರ್ದೇಶಕರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ. 4) ಟೆಂಡರ್ ಅಂಗೀಕರಿಸುವ ಪ್ರಾಧಿಕಾರ : ಆಯುಕ್ತರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ನೃಪತುಂಗ ರಸ್ತೆ, ಬೆಂಗಳೂರು 560001. 5) ಮೇಲ್ಮನವಿ ಪ್ರಾಧಿಕಾರ : ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು 560001. 6) ಟೆಂಡರ್ ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ : 05.01.2026 ಸಂಜೆ 04.30 ಗಂಟೆಗೆ. 7) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 06.01.2026 ಸಂಜೆ 05.00 ಗಂಟೆಗೆ. 8) ಆರ್ಥಿಕ ಬಿಡ್ ತೆರೆಯುವ ದಿನಾಂಕ ನಂತರ ತಿಳಿಸಲಾಗುವುದು. 9) ಟೆಂಡರ್ ತೆರೆಯುವ ಸ್ಥಳದ ಮತ್ತು ಹೆಚ್ಚಿನ ಮಾಹಿತಿ ಪಡೆಯುವ ಸ್ಥಳ : ಆಯುಕ್ತರ ಕಾರ್ಯಾಲಯ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–560001. ದೂರವಾಣಿ : 080–22215601.

ಈ ಟೆಂಡರ್ ಗೆ ಸಂಬಂಧಿಸಿದಂತೆ ಟೆಂಡರ್‌ದಾರರಿಗೆ ನಿಗಧಿಪಡಿಸಿರುವ ಅರ್ಹತೆ ಇರತಕ್ಕದ್ದು. ಯಾವುದೇ ಕಾರಣವನ್ನು ನೀಡದೆ ಟೆಂಡರ್‌ನ್ನು ಪುರಸ್ಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಕಾಯ್ದಿರಿಸಿಕೊಂಡಿರುತ್ತಾರೆ. ಇದಕ್ಕಾಗಿ ಅವರು ಯಾವುದೇ ಕಾರಣಗಳನ್ನು ನೀಡಬೇಕಾಗಿಲ್ಲ.

ಸಹಿ/–
ಉಪ ನಿರ್ದೇಶಕರು (ಆಡಳಿತ)
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
(ಟೆಂಡರ್ ಆಹ್ವಾನಿಸುವ ಪ್ರಾಧಿಕಾರ)

DIPR/CP/4594/Zen/2025-26

ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ, ಕೋಲಾರ ವಿಭಾಗ
ಕೋಲಾರ – 563101
e-mail: eepwdkolar07@gmail.com website: www.kpwd.gov.in e-portal: http://kppp.karnataka.gov.in
ದೂರವಾಣಿ ಸಂಖ್ಯೆ: 08152–222022

ಇ–ಟೆಂಡರ್ ಪ್ರಕಟಣೆ– ಕೆಡಬ್ಲ್ಯು – 3 ಅಲ್ಪಾವಧಿ ಟೆಂಡರ್ ಪ್ರಕಟಣೆ
ಸಂಖ್ಯೆ–26/2025–26 ದಿನಾಂಕ: 19.12.2025

ಕೋಲಾರ ಜಿಲ್ಲೆ ಲೋಕೋಪಯೋಗಿ ಇಲಾಖೆ ಬಂಗಾರಪೇಟೆ ಕೆ.ಜಿ.ಎಫ್, ಮಾಲೂರು, ಮತ್ತು ಮುಳಬಾಗಿಲು ತಾಲ್ಲೂಕು ವ್ಯಾಪ್ತಿಯಲ್ಲಿ ಲೆಕ್ಕಶೀರ್ಷಿಕೆ: 4059–80–051–0–60–132 ಮುಖ್ಯ ಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ದಿ ಯೋಜನೆ ಅಡಿಯಲ್ಲಿ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ಟೆಂಡರ್‌ಗಿಟ್ಟ ಮೊತ್ತ: ರೂ.100.00 ಲಕ್ಷಗಳು **ಇ.ಎಂ.ಡಿ ಮೊತ್ತವನ್ನು ಕೆ.ಪಿ.ಪಿ ಪೋರ್ಟಲ್ ನಲ್ಲಿ ನಮೂದಿಸಿರುತ್ತಾರೆ,** ಕಾಲಾವಧಿ : 6 ತಿಂಗಳು ನಿರ್ವಹಿಸಲು **ಕೆಡಬ್ಲ್ಯು –3 ರ ಕಾಮಗಾರಿಗೆ ಅರ್ಹ ನೊಂದಾಯಿತ** ಸಿವಿಲ್ **ಗುತ್ತಿಗೆದಾರರಿಂದ** ಕೆಪಿಪಿಪಿ ಅನ್ವಯ ಟೆಂಡರ್ ಆಹ್ವಾನಿಸಲಾಗಿದೆ. ಗುತ್ತಿಗೆದಾರರು **ಕೆಡಬ್ಲ್ಯು 3** ರ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕರ್ನಾಟಕ ರಾಜ್ಯದ ಕೆಪಿಪಿ ಪೋರ್ಟಲ್ **(Viz., http://kppp.karnataka.gov.in)** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಕರ್ನಾಟಕ ರಾಜ್ಯದ ಕೆಪಿಪಿಪಿ ಪೋರ್ಟಲ್‌ನಲ್ಲಿ ದಿನಾಂಕ: **30.12.2025** ರಂದು ಸಂಜೆ **16.00** ಗಂಟೆ ಒಳಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಸ್ವೀಕೃತವಾದ ಟೆಂಡರ್‌ಗಳನ್ನು ದಿನಾಂಕ: **31.12.2025** ರಂದು ಸಂಜೆ **16.30** ಗಂಟೆಯ ನಂತರ ಕೆಪಿಪಿಪಿ ಪೋರ್ಟಲ್‌ನಲ್ಲಿ ತೆರೆಯಲಾಗುವುದು. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಕೆಪಿಪಿಪಿ ಪೋರ್ಟಲ್‌ನಲ್ಲಿ **(Viz.,http://kppp.karnataka.gov.in)**ನಲ್ಲಿ ಸಂಪರ್ಕಿಸಬಹುದಾಗಿದೆ. ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಲು ಸಹಾ ಕೋರಲಾಗಿದೆ.

ವಿಶೇಷ ಸೂಚನೆ: ಸದರಿ ನೋಟಿಫಿಕೇಶನ್‌ಗೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್
ಲೋ.ಇ. ಕೋಲಾರ ವಿಭಾಗ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:414/ಕೆಎಸ್‌ಎಂಸಿಎ/2025–26

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನೀಯರರವರ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ನಂ.4, ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ.

ಸಂ: ಕಾ.ಇಂ/ಕನೀನಿನಿ/ಬಿಡಿಯನ್–4/ತಾ.ಸಂ/ಪಿ.ಬಿ 1/4701/ಭದ್ರಾ ಟೆಂಡರ್ ಪ್ರಕಟಣೆ
ಸಂಖ್ಯೆ : 15/2025–26 ದಿನಾಂಕ : 18.12.2025

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆ.ಪಿ.ಪಿ.ಪೋರ್ಟಲ್‌ನಲ್ಲಿ ಮೂಲಕ ಮಾತ್ರ)

ಕೆ.ಟಿ.ಪಿ.ಪಿ ವೇದಿಕೆಯಡಿಯಲ್ಲಿ 4701 ಭದ್ರಾ ಲೆಕ್ಕ ಶೀರ್ಷಿಕೆಯಡಿಯಲ್ಲಿ 04 ಸಂಖ್ಯೆ ಕಾಮಗಾರಿಗಳಿಗೆ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ., ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟಿರುವ ಗುತ್ತಿಗೆದಾರರಿಂದ ಟೆಂಡರ್‌ನ್ನು ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ನಂ.4 ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ ಇವರಿಂದ ಆಹ್ವಾನಿಸಲಾಗಿದೆ.

1) ಟೆಂಡರ್ ಫಾರಂಗಳನ್ನು ಕೋರಿ ಹಾಗೂ ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕಗಳು : 22.12.2025 ರಿಂದ 06.01.2026 ರವರೆಗೆ ಸಂಜೆ 17.30 ಗಂಟೆಗೆ. 2) ಪ್ರೀ ಬಿಡ್ ಮೀಟಿಂಗ್ : 31.12.2025 ರಂದು ಬೆಳಿಗ್ಗೆ 11.00 ಗಂಟೆಗೆ, ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ನಂ.4, ಬಿಆರ್‌ಎಲ್‌ಬಿಸಿ ವಿಭಾಗ, ಭದ್ರಾವತಿ. 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 07.01.2026 ರಂದು 17.30 ಗಂಟೆಗೆ. 4) ಆರ್ಥಿಕ ಬಿಡ್ ತೆರೆಯುವ ದಿನಾಂಕ : After obtaining approval of technical bid from competent authority 5) ಕಾಲಾವಧಿ : 08 ತಿಂಗಳು (ಮಳೆಗಾಲ ಸಹಿತ). 6) ಟೆಂಡರ್‌ಗಿಟ್ಟ ಮೊತ್ತ : ರೂ. 126.97 ಲಕ್ಷದಿಂದ ರೂ. 186.30 ಲಕ್ಷಗಳವರೆಗೆ. 7) ಇಎಂಡಿ ಮೊತ್ತ : ರೂ. 1,91,000/– ದಿಂದ ರೂ. 2,80,000/–.

ಸೂಚನೆಗಳು ಹಾಗೂ ಹೆಚ್ಚಿನ ವಿವರಗಳಿಗಾಗಿ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಫೋನ್ : 8660573513.ಸಹಿ/–
ಕಾರ್ಯಪಾಲಕ ಇಂಜಿನೀಯರರು,
ಕನೀನಿನಿ, ನಂ.4, ಬಿಆರ್‌ಎಲ್‌ಬಿಸಿ ವಿಭಾಗ, ಭದ್ರಾವತಿ.

ವಾ.ಸಾ.ಸಂ.ಇ/ಶಿ/ನಂ.119–12/ಝೇಂಕಾರ್/2025–26

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಹಾಗೂ ನೈರ್ಮಲ್ಯ ವಿಭಾಗ ಕಾರ್ಯಾಲಯ, ವಿಜಯಪುರ
ಕನಕದಾಸ ಬಡಾವಣೆ, ಜಿಲ್ಲಾ ಪಂಚಾಯತ್ ಆವರಣ, ವಿಜಯಪುರ–586101
ದೂರವಾಣಿ ಸಂಖ್ಯೆ: 08352–277941,
ಇ–ಮೇಲ್: eerdwsd.bjp@gmail.com

ಕ್ರ.ಸಂ:ಕಾಇಂ/ಗ್ರಾ.ಕು.ನೀ.ನೈ.ವಿ/ವಿಜ/KPPP/ಟೆಂಡರ್/2025–26/1371
ದಿನಾಂಕ: 20.12.2025

KPPP Portal ಮುಖಾಂತರ ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು (Standard tender docuement KW-1/2/3/4) & KTPP ನಿಯಮಾನುಸಾರ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ವಿಜಯಪುರ ವಿಭಾಗದಡಿ ಬರುವ ಗ್ರಾಮೀಣ ಜನವಸತಿಗಳಲ್ಲಿ ಜೆಜೆಎಂ ಹಾಗೂ ತಾ.ಪಂ ಯೋಜನೆಯಡಿ ಕಾಮಗಾರಿಯನ್ನು ಕೈಗೊಳ್ಳಲು ಟೆಂಡರ್ ಕರೆಯಲಾಗಿದೆ.

ಏಕ ಲಕೋಟೆ: 01 ಕಾಮಗಾರಿ, ದ್ವಿ ಲಕೋಟೆ : 01 ಕಾಮಗಾರಿ.

KPPP Portal **ಮುಖಾಂತರ ಆನ್‌ಲೈನ್ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 03.01.2026 ರಂದು ಸಾಯಂಕಾಲ 5.30 ಘಂಟೆವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 05.01.2026 ಬೆಳಿಗ್ಗೆ 10.30 ಘಂಟೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ : 06.01.2026 ಬೆಳಿಗ್ಗೆ 11.00 ಘಂಟೆ ನಂತರ (ಅಥವಾ ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ).**

ಟೆಂಡರ್ ಷರತ್ತುಗಳು ಹಾಗೂ ವಿವರಗಳನ್ನು www.kppp.karnataka.gov.in ವೆಬ್‌ಸೈಟ್‌ನಲ್ಲಿ ನೋಡಬಹುದು ಹಾಗೂ ಈ ವಿಭಾಗ ಕಛೇರಿಯಿಂದ ಪಡೆಯಬಹುದು.

ಸಹಿ/– (ಶ್ರೀ ಸಂಜಯ ಎಸ್. ಕೋಟೆನ್ನವರ)
ಕಾರ್ಯನಿರ್ವಾಹಕ ಅಭಿಯಂತರರು,
ಗ್ರಾ.ಕು.ನೀ&ನೈ ವಿಭಾಗ, ವಿಜಯಪುರ

ವಾಸಾಸಂಇ/ವಿಜಯಪುರ/560/ಕೆಎಸ್‌ಎಂಸಿಎ/2025–26

ಬೆಂಗಳೂರು ಕೇಂದ್ರ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಶಾಂತಿನಗರ ವಿಭಾಗ,
ಪಿ. ಯು. ಕಟ್ಟಡ, 9ನೇ ಮಹಡಿ, ಬೆಂಗಳೂರು–560 001.

ಸಂಖ್ಯೆ: ಕಾಪಾಅ/ಶಾನ/ಟೆಂಡರ್/16/2025–26 ದಿನಾಂಕ: 20–12–2025

ಟೆಂಡರ್‌ಗೆ ಆಹ್ವಾನ (ಐಎಫ್‌ಟಿ)
(ದ್ವಿ ಲಕೋಟೆ ಪದ್ಧತಿ) (ಗುಣಮಟ್ಟ ಮತ್ತು ವೆಚ್ಚ ಆಧಾರಿತ ಆಯ್ಕೆ)
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ವೆಬ್‌ಸೈಟ್: **https://kppp.karnataka.gov.in** ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು (ಶಾಂತಿನಗರ ವಿಭಾಗ), ಬೆಂಕೇನ ಪಾಲಿಕೆ ಪರವಾಗಿ ಹೆಸರಾಂತ ಸಲಹೆಗಾರರಿಂದ ಯೋಜನಾ ನಿರ್ವಹಣಾ ಸಲಹೆಗಳಿಗೆ (ಪಿಎಂಸಿ) ಈ ಕೆಳಗಿನ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು
1)	ಪ್ಯಾಕೇಜ್ 1: ವಾರ್ಡ್ ನಂ.111ರ (ಶಾಂತಲಾನಗರ), 116 (ನೀಲಸಂದ್ರ) ಮತ್ತು 117 (ಶಾಂತಿ ನಗರ)ದ ಶಾಂತಿ ನಗರ ಉಪವಿಭಾಗದ ವಾರ್ಡ್ ಮುಖ್ಯರಸ್ತೆಗಳು ಮತ್ತು ಅಡ್ಡರಸ್ತೆಗಳು, ಒಳಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳ ಸಮಗ್ರ ಅಭಿವೃದ್ಧಿ ಕಾಮಗಾರಿಗಳಿಗೆ ಯೋಜನಾ ನಿರ್ವಹಣಾ ಸಲಹೆಗಳನ್ನು ಒದಗಿಸುವುದು ಮುಖ್ಯ ಮಂತ್ರಿಗಳ ಮೂಲ ಸೌಕರ್ಯ ಕಾರ್ಯಕ್ರಮದ 2025–26ರ ಅನುದಾನದಡಿ (ಸಿಎಂಐಡಿಪಿ) (ಸರ್ಕಾರಿ ಆದೇಶ ಸಂ.2, 3 ಮತ್ತು 4). ಟೆಂಡರ್‌ನ ಅಂದಾಜು ಮೊತ್ತ (ಕೋಟಿ ರೂ.ಗಳಲ್ಲಿ).: **15.00.** ಇಎಂಡಿ ಮೊತ್ತ (ರೂ.ಗಳಲ್ಲಿ): **37,500/-.**
2)	ಪ್ಯಾಕೇಜ್ 2: ವಾರ್ಡ್ ನಂ.89ರ (ಜೋಗುಪಾಳ್ಯ) ಮತ್ತು 115 (ವನ್ನಾರಪೇಟೆ)ದ ದೊಮ್ಮಲೂರು ಉಪವಿಭಾಗದ ವಾರ್ಡ್ ಮುಖ್ಯರಸ್ತೆಗಳು ಮತ್ತು ಅಡ್ಡರಸ್ತೆಗಳು, ಒಳಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳ ಸಮಗ್ರ ಅಭಿವೃದ್ಧಿ ಕಾಮಗಾರಿಗಳಿಗೆ ಯೋಜನಾ ನಿರ್ವಹಣಾ ಸಲಹೆಗಳನ್ನು ಒದಗಿಸುವುದು ಮುಖ್ಯ ಮಂತ್ರಿಗಳ ಮೂಲ ಸೌಕರ್ಯ ಕಾರ್ಯಕ್ರಮದ 2025–26ರ ಅನುದಾನದಡಿ (ಸಿಎಂಐಡಿಪಿ) (ಸರ್ಕಾರಿ ಆದೇಶ ಸಂ.5 ಮತ್ತು 8). ಟೆಂಡರ್‌ನ ಅಂದಾಜು ಮೊತ್ತ (ಕೋಟಿ ರೂ.ಗಳಲ್ಲಿ).: **10.00.** ಇಎಂಡಿ ಮೊತ್ತ (ರೂ.ಗಳಲ್ಲಿ): **25,000/-.**
3)	ಪ್ಯಾಕೇಜ್ 3: ದೊಮ್ಮಲೂರು ಉಪವಿಭಾಗದ ವಾರ್ಡ್ ನಂ.112ರ (ದೊಮ್ಮಲೂರು) ಮತ್ತು 114 (ಅಗರಂ)ನ ವಾರ್ಡ್ ಮುಖ್ಯರಸ್ತೆಗಳು ಮತ್ತು ಅಡ್ಡರಸ್ತೆಗಳು, ಒಳಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳ ಸಮಗ್ರ ಅಭಿವೃದ್ಧಿ ಕಾಮಗಾರಿಗಳಿಗೆ ಯೋಜನಾ ನಿರ್ವಹಣಾ ಸಲಹೆಗಳನ್ನು ಒದಗಿಸುವುದು ಮುಖ್ಯ ಮಂತ್ರಿಗಳ ಮೂಲ ಸೌಕರ್ಯ ಕಾರ್ಯಕ್ರಮದ 2025–26ರ ಅನುದಾನದಡಿ (ಸಿಎಂಐಡಿಪಿ) (ಸರ್ಕಾರಿ ಆದೇಶ ಸಂ.6 ಮತ್ತು 7). ಟೆಂಡರ್‌ನ ಅಂದಾಜು ಮೊತ್ತ (ಕೋಟಿ ರೂ.ಗಳಲ್ಲಿ).: **10.00.** ಇಎಂಡಿ ಮೊತ್ತ (ರೂ.ಗಳಲ್ಲಿ): **25,000/-.**
4)	ಪ್ಯಾಕೇಜ್ 1: ಶಾಂತಿನಗರ ಉಪವಿಭಾಗದ ಆರ್ಟಿರಿಯಲ್ ಮತ್ತು ಸಬ್ ಆರ್ಟಿರಿಯಲ್ ರಸ್ತೆಗಳ ಮತ್ತು ಒಳಚರಂಡಿಗಳು ಹಾಗೂ ಅದ್ಯತಾ ರಸ್ತೆಗಳ ಮತ್ತು ಸಂಪರ್ಕರಸ್ತೆಗಳ ಸಮಗ್ರ ಅಭಿವೃದ್ಧಿ ಕಾಮಗಾರಿಗಳಿಗೆ ಯೋಜನಾ ನಿರ್ವಹಣಾ ಸಲಹೆಗಳನ್ನು ಒದಗಿಸುವುದುವಿಶೇಷ ಮೂಲ ಸೌಕರ್ಯ ಯೋಜನೆಗಳಿಗೆ ಬಂಡವಾಳ ಬೆಂಬಲ 2025–26 ಅನುದಾನದಡಿ (ಸಿಎಸ್‌ಎಸ್‌ಐಪಿ) (ಸರ್ಕಾರಿ ಆದೇಶ ಸಂ.26, 27, 28, 29 ಮತ್ತು 30). ಟೆಂಡರ್‌ನ ಅಂದಾಜು ಮೊತ್ತ (ಕೋಟಿ ರೂ.ಗಳಲ್ಲಿ).: **24.95.** ಇಎಂಡಿ ಮೊತ್ತ (ರೂ.ಗಳಲ್ಲಿ): **62,375/-.**
5)	ಪ್ಯಾಕೇಜ್ 2: ದೊಮ್ಮಲೂರು ಉಪವಿಭಾಗದಲ್ಲಿ ಆರ್ಟಿರಿಯಲ್ ಮತ್ತು ಸಬ್ ಆರ್ಟಿರಿಯಲ್ ರಸ್ತೆಗಳ ಮತ್ತು ಒಳಚರಂಡಿಗಳು ಹಾಗೂ ಅದ್ಯತಾ ರಸ್ತೆಗಳ ಮತ್ತು ಸಂಪರ್ಕರಸ್ತೆಗಳ ಸಮಗ್ರ ಅಭಿವೃದ್ಧಿ ಕಾಮಗಾರಿಗಳಿಗೆ ಯೋಜನಾ ನಿರ್ವಹಣಾ ಸಲಹೆಗಳನ್ನು ಒದಗಿಸುವುದು ವಿಶೇಷ ಮೂಲ ಸೌಕರ್ಯ ಯೋಜನೆಗಳಿಗೆ ಬಂಡವಾಳ ಬೆಂಬಲ 2025–26 ಅನುದಾನದಡಿ (ಸಿಎಸ್‌ಎಸ್‌ಐಪಿ) (ಸರ್ಕಾರಿ ಆದೇಶ ಸಂ.31, 32, 33, 34, 35, 36, 37, 38, 39, 40, 41, 42 ಮತ್ತು 43). ಟೆಂಡರ್‌ನ ಅಂದಾಜು ಮೊತ್ತ (ಕೋಟಿ ರೂ.ಗಳಲ್ಲಿ).: **17.50.** ಇಎಂಡಿ ಮೊತ್ತ (ರೂ.ಗಳಲ್ಲಿ): **43,750/-.**
6)	ಶಾಂತಿನಗರ ಉಪವಿಭಾಗದ ವಾರ್ಡ್ ನಂ.166, 167, 168, 169, 170, 171, ಮತ್ತು 172ಗಳಲ್ಲಿ ರಸ್ತೆಗಳ ಮತ್ತು ಒಳಚರಂಡಿಗಳು ಸಮಗ್ರ ಅಭಿವೃದ್ಧಿ ಕಾಮಗಾರಿಗಳು. ಟೆಂಡರ್‌ನ ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ).: **10.00.** ಇಎಂಡಿ ಮೊತ್ತ (ರೂ.ಗಳಲ್ಲಿ): **25,000/-.**

ಟೆಂಡರ್‌ನ ಕಾರ್ಯಸೂಚಿ: 1) ಆರ್‌ಎಫ್‌ಪಿ ದಾಖಲೆಗಳ ಲಭ್ಯತೆ ದಿನಾಂಕ: 23–12–2025ರ ರಿಂದ. 2) ಬಿಡ್ ಪೂರ್ವ ಸಭೆಯು 08–01–2026 ರಂದು ಮಧ್ಯಾಹ್ನ 3.30 ಗಂಟೆಗೆ ಮುಖ್ಯ ಅಭಿಯಂತರರ ಕಚೇರಿ, ಕೇಂದ್ರ ವಲಯ–1, 18ನೇ ಮಹಡಿ, ಪಿ.ಯು. ಕಟ್ಟಡ, ಬೆಂಗಳೂರು – 560 001 ರಲ್ಲಿ ನಡೆಯಲಿದೆ. 3) ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 15–01–2026 ರಂದು ಸಂಜೆ 4.00 ಗಂಟೆಯವರೆಗೆ. 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 16–01–2026 ರಂದು ಸಂಜೆ 4:30 ಗಂಟೆಗೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಶಾಂತಿನಗರ ವಿಭಾಗ, ಬೆಂಕೇನಪಾಲಿಕೆ.

ಕರ್ನಾಟಕ ಸರ್ಕಾರ
ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ
ಸಂಖ್ಯೆ : ಕೆಎಂಸಿಆರ್‌ಐ/ನಿಕಾ/ಟೆಂಡರ್/475/2025–26 ದಿನಾಂಕ : 20–12–2025

ಇ–ಟೆಂಡರ್ ಪ್ರಕಟಣೆ

ನಿರ್ದೇಶಕರು, ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ ಹುಬ್ಬಳ್ಳಿ, ಇವರು ಕನಾಟಕ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ (ಪಿಡಬ್ಲುಡಿ) ಯಲ್ಲಿ ಸೂಕ್ತ ದರ್ಜೆಯಲ್ಲಿ ಗುತ್ತಿಗೆದಾರರೆಂದು ನೋಂದಾಯಿಸಿದ ಗುತ್ತಿಗೆದಾರರಿಂದ ಈ ಕೆಳಗೆ ಕಾಣಿಸಿದ ಕಾಮಗಾರಿಗಳಿಗೆ 'ಇ–ಪ್ರೊಕ್ಯೂರಮೆಂಟ್' ಮುಖಾಂತರ ಪ್ರತ್ಯೇಕವಾಗಿ ಟೆಂಡರ್‌ನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿ ಹೆಸರು	ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ ರೂ.	ಟೆಂಡರ್ ಫಾರ್ಮ ಬೆಲೆ ರೂ.	ಮುಂಗಡ ಠೇವಣಿ ಹಣ ರೂ.	ಕಾಲಮಿತಿ (ಮಳೆಗಾಲ ಸಹಿತ)	ಅರ್ಹ ಗುತ್ತಿಗೆದಾರರ ದರ್ಜೆ	ವರ್ಗ (Category)
	ಕೆಡಬ್ಲು–3 ಪ್ರಕಾರ ದ್ವಿಲಕೋಟೆ ಪದ್ಧತಿ						
1	ಕೆ.ಎಂ.ಸಿ.ಆರ್.ಐ ಆವರಣದಲ್ಲಿಯ ಒಳಾಂಗಣ ಕ್ರೀಡಾಂಗಣದ ಪಕ್ಕದಲ್ಲಿ ಆರ್‌ಸಿಸಿ ತಡೆಗೋಡೆ ನಿರ್ಮಾಣ ಕಾಮಗಾರಿ, ಮುಖ್ಯ ಕಾಲೇಜ ಕಟ್ಟಡದಲ್ಲಿರುವ ಆಡಿಟೋರಿಯಮ್ ಸುತ್ತಲೂ ಕಾಂಕ್ರೀಟ ಪೇವ್ಮೆಂಟ್ ಅಳವಡಿಸುವ ಕಾಮಗಾರಿ.	75,00,000–00	ಇ–ಪೋರ್ಟಲ್ ಪ್ರಕಾರ	1,50,000–00	03 ತಿಂಗಳು	3ನೇ ದರ್ಜೆ ಹಾಗೂ ಮೇಲಿನ ದರ್ಜೆ	ಸಾಮಾನ್ಯ
2	ಕೆ.ಎಂ.ಸಿ.ಆರ್.ಐ ಆವರಣದಲ್ಲಿಯ ಮುಖ್ಯ ಕಾಲೇಜ ಕಟ್ಟಡದಲ್ಲಿರುವ ಐಟಿ ಸರ್ವರ್ ರೂಮ್ & ಮೈಕ್ರೊಬಯಾಲಜಿ ಡಿಪಾರ್ಟಮೆಂಟ್ ಹತ್ತಿರವಿರುವ ಎಲೆಕ್ಟ್ರಿಕಲ್ ಪ್ಯಾನೆಲ್ ಬದಲಿಸುವ ಕಾಮಗಾರಿ ಹಾಗೂ ಓಟಿ ಕಾಂಪ್ಲೆಕ್ಸ್‌ನಲ್ಲಿರುವ ಎಲೆಕ್ಟ್ರಿಕಲ್ ಪ್ಯಾನೆಲ್ ಬೋರ್ಡ ಬದಲಿಸುವ ಕಾಮಗಾರಿ.	40,00,000–00	ಇ–ಪೋರ್ಟಲ್ ಪ್ರಕಾರ	1,00,000–00	03 ತಿಂಗಳು	3ನೇ ದರ್ಜೆ ಹಾಗೂ ಮೇಲಿನ ದರ್ಜೆ	ಸಾಮಾನ್ಯ

ಟೆಂಡರ್‌ಗಳನ್ನು ಇಎಂಡಿ ಹಾಗೂ ಟೆಂಡರ್ ಶುಲ್ಕನೊಂದಿಗೆ (ವೆಬ್‌ಸೈಟ್‌ನಲ್ಲಿ ನಿಗದಿ ಮಾಡಿರುವ ಒಂದು ಮಾದರಿಯಲ್ಲಿ ಆನ್‌ಲೈನ್ ಪೇಮೆಂಟ್ ಮಾತ್ರ) ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://www.kppp.karnataka.gov.in** ಲಾಗಿನ್ ಆಗಿ ಪಡೆಯಬಹುದು. ಯಾವುದೇ ಟೆಂಡರ್ ಅನ್ನು ಸ್ವೀಕರಿಸುವ ಇಲ್ಲವೆ ಯಾವುದೇ / ಎಲ್ಲಾ ಟೆಂಡರ್‌ಗಳನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿರುವವರು ಹೊಂದಿರುತ್ತಾರೆ.

ಸಹಿ/– (ನಿರ್ದೇಶಕರು),
ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ.



ಹಾವೇರಿಯ ಬೀಜ ಕ್ರಾಂತಿ



ಹಾವೇರಿ ಜಿಲ್ಲೆಯ ಕದರಮಂಡಲಗಿ ಗ್ರಾಮದಲ್ಲಿರುವ ರೈತ ಶಂಭು ಶೆಟ್ಟರ್ ಅವರ ಪ್ಲಾಟ್‌ನ ಎದುರು ಒಣಗಲು ಹಾಕಿರುವ ಹಾಗಲಕಾಯಿ ಬೀಜಗಳು ಪ್ರಜಾವಾಣಿ ಚಿತ್ರ / ಮಾಲತೇಶ ಇಚ್ಚಂಗಿ

ಒಂದನೇ ಪುಟದಿಂದ..

ವರ್ಷದಿಂದ ವರ್ಷಕ್ಕೆ ಬೀಜಗಳ ಉತ್ಪಾದನೆಯೂ ಹೆಚ್ಚಾಗುತ್ತಿದೆ. ಏಷ್ಯಾ ಖಂಡದ ದೇಶಗಳ ರೈತರು ವಾರ್ಷಿಕ 2.05 ಲಕ್ಷ ಕೋಟಿ ಕೆ.ಜಿ.ಯಷ್ಟು ಬೀಜ ಬಿತ್ತನೆ ಮಾಡುತ್ತಿದ್ದು, ಇದರಲ್ಲಿ ಬಹುಪಾಲು ಬೀಜ ರಾಣೆಬೆನ್ನೂರಿನದ್ದು ಎಂಬುದು ವಿಶೇಷ.

ಉತ್ತರ ಕರ್ನಾಟಕದ ಹೆಬ್ಬಾಗಿಲು ಎನಿಸಿಕೊಂಡಿರುವ ಹಾವೇರಿ ಜಿಲ್ಲೆಯ ಪ್ರಮುಖ ತಾಲ್ಲೂಕು ಕೇಂದ್ರವಾಗಿರುವ ರಾಣೆಬೆನ್ನೂರಿನಲ್ಲಿ ಬೀಜೋತ್ಪಾದನೆ ಹೇಗೆ ಶುರುವಾಯಿತು? ಅದಕ್ಕೆ ಕಾರಣ ಯಾರು? ರೈತರು ಮತ್ತು ಕಂಪನಿಗಳ ನಡುವಿನ ಸಂಬಂಧ ಹೇಗಿದೆ? ಎಂಬುದನ್ನು ತಿಳಿಯುತ್ತ ಹೋದಾಗ, ಸಣ್ಣದೊಂದು ಊರಿನ ರೈತರು ವಿಶ್ವಮಟ್ಟದಲ್ಲಿ ಪ್ರಸಿದ್ಧಿ ಪಡೆದಿದ್ದಾರೆ ಎನ್ನುವುದು ಅರಿವಾಗುತ್ತದೆ.

ಬ್ರಿಟಿಷ್ ಆಳ್ವಿಕೆಯಲ್ಲೂ ಬೀಜೋತ್ಪಾದನೆ: ರಾಣೆಬೆನ್ನೂರು ತಾಲ್ಲೂಕಿನ ಜೋಯಿಸರಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಭೂ ಪ್ರದೇಶ, ಸಮಪ್ರಮಾಣ ವಾತಾವರಣವಿರುವ ಪ್ರದೇಶ. ಮಳೆಗಾಲದಲ್ಲಿ ನಿಗದಿಯಂತೆ ಮಳೆ, ಚಳಿಗಾಲದಲ್ಲಿ ನಿಗದಿಯಂತೆ ಚಳಿ ಹಾಗೂ ಬೇಸಿಗೆಯಲ್ಲಿ ನಿಗದಿಯಂತೆ ಬಿಸಿಲು ಇರುತ್ತದೆ. ಯಾವುದೇ ಕಾಲದಲ್ಲೂ ವಾತಾವರಣದಲ್ಲಿ ಬದಲಾವಣೆ ಆಗುವುದಿಲ್ಲ. ಹೆಚ್ಚು ಮಳೆಯಾಗಿ ಭೂಮಿಯೂ ಚೌಗು ಹಿಡಿಯಲ್ಲ. ಈ ಪ್ರದೇಶದಲ್ಲಿ ಮಳೆಯಾಶ್ರಿತ ಸಾಂಪ್ರದಾಯಿಕ 'ಬೀಜ ಕೃಷಿ' ಮಾಡಿದರೆ ಫಲ ನಿಶ್ಚಿತವೆಂಬುದು ಬ್ರಿಟಿಷರಿಗೂ ಗೊತ್ತಿತ್ತು.

ಮುಂಬೈ ಪ್ರಾಂತ್ಯದ ಆಡಳಿತಕ್ಕೆ ಒಳಪಟ್ಟಿದ್ದ ಈ ಪ್ರದೇಶದ ರೈತರಿಂದ ಬೀಜೋತ್ಪಾದನೆ ಮಾಡಿಸುತ್ತಿದ್ದ ಬ್ರಿಟಿಷರು, ಅದೇ ಬೀಜಗಳನ್ನು ವಿದೇಶಿ ಕಂಪನಿಗಳ ಹೆಸರಿನಲ್ಲಿ ಹೊರ ದೇಶಕ್ಕೆ ರಫ್ತು ಮಾಡುತ್ತಿದ್ದರು. ಜೋಳ, ಹತ್ತಿ ಬೆಳೆಯ ಬೀಜಗಳು ಪ್ರಸಿದ್ಧಿ ಪಡೆದಿದ್ದವು. 1 ಕೆ.ಜಿ ಮೂಲ ಬೀಜ ಬಿತ್ತಿದ್ದರೆ, 2 ಕ್ವಿಂಟಲ್‌ನಿಂದ 4 ಕ್ವಿಂಟಲ್‌ವರೆಗೂ ಬಿತ್ತನೆ ಬೀಜಗಳು ಲಭ್ಯವಾಗುತ್ತಿತ್ತು. ಇದನ್ನು ಅರಿತಿದ್ದ ಬ್ರಿಟಿಷರು, ರೈತರು ಬೆಳೆದ ಬೀಜಗಳನ್ನು ತಮಗಷ್ಟೇ ನೀಡುವಂತೆ ಕಟ್ಟಪ್ಪಣೆ ಹೊರಡಿಸಿದ್ದರು. ಸ್ವಾತಂತ್ರ್ಯ ಹೋರಾಟದ ಕಿಚ್ಚು ಹೆಚ್ಚಾದಾಗ, ಈ ವಹಿವಾಟಿನ ಮಾಹಿತಿ ರೈತರಿಗೆ ಲಭ್ಯವಾಯಿತು. ನಂತರ ಬೀಜ ಕೊಡುವುದನ್ನು ನಿಲ್ಲಿಸಿದರು.

ಬ್ರಿಟಿಷರ ಆದೇಶವನ್ನು ಧಿಕ್ಕರಿಸಿ, ಬೀಜಗಳನ್ನು ಖುದ್ದಾಗಿ ಮಾರಲಾರಂಭಿಸಿದರು. ಕೃಷಿ ಬೀಜಗಳ ಮೂಲಕವೂ ಸ್ವಾತಂತ್ರ್ಯ ಹೋರಾಟ ಆರಂಭವಾದ ದಿನಗಳನ್ನು ಜೋಯಿಸರಹಳ್ಳಿ ಗ್ರಾಮದ ಹಿರಿಯರು ನೆನಪು ಮಾಡಿಕೊಳ್ಳುತ್ತಾರೆ.

'ಬ್ರಿಟಿಷರ ಕಾಲದಿಂದಲೂ ನಮ್ಮಲ್ಲಿ ಬೀಜೋತ್ಪಾದನೆ ಬೆಳೆದು ಬಂದಿರುವುದಾಗಿ ತಂದೆ ನೂರುಲ್ಲಾ ಹೇಳುತ್ತಿದ್ದರು. ರಾಣೆಬೆನ್ನೂರಿಗೆ ಬಂದ ಕಂಪನಿಗಳು ಸಹ ತಂದೆಯ ಮಾರ್ಗದರ್ಶನದಲ್ಲಿ ಬೀಜೋತ್ಪಾದನೆ ಆರಂಭಿಸಿದ್ದವು. ಅವರು ಇತ್ತೀಚೆಗಷ್ಟೇ ನಿಧನರಾದರು. ಅವರು ಹಾಕಿಕೊಟ್ಟ ಮಾರ್ಗದಲ್ಲಿ ಬೋಜೋತ್ಪಾದನೆ ಕೆಲಸವನ್ನು ನಾವು ಮುಂದುವರಿಸಿಕೊಂಡು ಹೋಗುತ್ತಿದ್ದೇವೆ' ಎಂದು 'ಅಮೃತ ಬೀಜ ಸಂಸ್ಕರಣ ಘಟಕ'ದ ಮಾಲೀಕ ಜಾವೀದ್ ನವಾಜ್ ಕಿಲ್ಲೇದಾರ ಹೇಳುತ್ತಾರೆ.

'ನನಗೆ ತಿಳಿವಳಿಕೆ ಬಂದಾಗಿನಿಂದಲೂ ತಂದೆ ಜತೆ ಬೀಜೋತ್ಪಾದನೆ ಕೆಲಸ ಮಾಡುತ್ತಿದ್ದೇನೆ. ರೈತರಿಗೆ ಮೂಲ ಬೀಜ ಕೊಟ್ಟು, ಅದರಿಂದ ಬೀಜಗಳನ್ನು ಉತ್ಪಾದಿಸಿ ಅದನ್ನು ಖರೀದಿಸಿ ಕಂಪನಿಗಳಿಗೆ ನೀಡುತ್ತಿದ್ದೇವೆ. ಹೊರ ರಾಜ್ಯ ಹಾಗೂ ವಿದೇಶಕ್ಕೂ ಇಲ್ಲಿಂದ ಬೀಜಗಳು ರಫ್ತಾಗುತ್ತಿವೆ. ಕೆಲ ಕಂಪನಿಗಳು ಮಾತ್ರ ರಾಣೆಬೆನ್ನೂರು ಹೆಸರು ನಮೂದಿಸುತ್ತಿವೆ. ಇಡೀ ಏಷ್ಯಾ ಖಂಡದಲ್ಲಿ ರಾಣೆಬೆನ್ನೂರು ಬೀಜಕ್ಕೆ ಬೇಡಿಕೆಯಿದೆ' ಎಂದು ಬೀಜೋತ್ಪಾದನೆ ಮಾರುಕಟ್ಟೆ ಸ್ಥಿತಿ–ಗತಿ ಬಿಚ್ಚಿಟ್ಟರು.

ಬೀಜ ಪರೀಕ್ಷೆ ನಂತರ ಹಣ ಪಾವತಿ: '12 ವರ್ಷಗಳಿಂದ ಬೀಜ ಕೃಷಿ ಮಾಡುತ್ತಿದ್ದೇನೆ. ಸೌತೆ, ಬೆಂಡಿ, ಟೊಮೆಟೊ, ಕರಬೂಜ, ಕುಂಬಳ... ಹೀಗೆ, ಕಂಪನಿಗಳ ಒಪ್ಪಂದದ ಪ್ರಕಾರ ಬೀಜೋತ್ಪಾದನೆ ಮಾಡುತ್ತೇನೆ. ಗಂಡು–ಹೆಣ್ಣು ಸಸಿಗಳನ್ನು ಕಂಪನಿಯವರು ಕೊಡುತ್ತಾರೆ. ಅದನ್ನು ನಾಟಿ ಮಾಡಿ, ಬೆಳೆಸಿ ಪರಾಗ ಸ್ಪರ್ಶ ಮಾಡುವ ಹೊಣೆ ನಮ್ಮದು' ಎಂದು ಜೋಯಿಸರಹಳ್ಳಿಯ ರೈತ ಕೆಂಚಪ್ಪ ಸಣ್ಣಮನಿ ಹೇಳಿದರು.

'ಪ್ರತಿಯೊಂದು ಬೆಳೆಗೂ ಅದರದ್ದೇ ಆದ ಪರಾಗ ಸ್ಪರ್ಶದ ಕ್ರಮವಿದೆ. ಪರಾಗ ಸ್ಪರ್ಶ ಚೆನ್ನಾಗಿ ನಡೆದರೆ ಮಾತ್ರ, ಇಳುವರಿ ಬರುತ್ತದೆ. ಬೀಜಗಳ ಶುದ್ಧತೆಯೂ ಶೇ 95ರಷ್ಟು ಬರುತ್ತದೆ. ಹೀಗಾಗಿ, ಬೀಜೋತ್ಪಾದನೆಯಲ್ಲಿ ಪರಾಗ ಸ್ಪರ್ಶವೇ ಮುಖ್ಯ' ಎಂದರು.

'10 ಗುಂಟೆ, 15 ಗುಂಟೆ ಹಾಗೂ 20 ಗುಂಟೆ ಲೆಕ್ಕದಲ್ಲಿ ಒಂದೊಂದು ಪ್ಲಾಟ್ ಮಾಡಿ ಬೀಜೋತ್ಪಾದನೆ ಮಾಡುತ್ತಾರೆ. ಒಂದೊಂದು ಕಂಪನಿಗೂ ಒಂದೊಂದು ಪ್ಲಾಟ್ ಮಾಡುವ ರೈತರೂ ಇದ್ದಾರೆ. ಕಾಲಕ್ಕೆ ತಕ್ಕಂತೆ ಬೆಳೆಯೂ ಬದಲಾಗುತ್ತದೆ. ನಾಟಿ ಕ್ರಮ ಹಾಗೂ ಪರಾಗ ಸ್ಪರ್ಶ ಚೆನ್ನಾಗಿದರೆ ಮಾತ್ರ ಹೆಚ್ಚು ಇಳುವರಿ ಬರುತ್ತದೆ' ಎಂದರು.

'ಸಸಿಗಳಲ್ಲಿ ಕಾಯಿಗಳು ಸಂಪೂರ್ಣ ಹಣ್ಣಾಗಿ ಬಣ್ಣ ಬದಲಿಸಿದ ನಂತರವೇ ಹರಿದು ಒಂದೆಡೆ ಹಾಕುತ್ತೇವೆ. ನಂತರ, ಹಣ್ಣುಗಳಿಂದ ಬೀಜಗಳನ್ನು ತೆಗೆದು ಬಿಸಿಲಿನಲ್ಲಿ ಒಣಗಿಸುತ್ತೇವೆ. ಪೊಳ್ಳು ಬೀಜಗಳನ್ನು ಬೇರ್ಪಡಿಸಿ, ಗಟ್ಟಿ ಕಾಳು ಬೀಜವನ್ನು ಮಾತ್ರ ಕಂಪನಿಗಳಿಗೆ ಕೊಡುತ್ತೇವೆ. ಕಂಪನಿಯವರು ಬೀಜಗಳ ಪರೀಕ್ಷೆ ನಡೆಸಿ, 3 ತಿಂಗಳ ನಂತರ ಹಣ ನೀಡುತ್ತಾರೆ. ಬೀಜ ಚೆನ್ನಾಗಿದ್ದರೆ ಮಾತ್ರ ಹಣ ಬರುತ್ತದೆ. ಇಲ್ಲದಿದ್ದರೆ, ಹಣ ಬರುವುದು ಖಾತ್ರಿಯಿಲ್ಲ' ಎಂದು ಹೇಳಿದರು.

ತಂದೆಯಿಂದ ಕಲಿತ ಬೀಜ ಕೃಷಿ: 'ನಮ್ಮ ತಂದೆಯವರು ಬೀಜ ಕೃಷಿ ಮಾಡುತ್ತಿದ್ದರು. ನಾನು ಸಹ 14 ವರ್ಷದಿಂದ ಈ ಕೃಷಿ ಮಾಡುತ್ತಿದ್ದೇನೆ. ಮೊದಲಿಗೆ ಈ ಕೃಷಿಯಲ್ಲಿ ಶೇ 50ರಷ್ಟು ಲಾಭವಿತ್ತು. ಆದರೆ, ಈಗ ಕಾರ್ಮಿಕರು ಸಿಗುವುದಿಲ್ಲ. ಸಿಕ್ಕರೂ ಹೆಚ್ಚು ಹಣ ಕೊಡಬೇಕು. ನಾವೇ ವಾಹನ ಮಾಡಿಕೊಂಡು ಕರೆತಂದು, ವಾಪಸು ಕಳುಹಿಸಬೇಕು. ಬೀಜೋತ್ಪಾದನೆಗಾಗಿ ರೈತರ ನಡುವೆಯೇ ಸ್ಪರ್ಧೆ ಹೆಚ್ಚಾಗಿದೆ. ಖರ್ಚು ಹೆಚ್ಚಾಗಿದೆ. ಇಳುವರಿಯೂ ಆಗಾಗ ಕಡಿಮೆಯಾಗುತ್ತದೆ. ಶೇ 25ರಷ್ಟು ಲಾಭ ಬಂದರೆ ಹೆಚ್ಚು' ಎಂದು ಕದರಮಂಡಲಗಿ ರೈತ ಶಂಭು ಶೆಟ್ಟರ ತಿಳಿಸಿದರು.

'ಮೊದಲಿಗೆ 18 ಎಕರೆ ಜಾಗದಲ್ಲಿ ಬೀಜ ಕೃಷಿ ಮಾಡಿದೆ. ಪ್ರಾಥಮಿಕ ಜ್ಞಾನದ ಕೊರತೆ ಹಾಗೂ ಹವಾಮಾನದ ಬದಲಾವಣೆಯಿಂದ ನಷ್ಟವಾಯಿತು. ಈಗ ಕದರಮಂಡಲಗಿಯಲ್ಲಿ 8 ಎಕರೆಯಲ್ಲಿ ಬೀಜೋತ್ಪಾದನೆ ಮಾಡುತ್ತಿದ್ದೇನೆ. 15 ಗುಂಟೆಗೊಂದು ಪ್ಲಾಟ್ ಮಾಡಿದ್ದೇನೆ. ಯಾವುದೇ ಬೆಳೆ ಬೆಳೆದರೂ ₹ 80 ಸಾವಿರದಿಂದ ₹ 1 ಲಕ್ಷದವರೆಗೂ ಖರ್ಚಾಗುತ್ತದೆ. ಇಳುವರಿ ಹೆಚ್ಚಾದರೆ ಮಾತ್ರ ಲಾಭ ಬರುತ್ತದೆ' ಎಂದರು.



ಹಾವೇರಿ ಜಿಲ್ಲೆಯ ಚಿಕ್ಕಬಾಸೂರು ಬಳಿ ಬೀಜೋತ್ಪಾದನೆಗೆಂದು ತಮ್ಮ ಪ್ಲಾಟ್‌ನಲ್ಲಿ ಬೆಳೆದ ಸೌತೆಕಾಯಿಗಳನ್ನು ರೈತ ನಾಗರಾಜ ಕೊಪ್ಪದ ಅವರು ಒಂದೆಡೆ ರಾಶಿ ಹಾಕಿದರು

'ಕೃತಕ ಪರಾಗ ಸ್ಪರ್ಶ ಮಾಡಿದರೆ ಇಳುವರಿ ಹೆಚ್ಚಾಗುತ್ತದೆ' ಎಂಬ ತತ್ವದಡಿ ಹೈಬ್ರೀಡ್ ಬೀಜಗಳು ಪರಿಚಯವಾದವು. ನಾವು ವೈಜ್ಞಾನಿಕ ರೀತಿಯಲ್ಲಿ ಪರಾಗ ಸ್ಪರ್ಶ ಮಾಡಿದರೆ ಮಾತ್ರ ಉತ್ತಮ ಲಾಭ ಪಡೆಯಲು ಸಾಧ್ಯ. ಪರಾಗ ಸ್ಪರ್ಶದಲ್ಲಿ ಎಡವಟ್ಟಾದರೆ, ಇಳುವರಿ ಬರುವುದಿಲ್ಲ' ಎಂದು ಹೇಳಿದರು.

'ಹೈಬ್ರೀಡ್ ಬೀಜದ ಸಸಿ ನೀಡುವ ಮೊದಲೇ ಕಂಪನಿಯವರು, ಪರಾಗ ಸ್ಪರ್ಶದ ಬಗ್ಗೆ ತಿಳಿಸುತ್ತಾರೆ. ಹೊಸ ರೈತರು, ಪರಾಗ ಸ್ಪರ್ಶದ ಸಮಯದಲ್ಲಿ ತಪ್ಪು ಮಾಡಿ ನಷ್ಟ ಅನುಭವಿಸುತ್ತಾರೆ. ಅನುಭವಿ ರೈತರು ಮಾತ್ರ ಪರಾಗ ಸ್ಪರ್ಶವನ್ನು ಉತ್ತಮ ರೀತಿಯಲ್ಲಿ ಮಾಡಿ ಹೆಚ್ಚು ಲಾಭ ಗಳಿಸುತ್ತಾರೆ. ಗಂಡು ಸಸಿಯ ಹೂವಿನಲ್ಲಿರುವ ಸ್ಟಿಗ್ಮಾವನ್ನು ತೆಗೆದು, ಹೆಣ್ಣು ಸಸಿಯ ಪ್ರತಿಯೊಂದು ಹೂವಿನ ಜೊತೆ ಪರಾಗ ಸ್ಪರ್ಶ ಮಾಡುತ್ತೇವೆ. ಇಂಥ ಹೂವು ಅರಳಿ ಕಾಯಿ ಆಗುತ್ತದೆ. ಇದೇ ಕಾಯಿ, ಚೆನ್ನಾಗಿ ಬೆಳೆದು ಹಣ್ಣಾಗಿ ಬೀಜಕ್ಕೆ ಅರ್ಹವಾಗುತ್ತದೆ' ಎಂದು ವಿವರಿಸಿದರು.

ನುರಿತ ಕಾರ್ಮಿಕರು: 'ನಮ್ಮ ತಂದೆ 35 ವರ್ಷದಿಂದ ಬೀಜೋತ್ಪಾದನೆ ಮಾಡುತ್ತಿದ್ದಾರೆ. ಅವರ ಕೆಲಸಕ್ಕೆ ನಾನೂ ಕೈ ಜೋಡಿಸಿದ್ದೇನೆ. ಸೌತೆ, ಹಾಗಲಕಾಯಿ, ಟೊಮೆಟೊ... ಹೀಗೆ ವಿವಿಧ ಬೀಜಗಳ ಉತ್ಪಾದನೆ ಮಾಡುತ್ತೇವೆ. ಒಂದು ಪ್ಲಾಟ್‌ಗೆ ₹ 50 ಸಾವಿರದಿಂದ ₹ 60 ಸಾವಿರ ಖರ್ಚಾಗುತ್ತದೆ. ಬೀಜ ಕೊಟ್ಟ ಮೂರು ತಿಂಗಳ ನಂತರ ಕಂಪನಿಯವರು ಹಣ ನೀಡುತ್ತಾರೆ. ನಮಗೆ ಏನಾದರೂ ತುರ್ತು ಅಗತ್ಯವಿದ್ದರೆ, ಮುಂಗಡವಾಗಿ ಹಣ ಪಡೆಯುತ್ತೇವೆ' ಎಂದು ಜೋಯಿಸರಹಳ್ಳಿಯ ರೈತ ನಾಗರಾಜ ಚಿಕ್ಕಪ್ಪ ಮ್ಯಾಗೇರಿ ತಿಳಿಸಿದರು.

'ಬೀಜ ಕೃಷಿಯಲ್ಲಿ ಬೆಳೆಗೆ ಕಾಲಕ್ಕೆ ತಕ್ಕಂತೆ ರೋಗಗಳು ಬರುತ್ತವೆ. ಅದಕ್ಕೆ ಏನು ಮಾಡಬೇಕೆಂದು ಕಂಪನಿಯವರೇ ಹೇಳುತ್ತಾರೆ. ಆದರೆ, ನಮಗೆ ಅನುಭವ ಇರುವುದರಿಂದ ಕಂಪನಿಯವರು ಹೇಳುವ ಮುಂಚೆಯೇ ಔಷಧಿ ತಂದು ಸಿಂಪರಣೆ ಮಾಡುತ್ತೇವೆ. ರೋಗವನ್ನು ತ್ವರಿತವಾಗಿ ಹತೋಟಿಗೆ ತರುತ್ತೇವೆ. ಈ ಬೀಜೋತ್ಪಾದನೆಯಿಂದ ಆಗಾಗ ನಷ್ಟವಾದರೂ ಲಾಭದ ಪ್ರಮಾಣವೂ ಹೆಚ್ಚಿದೆ' ಎಂದು ಹೇಳಿದರು.

ಸಂಸ್ಥೆಗಳ ಬೆಂಬಲ: 'ರೈತರ ಮೂಲಕ ಬಿತ್ತನೆ ಬೀಜೋತ್ಪಾದನೆ ಜೊತೆಯಲ್ಲಿಯೇ ಕೃಷಿ ಇಲಾಖೆಯ ಕೇಂದ್ರಗಳಲ್ಲಿಯೂ ಬೀಜಗಳ ಉತ್ಪಾದನೆ ಆಗುತ್ತಿತ್ತು. ಬೀಜಗಳ ಉತ್ಪಾದನೆಗೆ, ಪರವಾನಗಿ ಉತ್ಪಾದಕರಿದ್ದರು. 1966ರಲ್ಲಿ ಬೀಜ ಕಾಯ್ದೆ, 1966ರಲ್ಲಿ ಬೀಜ ನಿಯಮಾವಳಿ, 1963-ರಲ್ಲಿ ರಾಷ್ಟ್ರೀಯ ಬೀಜ ನಿಗಮ, 1973ರಲ್ಲಿ ಕರ್ನಾಟಕ ಬೀಜ ನಿಗಮ, 1966ರಲ್ಲಿ ಹೆಬ್ಬಾಳದಲ್ಲಿ ಕೃಷಿ ವಿಶ್ವವಿದ್ಯಾಲಯ, 1974ರಲ್ಲಿ ರಾಜ್ಯ ಬೀಜ ಪ್ರಮಾಣ ಸಂಸ್ಥೆ ಸೇರಿದಂತೆ ಹಲವು ಸಂಸ್ಥೆಗಳು ಆರಂಭವಾದವು. ಇವುಗಳು ಸಹ ಬೀಜೋತ್ಪಾದನೆ ವೇಗ ನೀಡಿದವು' ಎಂದು ಕೃಷಿ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕ ಆರ್.ಜಿ. ಗೊಲ್ಲರ ಹೇಳಿದರು.

'ಈಗ ಬೀಜೋತ್ಪಾದನೆ ಕ್ಷೇತ್ರ ಹಲವು ಕಡೆ ವ್ಯಾಪಿಸಿದೆ. ಬ್ಯಾಡಗಿ, ಹಿರೇಕೆರೂರು ಭಾಗದಲ್ಲಿಯೂ ರೈತರು ಬೀಜೋತ್ಪಾದನೆ ಮಾಡುತ್ತಿದ್ದಾರೆ. ರಾಜ್ಯದ ವಿವಿಧ ಭಾಗಗಳಲ್ಲಿಯೂ ಬೀಜ ಕೃಷಿ ಆರಂಭವಾಗಿದೆ' ಎಂದು ಅವರು ಹೇಳಿದರು.

ಆದಾಯ ವೃದ್ಧಿಸಿದ ಬೀಜ ಕೃಷಿ: ಸಾಂಪ್ರದಾಯಿಕ ಕೃಷಿ ಮಾಡುತ್ತಿದ್ದ ರೈತರು, ಕಡಿಮೆ ಇಳುವರಿ ಹಾಗೂ ಕಡಿಮೆ ಬೆಲೆ ಪಡೆದು ಆರ್ಥಿಕವಾಗಿ ಹಿಂದುಳಿದಿದ್ದರು. ಬೀಜೋತ್ಪಾದನೆ ಆರಂಭವಾದ ನಂತರ, ರೈತರ ಆದಾಯವೂ ವೃದ್ಧಿಸಿದೆ.

'1979ರಲ್ಲಿ ತಿನ್ನಲು ಬಳಸುತ್ತಿದ್ದ ಜೋಳಕ್ಕೆ ಕ್ವಿಂಟಲ್‌ಗೆ ₹ 300 ಇತ್ತು. ಅದೇ ಬೀಜದ ಜೋಳಕ್ಕೆ ₹ 2,500ರಿಂದ ₹ 3,000 ಬೆಲೆಯಿತ್ತು. ಇದೇ ಕಾರಣಕ್ಕೆ ರೈತರು, ತಿನ್ನುವ ಜೋಳದ ಬದಲು ಬೀಜದ ಜೋಳದ ಕೃಷಿಯತ್ತ ವಾಲಿದರು' ಎಂದು ರಾಜ್ಯ ಬೀಜ ಪ್ರಮಾಣನ ಸಂಸ್ಥೆ'ಯ ನಿವೃತ್ತ ನಿರ್ದೇಶಕ ಎಸ್.ಸಿ.ವಿ. ರೆಡ್ಡಿ ಹೇಳಿದರು.

'ಇಂದಿಗೂ ರೈತರು ಉತ್ಪಾದಿಸುವ ಬೀಜಕ್ಕೆ ಉತ್ತಮ ದರವಿದೆ. ಸಾಮಾನ್ಯ ಕೃಷಿಗಿಂತವೂ ಬೀಜ ಕೃಷಿ ಭಿನ್ನವಾಗಿದೆ. ಪರಾಗ ಸ್ಪರ್ಶ ಹಾಗೂ ನಾಟಿ ಕ್ರಮಗಳ ಬಗ್ಗೆ ಮಾಹಿತಿ ಇದ್ದವರು, ಈ ಕೃಷಿಯಲ್ಲಿ ಯಶಸ್ವಿ ರೈತರಾಗಬಹುದು' ಎಂದರು.

ಪರಿಕಲ್ಪನೆ: ಯತೀಶ್ ಕುಮಾರ್ ಜಿ.ಡಿ



ಕಳಪೆ ಬಿತ್ತನೆ ಬೀಜಗಳ ವಿರುದ್ಧ ಪ್ರಕರಣ: ಡಿಸಿ

ಹೊರ ಜಿಲ್ಲೆ, ಹೊರ ರಾಜ್ಯ ಹಾಗೂ ವಿದೇಶದಿಂದ ಬಂದು ರಾಣೆಬೆನ್ನೂರಿನಲ್ಲಿ ಬೀಜ ಖರೀದಿಸಿಕೊಂಡು ಹೋಗುತ್ತಿದ್ದಾರೆ. ಇದನ್ನೇ ಬಂಡವಾಳ ಮಾಡಿಕೊಂಡ ಕೆಲವರು, ಕಳಪೆ ಬೀಜಗಳ ಮಾರಾಟದಲ್ಲಿ ತೊಡಗಿದ್ದಾರೆ. ಈ ಜಾಲಕ್ಕೆ ಸಿಲುಕಿ ನಷ್ಟ ಅನುಭವಿಸಿರುವ 639 ರೈತರು ಈಗಾಗಲೇ ಜಿಲ್ಲಾಡಳಿತಕ್ಕೆ ದೂರು ನೀಡಿದ್ದಾರೆ.

ಜಿಲ್ಲೆಯ ರಾಣೆಬೆನ್ನೂರಿನಲ್ಲಿರುವ ನಿಸರ್ಗ ಸೀಡ್ಸ್ ಕಂಪನಿಯವರು ರೈತರಿಗೆ ಮಾರಿದ್ದ ನಿಸರ್ಗ ಗೋಲ್ಡ್–3399, ನಿಸರ್ಗ–4555, ಎಸ್–25 ಹಾಗೂ ನಿಸರ್ಗ–99 ಹೆಸರಿನ ಮೆಕ್ಕೆಜೋಳದ ಬೀಜಗಳು ಕಳಪೆ ಎಂಬುದನ್ನು ಪ್ರಯೋಗಾಲಯದ ವರದಿ ಮೂಲಕ ಕೃಷಿ ಇಲಾಖೆ ಅಧಿಕಾರಿಗಳು ಪತ್ತೆ ಮಾಡಿದ್ದು, ಈ ಸಂಬಂಧ ಪ್ರಕರಣವನ್ನೂ ದಾಖಲಿಸಿದ್ದಾರೆ.

'ಬೀಜಗಳ ಮಾರಾಟಕ್ಕೆ ರಾಣೆಬೆನ್ನೂರು ಹೆಸರುವಾಸಿಯಾಗಿದೆ. ಹಾವೇರಿ ಮಾತ್ರವಲ್ಲದೇ ದಾವಣಗೆರೆ, ವಿಜಯಪುರ, ವಿಜಯನಗರ, ಕೊಪ್ಪಳ, ಬಳ್ಳಾರಿ, ಧಾರವಾಡ, ಚಿತ್ರದುರ್ಗ, ಶಿವಮೊಗ್ಗ ಹಾಗೂ ಇತರೆ ಜಿಲ್ಲೆಗಳ ರೈತರು ರಾಣೆಬೆನ್ನೂರಿಗೆ ಬಂದು ಬೀಜ ಖರೀದಿಸಿಕೊಂಡು ಹೋಗುತ್ತಾರೆ. 150ಕ್ಕೂ ಹೆಚ್ಚು ಮಳಿಗೆಗಳು ರಾಣೆಬೆನ್ನೂರಿನಲ್ಲಿವೆ. ಈ ಪೈಕಿ 11 ಮಳಿಗೆಗಳಲ್ಲಿ ನಿಸರ್ಗ ಸೀಡ್ಸ್ ಕಂಪನಿಯ ಕಳಪೆ ಬೀಜಗಳನ್ನು ಮಾರಾಟ ಮಾಡಿರುವುದು ಪತ್ತೆಯಾಗಿದೆ' ಎಂದು ಜಿಲ್ಲಾಧಿಕಾರಿ ವಿಜಯ ಮಹಾಂತೇಶ ದಾನಮ್ಮನವರ 'ಪ್ರಜಾವಾಣಿ'ಗೆ ತಿಳಿಸಿದರು.

'ರಾಣೆಬೆನ್ನೂರಿನ ಶಿವಂ ಸೀಡ್ಸ್, ಮರುಳಸಿದ್ದೇಶ್ವರ ಸೀಡ್ಸ್, ನಿಸರ್ಗ ಸೀಡ್ಸ್, ಸುರ್ಯೋದಯ ಸೀಡ್ಸ್, ಪ್ರಕಾಶ ಹೈಬ್ರೀಡ್ ಸೀಡ್ಸ್, ನಂದಿ ಸೀಡ್ಸ್, ಕೆ.ಬಿ. ಸೀಡ್ಸ್, ಮಣಿಕಂಠ ಸೀಡ್ಸ್, ಗುರು ಹೈಬ್ರೀಡ್ ಸೀಡ್ಸ್, ಗುರು ಶಾಂತೇಶ್ವರ ಅಗ್ರೊ ಸೆಂಟರ್ ಹಾಗೂ ಮಂಗಳಾ ಸೀಡ್ಸ್ ಮಳಿಗೆ ಮೇಲೂ ದಾಳಿ ಮಾಡಿ ಕಳಪೆ ಬೀಜಗಳನ್ನು ಜಪ್ತಿ ಮಾಡಲಾಗಿದೆ' ಎಂದರು.

'ಕಳಪೆ ಬೀಜಗಳಿಂದ ನಷ್ಟ ಅನುಭವಿಸಿದ್ದ ರೈತರಿಂದ ಅರ್ಜಿ ಆಹ್ವಾನಿಸಲಾಗಿತ್ತು. ಹಾವೇರಿ ಹಾಗೂ ಸುತ್ತಮುತ್ತಲಿನ ಜಿಲ್ಲೆಗಳ 639 ರೈತರು ಇದುವರೆಗೂ ಅರ್ಜಿ ಸಲ್ಲಿಸಿದ್ದಾರೆ. ಅವರೆಲ್ಲರೂ 9,392 ಪೊಟ್ಟಣ ಕಳಪೆ ಬೀಜ ಖರೀದಿಸಿರುವುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ' ಎಂದು ವಿಜಯ ಮಹಾಂತೇಶ ತಿಳಿಸಿದರು.

'ಬೀಜೋತ್ಪಾದನೆಗೆ ಶಕ್ತಿ ತುಂಬಿದ ಹಸಿರು ಕ್ರಾಂತಿ'

ಸ್ವಾತಂತ್ರ್ಯದ ನಂತರ ಸ್ಥಾಪನೆಯಾದ ಅಖಂಡ ಧಾರವಾಡ ಜಿಲ್ಲೆ ವ್ಯಾಪ್ತಿಗೆ ರಾಣೆಬೆನ್ನೂರು ಸೇರ್ಪಡೆಯಾಯಿತು. ಈ ಸಂದರ್ಭದಲ್ಲೂ ತಕ್ಕಮಟ್ಟಿಗೆ ಮಳೆಯಾಶ್ರಿತ ಬೀಜೋತ್ಪಾದನೆ ಮುಂದುವರಿಯಿತು. ಸುಮಾರು ವರ್ಷಗಳ ಹಿಂದೆ ಗಡಿಗ್ರಾಮವಾದ ಜೋಯಿಸರಹಳ್ಳಿಯಲ್ಲಿ ಬೇಸಿಗೆ ಇರುವಾಗ, ನೀರಿಗೆ ತೀವ್ರ ಹಾಹಾಕಾರ ಎದುರಾಯಿತು. ಜಿಲ್ಲಾಡಳಿತ ಚಕ್ಕಡಿಯ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಿತ್ತು. ಅವಾಗಲೇ ಗ್ರಾಮದಲ್ಲಿ ಕೊಳವೆ ಬಾವಿಯೊಂದನ್ನು ಕೊರೆಸಬೇಕೆಂಬ ಆಗ್ರಹ ಹೆಚ್ಚಾಯಿತು.

ಅಖಂಡ ಧಾರವಾಡ ಜಿಲ್ಲೆಯಲ್ಲಿಯೇ ಮೊದಲ ಬಾರಿಗೆ ಜೋಯಿಸರಹಳ್ಳಿಯಲ್ಲಿ ಕೊಳವೆ ಬಾವಿ ಕೊರೆಸಿ, ಸ್ಥಳೀಯರಿಗೆ ನೀರು ಕೊಡಲಾಯಿತು. ವರ್ಷಗಳು ಕಳೆದಂತೆ ಕೊಳವೆ ಬಾವಿ ನೀರು ಸಹ ಬೀಜೋತ್ಪಾದನೆಗೆ ಸಹಕಾರಿಯಾಯಿತು. 1965ರಲ್ಲಿ ದೇಶದಲ್ಲಿ ಹಸಿರು ಕ್ರಾಂತಿಯ ಪರ್ವ ಶುರುವಾಗುತ್ತಿದ್ದಂತೆ, ರಾಣೆಬೆನ್ನೂರಿನ ಬೀಜ ಕೃಷಿಗೆ ವೈಜ್ಞಾನಿಕ ಸ್ಪರ್ಶ ಸಿಕ್ಕಂತಾಯಿತು. 1997 ಆಗಸ್ಟ್ 24ರಂದು ಹಾವೇರಿ ಜಿಲ್ಲೆಯಾದಾಗ, ಅದಕ್ಕೆ ರಾಣೆಬೆನ್ನೂರು ತಾಲ್ಲೂಕು ಕೇಂದ್ರವಾಗಿ ಸೇರ್ಪಡೆಗೊಂಡಿತು.

'ದೇಶದಲ್ಲಿ ಶುರುವಾಗಿದ್ದ ಹಸಿರು ಕ್ರಾಂತಿ, ಬೀಜೋತ್ಪಾದನೆಯಲ್ಲಿ ಪಳಗಿದ್ದ ರಾಣೆಬೆನ್ನೂರಿನ ರೈತರ ಬದುಕಿನ ದಿಕ್ಕನ್ನೇ ಬದಲಾಯಿಸಿತು. ಬೀಜ ಉತ್ಪಾದಿಸಿ ಸ್ಥಳೀಯ ಮಟ್ಟಕ್ಕಷ್ಟೇ ಸೀಮಿತವಾಗಿದ್ದ ರೈತರು, ಜಾಗತಿಕ ಮಟ್ಟಕ್ಕೆ ಪರಿಚಯವಾದರು. ಹೊಸ ರೈತರು, ಹೊಸ ಕಂಪನಿಗಳು ಬರುತ್ತಲೇ ಇವೆ' ಎಂದು ಕೃಷಿ ಇಲಾಖೆಯ ನಿವೃತ್ತ ಹೆಚ್ಚುವರಿ ನಿರ್ದೇಶಕರೂ ಆಗಿದ್ದ ರಾಜ್ಯ ಬೀಜ ಪ್ರಮಾಣ ಸಂಸ್ಥೆಯ ನಿವೃತ್ತ ನಿರ್ದೇಶಕ ಎಸ್.ಸಿ.ವಿ. ರೆಡ್ಡಿ ಹೇಳಿದರು.

'ನಾನು ಕೃಷಿ ಇಲಾಖೆಯಲ್ಲಿ ವೃತ್ತಿ ಆರಂಭಿಸಿದಾಗ, 1978–79ರಲ್ಲಿ ಮೊದಲಿಗೆ ಬೀಜೋತ್ಪಾದನೆ ಕೆಲಸದ ಜವಾಬ್ದಾರಿ ನೀಡಿದರು. ಹನುಮನಮಟ್ಟಿ ಡಿಸಿಎಚ್–32 ವರಲಕ್ಷ್ಮಿ ಬೀಜ ಉತ್ಪಾದನೆಗಾಗಿ ರೈತರಿಗೆ ತರಬೇತಿ ನೀಡಿದೆವು. ದುಪ್ಪಟ್ಟು ಹಣ ಕೊಟ್ಟು ಬೀಜ ಖರೀದಿಸುವುದಾಗಿಯೂ ಘೋಷಿಸಿದ್ದೆವು. ಖಾಸಗಿ ಬೀಜ ಉತ್ಪಾದಕರು ಹಾಗೂ ಕೃಷಿ ಇಲಾಖೆಯಿಂದ ನಡೆಯುತ್ತಿದ್ದ ಬೀಜೋತ್ಪಾದನೆ ತಿಳಿದುಕೊಂಡ ಖಾಸಗಿ ಕಂಪನಿಯವರು, ರಾಣೆಬೆನ್ನೂರಿಗೆ ಲಗ್ಗೆ ಇಟ್ಟರು. ಇದರ ಜೊತೆಯಲ್ಲಿ ಚಿಕ್ಕಬಳ್ಳಾಪುರದಲ್ಲೂ ಕಂಪನಿಗಳ ಬೀಜೋತ್ಪಾದನೆ ಶುರುವಾಯಿತು' ಎಂದು ಅವರು ಹೇಳಿದರು.

'ರಾಣೆಬೆನ್ನೂರು ತಾಲ್ಲೂಕಿನ ಜೋಯಿಸರಹಳ್ಳಿ ಹಾಗೂ ಸುತ್ತಮುತ್ತಲಿನ ವಾತಾವರಣ, ಬೀಜ ಕೃಷಿಗೆ ಹೇಳಿ ಮಾಡಿಸಿದಂತಿದೆ. ರೈತರು ಪಳಗಿದ್ದಾರೆ. ಕೃಷಿ ವಿಜ್ಞಾನಿಗಳ ತಾಂತ್ರಿಕ ಸಹಾಯ, ರೈತರ ಸಹಕಾರ ಹಾಗೂ ಕೃಷಿ ಇಲಾಖೆಯ ಕ್ರಮಗಳಿಂದಾಗಿ ರಾಣೆಬೆನ್ನೂರು ಇಂದು ಬೀಜಗಳ ಹಬ್ ಆಗಿ ಬೆಳೆದಿದೆ' ಎಂದರು.

'ಪರಾಗ ಸ್ಪರ್ಶ ಕ್ರಿಯೆಯೇ ಮುಖ್ಯ'

'ಬೀಜ ಕೃಷಿಯಲ್ಲಿ ಪರಾಗ ಸ್ಪರ್ಶವೇ ಮಹತ್ವದ್ದು. ಸರಿಯಾದ ಸಮಯಕ್ಕೆ ಸರಿಯಾದ ರೀತಿಯಲ್ಲಿ ಪರಾಗ ಸ್ಪರ್ಶ ಮಾಡಿದರಷ್ಟೇ, ಇಳುವರಿ ಹೆಚ್ಚಾಗಿ ಲಾಭವಾಗುತ್ತದೆ. ಇಲ್ಲದಿದ್ದರೆ, ನಷ್ಟ ಅನುಭವಿಸಬೇಕಾಗುತ್ತದೆ' ಎಂದು ಅಶೋಕ ಸೀಡ್ಸ್ ಕಂಪನಿಯ ಮೇಲ್ವಿಚಾರಕ ಸುರೇಶ ಮಡಿವಾಳರ ತಿಳಿಸಿದರು.

'ಈಗ ಟೊಮೆಟೊ ಬೀಜ ಕೃಷಿ ಆರಂಭವಾಗಿದೆ. ರೈತರು ಪ್ಲಾಟ್‌ಗಳನ್ನು ಸಿದ್ಧಪಡಿಸಿಕೊಂಡಿದ್ದಾರೆ. ಅವರಿಗೆ, 1,500 ಹೆಣ್ಣು ಸಸಿಗಳಿಗೆ 500 ಗಂಡು ಲೆಕ್ಕದಲ್ಲಿ ಸಸಿ ನೀಡುತ್ತೇವೆ. ಅವರು ಮೂರು ತಿಂಗಳು ಬೆಳೆ ಬೆಳೆಸಿ, ಟೊಮೆಟೊ ಬೀಜವನ್ನು ನಮಗೆ ವಾಪಸು ಕೊಡುತ್ತಾರೆ. ಅದೇ ಬೀಜವನ್ನು ನಾವು ಬೆಂಗಳೂರಿನ ಕಂಪನಿಯ ಪ್ರಯೋಗಾಲಯಕ್ಕೆ ಕಳುಹಿಸುತ್ತೇನೆ. ಮೂರು ತಿಂಗಳ ನಂತರ, ರೈತರ ಖಾತೆಗೆ ಹಣ ಜಮೆ ಆಗುತ್ತದೆ. ಇತ್ತೀಚಿನ ದಿನಗಳಲ್ಲಿ ಅನುಭವಿ ಕಾರ್ಮಿಕರ ಕೊರತೆಯಿಂದ ಪರಾಗ ಸ್ಪರ್ಶ ಸರಿಯಾಗಿ ಆಗುತ್ತಿಲ್ಲ. ಇಳುವರಿಯೂ ಕಡಿಮೆಯಾಗುತ್ತಿದೆ' ಎಂದು ಹೇಳಿದರು.



ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 21-12-2000

● **ಕಾಶ್ಮೀರ: ಕದನ ವಿರಾಮ ವಿಸ್ತರಣೆ**

ನವದೆಹಲಿ, ಡಿ.20– ರಂಜಾನ್ ತಿಂಗಳಲ್ಲಿನ ಕದನ ವಿರಾಮ ಘೋಷಣೆ ಫಲಪ್ರದವಾದುದರಿಂದ ಜಮ್ಮು ಮತ್ತು ಕಾಶ್ಮೀರದಲ್ಲಿನ ಕದನ ವಿರಾಮವನ್ನು ಕೇಂದ್ರ ಸರ್ಕಾರ ಇನ್ನೊಂದು ತಿಂಗಳವರೆಗೆ ವಿಸ್ತರಿಸಲು ನಿರ್ಧರಿಸಿದೆ.

ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಇಂದು ಸಂಸತ್ತಿನ ಉಭಯ ಸದನದಲ್ಲಿಯೂ ಘೋಷಿಸಿದರು. ಗಣರಾಜ್ಯೋತ್ಸವದ ನಂತರ ಇದಕ್ಕೆ ಸಂಬಂಧಿಸಿದಂತೆ ಪರಿಸ್ಥಿತಿಯ ಪರಿಶೀಲನೆ ಮಾಡುವುದಾಗಿ ಅವರು ಹೇಳಿಕೆ ನೀಡಿದ್ದಾರೆ. ಭಾರತ ಮತ್ತು ಪಾಕಿಸ್ತಾನ ಮಧ್ಯೆ ಮಾತುಕತೆಗೆ ಸರ್ಕಾರ ಮುಂದಾಗುವುದು ಎಂದು ಅವರು ತಿಳಿಸಿದ್ದಾರೆ.

75 ವರ್ಷಗಳ ಹಿಂದೆ

ಗುರುವಾರ, 21-12-1950

● **ವಿಮಾನ ಅಪಘಾತದ ಸ್ಥಳದಲ್ಲೇ ಮೃತರ ಶರೀರಗಳಿಗೆ ಭೂಗತ ಸಂಸ್ಕಾರ**

ಬೆಂಗಳೂರು, ಡಿ.20– ಡಿಸೆಂಬರ್ 13ನೇ ತಾರೀಖು ಅಪಘಾತಕ್ಕೊಳಗಾದ, ಬೆಂಗಳೂರಿನಿಂದ ಕೊಯಮತ್ತೂರಿಗೆ ಹೊರಟಿದ್ದ ಏರಿಂಡಿಯಾ ಡಕೋಟಾದಲ್ಲಿದ್ದ 20 ಮಂದಿಯಲ್ಲಿ ಒಬ್ಬರ ಶರೀರ ಕೂಡ ಪೂರ್ಣವಾಗಿ ಉಳಿದಿಲ್ಲ.

ಈ ದಿನ ಸ್ಥಳಕ್ಕೆ ಭೇಟಿಯಿತ್ತ ಪಿ.ಟಿ.ಐ. ಪ್ರತಿನಿಧಿ ಟೆಲಿಫೋನು ಮೂಲಕ ಮಾತನಾಡುತ್ತ, ಶರೀರಗಳೆಲ್ಲಾ ವಿಪರೀತವಾಗಿ ಕೊಳೆತು, ಕರಗಿ ವಿಕಾರವಾಗಿವೆ ಎಂಬುದಾಗಿ ತಿಳಿಸಿದ್ದಾರೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

21 ಡಿಸೆಂಬರ್ 2025 ಭಾನುವಾರ ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಶುಕ್ಲ ಪ್ರತಿಪದ್ ಗಂ 9-12 **ನಕ್ಷತ್ರ:** ಪೂರ್ವಾಷಾಢ ಗಂ. 27-36, **ಯೋಗ:** ವೃದ್ಧಿ ಗಂ. 16-36, **ಕರಣ:** ಬವ ಗಂ. 9-12 ಧನು ಮಾಸದ 06 ನೇ ದಿನ. **ಮಳೆ ನಕ್ಷತ್ರ:** ಮೂಲ 2 ನೇ ಪಾದ. **ರಾಹುಕಾಲ:** ಸಾಯಂಕಾಲ 04-30 - 06-00, **ಸೂರ್ಯೋದಯ :** 06-52, **ಸೂರ್ಯಾಸ್ತ:** 06-05, **ಮುಸ್ಲಿಂ ದಿನಾಂಕ:** 29 ಜುಮಾದುಸ್ಸಾನಿ, **ಅದೃಷ್ಟ ಸಂಖ್ಯೆ :** 7, 4

ಮೇಷ: ಸ್ವಯಂಕೃತ ಅಪರಾಧದಿಂದ ಜೀವನದಲ್ಲಿ ಉಲ್ಲಾಸವನ್ನು ಕಳೆದುಕೊಳ್ಳುವ ಸಮಯ ಬರಲಿದೆ. ವಿದ್ಯಾರ್ಥಿಗಳಿಗೆ ಓದಿನಲ್ಲಿ ಹೆಚ್ಚಿನ ಆಸಕ್ತಿ ಬರುವುದು. ಕಾರ್ಯಕ್ಷೇತ್ರದಲ್ಲಿ ಒಳ್ಳೆಯ ಅವಕಾಶಗಳು ದೊರೆಯುತ್ತವೆ.

ವೃಷಭ: ಒತ್ತಡ ತರುವಂತಹ ಕೆಲಸಗಳಿಂದ ದೂರವಿರಿ. ಏಕೆಂದರೆ ಅದರಿಂದ ನಿಮ್ಮ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಬಹುದು. ಅವಿವಾಹಿತರು ಅಸ್ಪಷ್ಟ ನಿಲುವನ್ನು ಹೋಗಲಾಡಿಸಿದಲ್ಲಿ ಕಂಕಣಬಲದ ಸಾಧ್ಯತೆಯಿದೆ.

ಮಿಥುನ: ದುಃಖಗಳನ್ನೆಲ್ಲವನ್ನೂ ಮೀರಿ ಮುಖದಲ್ಲಿ ಮಂದಹಾಸ ಇರಲಿ. ಸಮಾಜದಲ್ಲಿ ಗೌರವಯುತ ಸ್ಥಾನಮಾನಗಳು ನಿಮಗೆ ದೊರಕುತ್ತವೆ. ಮೇಧಾವಿಗಳೊಂದಿಗಿನ ಸಂಪರ್ಕದಿಂದ ನಿಮ್ಮ ಅರಿವು ಹೆಚ್ಚಾಗಲಿದೆ.

ಕರ್ಕಾಟಕ: ಅಧಿಕಾರಿ ವರ್ಗದವರ ಉತ್ತೇಜನದಿಂದಾಗಿ ಕೆಲಸ ಕಾರ್ಯಗಳಲ್ಲಿ ಸುಲಭವಾಗಿ ಜಯ ಲಭಿಸುವ ಸಾಧ್ಯತೆಯಿದೆ. ಹಣಕಾಸಿನ ವಿಚಾರದಲ್ಲಿ ಎಚ್ಚರಿಕೆಯಿಂದಿದ್ದರೆ ಎಲ್ಲವನ್ನೂ ಸುಲಭವಾಗಿ ನಿಭಾಯಿಸಬಹುದು.

ಸಿಂಹ: ನಿಮ್ಮಲ್ಲಿನ ಏಕಾಗ್ರತೆಯಿಂದಾಗಿ ಹೆಚ್ಚಿನ ಜವಾಬ್ದಾರಿಯ ಯಾವುದೇ ಕೆಲಸವನ್ನು ಒಪ್ಪಿಕೊಳ್ಳಬಹುದು. ನಿಯಮ, ನಿಷ್ಠೆಗಳಿಂದ ಸಂಘದ ಅಧಿಕಾರದಲ್ಲಿ ಪದೋನ್ನತಿ ಪಡೆಯಬಹುದು.

ಕನ್ಯಾ: ವಾಹನಗಳ ಅಥವಾ ದೊಡ್ಡ ದೊಡ್ಡ ಯಂತ್ರಗಳಲ್ಲಿ ಕೆಲಸ ಮಾಡುವವರಿಗೆ ಜಾಗ್ರತೆ ಅಗತ್ಯ. ಉದ್ಯಮಿಗಳು ತಮ್ಮ ಕಾರ್ಯಕ್ಷೇತ್ರವನ್ನು ಅಭಿವೃದ್ಧಿ ಪಡಿಸಿಕೊಳ್ಳುವುದರಲ್ಲಿ ಸಫಲರಾಗುವಿರಿ.

ತುಲಾ: ಕೆಲವು ಪ್ರಮುಖ ಕಾರ್ಯಗಳನ್ನು ಮಾಡುವಾಗ ಸಣ್ಣ ಪುಟ್ಟ ಸಮಸ್ಯೆಗಳು ಎದುರಾಗಬಹುದು, ಅವನ್ನು ಲೆಕ್ಕಿಸದೆ ಗುರಿ ಸಾಧನೆಯ ಬಗ್ಗೆ ಯೋಚಿಸಿರಿ. ಖಾಸಗಿ ಗುಮಾಸ್ತ ಕೆಲಸದಲ್ಲಿದ್ದವರಿಗೆ ಪೂರ್ಣ ವಿರಾಮ ಸಿಗುವ ಸಾಧ್ಯತೆ ಇದೆ.

ವೃಶ್ಚಿಕ: ಈ ದಿನ ಸಿಗುವ ಅನಿರೀಕ್ಷಿತ ಅವಕಾಶಗಳನ್ನು ಮುಜುಗರವಿಲ್ಲದೆ ಬಳಸಿಕೊಳ್ಳದ್ದಿದ್ದರೆ ನಿಮ್ಮ ದಡ್ಡತನ ಪ್ರದರ್ಶಿಸಿದಂತಾಗುವುದು. ಇಂದು ಸಂದರ್ಶನ ನಡೆಸುವಲ್ಲಿ, ಯೋಗ್ಯತೆಯನ್ನು ಪರೀಕ್ಷಿಸುವಲ್ಲಿ ಕಷ್ಟಪಡುವಿರಿ.

ಧನು: ಕೆಲಸ ತಿರಸ್ಕರಿಸಿದವರು ಪುನಃ ಹಿಂದಿನ ಕಂಪನಿಯನ್ನೇ ಆಶ್ರಯಿಸುವ ಬಗ್ಗೆ ಯೋಚಿಸಿ. ಅಧಿಕಾರಿ ವರ್ಗದಲ್ಲಿ ಕಾರ್ಯ ನಿರ್ವಹಿಸುತ್ತಿರುವವರಿಗೆ ಜನಸಾಮಾನ್ಯರಿಂದ ಹೆಚ್ಚಿನ ಪ್ರೋತ್ಸಾಹ ಹಾಗೂ ಸಹಕಾರ ದೊರಕುತ್ತದೆ.

ಮಕರ: ಶೈಕ್ಷಣಿಕ ರಂಗದಲ್ಲಿನ ನಿಮ್ಮ ಚಟುವಟಿಕೆಗಳಿಂದ ಉತ್ತಮ ಹೆಸರನ್ನು ಗಳಿಸಿಕೊಳ್ಳಬಹುದು. ನಿಮ್ಮಲ್ಲಿದ್ದ ಪ್ರತಿಭೆಯನ್ನು ಇತರರು ಗಮನಿಸುವರು. ಆಸ್ತಿ ಕೊಳ್ಳುವ ನಿರ್ಧಾರದಲ್ಲಿ ನಿಮ್ಮ ಮನೋಭಾವವನ್ನು ಬದಲಿಸಿಕೊಳ್ಳಿ.

ಕುಂಭ: ವಿದೇಶ ಪ್ರಯಾಣದ ನಿಮ್ಮ ಹಲವು ವರ್ಷದ ಕನಸು ನೆರವೇರುವ ಅವಕಾಶ ಸಿಗುವುದು. ಕಾರ್ಮಿಕರ ಸಮಸ್ಯೆಗಳಿಗೆ ಹೆಚ್ಚಿನ ಪ್ರತಿಕ್ರಿಯೆ ನೀಡಿ ಅವರ ಮನಸ್ಸಿನಲ್ಲಿ ಉತ್ತಮ ಸ್ಥಾನವನ್ನು ಸಂಪಾದಿಸಿಕೊಳ್ಳುವಂತೆ ಆಗಲಿದೆ.

ಮೀನ: ಮನೆಯಲ್ಲಿ ಮಂಗಳಕಾರ್ಯಗಳು ನಡೆಯುವ ಸೂಚನೆ ಕಾಣುತ್ತದೆ. ಅವಶ್ಯಕತೆ ಇರುವ ಜಾಗದಲ್ಲಿ ಅತ್ಯಂತ ಜಿಪುಣತನವನ್ನು ತೋರಿಸಿ ಸಮಾಜದಲ್ಲಿ ಗೌರವವನ್ನು ಕಳೆದುಕೊಳ್ಳುವಂತಾಗಬಹುದು ಎಚ್ಚರ.

ಪದಬಂಧ 6260


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2. ಪಾಪರಹಿತನಾದವನು (3)
4. ಯುನಾನಿ ವೈದ್ಯನಿವನು (3)
5. ಜೊತೆಯಲ್ಲಿ ಪಾಠ ಕಲಿಯುತ್ತಿರುವವನು (4)
6. ರಾಯರು ನಡೆಸಿರುವ ಸಂಧಾನ (4)
8. ತಿಲಕದ ಬಳಿಯಿರುವ ಎಳ್ಳು (2)
10. ನೇಸರನ ಇನ್ನೊಂದು ಹೆಸರು (2)
13. ದಪ್ಪ ನೂಲಿನ ಹಾಸು (4)
14. ನಿಜವಾಗಿಯೂ ಈಕೆ ಶ್ರೀಕೃಷ್ಣನ ಪತ್ನಿ! (4)
15. ಬೇಡುವವ ಇಲ್ಲಿದ್ದಾನೆ (3)
16. ವನದಲ್ಲಿಯೇ ಪ್ರಕಟಗೊಂಡಿರುವ ತಾರುಣ್ಯ! (3)

ಮೇಲಿಂದ ಕೆಳಕ್ಕೆ

1. ನಾ ಮುಂದು ತಾ ಮುಂದು ಎಂದು ನುಗ್ಗುವುದು (6)
2. ಪುರಾಣದ ಪ್ರಕಾರ ಸ್ವರ್ಗವಿರುವ ನಗರ (5)
3. ಪಾಯ ತೋಡುತ್ತಲೇ ಹೂಡಿರುವ ಯುಕ್ತಿ (3)
5. ಸೈನ್ಯದ ಮುಖ್ಯಾಧಿಕಾರಿ (4)
7. ಇದು ಚರಿತ್ರೆಗೆ ಸಂಬಂಧಿಸಿದುದು (6)
9. ಭೋಜನ ಸಮಾರಂಭಕ್ಕೆ ಬೇಕಾದ ಸಾಧನ ಸಾಮಗ್ರಿ (4)
11. ಲೋಹದ ಹಕ್ಕಿಯಲ್ಲಿನ ಪಯಣ (5)
12. ವ್ಯಾಕರಣ ಪ್ರಕ್ರಿಯೆಗೆ ಸಹಾಯಕವಾಗುವ ಅಕ್ಷರ (3)



6259ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಖುಜುತೆ 3.ಉಗುರು 5.ಗಡಿಯಾರ 7.ವಿನಿಮಯ 9.ಕೆಸರು 12.ಮುದುಕ 14.ಪರಂಧಾಮ 18.ತಟವಟ 19.ಗಿಲಿಕೆ 20.ಕನ್ನಡಿ

ಮೇಲಿಂದ ಕೆಳಕ್ಕೆ:
1.ಖುತ್ವಿಕ್ಕು 2.ತೆಗಳಿಕೆ 4.ಗುಲಾಮ 6.ರವಿ 8.ಯವನ 10.ರುಸುಮು 11.ಜನಪ 13.ಕರ್ನಾಟಕ 15.ರಂಗೋಲಿ 16.ಮತ 17.ದಮ್ಮಡಿ

ಸುಡೊಕು 6644

ಹೀಗೆ ಆಡಿ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

7		5	9				2	
					2			
2		9	3				6	
9		4						2
			4		9	1		
	3					9		6
4					8		7	
		1	7			2		3
8		2		5			1	

6643 ಸುಡೊಕು

2	5	4	6	9	1	7	8	3
6	1	8	4	3	7	9	5	2
7	3	9	2	5	8	4	6	1
4	9	1	3	2	5	8	7	6
3	8	7	1	4	6	5	2	9
5	2	6	8	7	9	1	3	4
1	6	5	9	8	2	3	4	7
9	7	3	5	6	4	2	1	8
8	4	2	7	1	3	6	9	5

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಹೊಸ ಕಾಯ್ದೆಯೂ ರದ್ದಾಗಲಿದೆ: ಡಿಎಂಕೆ

'ವಿಬಿ–ಜಿ ರಾಮ್ ಜಿ' ಮಸೂದೆ ವಿಚಾರವಾಗಿ ಕೇಂದ್ರದ ವಿರುದ್ಧ ವಾಗ್ದಾಳಿ

ಚೆನ್ನೈ (ಪಿಟಿಐ): 'ನರೇಗಾ'ಕ್ಕೆ ಪರ್ಯಾಯವಾಗಿ ರೂಪಿಸಿರುವ 'ವಿಬಿ–ಜಿ ರಾಮ್ ಜಿ' ಮಸೂದೆ ವಿಚಾರವಾಗಿ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧ ತಮಿಳುನಾಡಿನ ಆಡಳಿತಾರೂಢ ಡಿಎಂಕೆ ಶನಿವಾರ ವಾಗ್ದಾಳಿ ನಡೆಸಿದೆ.

'ಹೊಸ ಮಸೂದೆಯಲ್ಲಿ ಮಹಾತ್ಮ ಗಾಂಧಿ ಅವರ ಹೆಸರನ್ನು ತೆಗೆದು ಹಾಕಿರುವುದು ಮಾತ್ರ ಸಮಸ್ಯೆಯಲ್ಲ; 125 ದಿನಗಳ ಉದ್ಯೋಗಕ್ಕೆ ಖಾತರಿಯನ್ನೂ ನೀಡುವುದಿಲ್ಲ. ಈ ಯೋಜನೆಯನ್ನು ಯಾವುದೇ ಸಮಯದಲ್ಲಿ ರದ್ದು ಮಾಡಲು ಅಗತ್ಯವಿರುವ ಎಲ್ಲ ಅಂಶಗಳನ್ನೂ ಮಸೂದೆಯು ಒಳಗೊಂಡಿದೆ' ಎಂದು ಹರಿಹಾಯ್ದಿದೆ.

ಉದ್ಯೋಗ ಖಾತರಿ ಯೋಜನೆಯ ಮುಖ್ಯ ಧ್ಯೇಯವನ್ನೇ ಕೈಬಿಡಲಾಗಿದೆ ಎಂದು ಡಿಎಂಕೆ ಮುಖವಾಣಿ 'ಮುರಸೋಲಿ'ಯ ಡಿಸೆಂಬರ್ 20ರ ಆವೃತ್ತಿಯಲ್ಲಿ ಆರೋಪಿಸಲಾಗಿದೆ.

'ಗಾಂಧಿ ಹೆಸರನ್ನು ಕೈಬಿಟ್ಟಿರುವುದರಿಂದ ಅವರ ವರ್ಚಸ್ಸೇನೂ ಕಡಿಮೆ ಆಗುವುದಿಲ್ಲ, ಜನರ ಮನಸ್ಸಿನಲ್ಲಿ ಅವರು ಎಂದಿಗೂ ಜೀವಂತ' ಎಂದು ಹೇಳಿದೆ.

ಯೋಜನೆಗೆ ಕೇಂದ್ರ ಮತ್ತು ರಾಜ್ಯಗಳು 60:40ರ ಅನುಪಾತದಲ್ಲಿ ಅನುದಾನ ನೀಡಬೇಕಿರುವುದು ರಾಜ್ಯಗಳ ಸಂಪತ್ತನ್ನು ಲೂಟಿ ಮಾಡುವ ತಂತ್ರ, 125 ದಿನಗಳ ಉದ್ಯೋಗಕ್ಕೆ ಖಾತರಿ ನೀಡುವುದಾಗಿ ಹೇಳಲಾಗಿದೆ. ಖಂಡಿತ ಅದು ಕಾರ್ಯರೂಪಕ್ಕೆ ಬರದು ಎಂದಿದೆ.

ಕೇಂದ್ರ ಸರ್ಕಾರದ 'ಬಹು ಆಯಾಮ ಬಡತನ ಸೂಚ್ಯಂಕ' (ಎಂಪಿಐ) ಆಧರಿಸಿ ಫಲಾನುಭವಿಗಳನ್ನು ಪಟ್ಟಿ ಮಾಡಲಾಗುತ್ತದೆ. ಇದು ಬಡತನದ ನಿರ್ಮೂಲನೆಗೆ ಶ್ರಮಿಸುತ್ತಿರುವ ತಮಿಳುನಾಡಿನಂತಹ ರಾಜ್ಯಗಳ ಮೇಲೆ ಪರಿಣಾಮ ಬೀರುತ್ತದೆ. ಕೆಲ ದತ್ತಾಂಶವನ್ನು ಒದಗಿಸಿ ಬಡತನ ನಿರ್ಮೂಲನೆಯಾಗಿದೆ ಎಂದು ಬಿಂಬಿಸಿ ಯೋಜನೆಯನ್ನು ರದ್ದುಗೊಳಿಸುವ ಅಪಾಯವಿದೆ ಎಂದು ಆತಂಕ ವ್ಯಕ್ತಪಡಿಸಿದೆ.

'ಕಾಯ್ದೆ ವಿರುದ್ಧ ಹೋರಾಡಿ'

ನವದೆಹಲಿ (ಪಿಟಿಐ): ನರೇಂದ್ರ ಮೋದಿ ಸರ್ಕಾರ ನರೇಗಾ ಕಾಯ್ದೆಯನ್ನು ನೆಲಸಮಗೊಳಿಸುತ್ತಿದೆ. ನೂತನ 'ಕಪ್ಪು ಕಾಯ್ದೆ'ಯ ವಿರುದ್ಧ ಸಂಘಟಿತವಾಗಿ ಹೋರಾಡಿ ಎಂದು ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಕಾಂಗ್ರೆಸ್ ಕಾರ್ಯಕರ್ತರಿಗೆ ಶನಿವಾರ ಕರೆ ನೀಡಿದರು.

ವಿಡಿಯೊ ಸಂದೇಶವನ್ನು ಬಿಡುಗಡೆ ಮಾಡಿರುವ ಅವರು, 'ನರೇಗಾ ಯೋಜನೆಯನ್ನು ದುರ್ಬಲಗೊಳಿಸುವ ಮೂಲಕ ಕೋಟ್ಯಂತರ ರೈತರು, ಕಾರ್ಮಿಕರು ಮತ್ತು ಭೂರಹಿತರ ಹಿತಾಸಕ್ತಿಯ ಮೇಲೆ ಕೇಂದ್ರ ಸರ್ಕಾರ ದಾಳಿ ನಡೆಸುತ್ತಿದೆ' ಎಂದು ವಾಗ್ದಾಳಿ ನಡೆಸಿದರು.

11 ವರ್ಷಗಳಿಂದ ಕೇಂದ್ರ ಸರ್ಕಾರವು ಗ್ರಾಮೀಣ ಬಡ ಜನರ ಹಿತಾಸಕ್ತಿಯನ್ನು ಕಡೆಗಣಿಸುತ್ತಿದೆ ಎಂದು ದೂರಿದರು.

'ಲೂಟಿಕೋರರಿಗಷ್ಟೇ ನೋವು'

ಇಂದೋರ್: ವಿಬಿ–ಜಿ–ರಾಮ್ ಜಿ ಮಸೂದೆಯು ದೇಶದ ಹಿತಾಸಕ್ತಿ, ನರೇಗಾ ಕಾಯ್ದೆಯಡಿಯಲ್ಲಿ ಫಲಾನುಭವಿಗಳ ಕೂಲಿ ಹಣವನ್ನು ಲೂಟಿ ಮಾಡುತ್ತಿದ್ದವರಿಗಷ್ಟೇ ಮಸೂದೆಯ ಅನುಷ್ಠಾನದಿಂದ ನೋವಾಗಿದೆ ಎಂದು ಕೇಂದ್ರ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಹೇಳಿದರು.

ಹೊಸ ಮಸೂದೆಯು ಹೆಚ್ಚಿನ ಉದ್ಯೋಗಾವಕಾಶಗಳನ್ನು ಒದಗಿಸಲಿದೆ. ಇದರಿಂದ ರೈತರು ಮತ್ತು ಯುವಜನರಿಗೆ ಅನುಕೂಲವಾಗಲಿದೆ ಎಂದು ಅವರು ಹೇಳಿದರು.

ರಾಹುಲ್ ಗಾಂಧಿ ಟೀಕೆಯನ್ನು ಉಲ್ಲೇಖಿಸಿ ಪ್ರತಿಕ್ರಿಯಿಸಿದ ಅವರು, 'ಅವರು ವಿರೋಧ ಪಕ್ಷಗಳ ನಾಯಕರಾಗಿದ್ದರೆ, ಕನಿಷ್ಠ ಸಂಸತ್ತಿನಲ್ಲಿ ಇರಬೇಕು' ಎಂದು ಹೇಳಿದರು.

'ಕಾಂಗ್ರೆಸ್ ನರೇಗಾ ಯೋಜನೆ ಜಾರಿ ಮಾಡಿದಾಗ ₹10,000 ಕೋಟಿಯನ್ನೂ ಮೀಸಲಿರಿಸುತ್ತಿರಲಿಲ್ಲ. ಆದರೆ ವಿಬಿ–ಜಿ–ರಾಮ್ ಜಿ ಮಸೂದೆಯಡಿ ₹1 ಲಕ್ಷ ಕೋಟಿಗಿಂತ ಅಧಿಕ ಹಣವನ್ನು ಒದಗಿಸುತ್ತಿದೆ' ಎಂದರು.

'ನಖಾಬ್ ವಿವಾದ ಬೇಸರ ತಂದಿದೆ'

ಬಿಹಾರ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಹೇಳಿಕೆ

ಪಟ್ನಾ (ಪಿಟಿಐ): 'ಕಾರ್ಯಕ್ರಮವೊಂದರಲ್ಲಿ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ವೈದ್ಯೆಯೊಬ್ಬರ ನಖಾಬ್ (ಮುಖಪರದೆ) ತೆಗೆದಿದ್ದನ್ನು ವಿವಾದವಾಗಿ ನೋಡುತ್ತಿರುವುದು ನನಗೆ ಬೇಸರ ತಂದಿದೆ' ಎಂದು ಬಿಹಾರ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಶನಿವಾರ ಹೇಳಿದ್ದಾರೆ.

ಸೋಮವಾರ ಮುಖ್ಯಮಂತ್ರಿ ಸಚಿವಾಲಯದಲ್ಲಿ ಆಯುಷ್ ವೈದ್ಯರಿಗೆ ನೇಮಕಾತಿ ಪತ್ರ ವಿತರಿಸುವ ಕಾರ್ಯಕ್ರಮ ನಡೆದಿತ್ತು. ನೇಮಕಾತಿ ಪತ್ರ ಸ್ವೀಕರಿಸಲು ವೇದಿಕೆಗೆ ಹಿಜಾಬ್ ಧರಿಸಿ ಬಂದ ನುಸ್ರತ್ ಪರ್ವೀನ್ ಅವರನ್ನು ನೋಡಿದ ಮುಖ್ಯಮಂತ್ರಿ, 'ಇದು ಏನು' ಎಂದು ಕೇಳಿ ಮುಖಪರದೆಯನ್ನು ತೆಗೆದಿದ್ದರು.

'ಈ ಘಟನೆಯಲ್ಲಿ ವಿವಾದ ಎನ್ನುವ ಪದ ಕೇಳುವುದು ನನಗೆ ನೋವುಂಟು ಮಾಡಿದೆ. ತಂದೆ ಮತ್ತು ಮಗಳ ನಡುವೆ ವಿವಾದ ಇರಲು ಸಾಧ್ಯವೇ? ಆ ಮನುಷ್ಯ (ಮುಖ್ಯಮಂತ್ರಿ) ವಿದ್ಯಾರ್ಥಿನಿಯರನ್ನು ತನ್ನ ಹೆಣ್ಣು ಮಕ್ಕಳಂತೆ ಕಾಣುತ್ತಾರೆ' ಎಂದು ರಾಜ್ಯಪಾಲರು ಪತ್ರಕರ್ತರಿಗೆ ಪ್ರತಿಕ್ರಿಯಿಸಿದರು.

ಮತ್ತೊಂದೆಡೆ ಟಿಬ್ಬಿ ಸರ್ಕಾರಿ ಕಾಲೇಜು ಮತ್ತು ಆಸ್ಪತ್ರೆ ಪ್ರಾಂಶುಪಾಲ ಮಹಫುಜರ್ ರೆಹಮಾನ್ ಅವರು, 'ಮಹಿಳಾ ವೈದ್ಯೆ ಸೇವೆಗೆ ಸೇರಬೇಕೆ? ಬೇಡವೇ?' ಎಂದು ಮರು ಆಲೋಚನೆ ಮಾಡುತ್ತಿದ್ದಾರೆ. ಮಾಧ್ಯಮಗಳಿಂದ ನುಸ್ರತ್ ಪೋಷಕರು ಅಂತರ ಕಾಯ್ದುಕೊಂಡಿದ್ದಾರೆ. ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ಶನಿವಾರ ಅಂತಿಮ ದಿನವಾದರೂ ಸರ್ಕಾರ ಮತ್ತು ಇಲಾಖೆ 'ಇದೊಂದು ವಿಶೇಷ ಪ್ರಕರಣ ಎಂದು ಪರಿಗಣಿಸಿ ಸಮಯ ವಿಸ್ತರಿಸಿದೆ. ಆಕೆ ಉನ್ನತ ಶಿಕ್ಷಣವನ್ನೂ ಪಡೆಯುವ ಅವಕಾಶ ಇದೆ' ಎಂದು ಹೇಳಿದ್ದಾರೆ.

'ಮಾಧ್ಯಮಗಳು ಸೃಷ್ಟಿಸಿದ ವಿವಾದದಿಂದ ನಮ್ಮ ಕುಟುಂಬಕ್ಕೆ ನೋವಾಗಿದೆ' ಎಂದು ನುಸ್ರತ್ ಪರ್ವೀನ್ ಪತಿ ಹೇಳಿದ್ದಾರೆ.

ನಿತೀಶ್ ಮಧ್ಯಪ್ರವೇಶಕ್ಕೆ ಒತ್ತಾಯ

ಲಖನೌ (ಪಿಟಿಐ): 'ವೈದ್ಯೆಯೊಬ್ಬರ ನಖಾಬ್ ಎಳೆದ ವಿಚಾರಕ್ಕೆ ಸಂಬಂಧಿಸಿದಂತೆ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ವಿಷಾದ ವ್ಯಕ್ತಪಡಿಸಬೇಕು ಮತ್ತು ವಿವಾದವನ್ನು ಅಂತ್ಯಗೊಳಿಸಲು ಯತ್ನಿಸಬೇಕು' ಎಂದು ಬಿಎಸ್‌ಪಿ ಮುಖ್ಯಸ್ಥೆ ಮಾಯಾವತಿ ಶನಿವಾರ ಕರೆ ನೀಡಿದ್ದಾರೆ.

'ನಖಾಬ್ ವಿವಾದವು ದುರದೃಷ್ಟಕರ. ಕೆಲ ಸಚಿವರ ಹೇಳಿಕೆಗಳಿಂದ ವಿವಾದ ಮುಂದುವರಿಯುತ್ತಲೇ ಇದೆ. ಈ ಪ್ರಕರಣವು ಮಹಿಳೆಯರ ಸುರಕ್ಷತೆ ಮತ್ತು ಘನತೆಗೆ ಸಂಬಂಧಿಸಿದೆ. ಹೀಗಾಗಿ ನಿತೀಶ್ ಕುಮಾರ್ ಅವರು ನೇರವಾಗಿ ಮಧ್ಯಪ್ರವೇಶಿಸುವ ಮೂಲಕ ವಿವಾದವನ್ನು ಬಗೆಹರಿಸಬೇಕು' ಎಂದು 'ಎಕ್ಸ್'ನಲ್ಲಿ ಒತ್ತಾಯಿಸಿದ್ದಾರೆ.

ನೃತ್ಯ ಪ್ರದರ್ಶನ

ಪಿಟಿಐ ಚಿತ್ರ



ಕೇರಳದ ಕೊಚ್ಚಿಯಲ್ಲಿ ಶನಿವಾರ ನಡೆದ ಇಂಡಿಯನ್ ಕಲ್ಚರಲ್ ಕಾಂಗ್ರೆಸ್–2025 ಕಾರ್ಯಕ್ರಮದಲ್ಲಿ ಕಲಾವಿದೆಯರು ಆಕರ್ಷಕ ನೃತ್ಯ ಪ್ರದರ್ಶಿಸಿದರು

ಟಿಎಂಸಿ ವಿರುದ್ಧ ಕಿಡಿ; ಡಬಲ್ ಎಂಜಿನ್ ಸರ್ಕಾರ ರಚಿಸಲು ಅವಕಾಶ ಕೋರಿದ ಪ್ರಧಾನಿ

ಬಂಗಾಳದಲ್ಲಿ ಮಹಾ ಜಂಗಲ್ ರಾಜ್: ಮೋದಿ

ಕೋಲ್ಕತ್ತ (ಪಿಟಿಐ): ಭ್ರಷ್ಟಾಚಾರ, ಸ್ವಜನಪಕ್ಷಪಾತ, ಓಲೈಕೆ ಆಡಳಿತದ ವ್ಯವಸ್ಥೆಯು ಪಶ್ಚಿಮ ಬಂಗಾಳದ ಅಭಿವೃದ್ಧಿಯನ್ನು ತಡೆಯುತ್ತಿದೆ. ಅಲ್ಲದೆ ಈ ಪರಿಸ್ಥಿತಿಗಳು ರಾಜ್ಯವನ್ನು 'ಮಹಾ ಜಂಗಲ್ ರಾಜ್' ಆಗಿ ಪರಿವರ್ತಿಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಆರೋಪಿಸಿದರು.

ಆಡಳಿತಾರೂಢ ತೃಣಮೂಲ ಕಾಂಗ್ರೆಸ್ (ಟಿಎಂಸಿ) ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಅವರು, 'ಪಶ್ಚಿಮ ಬಂಗಾಳದ ಮಹಾ ಜಂಗಲ್ ರಾಜ್ ಪರಿಸ್ಥಿತಿಯನ್ನು ನಾವು ಕೊನೆಗೊಳಿಸುತ್ತೇವೆ' ಎಂದು ಘೋಷಿಸಿದರು.

ನಾಡಿಯಾ ಜಿಲ್ಲೆಯ ತಾಹೆರ್‌ಪುರದಲ್ಲಿ ಶನಿವಾರ ನಡೆದ ಬೃಹತ್ ಸಭೆಯನ್ನು ಉದ್ದೇಶಿಸಿ ವರ್ಚುವಲ್ ಆಗಿ ಮಾತನಾಡಿದ ಅವರು, '2026ರ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಡಬಲ್ ಎಂಜಿನ್ ಸರ್ಕಾರ ರಚಿಸಲು ಬಿಜೆಪಿಗೆ ಅವಕಾಶ ನೀಡಿ' ಎಂದು ಮನವಿ ಮಾಡಿದರು.

'ನನ್ನನ್ನು, ಬಿಜೆಪಿಯನ್ನು ಟಿಎಂಸಿ ಎಷ್ಟಾದರೂ ವಿರೋಧಿಸಲಿ, ಆದರೆ ರಾಜ್ಯದ ಜನರಿಗೆ ಕಷ್ಟ ಕೊಡುವ ಮತ್ತು ಪ್ರಗತಿಯನ್ನು ತಡೆಯುವ ಕಾರ್ಯಗಳನ್ನು ಮಾಡಬಾರದು' ಎಂದು ಆಗ್ರಹಿಸಿದರು.

'ಕಮಿಷನ್ ಸಂಸ್ಕೃತಿಯು ರಾಜ್ಯದ ಅಭಿವೃದ್ಧಿಯನ್ನು ಸ್ಥಗಿತಗೊಳಿಸಿದೆ' ಎಂದ ಅವರು, 'ಬಿಜೆಪಿಗೆ ಒಮ್ಮೆ ಅವಕಾಶ ನೀಡಿ, ಡಬಲ್ ಎಂಜಿನ್ ಸರ್ಕಾರ ರಾಜ್ಯದ ಅಭಿವೃದ್ಧಿಗೆ ಪೂರ್ಣವಾಗಿ ಶ್ರಮಿಸುತ್ತದೆ' ಎಂದರು. ಈ ಮೂಲಕ ಅವರು ವಿಧಾನಸಭಾ ಚುನಾವಣೆ ಪ್ರಚಾರವನ್ನೂ ಮಾಡಿದರು.

'ಇತ್ತೀಚೆಗೆ ಬಿಹಾರ ಚುನಾವಣೆಯಲ್ಲಿ ಎನ್‌ಡಿಎ ಭರ್ಜರಿ ಗೆಲುವು ಸಾಧಿಸಿದೆ. ಪಕ್ಕದ ರಾಜ್ಯಗಳ ಫಲಿತಾಂಶ ಬಂಗಾಳದ ಮೇಲೂ ಸಕಾರಾತ್ಮಕ ಪರಿಣಾಮ ಬೀರುತ್ತದೆ. ಗಂಗಾ ನದಿಯು ಬಿಹಾರದ ಮೂಲಕ ಬಂಗಾಳಕ್ಕೆ ಹರಿಯುವುದರಿಂದ, ಬಿಹಾರದಲ್ಲಿ ದೊರೆತ ಫಲಿತಾಂಶವು ಬಂಗಾಳದಲ್ಲೂ ದೊರೆಯಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ಬಂಗಾಳದಲ್ಲಿ ನುಸುಳುಕೋರರಿಗೆ ಟಿಎಂಸಿ ಬೆಂಬಲ ಮತ್ತು ಪ್ರೋತ್ಸಾಹ ನೀಡುತ್ತಿದೆ. ನುಸುಳುಕೋರರನ್ನು ಎಸ್‌ಐಆರ್ ಗುರುತಿಸುತ್ತದೆ ಎಂಬ ಕಾರಣಕ್ಕೆ ವಿರೋಧಿಸುತ್ತಿದೆ' ಎಂದು ದೂರಿದರು.

'ಬಂಗಾಳದಲ್ಲಿ ಎಡಪಕ್ಷಗಳನ್ನು ಅಧಿಕಾರದಿಂದ ಹೊರಹಾಕಿದ್ದರೂ, ಟಿಎಂಸಿ ಅವುಗಳ ದುರ್ಗುಣ ಮೈಗೂಡಿಸಿಕೊಂಡಿದೆ' ಎಂದು ಕಿಡಿಕಾರಿದರು.

ದೃಷ್ಟಿಕೋನವಿಲ್ಲದ ಭಾಷಣ: ಆಡಳಿತಾರೂಢ ತೃಣಮೂಲ ಕಾಂಗ್ರೆಸ್ ಟೀಕೆ

ಕೋಲ್ಕತ್ತ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ಭಾಷಣದಲ್ಲಿ ದೃಷ್ಟಿಕೋನ ಮತ್ತು ಜವಾಬ್ದಾರಿಯ ಕೊರತೆ ಎದ್ದುಕಾಣುತ್ತಿತ್ತು ಎಂದು ಆಡಳಿತಾರೂಢ ಟಿಎಂಸಿ ಟೀಕಿಸಿದೆ.

ಪಶ್ಚಿಮ ಬಂಗಾಳದಲ್ಲಿ ಚುನಾವಣಾ ಆಯೋಗ ಕೈಗೊಂಡಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯಿಂದ (ಎಸ್‌ಐಆರ್) ತೊಂದರೆಗೆ ಸಿಲುಕಿರುವ ಮತುವಾ ಸಮುದಾಯದವರ ಬಗ್ಗೆ ಮಾತನಾಡುವ ಕಾಳಜಿಯನ್ನು ಮೋದಿ ಅವರು ತೋರಲಿಲ್ಲ ಎಂದು ಅದು ಆರೋಪಿಸಿದೆ.

ಎಸ್‌ಐಆರ್ ನಂತರ ಮತದಾರರ ಕರಡು ಪಟ್ಟಿ ಪ್ರಕಟವಾಗಿದ್ದು, ಹೆಸರುಗಳನ್ನು ಅಳಿಸುವ ಕುರಿತ ಅನಿಶ್ಚಿತತೆ ಮತುವಾ ಸಮುದಾಯದವರನ್ನು ಕಾಡುತ್ತಿದೆ. ದಶಕಗಳ ಹಿಂದೆ ಧಾರ್ಮಿಕ ಕಿರುಕುಳ ತಾಳದೆ ಬಾಂಗ್ಲಾದೇಶದಿಂದ ವಲಸೆ ಬಂದ ದಲಿತ ಹಿಂದೂ ನಿರಾಶ್ರಿತ ಸಮುದಾಯದವರೇ ಮತುವಾಗಳಾಗಿದ್ದಾರೆ. ಅವರ ಕಳವಳ ಕುರಿತು ಪ್ರಧಾನಿ ಮಾತುಗಳನ್ನು ಆಡದೇ ಇರುವುದು ಬೇಸರ ತರಿಸಿದೆ ಎಂದು ಟಿಎಂಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಕುನಾಲ್ ಘೋಷ್ ಹೇಳಿದ್ದಾರೆ.

ಅಲ್ಲದೆ ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿ ಬಂಗಾಳಿ ಭಾಷಿಕರ ಮೇಲೆ ನಡೆದ ಕಿರುಕುಳಗಳ ಬಗ್ಗೆಯೂ ಮಾತನಾಡಿಲ್ಲ ಎಂದು ದೂರಿದ್ದಾರೆ.

ಬಂಗಾಳಕ್ಕೆ ನರೇಗಾ ಸೇರಿದಂತೆ ವಿವಿಧ ಯೋಜನೆಗಳಡಿ ನೀಡಬೇಕಿದ್ದ ಸಹಸ್ರಾರು ಕೋಟಿ ರೂಪಾಯಿ ಅನುದಾನ ತಡೆಹಿಡಿದಿರುವುದಕ್ಕೆ ಕಾರಣವೇನು ಎಂಬುದರ ಕುರಿತು ಪ್ರಧಾನಿ ತುಟಿಬಿಚ್ಚಲಿಲ್ಲ ಎಂದು ಅವರು ಕಿಡಿಕಾರಿದ್ದಾರೆ.

ದಟ್ಟ ಮಂಜು; ಇಳಿಯದ ಹೆಲಿಕಾಪ್ಟರ್

ನಾಡಿಯಾ ಜಿಲ್ಲೆಯ ತಾಹೆರ್‌ಪುರದಲ್ಲಿ ದಟ್ಟವಾದ ಮಂಜು ಕವಿದ ವಾತಾವರಣ ಇದ್ದ ಕಾರಣ, ಪ್ರಧಾನಿ ನರೇಂದ್ರ ಮೋದಿ ಅವರಿದ್ದ ಹೆಲಿಕಾಪ್ಟರ್ ಕೆಳಗಿಳಿಯಲು ಸಾಧ್ಯವಾಗಲಿಲ್ಲ.

ಗೋಚರತೆ ಪ್ರಮಾಣ ಕಡಿಮೆ ಇದ್ದಿದ್ದರಿಂದ, ಹೆಲಿಕಾಪ್ಟರ್ ಕೆಲ ಸಮಯದವರೆಗೆ ತಾತ್ಕಾಲಿಕ ಹೆಲಿಪ್ಯಾಡ್ ಮೈದಾನದ ಮೇಲೆ ತಿರುಗಾಡಿತು. ಕೊನೆಗೆ 'ಯು– ಟರ್ನ್' ಮಾಡಿ ಕೋಲ್ಕತ್ತ ವಿಮಾನ ನಿಲ್ದಾಣಕ್ಕೆ ತೆರಳಿತು.

ಅಲ್ಲಿಂದ ರಸ್ತೆ ಮಾರ್ಗವಾಗಿ ಹೋದರೆ ವಿಳಂಬವಾಗುತ್ತಿತ್ತು ಮತ್ತು ಪ್ರಧಾನಿ ಅವರ ದೈನಿಕ ವೇಳಾಪಟ್ಟಿಯಲ್ಲಿ ವ್ಯತ್ಯಾಸಗಳು ಉಂಟಾಗುತ್ತಿದ್ದವು. ಹೀಗಾಗಿ ವಿಮಾನ ನಿಲ್ದಾಣದ ವಿಐಪಿ ಮೊಗಸಾಲೆಯಿಂದಲೇ ವರ್ಚುವಲ್ ಆಗಿ ಪ್ರಧಾನಿ ಅವರು ಜನಸಮೂಹವನ್ನು ಉದ್ದೇಶಿಸಿ ಮಾತನಾಡಿದರು ಎಂದು ಮೂಲಗಳು ತಿಳಿಸಿವೆ.

ಸೋಲಿನ ಹತಾಶೆಯಿಂದ ನಾಟಕ: ಪಳನಿಸ್ವಾಮಿ

ಚೆನ್ನೈ (ಪಿಟಿಐ): 'ನಕಲಿ ಮತ'ಗಳ ಮೂಲಕ ಅಧಿಕಾರಕ್ಕೆ ಬರಬಹುದು ಎಂಬ ಡಿಎಂಕೆಯ ಕನಸನ್ನು ಚುನಾವಣಾ ಆಯೋಗವು, ಎಸ್‌ಐಆರ್ ಮೂಲಕ ನುಚ್ಚುನೂರು ಮಾಡಿದೆ. 95 ಲಕ್ಷ ನಕಲಿ ಮತದಾರರ ಹೆಸರನ್ನು ಮತದಾರರ ಪಟ್ಟಿಯಿಂದ ತೆಗೆದು ಹಾಕಿದೆ. ಈಗ ಸೋಲಿನ ಹತಾಶೆಯಿಂದ ಡಿಎಂಕೆ ನಾಟಕ ಆಡುತ್ತಿದೆ' ಎಂದು ವಿರೋಧ ಪಕ್ಷದ ಮುಖಂಡ ಎಡಪ್ಪಾಡಿ ಕೆ.ಪಳನಿಸ್ವಾಮಿ ಆರೋಪಿಸಿದರು.

'ಆಡಳಿತಾರೂಢ ಡಿಎಂಕೆ ಮತ್ತು ಮುಖ್ಯಮಂತ್ರಿ ಎಂ.ಕೆ ಸ್ಟಾಲಿನ್, ಭಾರಿ ಸಂಖ್ಯೆಯಲ್ಲಿ ನಕಲಿ ಮತಗಳು ಕೈತಪ್ಪಿ ಹೋಗಿರುವುದಕ್ಕೆ, ಎಸ್‌ಐಆರ್ ವಿರುದ್ಧ ಸುಳ್ಳು ಆರೋಪ ಮಾಡುತ್ತಿದ್ದಾರೆ. ಎಐಎಡಿಎಂಕೆ ಇರುವವರೆಗೂ ಅರ್ಹ ಮತದಾರನಿಗೂ ಅನ್ಯಾಯವಾಗುವುದಿಲ್ಲ' ಎಂದು ಹೇಳಿದರು.

'ಎಸ್‌ಐಆರ್' ಬಳಿಕ 97 ಲಕ್ಷ ಅನರ್ಹ ಮತದಾರರನ್ನು ತೆಗೆದುಹಾಕಲಾಗಿದೆ' ಎಂದು ಆಯೋಗ ಡಿ.19ರಂದು ಪ್ರಕಟಿಸಿತ್ತು. ಈ ಮೂಲಕ ತಮಿಳುನಾಡಿನಲ್ಲಿ ಮತದಾರರ ಸಂಖ್ಯೆ 6.41 ಕೋಟಿಯಿಂದ 5.43 ಕೋಟಿಗೆ ಇಳಿಕೆಯಾಗಿದೆ.

ಬಿಎಸ್‌ಎಫ್‌ನಲ್ಲಿ ಮಾಜಿ ಅಗ್ನಿವೀರರ ಕೋಟಾ ಶೇ 50ಕ್ಕೆ ಹೆಚ್ಚಿಸಿದ ಕೇಂದ್ರ

ನವದೆಹಲಿ (ಪಿಟಿಐ): ಗಡಿ ಭದ್ರತಾ ಪಡೆಯ(ಬಿಎಸ್‌ಎಫ್) ಕಾನ್‌ಸ್ಟೆಬಲ್‌ಗಳ ನೇಮಕಾತಿಯಲ್ಲಿ ಮಾಜಿ ಅಗ್ನಿವೀರರ ಕೋಟಾವನ್ನು ಶೇಕಡ 10ರಿಂದ ಶೇ 50ಕ್ಕೆ ಹೆಚ್ಚಳ ಮಾಡಿ ಕೇಂದ್ರ ಗೃಹ ಇಲಾಖೆ ರಾಜ್ಯಪತ್ರ(ಗೆಜೆಟ್) ಹೊರಡಿಸಿದೆ.

ಗಡಿ ಭದ್ರತಾ ಪಡೆ, ಸಾಮಾನ್ಯ ಸೇವಾ ಶ್ರೇಣಿ (ಪತ್ರಾಂಕಿತವಲ್ಲದ) ನೇಮಕಾತಿ ನಿಯಮಗಳು–2015ಕ್ಕೆ ತಿದ್ದುಪಡಿ ತಂದು ಕೋಟಾ ಹೆಚ್ಚಿಸಲಾಗಿದೆ.

ಮಾಜಿ ಅಗ್ನಿವೀರರ ಮೊದಲ ತಂಡ ಐದು ವರ್ಷದವರೆಗೂ ವಯೋಮಿತಿ ವಿನಾಯಿತಿ ಪಡೆದರೆ ಆನಂತರ ಬರುವವರು ಮೂರು ವರ್ಷಗಳ ವಿನಾಯಿತಿ ಪಡೆಯಲಿದ್ದಾರೆ. ಅಲ್ಲದೇ ಇವರನ್ನು ದೈಹಿಕ ಸಾಮಾನ್ಯ ಪರೀಕ್ಷೆ ಮತ್ತು ದೈಹಿಕ ಸದೃಢತೆ ಪರೀಕ್ಷೆಯಿಂದ ಹೊರಗಿಡಲಾಗಿದೆ ಎಂದು ಶುಕ್ರವಾರ ಹೊರಬಿದ್ದಿರುವ ಆದೇಶದಲ್ಲಿ ತಿಳಿಸಲಾಗಿದೆ.

ಪ್ರತಿ ನೇರ ನೇಮಕಾತಿಯಲ್ಲೂ ಮಾಜಿ ಅಗ್ನಿವೀರರಿಗೆ ಸ್ಥಾನ ಕಾಯ್ದಿರಿಸಲಾಗುತ್ತದೆ. ಮಾಜಿ ಸೈನಿಕರಿಗೆ ಶೇ 10, ಕಾರ್ಯಾಚರಣೆ ಕಾನ್‌ಸ್ಟೆಬಲ್‌ಗಳಿಗೆ ಶೇ 3ರಷ್ಟು ಕೋಟಾ ಇರಲಿದೆ. ಮಾಜಿ ಅಗ್ನಿವೀರರಲ್ಲದ ಶೇ 47ರಷ್ಟು ಸ್ಥಾನಗಳನ್ನು ಸಿಬ್ಬಂದಿ ನೇಮಕಾತಿ ಆಯೋಗದ ಮೂಲಕ ನಡೆಸಲಾಗುವುದು.

ಸೇನಾ ಪಡೆಗಳಲ್ಲಿ ನಾಲ್ಕು ವರ್ಷ ಪೂರೈಸಿದ ಅಗ್ನಿವೀರರಿಗೆ ಕೇಂದ್ರ ಮತ್ತು ರಾಜ್ಯ ಗೃಹ ಇಲಾಖೆಗಳಲ್ಲಿ ಅವಕಾಶ ನೀಡಲು ಕೇಂದ್ರ ಸರ್ಕಾರ ಹಲವು ತಿದ್ದುಪಡಿ ತಂದಿದೆ ಎಂದು ಇಲಾಖೆ ಮೂಲಗಳು ತಿಳಿಸಿವೆ.

2022ರಲ್ಲಿ ಕೇಂದ್ರ ಸರ್ಕಾರ ಅಗ್ನಿಪಥ್ ನೇಮಕಾತಿ ಯೋಜನೆಯನ್ನು ಜಾರಿಗೆ ತಂದಿತ್ತು. ಹದಿನೇಳೂವರೆ ವರ್ಷದಿಂದ 21 ವರ್ಷದೊಳಗಿನವರನ್ನು ಭೂಸೇನೆ, ವಾಯುಪಡೆ, ನೌಕಾಪಡೆಗೆ ನಾಲ್ಕು ವರ್ಷದ ಅವಧಿಗೆ ನೇಮಿಸಿಕೊಳ್ಳಲಾಗುತ್ತಿದೆ. ಇವರಲ್ಲಿ ಶೇ 25ರಷ್ಟು ಮಂದಿಗೆ ಸೇನೆಯಲ್ಲೇ 15ಕ್ಕೂ ಹೆಚ್ಚಿನ ವರ್ಷ ಸೇವೆ ಸಲ್ಲಿಸುವ ಅವಕಾಶವನ್ನೂ ನೀಡಲಾಗುತ್ತದೆ.

ತಾಕತ್ತಿದ್ದರೆ ಗಾಂಧಿ ಚಿತ್ರ ತೆಗೆಯಲಿ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಹಾತ್ಮಾ ಗಾಂಧೀಜಿ ಹೆಸರಿನಲ್ಲಿ ಯುಪಿಎ ಸರ್ಕಾರ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಜಾರಿಗೆ ತಂದಿತ್ತು. ನಾಥೂರಾಮ್ ಗೋಡ್ಸೆ ಪಕ್ಷದವರು ಗಾಂಧೀಜಿ ಹೆಸರನ್ನು ತೆಗೆಯಲು ಮುಂದಾಗಿದ್ದಾರೆ. ಗಾಂಧಿ ಭಾರತವನ್ನು ಗೋಡ್ಸೆ ಭಾರತವನ್ನಾಗಿ ಮಾಡಲು ಬಿಡುವುದಿಲ್ಲ' ಎಂದು ಬಿಜೆಪಿ ವಿರುದ್ಧ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಗುಡುಗಿದರು.

'ನ್ಯಾಷನಲ್ ಹೆರಾಲ್ಡ್' ಪ್ರಕರಣದಲ್ಲಿ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ವಿರುದ್ಧ ಜಾರಿ ನಿರ್ದೇಶನಾಲಯ ಸುಳ್ಳು ಕೇಸ್ ದಾಖಲಿಸಲಾಗಿದೆ ಹಾಗೂ ನರೇಗಾದಿಂದ ಗಾಂಧೀಜಿ ಹೆಸರು ಕೈಬಿಟ್ಟು ಅವಮಾನ ಮಾಡಲಾಗಿದೆ ಎಂದು ದೂರಿ ಕೆಪಿಸಿಸಿ ವತಿಯಿಂದ ಫ್ರೀಡಂ ಪಾರ್ಕ್‌ನಲ್ಲಿ ಶನಿವಾರ 'ಸತ್ಯಮೇವ ಜಯತೇ' ಪ್ರತಿಭಟನೆ ನಡೆಯಿತು.

ಪ್ರತಿಭಟನೆಯಲ್ಲಿ ಮಾತನಾಡಿದ ಶಿವಕುಮಾರ್, 'ಬಿಜೆಪಿಗೆ ತಾಕತ್ತು ಇದ್ದರೆ ನೋಟಿನಲ್ಲಿರುವ ಗಾಂಧಿ ಚಿತ್ರವನ್ನು ತೆಗೆಯಲಿ' ಎಂದು ಸವಾಲು ಹಾಕಿದರು.

'ಬಡವರಿಗೆ ಉದ್ಯೋಗ ನೀಡುವ ಯೋಜನೆಯ ಹೆಸರಿನಿಂದ ಗಾಂಧೀಜಿ ಅವರ ಹೆಸರು ತೆಗೆಯುತ್ತಿದ್ದೀರಿ ಎಂದರೆ ನೀವು ದೇಶದ್ರೋಹಿಗಳು' ಎಂದು ಬಿಜೆಪಿ ನಾಯಕರ ವಿರುದ್ಧ ವಾಗ್ದಾಳಿ ನಡೆಸಿದರು.

'ನ್ಯಾಷನಲ್ ಹೆರಾಲ್ಡ್‌ಗೆ ನಾನು ಮತ್ತು ಡಿ.ಕೆ. ಸುರೇಶ್ ದೇಣಿಗೆ ನೀಡಿದ್ದೇವೆ. ಕಾಂಗ್ರೆಸ್ ಕಚೇರಿ ನಿರ್ಮಾಣಕ್ಕೆ ಶಾಸಕರು ವೇತನದಲ್ಲಿ ಪ್ರತಿ ತಿಂಗಳು ₹ 25 ಸಾವಿರ ನೀಡುತ್ತಿದ್ದಾರೆ. ಪಕ್ಷಕ್ಕೆ ದೇಣಿಗೆ ಕೊಟ್ಟವರ ಮೇಲೆ ಪ್ರಕರಣ ದಾಖಲಿಸಲು ಸಾಧ್ಯವೇ? ಅದೇ ರೀತಿ ನ್ಯಾಷನಲ್ ಹೆರಾಲ್ಡ್ ಆಸ್ತಿ ಉಳಿಸಿಕೊಳ್ಳಲು ₹100 ಕೋಟಿಯಷ್ಟು ಕಾಂಗ್ರೆಸಿಗರು ನೀಡಿದರು. ಈ ಹಣ ಸೋನಿಯಾ, ರಾಹುಲ್ ಖಾತೆಗೆ ಹೋಗಿಲ್ಲ. ಆದರೂ ಪ್ರಕರಣ ದಾಖಲಿಸಿದ್ದಾರೆ' ಎಂದು ಕಿಡಿಕಾರಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಶೇಖರ್, ಉಪಾಧ್ಯಕ್ಷ ಬಿ.ಎಲ್. ಶಂಕರ್, ಎಐಸಿಸಿ ಕಾರ್ಯದರ್ಶಿಗಳಾದ ಅಭಿಷೇಕ್ ದತ್, ಮಯೂರ್ ಜೈಕುಮಾರ್, ಬಿ.ವಿ. ಶ್ರೀನಿವಾಸ್, ಶಾಸಕರಾದ ಎ.ಸಿ. ಶ್ರೀನಿವಾಸ್, ಪ್ರದೀಪ್ ಈಶ್ವರ್, ಪರಿಷತ್ ಸದಸ್ಯ ಬಿ.ಕೆ ಹರಿ ಪ್ರಸಾದ್, ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಸೌಮ್ಯಾ ರೆಡ್ಡಿ, ಯುವ ಕಾಂಗ್ರೆಸ್ ಅಧ್ಯಕ್ಷ ಎಚ್.ಎಸ್. ಮಂಜುನಾಥ್ ಗೌಡ, ಮಾಜಿ ಸಂಸದ ಬಿ.ಎನ್. ಚಂದ್ರಪ್ಪ ಮತ್ತಿತರರು ಇದ್ದರು.



ಕೆಪಿಸಿಸಿ ವತಿಯಿಂದ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಶನಿವಾರ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು

'ಪಿತೂರಿಯಿಂದ ಸೋಲಿಸಲು ಸಾಧ್ಯವಿಲ್ಲ'

'ನ್ಯಾಷನಲ್ ಹೆರಾಲ್ಡ್ ಪತ್ರಿಕೆ ರಾಹುಲ್ ಗಾಂಧಿ, ಸೋನಿಯಾ ಗಾಂಧಿ ಅವರ ಆಸ್ತಿಯಲ್ಲ. ದೇಶದ ಆಸ್ತಿ. ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಮೋತಿಲಾಲ್ ವೋರಾ, ಆಸ್ಕರ್ ಫರ್ನಾಂಡೀಸ್ ಅವರ ಹೆಸರಿನಲ್ಲಿ ನ್ಯಾಷನಲ್ ಹೆರಾಲ್ಡ್‌ನ ಸ್ವಲ್ಪ ಷೇರು ನೀಡಲಾಗಿತ್ತು. ಅದಕ್ಕೆ ಅವರ ಮೇಲೆ ಪಿಎಂಎಲ್‌ಎ ಪ್ರಕರಣ ದಾಖಲಿಸಿ ಕೊಡಬಾರದ ಕಿರುಕುಳ ನೀಡಲಾಗುತ್ತಿದೆ. ದ್ವೇಷ ಬಿಜೆಪಿ ಆಸ್ತಿ. ಸತ್ಯಕ್ಕೆ ಸಾವಿಲ್ಲ, ಸುಳ್ಳು ಕೇಸ್‌ಗಳಿಗೆ ಆಯುಷ್ಯವಿಲ್ಲ. ಪಿತೂರಿಯಿಂದ ಸೋಲಿಸಲು, ದ್ವೇಷದಿಂದ ಕುಗ್ಗಿಸಲು ಸಾಧ್ಯವಿಲ್ಲ. ನಾವು ಸತ್ಯಮೇವ ಜಯತೆ ಎಂದು ಹೋರಾಟ ಮಾಡುತ್ತಿದ್ದೇವೆ' ಎಂದು ಶಿವಕುಮಾರ್ ಹೇಳಿದರು.

ಕಂಪನಿಗಳ ಮೇಲೆ ಪರಿಸರ ರಕ್ಷಣೆಯ ಹೊಣೆ: 'ಸುಪ್ರೀಂ'

ಒಂದನೇ ಪುಟದಿಂದ...

ರಾಜಸ್ಥಾನ ಮತ್ತು ಗುಜರಾತ್‌ನಲ್ಲಿ ನವೀಕರಿಸಲಾಗದ ವಿದ್ಯುತ್ ಉತ್ಪಾದಕಗಳ ಕಾರ್ಯಾಚರಣೆಯಿಂದ ಸಂಕಷ್ಟ ಎದುರಿಸುತ್ತಿರುವ ಹೆಬ್ಬಕ ಪಕ್ಷಿ ಸಂಕುಲದ ರಕ್ಷಣೆ ದೃಷ್ಟಿಯಿಂದ ಪೀಠ ಕೆಲ ನಿರ್ದೇಶನಗಳನ್ನು ನೀಡಿದೆ. ಹೆಬ್ಬಕಗಳನ್ನು ಅಳಿವಿನ ಅಂಚಿನಲ್ಲಿರುವ ಪಕ್ಷಿ ಪ್ರಭೇದದಲ್ಲಿ ಗುರುತಿಸಲಾಗಿದೆ.

ಸಾಮಾಜಿಕ ಹೊಣೆಗಾರಿಕೆಯು ಅಂತರ್ಗತವಾಗಿ ಪರಿಸರ ಹೊಣೆಗಾರಿಕೆಯನ್ನೂ ಒಳಗೊಂಡಿರಬೇಕು ಎಂದು ಪೀಠ ಸೂಚಿಸಿದೆ.

ದೇಶದ ಪ್ರಜೆಗಳು ಕಾಡು, ನದಿ, ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ರಕ್ಷಿಸಬೇಕು ಮತ್ತು ಸುಧಾರಿಸಬೇಕು. ಅಲ್ಲದೆ ಸಕಲ ಜೀವಿಗಳ ಬಗ್ಗೆ ಸಹಾನುಭೂತಿ ಹೊಂದಿರಬೇಕು ಎಂಬುದು ಮೂಲಭೂತ ಕರ್ತವ್ಯ. ಭಾರತದ ಸಂವಿಧಾನವು 51ಎ(ಜಿ) ವಿಧಿಯಲ್ಲಿ ಇವುಗಳನ್ನು ಉಲ್ಲೇಖಿಸಿದೆ ಎಂದು ಪೀಠ ಹೇಳಿದೆ.

ಕಾರ್ಪೊರೇಟ್ ಕಂಪನಿಗಳು ಸಮಾಜದ ಮುಖ್ಯ ಅಂಗವಾಗಿ ಈ ಮೂಲಭೂತ ಕರ್ತವ್ಯಗಳನ್ನು ಹಂಚಿಕೊಳ್ಳಬೇಕು. ಸಿಎಸ್‌ಆರ್ ನಿಧಿಗಳ ಮೂಲಕ ಈ ಕರ್ತವ್ಯ ನಿಭಾಯಿಸಬೇಕು. ಪರಿಸರ ಸಂರಕ್ಷಣೆಗಾಗಿ ಹಣವನ್ನು ಹಂಚಿಕೆ ಮಾಡುವುದು ಸ್ವಯಂಪ್ರೇರಿತವಾಗಿ ಮಾಡುವ ದಾನವಲ್ಲ. ಅದು ಸಾಂವಿಧಾನಿಕ ಬಾಧ್ಯತೆಯಾಗಿದೆ ಎಂದು ಪೀಠ ತಿಳಿಸಿದೆ.

ರಾಜಸ್ಥಾನ ಮತ್ತು ಗುಜರಾತಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ನವೀಕರಿಸಲಾಗದ ವಿದ್ಯುತ್ ಉತ್ಪಾದಕಗಳ ಕಂಪನಿಗಳು ಅಳಿವಿನ ಅಂಚಿನಲ್ಲಿರುವ ಹೆಬ್ಬಕ ಪಕ್ಷಿಗಳ ವಾಸಸ್ಥಾನದಲ್ಲಿ ಚಟುವಟಿಕೆಗಳನ್ನು ನಡೆಸುತ್ತಿವೆ. ಈ ಪ್ರದೇಶಗಳಲ್ಲಿ ಪಕ್ಷಿ ಸಂಕುಲಕ್ಕೆ ತೊಂದರೆ ಆಗದಂತೆ ಎಚ್ಚರದಿಂದ ಚಟುವಟಿಕೆಗಳನ್ನು ನಡೆಸಬೇಕು. ಅವುಗಳ ಸಂರಕ್ಷಣೆಗೆ ಒತ್ತು ನೀಡಬೇಕು ಎಂದು ಪೀಠ ಸೂಚಿಸಿದೆ.

ಹೆಬ್ಬಕಗಳ ರಕ್ಷಣೆಗೆ ಕೋರಿ ಪರಿಸರವಾದಿ ಎಂ.ಕೆ.ರಂಜಿತ್ ಸಿನ್ಹ ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಿದ ಪೀಠ ಈ ಕುರಿತು ನಿರ್ದೇಶನಗಳನ್ನು ನೀಡಿದೆ.

'ಭಾರತದ ಶತ್ರುಗಳ ಭೇಟಿ ಮಾಡಿದ ರಾಹುಲ್'

ನವದೆಹಲಿ (ಪಿಟಿಐ): ಜರ್ಮನಿ ಭೇಟಿಯ ಸಂದರ್ಭದಲ್ಲಿ ಭಾರತದ ಶತ್ರುಗಳೊಂದಿಗೆ ಲೋಕಸಭೆಯ ವಿರೋಧಪಕ್ಷದ ನಾಯಕ ರಾಹುಲ್ ಗಾಂಧಿ ಮಾತುಕತೆ ನಡೆಸಿದ್ದಾರೆ ಎಂದು ಶನಿವಾರ ಆರೋಪಿಸಿರುವ ಬಿಜೆಪಿ, 'ಅಂಥ ಶಕ್ತಿಗಳೊಂದಿಗೆ ಕೈಜೋಡಿಸುವ ಮೂಲಕ ಅವರು ದೇಶದ ವಿರುದ್ಧ ಯಾವ ರೀತಿ ಪಿತೂರಿ ನಡೆಸುತ್ತಿದ್ದಾರೆ' ಎಂದು ಪ್ರಶ್ನಿಸಿದ್ದಾರೆ.

ಬರ್ಲಿನ್‌ನ ಹರ್ಟಿ ಶಾಲೆಯ ಅಧ್ಯಕ್ಷ ಕಾರ್ನೊಲ್ಲಿಯ ವೋಲ್ ಅವರ ಜೊತೆಗೆ ರಾಹುಲ್ ಇರುವ ಚಿತ್ರವನ್ನು ಸುದ್ದಿಗೋಷ್ಠಿಯಲ್ಲಿ ತೋರಿಸಿದ ಬಿಜೆಪಿ ರಾಷ್ಟ್ರೀಯ ವಕ್ತಾರ ಗೌರವ್ ಭಾಟಿಯಾ ಅವರು, 'ನಮ್ಮ ಆರೋಪಕ್ಕೆ ಇದು ಪುರಾವೆ' ಎಂದರು.

'ಅಮೆರಿಕದ ಶತಕೋಟ್ಯಧಿಪತಿ ಹೂಡಿಕೆದಾರ ಜಾರ್ಜ್ ಸೋರೊಸ್ ಅವರ 'ಓಪನ್ ಸೊಸೈಟಿ ಫೌಂಡೇಷನ್'ನಿಂದ ಹಣಕಾಸಿನ ನೆರವು ಪಡೆಯುತ್ತಿರುವ ಸೆಂಟ್ರಲ್ ಯುರೋಪ್ ವಿಶ್ವವಿದ್ಯಾಲಯದ ಟ್ರಸ್ಟಿಗಳಲ್ಲಿ ಕಾರ್ನೊಲ್ಲಿಯ ಕೂಡ ಒಬ್ಬರು' ಎಂದು ಗೌರವ್ ತಿಳಿಸಿದರು.

'ಸೋರೊಸ್ ಭಾರತ ವಿರೋಧಿ ಹೇಳಿಕೆ ನೀಡುತ್ತಿದ್ದಾರೆ. ಸಮಗ್ರತೆ, ಸಾರ್ವಭೌಮತೆಯನ್ನು ಹಾನಿಗೊಳಿಸಲು ಬೇಕಾದ ಆರ್ಥಿಕ ನೆರವನ್ನು ನೀಡುತ್ತಿದ್ದಾರೆ' ಎಂದು ಆರೋಪಿಸಿದರು.

'ಮುಗ್ಧ ಪ್ರಾಣಿಗಳ ಪರ ನ್ಯಾಯಾಲಯ'

ನವದೆಹಲಿ (ಪಿಟಿಐ): 'ಮುಗ್ಧ ಪ್ರಾಣಿಗಳ ಚಲನವಲನದ ಮಾರ್ಗಗಳನ್ನು ಮನುಷ್ಯರು ಮತ್ತು ವಾಣಿಜ್ಯ ಉದ್ಯಮಗಳು ನಿರ್ಬಂಧಿಸಿದಾಗೆಲ್ಲ, ಈ ಪ್ರಾಣಿಗಳು ಮೌನವಾಗಿ ಬಳಲುತ್ತವೆ' ಎಂದು ಸುಪ್ರೀಂ ಕೋರ್ಟ್ ಕಳವಳ ವ್ಯಕ್ತಪಡಿಸಿದೆ.

'ಹೀಗಾಗಿಯೇ ನ್ಯಾಯಾಲಯಗಳು ಯಾವಾಗಲೂ ಈ ಪ್ರಾಣಿಗಳ ಪರ ಒಲವು ತೋರುತ್ತವೆ' ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಜಾಯ್‌ಮಾಲ್ಯ ಬಾಗ್ಚಿ, ವಿಪುಲ್ ಎಂ. ಪಾಂಚೋಲಿ ಅವರ ಪೀಠ ತಿಳಿಸಿದೆ.

ತಮಿಳುನಾಡಿನ ಸಿಗೂರ್ ಪ್ರದೇಶದಲ್ಲಿನ ಹೋಟೆಲ್‌ಗಳು ಮತ್ತು ರೆಸಾರ್ಟ್‌ಗಳ ಮಾಲೀಕರು ಸಲ್ಲಿಸಿದ ಅರ್ಜಿಗಳ ವಿಚಾರಣೆಯನ್ನು ಪೀಠ ನಡೆಸಿತು.

ರೈಲು ಡಿಕ್ಕಿ: 7 ಆನೆಗಳ ಸಾವು

ಒಂದನೇ ಪುಟದಿಂದ...

ಘಟನೆಯ ಬೆನ್ನಲ್ಲೇ, ಈ ಮಾರ್ಗದಲ್ಲಿ 9 ರೈಲುಗಳ ಸಂಚಾರವನ್ನು ರದ್ದುಪಡಿಸಲಾಯಿತು. ತಿನ್ಸುಕಿಯಾ–ಎಸ್‌ಎಂವಿಟಿ ಬೆಂಗಳೂರು ಎಕ್ಸ್‌ಪ್ರೆಸ್ ಸೇರಿದಂತೆ 13 ರೈಲುಗಳ ಸಂಚಾರದಲ್ಲಿ ವ್ಯತ್ಯಯವಾಯಿತು.

ಘಟನೆಯ ಕುರಿತು ಸಮಗ್ರ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಹಾಗೂ ವನ್ಯಜೀವಿ ಕಾರಿಡಾರ್‌ಗಳಲ್ಲಿ ಸುರಕ್ಷತೆಗೆ ಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಂತೆ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅರಣ್ಯ ಇಲಾಖೆಗೆ ಸೂಚನೆ ನೀಡಿದ್ದಾರೆ.

'ಹೋಜಾಯಿ ಜಿಲ್ಲೆಯ ಚಂಗೊರಿ ಗ್ರಾಮದ ಸಮೀಪ ದುರ್ಘಟನೆ ಸಂಭವಿಸಿದೆ. ಈ ಪ್ರದೇಶದಲ್ಲಿ ದಟ್ಟ ಮಂಜು ಆವರಿಸಿತ್ತು, ಇದೇ ಈ ಅವಘಡಕ್ಕೆ ಕಾರಣವಾಗಿರಬಹುದು' ಎಂದು ನಗಾಂವ್ ವಿಭಾಗೀಯ ಅರಣ್ಯ ಅಧಿಕಾರಿ ಸುಹಾಸ್ ಕದಂ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

'ಪಶುವೈದ್ಯರಿಂದ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ, ಘಟನೆ ನಡೆದ ಸ್ಥಳದ ಸಮೀಪದಲ್ಲೇ ಮೃತಪಟ್ಟ ಆನೆಗಳ ಅಂತ್ಯಸಂಸ್ಕಾರ ನೆರವೇರಿಸಲಾಗುವುದು. ಗಾಯಗೊಂಡಿರುವ ಇನ್ನೊಂದು ಆನೆಗೆ ಚಿಕಿತ್ಸೆ ನೀಡಲಾಗುತ್ತಿದೆ' ಎಂದು ಸುಹಾಸ್ ಹೇಳಿದ್ದಾರೆ.

ಬೆಳಿಗ್ಗೆ 6.11ಕ್ಕೆ ಸಂಚಾರ ಪುನರಾರಂಭ: ಘಟನೆ ನಡೆದ ಸ್ಥಳದಿಂದ ಭಾನುವಾರ ಬೆಳಿಗ್ಗೆ 6.11ಕ್ಕೆ ಗುವಾಹಟಿಯತ್ತ ರೈಲು ಸಂಚಾರ ಪುನರಾರಂಭಗೊಂಡಿತು. ಗುವಾಹಟಿಯಲ್ಲಿ ಹೆಚ್ಚುವರಿ ಬೋಗಿ ಅಳವಡಿಸಿ, ನವದೆಹಲಿಯತ್ತ ಪ್ರಯಾಣ ಮುಂದುವರಿಸಲು ಅವಕಾಶ ಮಾಡಿಕೊಡಲಾಯಿತು ಎಂದು ಈಶಾನ್ಯ ಗಡಿ ರೈಲ್ವೆ ಪ್ರಕಟಣೆ ತಿಳಿಸಿದೆ.

ಸಾಯಿರಂಗ್– ನವದೆಹಲಿ ರಾಜಧಾನಿ ಎಕ್ಸ್‌ಪ್ರೆಸ್ ರೈಲು, ಮಿಜೋರಾಂನ ಸಾಯಿರಂಗ್‌ನಿಂದ ದೆಹಲಿಯ ಆನಂದ್ ವಿಹಾರ್ ಟರ್ಮಿನಲ್‌ಅನ್ನು ಸಂಪರ್ಕಿಸುತ್ತದೆ.

ಕರಗುತ್ತಿರುವ ಹಸಿರು; ಹೆಚ್ಚುತ್ತಿರುವ ಸಂಘರ್ಷ

'ಅಸ್ಸಾಂನಲ್ಲಿ ಬಿಜೆಪಿ ಸರ್ಕಾರದ ನಿಲುವುಗಳಿಂದ ಹಸಿರು ಕರಗುತ್ತಿದೆ. ಅಭಿವೃದ್ಧಿಯ ಹೆಸರಿನಲ್ಲಿ ಅರಣ್ಯ ಪ್ರದೇಶ ವರ್ಷದಿಂದ ವರ್ಷಕ್ಕೆ ಕುಗ್ಗುತ್ತಿದ್ದು, ವನ್ಯಜೀವಿಗಳ ನೈಸರ್ಗಿಕ ಆವಾಸಕ್ಕೆ ಕಂಟಕ ಎದುರಾಗಿದೆ. ಆನೆಗಳ ಸಾಂಪ್ರದಾಯಿಕ ವಲಸೆ ಮಾರ್ಗ ಬದಲಾಗಿದೆ. ಇದು ಪರಿಸರ ಸಂರಕ್ಷಣೆ ಬಗ್ಗೆ ಸರ್ಕಾರಕ್ಕಿರುವ ಕನಿಷ್ಠ ಬದ್ಧತೆಯನ್ನು ತೋರಿಸುತ್ತದೆ' ಎಂದು ಕಾಂಗ್ರೆಸ್ ವಾಗ್ದಾಳಿ ನಡೆಸಿದೆ.

'ದೂರದೃಷ್ಟಿ ಮತ್ತು ಹೊಣೆಗಾರಿಕೆ ಕೊರತೆಯಿಂದ ಇಂತಹ ಘಟನೆಗಳು ಮರುಕಳಿಸುತ್ತಿವೆ. ಅಭಿವೃದ್ಧಿ ನೀತಿಗಳು ಅಲ್ಪಾವಧಿ ಲಾಭಕ್ಕಿಂತ ಜನರು ಮತ್ತು ಪರಿಸರವನ್ನು ಕೇಂದ್ರೀಕರಿಸಿರಬೇಕು. ಆದರೆ, ಈ ವ್ಯವಸ್ಥೆಯಲ್ಲಿನ ಅಸಮತೋಲನದಿಂದ ಅಸ್ಸಾಂನಲ್ಲಿ ಪರಿಸರಕ್ಕೆ ಹೆಚ್ಚಿನ ಹಾನಿ ಆಗುತ್ತಿದೆ. ಮಾನವ –ವನ್ಯಜೀವಿ ಸಂಘರ್ಷ ಹೆಚ್ಚುತ್ತಿದೆ' ಎಂದು ಅಸ್ಸಾಂ ಕಾಂಗ್ರೆಸ್ ಅಧ್ಯಕ್ಷ ಗೌರವ್ ಗೊಗೊಯಿ ಆರೋಪಿಸಿದ್ದಾರೆ.

ರೈಲು ಡಿಕ್ಕಿ ಹೊಡೆದು ಏಳು ಆನೆಗಳು ಮೃತಪಟ್ಟಿರುವುದು ನೋವಿನ ಸಂಗತಿ. ಘಟನೆ ಕುರಿತು ಸಮಗ್ರ ತನಿಖೆ ನಡೆಸಲು ಅರಣ್ಯ ಇಲಾಖೆಗೆ ಆದೇಶಿಸಿದ್ದೇನೆ.

ಹಿಮಂತ ಬಿಸ್ವಾ ಶರ್ಮಾ, ಅಸ್ಸಾಂ ಮುಖ್ಯಮಂತ್ರಿ ('ಎಕ್ಸ್' ಪೋಸ್ಟ್‌ನಲ್ಲಿ)

ಅಪಘಾತದ ಸ್ಥಳವು ಆನೆ ಕಾರಿಡಾರ್ ವ್ಯಾಪ್ತಿಗೆ ಸೇರುವುದಿಲ್ಲ. ಆನೆ ಹಿಂಡನ್ನು ನೋಡಿದ ಕೂಡಲೇ ಲೋಕೊ ಪೈಲಟ್ ತುರ್ತು ಬ್ರೇಕ್ ಹಾಕಿದ್ದಾರೆ. ಆದರೂ, ದುರ್ಘಟನೆ ಸಂಭವಿಸಿದೆ

ಕಪಿಂಜಲ್ ಕಿಶೋರ್ ಶರ್ಮಾ, ಈಶಾನ್ಯ ಗಡಿ ರೈಲ್ವೆ (ಎನ್‌ಎಫ್‌ಆರ್) ವಕ್ತಾರ

ರಾಜ್ಯದಲ್ಲಿ ಮಾನವ–ವನ್ಯಜೀವಿ ಸಂಘರ್ಷದ ಸವಾಲು ಹೆಚ್ಚುತ್ತಿರುವುದನ್ನು ಈ ಘಟನೆ ಹೇಳಿದೆ. ನೈಸರ್ಗಿಕ ಆವಾಸ ಸ್ಥಾನ ಕಡಿಮೆಯಾಗಿರುವುದು ಕಳವಳಕಾರಿ

ಗೌರವ್ ಗೊಗೊಯಿ, ಅಸ್ಸಾಂ ಕಾಂಗ್ರೆಸ್ ಅಧ್ಯಕ್ಷ

ರಾಜ್ಯ ದಲಿತ ಹಕ್ಕುಗಳ ಸಮಿತಿಯಿಂದ ಅಹೋರಾತ್ರಿ ಧರಣಿ

ದಲಿತ ಮಹಿಳೆಯರ ಹಕ್ಕೊತ್ತಾಯ ಈಡೇರಿಸಿ


ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವದಾಸಿಯರ ಮರುವಿವಾಹದ ಪ್ರೋತ್ಸಾಹ ಧನ ಹೆಚ್ಚಳ ಮತ್ತು ದಲಿತ ಮಹಿಳೆಯರ ಮೇಲಿನ ದೌರ್ಜನ್ಯ ತಡೆ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಒತ್ತಾಯಿಸಿ ರಾಜ್ಯ ದಲಿತ ಹಕ್ಕುಗಳ ಸಮಿತಿಯು (ಡಿಎಚ್‌ಎಸ್) ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಬೆಳಿಗ್ಗೆಯಿಂದ ಅಹೋರಾತ್ರಿ ಪ್ರತಿಭಟನೆ ಆರಂಭಿಸಿದೆ.

'ಈಗ ನಡೆಸುತ್ತಿರುವ ಗಣತಿಯಲ್ಲಿ ಮಾಜಿ ದೇವದಾಸಿಯರನ್ನು ಪರಿಗಣಿಸಬೇಕು. ಪುನರ್ವಸತಿ ಕಲ್ಪಿಸಬೇಕು. ಪಿಂಚಣಿ ಒದಗಿಸಬೇಕು, ಜಮೀನು ಒದಗಿಸಬೇಕು. ವಸತಿ ಮತ್ತು ಸಾಲ ಸೌಲಭ್ಯಗಳಲ್ಲಿ ಮೀಸಲಾತಿ ಒದಗಿಸಬೇಕು. ಎಲ್ಲ ಹಕ್ಕೊತ್ತಾಯಗಳನ್ನು ಪರಿಗಣಿಸಿ ಮುಂಬರುವ ಬಜೆಟ್‌ನಲ್ಲಿ ಅನುದಾನ ಒದಗಿಸಬೇಕು' ಎಂದು ಒತ್ತಾಯಿಸಿದರು.

'ಆರ್ಥಿಕ ಪರಾವಲಂಬಿಗಳಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳೆಯರು, ಮಸಣ ಕಾರ್ಮಿಕರು, ದೇವದಾಸಿಯರು ಮತ್ತು ಒಂಟಿ ಮಹಿಳೆಯರನ್ನು ಸಾಮಾಜಿಕ ದೌರ್ಜನ್ಯ, ಜಾತಿ ತಾರತಮ್ಯ, ಅತ್ಯಾಚಾರ, ಹಲ್ಲೆ ಹಾಗೂ ಬಹಿಷ್ಕಾರಗಳಿಂದ ಮುಕ್ತಗೊಳಿಸಬೇಕು. ಸ್ವಾವಲಂಬಿ ಜೀವನ ನಡೆಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅವರಿಗೆ ನೆರವಾಗಬೇಕು' ಎಂದು ಆಗ್ರಹಿಸಿದರು.

ಡಿಎಚ್‌ಎಸ್ ರಾಜ್ಯ ಘಟಕದ ಅಧ್ಯಕ್ಷ ಗೋಪಾಲಕೃಷ್ಣ ಹರಳಹಳ್ಳಿ, ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘದ ಗೌರವಾಧ್ಯಕ್ಷ ಬಸವರಾಜು, ಪ್ರಧಾನ ಕಾರ್ಯದರ್ಶಿ ಮಾಳಮ್ಮ ಭಾಗವಹಿಸಿದ್ದರು.



ದಲಿತ ಹಕ್ಕುಗಳ ಸಮಿತಿ ಕರ್ನಾಟಕ, ರಾಜ್ಯ ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘದ ಸದಸ್ಯರು ಜಮೀನು, ವಸತಿ, ಸಾಲ, ಸೌಲಭ್ಯ ಮತ್ತು ಮೀಸಲಾತಿಯಲ್ಲಿ ಆದ್ಯತೆ ಒದಗಿಸಬೇಕೆಂದು ಆಗ್ರಹಿಸಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ

ಮುದ್ರಮನೆ ಕಾಫಿ (50 ಕೆಜಿಗೆ)	
ಎಪಿ	₹26500
ಎಸಿ	₹14840
ಆರ್‌ಪಿ	₹16500
ಆರ್‌ಸಿ	₹9300

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆಜಿಗೆ)	
ಶೇಂಗಾ (ರಿಫೈನ್ಡ್)	₹1575 (1570)
ಸೋಯಾ (ರಿಫೈನ್ಡ್)	₹1260 (1265)
ಸೂರ್ಯಕಾಂತಿ (ರಿಫೈನ್ಡ್)	₹1475 (1480)
ಪಾಮೋಲಿನ್	₹1235 (1240)

ಮೊಟ್ಟೆ ಧಾರಣೆ (ಎನ್‌ಇಸಿಸಿ)		
ಬೆಂಗಳೂರು	100 ಕ್ಕೆ	₹695
	12 ಕ್ಕೆ	₹96
ಮೈಸೂರು:	100 ಕ್ಕೆ	₹695

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹533-760
ದ್ವಿತಳಿ (ಬಿ.ವಿ)	₹380-936

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹179.50
ಆರ್‌ಎಸ್‌ಎಸ್-5	₹174.50
ಗುಡ್ ಲಾಟ್	₹162.50

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)	
ದೊಡ್ಡ	₹1400-2800
ಮಧ್ಯಮ	₹1000-1400
ಸಣ್ಣ	₹200-1000

ಮುಂಬೈ ಧಾರಣೆ (ಶೇಂಗಾ) 20-12-2025	
ಜಾವಾ 70/80(ಹೊಸ)	10700-10800
ಜಾವಾ 80/90(ಹೊಸ)	10000-10100
ದಪ್ಪ ಮಧ್ಯಪ್ರದೇಶ (ಹೊಸ)	7700-7800
ದಪ್ಪ ಗುಜರಾತ್ (ಹೊಸ)	9000-9100
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1585 (1580)
ಒಂದು ವಾರದ ಡೆಲಿವರಿ	1580 (1575)
ಪಾಮ್ ವಾರದ ಡೆಲಿವರಿ	1233 (1238)
ಸೂರ್ಯಕಾಂತಿ ಎಣ್ಣೆ ಕಚ್ಚಾ	1410 (1415)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,31,500 (1,31,350)
ಬೆಳ್ಳಿ ಕೆ.ಜಿಗೆ	2,03,250 (2,00,100)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕಾಫಿ ತಳಿ, ಕಾಫಿ ಕ್ಯಾಪ್ಸೂಲ್ ಬಿಡುಗಡೆ

ಬಾಳೆಹೊನ್ನೂರಿನಲ್ಲಿ ಕಾಫಿ ಸಂಶೋಧನಾ ಕೇಂದ್ರದ ಶತಮಾನೋತ್ಸವ

ಬಾಳೆಹೊನ್ನೂರು (ಚಿಕ್ಕಮಗಳೂರು): ಇಲ್ಲಿಗೆ ಸಮೀಪದ ಸೀಗೋಡಿನ ಕಾಫಿ ಸಂಶೋಧನಾ ಕೇಂದ್ರದ ಶತಮಾನೋತ್ಸವ ಸಮಾರಂಭದಲ್ಲಿ ಎರಡು ನೂತನ ಕಾಫಿ ತಳಿ, ಕಾಫಿ ಕ್ಯಾಪ್ಸೂಲ್ ಹಾಗೂ ಮೈಕ್ರೊ ನ್ಯೂಟ್ರಿಯಂಟ್ ಒಳಗೊಂಡ ಸ್ಪ್ರೇ ಅನ್ನು ಬಿಡುಗಡೆ ಮಾಡಲಾಯಿತು.

ವೈಟ್ ಸ್ಟೆಮ್ ಬೋರರ್ (ಕಾಫಿ ಬೆಳೆಗೆ ಗಂಭೀರ ಹಾನಿ ಮಾಡುವ ಕೀಟ) ತಡೆಗಟ್ಟುವ ಗುಣ ಹೊಂದಿರುವ ಅರೇಬಿಕಾ ವರ್ಗದ 'ಸುರಕ್ಷಾ' ಮತ್ತು 'ಶತಾಬ್ದಿ' ಎಂಬ ಎರಡು ನೂತನ ತಳಿಗಳನ್ನು ಬಿಡುಗಡೆ ಮಾಡಲಾಯಿತು.

ಕಾಫಿ ಬೀಜಗಳನ್ನು ನಾಟಿ ಮಾಡಿದಾಗ ಅವುಗಳು ಇರುವೆ, ಪ್ರಾಣಿಗಳಿಗೆ ಆಹಾರವಾಗುವುದು ಸಾಮಾನ್ಯ. ಅದನ್ನು ತಪ್ಪಿಸುವ ಉದ್ದೇಶದಿಂದ ಇದೀಗ ಕ್ಯಾಪ್ಸೂಲ್ ಒಳಗಡೆ ಬೀಜಗಳನ್ನು ಇಟ್ಟು ಕ್ಯಾಪ್ಸೂಲ್ ಸಹಿತ ಬೀಜವನ್ನು ನಾಟಿ ಮಾಡುವ ತಂತ್ರಜ್ಞಾನವನ್ನು ಆವಿಷ್ಕರಿಸಲಾಗಿದೆ. ಇದರಿಂದ ಕಾಫಿ ಸಸಿಗಳು ಹುಟ್ಟುವ ಪ್ರಮಾಣ ಹೆಚ್ಚಾಗುತ್ತದೆ.

ಕಾಫಿಗೆ ಬೇಕಾಗುವ ಸೆಕೆಂಡರಿ ಮತ್ತು ಮೈಕ್ರೊ ನ್ಯೂಟ್ರಿಯಂಟ್ ಒಳಗೊಂಡ 'ಸಿಸಿಆರ್‌ಐ ಕಾಫಿ ಸ್ಪೆಷಲ್' ಎಂಬ ಸ್ಪ್ರೇಯನ್ನು ಬಿಡುಗಡೆ ಮಾಡಲಾಯಿತು. ಜಿಂಕ್, ಬೋರಾನ್ ಕೊರತೆ ಕಂಡು ಬಂದಾಗ ಬೆಳೆಗಾರರು ಬೇರೆ ಬೇರೆ ಗೊಬ್ಬರಗಳನ್ನು ತಂದು ಒಟ್ಟು ಮಾಡಿ ತೋಟಗಳಿಗೆ ಹಾಕುವುದು ವಾಡಿಕೆ. ಹಾಗೆ ಮಾಡುವಾಗ ಅದರ ಬೆಲೆ ಕೂಡ ಜಾಸ್ತಿಯಾಗುತ್ತದೆ. ಅರೇಬಿಕಾ ಮತ್ತು ರೋಬಸ್ಟಾದಲ್ಲಿ ಮೈಕ್ರೊ ನ್ಯೂಟ್ರಿಯಂಟ್ ಕೊರತೆಯಾದಾಗ ಇದನ್ನು ಬಳಸಬಹುದು. ಒಂದು ಎಕರೆಗೆ ಮೂರು ಬ್ಯಾರಲ್ ಬೇಕಾಗುತ್ತದೆ. ಇದರಲ್ಲಿ ಸಲ್ಫರ್, ಜಿಂಕ್, ಬೋರಾನ್ ಮ್ಯಾಗ್ನೇಶಿಯಂ ಇದೆ. ಇದನ್ನು ಬಳಸುವುದರಿಂದ ಕಾಫಿ ಹಣ್ಣಿನ ಗಾತ್ರ, ಫಸಲು ಹೆಚ್ಚಲಿದೆ ಎಂದು ವಿಜ್ಞಾನಿಗಳು ತಿಳಿಸಿದರು.

ಶನಿವಾರದಿಂದ ಆರಂಭಗೊಂಡಿರುವ ಶತಮಾನೋತ್ಸವ ಕಾರ್ಯಕ್ರಮ 22ರ ವರೆಗೆ ನಡೆಯಲಿದೆ.



ಬಾಳೆಹೊನ್ನೂರು ಸಮೀಪದ ಸೀಗೋಡಿನ ಕಾಫಿ ಸಂಶೋಧನಾ ಕೇಂದ್ರದ ಶತಮಾನೋತ್ಸವ ಸಮಾರಂಭದಲ್ಲಿ ಎರಡು ನೂತನ ಕಾಫಿ ತಳಿಗಳನ್ನು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಬಿಡುಗಡೆ ಮಾಡಿದರು

ಬೆಳೆಗಾರರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ವಿವಿಧ ಕಂಪನಿಗಳ 100ಕ್ಕೂ ಅಧಿಕ ಪ್ರದರ್ಶನ ಮಳಿಗೆ ಆರಂಭಿಸಲಾಗಿದೆ.

ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಜಿಲ್ಲಾ ಉಸ್ತುವಾರಿ ಸಚಿವ ಕೆ.ಜೆ. ಜಾರ್ಜ್, ಸಂಸದ ಕೋಟ ಶ್ರೀನಿವಾಸ ಪೂಜಾರಿ, ಕಾಫಿ ಮಂಡಳಿ ಅಧ್ಯಕ್ಷ ಎಂ.ಜೆ.ದಿನೇಶ್, ಕಾಫಿ ಮಂಡಳಿ ಸಿಇಒ ಕೂರ್ಮರಾವ್, ಸಂಶೋಧನಾ ಕೇಂದ್ರದ ನಿರ್ದೇಶಕ ಸೆಂಥಿಲ್ ಕುಮಾರ್ ಪಾಲ್ಗೊಂಡಿದ್ದರು.

ಅಕ್ರಮ ವಲಸಿಗರನ್ನು ಪತ್ತೆ ಮಾಡಿ: ಸಿ.ಟಿ.ರವಿ

ಚಿಕ್ಕಮಗಳೂರು, ಹಾಸನ ಹಾಗೂ ಕೊಡಗು ಜಿಲ್ಲೆಗಳ ಕಾಫಿ ತೋಟಗಳಲ್ಲಿ ಅಸ್ಸಾಂ, ಒಡಿಶಾ, ಬಿಹಾರದಿಂದ ಬಂದವರು ಎಂದು ಹೇಳಿಕೊಂಡು ಸಾವಿರಾರು ಕಾರ್ಮಿಕರು ಕೆಲಸಕ್ಕೆ ಸೇರಿಕೊಂಡಿದ್ದಾರೆ. ಅದರಲ್ಲಿ ಬಹುತೇಕರು ಬಾಂಗ್ಲಾದೇಶ, ಮ್ಯಾನ್ಮಾರ್ ಮೂಲದ ನುಸುಳುಕೋರರಾಗಿದ್ದಾರೆ. ಸರ್ಕಾರ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಮೂಲಕ ಅವರನ್ನು ಪತ್ತೆ ಮಾಡಬೇಕು. ಅವರು ಹೊರ ದೇಶದವರೇ ಆಗಿದ್ದರೆ ಅವರಿಗೆ ಉದ್ಯೋಗ ವೀಸಾ (ವರ್ಕಿಂಗ್ ವೀಸಾ) ನೀಡಲಿ. ಇಲ್ಲದಿದ್ದರೆ ಭವಿಷ್ಯದಲ್ಲಿ ಭಾರಿ ಅಪಾಯ ಕಟ್ಟಿಟ್ಟ ಬುತ್ತಿ. ನಮ್ಮ ನೆಲದಲ್ಲಿ ನಾವುಗಳೇ ಪರದೇಶಿಗಳಾಗಬೇಕಾಗುತ್ತದೆ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಹೇಳಿದರು.

ಸುದ್ದಿ 2 ನಿಮಿಷ

ವಿದ್ಯುತ್ ತಿದ್ದುಪಡಿ ಮಸೂದೆ: ಚರ್ಚೆ

ನವದೆಹಲಿ (ಪಿಟಿಐ): ವಿದ್ಯುತ್ (ತಿದ್ದುಪಡಿ) ಮಸೂದೆಯ ಕರಡಿನ ಪ್ರಸ್ತಾವ 2025ಕ್ಕೆ ಸಂಬಂಧಿಸಿದಂತೆ ಕೇಂದ್ರ ವಿದ್ಯುತ್ ಸಚಿವ ಮನೋಹರ್ ಲಾಲ್ ಅವರು ಸಂಸತ್ ಸದಸ್ಯರ ಸಮಿತಿಯೊಂದಿಗೆ ಸಭೆ ನಡೆಸಿದ್ದಾರೆ ಎಂದು ವಿದ್ಯುತ್ ಸಚಿವಾಲಯ ಶನಿವಾರ ತಿಳಿಸಿದೆ.

ವಿವಿಧ ಪಕ್ಷಗಳಿಗೆ ಸೇರಿದ ಲೋಕಸಭೆ ಮತ್ತು ರಾಜ್ಯಸಭಾ ಸದಸ್ಯರು ಸಭೆಯಲ್ಲಿ ಪಾಲ್ಗೊಂಡಿದ್ದರು. ತಿದ್ದುಪಡಿ ಮಸೂದೆಯಲ್ಲಿರುವ ವಿವಿಧ ಪ್ರಸ್ತಾವಗಳ ಕುರಿತು ಸದಸ್ಯರೊಂದಿಗೆ ಸಮಾಲೋಚಿಸಲು ಸಚಿವರು ಈ ಸಭೆಯನ್ನು ಕರೆದಿದ್ದರು.

ಈ ತಿದ್ದುಪಡಿ ಮಸೂದೆಯು ದೇಶದ ವಿದ್ಯುತ್ ವಲಯವನ್ನು ಸದೃಢಗೊಳಿಸುವ ಉದ್ದೇಶ ಹೊಂದಿದೆ ಎಂದು ಸಚಿವರು ಹೇಳಿದ್ದಾರೆ.

ರಾಜ್ಯ ಸರ್ಕಾರಗಳು ಗೃಹ, ಕೃಷಿ ಗ್ರಾಹಕರಂತಹ ಗುಂಪುಗಳಿಗೆ ಸಬ್ಸಿಡಿಗಳನ್ನು ನೀಡುವುದನ್ನು ಮುಂದುವರಿಸಬಹುದು. ಈ ಗ್ರಾಹಕರಿಗೆ ವೆಚ್ಚದಲ್ಲಿ ಯಾವುದೇ ಹೆಚ್ಚಳವಾಗದಿರಬಹುದು. ಮಸೂದೆಯು ದೇಶದ ಉದ್ಯಮದ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸಲು ಸಹ ಪ್ರಯತ್ನಿಸುತ್ತದೆ ಎಂದು ಸ್ಪಷ್ಟಪಡಿಸಿದ್ದಾರೆ ಎಂದು ತಿಳಿಸಿದೆ.



ಪ್ರಸ್ತಾವಿತ ಈ ತಿದ್ದುಪಡಿ ಮಸೂದೆಯನ್ನು ವಿರೋಧಿಸಿ ಅಖಿಲ ಭಾರತ ವಿದ್ಯುತ್ ಎಂಜಿನಿಯರ್‌ಗಳ ಒಕ್ಕೂಟವು (ಎಐಪಿಇಎಫ್) ಡಿಸೆಂಬರ್ 23ರಂದು ದೇಶ ವ್ಯಾಪಿ ಪ್ರತಿಭಟನೆಗೆ ಕರೆ ನೀಡಿದೆ. ಕಾರ್ಮಿಕ ಒಕ್ಕೂಟಗಳು ಮತ್ತು ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ಪ್ರತಿಭಟನೆಗೆ ಬೆಂಬಲ ನೀಡುವುದಾಗಿ ಹೇಳಿವೆ.

ಮನೆ ಬೆಲೆ ಹೆಚ್ಚಳ ನಿರೀಕ್ಷೆ

ನವದೆಹಲಿ (ಪಿಟಿಐ): ಮುಂದಿನ ವರ್ಷದಲ್ಲಿ ಮನೆಗಳ ಬೆಲೆಯಲ್ಲಿ ಶೇ 5ಕ್ಕೂ ಹೆಚ್ಚು ಏರಿಕೆ ಆಗಲಿದೆ ಎಂದು ಕ್ರೆಡಾಯ್-ಸಿಆರ್‌ಇ ಮ್ಯಾಟ್ರಿಕ್ಸ್ ಜಂಟಿ ಸಮೀಕ್ಷೆ ವರದಿ ತಿಳಿಸಿದೆ.

ಮನೆಗಳಿಗೆ ಹೆಚ್ಚುತ್ತಿರುವ ಬೇಡಿಕೆಯೇ ಬೆಲೆ ಏರಿಕೆಗೆ ಕಾರಣ ಎಂದು ತಿಳಿಸಿದೆ.

ರಿಯಲ್ ಎಸ್ಟೇಟ್ ಕಂಪನಿಗಳ ಒಕ್ಕೂಟ ಕ್ರೆಡಾಯ್ ಮತ್ತು ದತ್ತಾಂಶ ವಿಶ್ಲೇಷಣಾ ಸಂಸ್ಥೆ ಸಿಆರ್‌ಇ ಮ್ಯಾಟ್ರಿಕ್ಸ್ ನವೆಂಬರ್ ಮತ್ತು ಡಿಸೆಂಬರ್‌ನಲ್ಲಿ ನಡೆಸಿದ ಸಮೀಕ್ಷೆಯಲ್ಲಿ 647 ಡೆವಪಲರ್‌ಗಳು ಭಾಗವಹಿಸಿದ್ದರು. ಈ ಪೈಕಿ ಶೇ 68ರಷ್ಟು ಡೆವಲಪರ್‌ಗಳು 2026ರಲ್ಲಿ ಮನೆಗಳ ಬೆಲೆಯು ಶೇ 5ಕ್ಕಿಂತ ಹೆಚ್ಚು ಏರಿಕೆ ಆಗುವ ನಿರೀಕ್ಷೆ ಇದೆ ಎಂದು ಹೇಳಿದ್ದಾರೆ.

ಅಡಿಕೆ ಧಾರಣೆ

ಕುಮಟಾ		ಶಿರಸಿ		ಪುತ್ತೂರು	
ಚಾಲಿ	41305-41305	ರಾಶಿ	52129-52579	ಕೆಂಪುಗೋಟು	24699-42099
ಚಿತ್ರದುರ್ಗ		ಬೆಟ್ಟೆ	39699-48299	ರಾಶಿ	48141-60109
ಆಪಿ	52639-53069	ಬಿಳಿಗೋಟು	23333-36500	ಕೋಕ	20000-35000
ಬೆಟ್ಟೆ	25619-36099	ಚಾಲಿ	34479-48478	ಹೊಸತು	26000-41500
ಕೆಂಪುಗೋಟು	29600-30000				

ಚಿಟಿಕೆ ಸುದ್ದಿ

ಬಿಎಂಡಬ್ಲ್ಯು ಮೋಟೊರಾಡ್ ಬೆಲೆ ಹೆಚ್ಚಳ

ನವದೆಹಲಿ (ಪಿಟಿಐ): ಜರ್ಮನಿಯ ವಾಹನ ತಯಾರಿಕಾ ಕಂಪನಿ ಬಿಎಂಡಬ್ಲ್ಯುನ ದ್ವಿಚಕ್ರ ವಾಹನ ವಿಭಾಗವಾದ ಬಿಎಂಡಬ್ಲ್ಯು ಮೋಟೊರಾಡ್ ಇಂಡಿಯಾ, ತನ್ನ ವಾಹನಗಳ ಬೆಲೆಯನ್ನು ಶೇ 6ರವರೆಗೆ ಹೆಚ್ಚಳ ಮಾಡಲು ಮುಂದಾಗಿದೆ. ಪರಿಷ್ಕೃತ ದರವು ಜನವರಿ 1ರಿಂದ ಜಾರಿಗೆ ಬರಲಿದೆ.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಮತ್ತು ಯುರೊ ಎದುರು ರೂಪಾಯಿ ಮೌಲ್ಯ ಇಳಿಕೆ ಆಗಿದೆ. ಅಲ್ಲದೆ, ಕಚ್ಚಾ ವಸ್ತುಗಳು ಮತ್ತು ಸಾರಿಗೆ ಬೆಲೆ ಹೆಚ್ಚಳವಾಗಿದೆ. ಹೀಗಾಗಿ ದರ ಹೆಚ್ಚಳಕ್ಕೆ ಮುಂದಾಗಿರುವುದಾಗಿ ಕಂಪನಿಯ ಭಾರತದ ಅಧ್ಯಕ್ಷ ಮತ್ತು ಸಿಇಒ ಹರದೀಪ್ ಸಿಂಗ್ ಬಿ. ಹೇಳಿದ್ದಾರೆ.

ಕಂಪನಿಯ ವೆಬ್‌ಸೈಟ್‌ನ ಪ್ರಕಾರ ವಾಹನಗಳ ಬೆಲೆ ₹2.81 ಲಕ್ಷದಿಂದ ₹48.63 ಲಕ್ಷದವರೆಗೆ ಇದೆ.





25ರಂದು ನವಿ ಮುಂಬೈ ವಿಮಾನ ನಿಲ್ದಾಣದ ವಾಣಿಜ್ಯ ಸೇವೆ ಆರಂಭ

12 ಕೋಟಿ ಪ್ರಯಾಣಿಕರ ಸಂಚಾರ ನಿರೀಕ್ಷೆ

ಮುಂಬೈ (ಪಿಟಿಐ): ಅದಾನಿ ಸಮೂಹವು ನಿರ್ವಹಣೆ ಮಾಡುತ್ತಿರುವ ವಿಮಾನ ನಿಲ್ದಾಣಗಳಿಂದ ಮುಂದಿನ ವರ್ಷದಲ್ಲಿ ಪ್ರಯಾಣಿಕರ ಸಂಚಾರವು 12 ಕೋಟಿಗೆ ತಲುಪುವ ನಿರೀಕ್ಷೆ ಇದೆ ಎಂದು ಅದಾನಿ ಏರ್‌ಪೋರ್ಟ್ ಹೋಲ್ಡಿಂಗ್ಸ್ ಲಿಮಿಟೆಡ್‌ನ (ಎಎಚ್‌ಎಲ್) ನಿರ್ದೇಶಕ ಜೀತ್ ಅದಾನಿ ಹೇಳಿದ್ದಾರೆ.

ಪ್ರಸ್ತುತ ಮುಂಬೈ, ಅಹಮದಾಬಾದ್, ತಿರುವನಂತಪುರ, ಜೈಪುರ, ಲಖನೌ, ಗುವಾಹಟಿ ಮತ್ತು ಮಂಗಳೂರು ವಿಮಾನ ನಿಲ್ದಾಣಗಳನ್ನು ಅದಾನಿ ಸಮೂಹವು ನಿರ್ವಹಣೆ ಮಾಡುತ್ತಿದೆ. ಡಿಸೆಂಬರ್ 25ರಂದು ನವಿ ಮುಂಬೈ ಇಂಟರ್‌ನ್ಯಾಷನಲ್ ವಿಮಾನ ನಿಲ್ದಾಣದಲ್ಲಿ ವಾಣಿಜ್ಯ ಚಟುವಟಿಕೆಗಳು ಆರಂಭವಾಗಲಿವೆ. ಈ ವಿಮಾನ ನಿಲ್ದಾಣದೊಂದಿಗೆ ಅದಾನಿ ಸಮೂಹವು ನಿರ್ವಹಣೆ ಮಾಡುವ ವಿಮಾನ ನಿಲ್ದಾಣಗಳ ಸಂಖ್ಯೆ 8ಕ್ಕೆ ತಲುಪಲಿದೆ.

ಕಳೆದ ವರ್ಷ ಅದಾನಿ ಸಮೂಹ ನಿರ್ವಹಣೆ ಮಾಡುತ್ತಿರುವ ಏಳು ವಿಮಾನ ನಿಲ್ದಾಣಗಳಿಂದ 9 ಕೋಟಿ



ಪ್ರಯಾಣಿಕರು ಸಂಚರಿಸಿದ್ದರು. ಈ ವರ್ಷ ಇದು 10 ಕೋಟಿಯಷ್ಟಾಗಲಿದೆ. ನವಿ ಮುಂಬೈ ವಿಮಾನ ನಿಲ್ದಾಣದ ಪ್ರಾರಂಭ ಬಳಿಕ ಪ್ರಯಾಣಿಕರ ಸಂಚಾರವು 12 ಕೋಟಿ ಆಗಲಿದೆ ಎಂದು ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

ಈ ವರ್ಷದ ಅಕ್ಟೋಬರ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ನವಿ ಮುಂಬೈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು (ಎನ್‌ಎಂಐಎಎಲ್) ಉದ್ಘಾಟಿಸಿದ್ದರು. ಈ ವಿಮಾನ ನಿಲ್ದಾಣದಲ್ಲಿ ಅದಾನಿ ಸಮೂಹವು ಶೇ 74ರಷ್ಟು ಪಾಲು ಹೊಂದಿದೆ. ಉಳಿದ ಶೇ 26ರಷ್ಟು ಪಾಲನ್ನು ಮಹಾರಾಷ್ಟ್ರ ಸರ್ಕಾರದ ಸಿಐಡಿಸಿಒ ಹೊಂದಿದೆ ಎಂದು ಹೇಳಿದ್ದಾರೆ.

ಎನ್‌ಎಂಐಎಎಲ್ 1,160 ಹೆಕ್ಟೇರ್‌ನಷ್ಟು ವಿಸ್ತೀರ್ಣದಲ್ಲಿದೆ. ವಾರ್ಷಿಕ 9 ಕೋಟಿ ಪ್ರಯಾಣಿಕರ ಸಂಚಾರದ ಸಾಮರ್ಥ್ಯವನ್ನು ಹೊಂದಿದ್ದು, 32.5 ಲಕ್ಷ ಟನ್ ಸರಕು ಸಾಗಣೆ ಸಾಮರ್ಥ್ಯವಿದೆ. ಇದು ಏಷ್ಯಾದ ಅತಿದೊಡ್ಡ ವಿಮಾನಯಾನ ಕೇಂದ್ರಗಳಲ್ಲಿ ಒಂದಾಗಿದೆ.

ಭಾರತವು ವಿಶ್ವದಲ್ಲಿ ಅತಿ ವೇಗವಾಗಿ ಬೆಳೆಯುತ್ತಿರುವ ದೇಶೀಯ ನಾಗರಿಕ ವಿಮಾನಯಾನ ಮಾರುಕಟ್ಟೆಗಳಲ್ಲಿ ಒಂದಾಗಿದೆ. ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸಲು ಭಾರತದ ವಿಮಾನಯಾನ ಸಂಸ್ಥೆಗಳು ತಮ್ಮ ವಿಮಾನಗಳನ್ನು ಹೆಚ್ಚಿಸಿಕೊಳ್ಳುತ್ತಿವೆ ಎಂದು ಹೇಳಿದ್ದಾರೆ.

ದೇಶೀಯ ವಿಮಾನ ಪ್ರಯಾಣಿಕರ ಸಂಚಾರ ಶೇ 9ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ದೇಶೀಯ ಮಾರ್ಗದ ವಿಮಾನಗಳಲ್ಲಿ ಪ್ರಯಾಣಿಕರ ಸಂಚಾರ ವಾರ್ಷಿಕ ಸರಾಸರಿ ಶೇ 9ರಷ್ಟು ಹೆಚ್ಚಳವಾಗಿದೆ. 2014ರಲ್ಲಿ 395 ವಿಮಾನಗಳಿದ್ದವು. ಇದು ಈಗ 844ಕ್ಕೆ ಏರಿಕೆಯಾಗಿದೆ ಎಂದು ನಾಗರಿಕ ವಿಮಾನಯಾನ ಕಾರ್ಯದರ್ಶಿ ಸಮೀರ್ ಕುಮಾರ್ ಸಿನ್ಹಾ ಹೇಳಿದ್ದಾರೆ.

ಪ್ರಸಕ್ತ ವರ್ಷ ನಾಗರಿಕ ವಿಮಾನಯಾನ ವಲಯವು ಎದುರಿಸುತ್ತಿರುವ ಸವಾಲುಗಳು, ಸುರಕ್ಷತೆ, ದಕ್ಷತೆ ಮತ್ತು ನಾಗರಿಕರ ವಿಶ್ವಾಸವನ್ನು ಹೆಚ್ಚಿಸುವ ನಮ್ಮ ಸಂಕಲ್ಪವನ್ನು ಬಲಪಡಿಸಿವೆ ಎಂದು ಕಾರ್ಯಕ್ರಮದಲ್ಲಿ ಹೇಳಿದ್ದಾರೆ.

2025ನೇ ವರ್ಷವು ದೇಶದ ನಾಗರಿಕ ವಿಮಾನಯಾನಕ್ಕೆ ಕಲಿಕೆ ಮತ್ತು ಬದಲಾವಣೆಯ ಅವಧಿ ಎಂದು ಹೇಳಿದ್ದಾರೆ.

ದೇಶದ ವಿಮಾನಯಾನ ವಲಯವು ಹೆಚ್ಚು ಅರ್ಹ ಎಂಜಿನಿಯರ್‌ಗಳನ್ನು ಹೊಂದಿದೆ. ಜೊತೆಗೆ ಅಮೆರಿಕ, ಬ್ರಿಟನ್ ಮತ್ತು ಫ್ರಾನ್ಸ್‌ಗೆ ಹೋಲಿಸಿದರೆ ಭಾರತದ ಕಾರ್ಯಾಚರಣೆ ವೆಚ್ಚವು ಕಡಿಮೆ ಎಂದು ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯದ (ಡಿಜಿಸಿಎ) ಮಹಾನಿರ್ದೇಶಕ ಫೈಜ್ ಅಹ್ಮದ್ ಕಿದ್ವಾಯಿ ಹೇಳಿದ್ದಾರೆ.

'ಮೊಟ್ಟೆ ಸೇವನೆ ಸುರಕ್ಷಿತ'

ಒಂದನೇ ಪುಟದಿಂದ...

ನೈಟ್ರೊಫ್ಯೂರಾನ್ ಮತ್ತು ಕ್ಯಾನ್ಸರ್‌ಗೆ ಸಂಬಂಧವಿಲ್ಲ ಮತ್ತು ಅದು ಮನುಷ್ಯರ ಆರೋಗ್ಯಕ್ಕೆ ಹಾನಿಕಾರಕವಲ್ಲ ಎಂಬುವುದಕ್ಕೆ ಪೂರಕವಾದ ವೈಜ್ಞಾನಿಕ ದಾಖಲೆಗಳನ್ನು ಉಲ್ಲೇಖಿಸಿ ಎಫ್‌ಎಸ್‌ಎಸ್‌ಎಐ ಸ್ಪಷ್ಟನೆ ನೀಡಿದೆ.

'ಒಂದು ಪ್ರಯೋಗಾಲಯದ ವರದಿಯ ಆಧಾರದಲ್ಲಿ ಮೊಟ್ಟೆ ಅಸುರಕ್ಷಿತ ಎಂದು ಹೇಳುವುದು ವೈಜ್ಞಾನಿಕವಾಗಿ ಸರಿಯಲ್ಲ' ಎಂದು ಹೇಳಿದೆ.

ಆಹಾರ ಸುರಕ್ಷತಾ ನಿಯಮಗಳಿಗೆ ಅನುಸಾರವಾಗಿ ಉತ್ಪಾದನೆಯಾದ ಮೊಟ್ಟೆಯು ಪೋಷಕಾಂಶಯುಕ್ತವಾಗಿ ಇರುತ್ತದೆ. ಗ್ರಾಹಕರು ಪ್ರಮಾಣೀಕೃತ ವೈಜ್ಞಾನಿಕ ಪುರಾವೆಗಳು ಮತ್ತು ಅಧಿಕೃತ ಮಾರ್ಗಸೂಚಿಗಳನ್ನು ಮಾತ್ರ ಪರಿಗಣಿಸಬೇಕು ಎಂದು ಎಫ್‌ಎಸ್‌ಎಸ್‌ಎಐ ಮನವಿ ಮಾಡಿದೆ.

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)	
ಅರಸೀಕೆರೆ	₹28000-28010
ಕಡೂರು	₹20000-20000

ಹಿಂದೂ ವ್ಯಕ್ತಿ ಹತ್ಯೆ: 7 ಮಂದಿ ಬಂಧನ



ಢಾಕಾ/ ನವದೆಹಲಿ (ಪಿಟಿಐ): ಬಾಂಗ್ಲಾದೇಶದಲ್ಲಿ ಹಿಂದೂ ವ್ಯಕ್ತಿಯನ್ನು ಥಳಿಸಿ ಕೊಂದ ಪ್ರಕರಣಕ್ಕೆ ಸಂಬಂಧಿಸಿದಂತೆ ಏಳು ಮಂದಿಯನ್ನು ಬಂಧಿಸಲಾಗಿದೆ ಎಂದು ಮಧ್ಯಂತರ ಸರ್ಕಾರ ಶನಿವಾರ ತಿಳಿಸಿದೆ.

ದೀಪು ಚಂದ್ರದಾಸ್ ಅವರು ಧರ್ಮ ನಿಂದನೆ ಮಾಡಿದ್ದಾರೆಂದು ಆರೋಪಿಸಿ ಗುಂಪೊಂದು ಅವರನ್ನು ಹತ್ಯೆ ಮಾಡಿದೆ.

ಮಧ್ಯಂತರ ಸರ್ಕಾರದ ಮುಖ್ಯ ಸಲಹೆಗಾರ ಮಹಮ್ಮದ್ ಯೂನಸ್ ಅವರು, 'ಕ್ಷಿಪ್ರ ಕಾರ್ಯಪಡೆಯು ಶಂಕಿತ ಏಳು ಮಂದಿಯನ್ನು ಬಂಧಿಸಿದೆ' ಎಂದು 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

'ದೇಶದ ವಿವಿಧೆಡೆ ನಡೆಸಿದ ಕಾರ್ಯಾಚರಣೆಯಲ್ಲಿ ಶಂಕಿತರನ್ನು ಬಂಧಿಸಲಾಗಿದೆ. ಅವರೆಲ್ಲರೂ 19ರಿಂದ 46 ವರ್ಷ ವಯಸ್ಸಿನವರು' ಎಂದು ಹೇಳಿದ್ದಾರೆ.

'ದಾಸ್ ಕಾರ್ಖಾನೆಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಗುಂಪೊಂದು ಕಾರ್ಖಾನೆ ಹೊರಗೆ ದಾಸ್ ಅವರಿಗೆ ಮನಬಂದಂತೆ ಥಳಿಸಿ ಬಳಿಕ ನೇಣು ಹಾಕಿ ಹತ್ಯೆಗೈದಿದೆ. ನಂತರ ಬೇರೆ ಸ್ಥಳಕ್ಕೆ ಕೊಂಡೊಯ್ದು ಮೃತದೇಹಕ್ಕೆ ಬೆಂಕಿ ಇಟ್ಟಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಇಮ್ರಾನ್ ಖಾನ್, ಪತ್ನಿಗೆ 17 ವರ್ಷ ಜೈಲು

ಇಸ್ಲಾಮಾಬಾದ್ (ಪಿಟಿಐ): ತೋಷಖಾನಾ-2 ಭ್ರಷ್ಟಾಚಾರ ಪ್ರಕರಣದಲ್ಲಿ ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ (73) ಮತ್ತು ಅವರ ಪತ್ನಿ ಬುಶ್ರಾ ಬೀಬಿ ಅವರಿಗೆ ಇಲ್ಲಿನ ನ್ಯಾಯಾಲಯ ಶನಿವಾರ 17 ವರ್ಷ ಕಠಿಣ ಜೈಲು ಶಿಕ್ಷೆ ವಿಧಿಸಿದೆ.



ಇಮ್ರಾನ್ ಖಾನ್

ಚಿನ್ನ, ವಜ್ರದ ಆಭರಣಗಳು ಸೇರಿ ಸೌದಿ ಸರ್ಕಾರ 2021ರಲ್ಲಿ ಪಾಕಿಸ್ತಾನಕ್ಕೆ ನೀಡಿದ ದುಬಾರಿ ಉಡುಗೊರೆಗಳನ್ನು ಮಾರಿ ಭ್ರಷ್ಟಾಚಾರ ಎಸಗಿದ ಆರೋಪವನ್ನು ಇಮ್ರಾನ್ ಖಾನ್, ಬುಶ್ರಾ ಬೀಬಿ ಎದುರಿಸುತ್ತಿದ್ದಾರೆ. ಇದನ್ನು ತೋಷಖಾನಾ-2 ಪ್ರಕರಣ ಎನ್ನಲಾಗುತ್ತದೆ.

ತೆಹ್ರೀಕ್ ಇ-ಇನ್ಸಾಫ್ ಪಕ್ಷದ ಸ್ಥಾಪಕ ಇಮ್ರಾನ್ ಖಾನ್ 2023ರಿಂದ ರಾವಲ್ಪಿಂಡಿ ಅಡಿಯಾಲ ಜೈಲಿನಲ್ಲಿದ್ದಾರೆ. ಈ ಜೈಲಿನಲ್ಲೇ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಶಾರೂಕ್ ಅರ್ಜುಮಂದ್ ತೀರ್ಪು ಪ್ರಕಟಿಸಿದರು.

ಪಾಕಿಸ್ತಾನದ ದಂಡ ಸಂಹಿತೆಯ ಸೆಕ್ಷನ್ 409ರ ಅಡಿ 10 ವರ್ಷ ಕಠಿಣ ಜೈಲು ಶಿಕ್ಷೆ ಮತ್ತು ಭ್ರಷ್ಟಾಚಾರ ನಿಗ್ರಹ ಕಾಯ್ದೆಯಡಿ 7 ವರ್ಷ ಸೆರೆವಾಸ ಮತ್ತು ಇಬ್ಬರಿಗೂ ತಲಾ ₹52 ಲಕ್ಷ ದಂಡ ವಿಧಿಸಲಾಗಿದೆ. ಇಮ್ರಾನ್ ಖಾನ್ ಅವರ 'ವಯಸ್ಸು' ಮತ್ತು ಬುಶ್ರಾ ಬೀಬಿ 'ಮಹಿಳೆ' ಎಂಬ ಅಂಶವನ್ನೂ ಪರಿಗಣಿಸಲಾಗಿದೆ ಎಂದು ನ್ಯಾಯಾಧೀಶರು ತೀರ್ಪಿನಲ್ಲಿ ಹೇಳಿದ್ದಾರೆ.

ಈ ಪ್ರಕರಣದಲ್ಲಿ 21 ಸಾಕ್ಷಿಗಳನ್ನು ಕೋರ್ಟ್ ವಿಚಾರಣೆಗೆ ಒಳಪಡಿಸಿತ್ತು. ತಮ್ಮ ವಿರುದ್ಧದ ಆರೋಪಗಳನ್ನು ಅಲ್ಲಗಳೆದಿರುವ ಖಾನ್, 'ಇದು ರಾಜಕೀಯ ಪಿತೂರಿ' ಎಂದು ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಉಕ್ರೇನ್ ಬಂದರಿಗೆ ರಷ್ಯಾ ದಾಳಿ: 8 ಮಂದಿ ಸಾವು

ಕೀವ್ (ಎಪಿ): ದಕ್ಷಿಣ ಉಕ್ರೇನ್‌ನ ಒಡೆಸಾದಲ್ಲಿರುವ ಬಂದರಿನ ಮೂಲಸೌಲಭ್ಯದ ಮೇಲೆ ಶುಕ್ರವಾರ ತಡರಾತ್ರಿ ರಷ್ಯಾ ನಡೆಸಿದ ಕ್ಷಿಪಣಿ ದಾಳಿಯಲ್ಲಿ 8 ಜನರು ಮೃತಪಟ್ಟಿದ್ದು, 27 ಜನರು ಗಾಯಗೊಂಡಿದ್ದಾರೆ ಎಂದು ಉಕ್ರೇನ್‌ನ ತುರ್ತು ಸೇವೆ ಶನಿವಾರ ಬೆಳಿಗ್ಗೆ ಹೇಳಿದೆ.

ಗಾಯಗೊಂಡವರಲ್ಲಿ ಕೆಲವರು ದಾಳಿಯ ಕೇಂದ್ರಬಿಂದುವಾಗಿದ್ದ ಬಸ್‌ನಲ್ಲಿದ್ದರು ಎಂದು ಅದು ಟೆಲಿಗ್ರಾಮ್‌ನಲ್ಲಿ ತಿಳಿಸಿದೆ. ದಾಳಿಯಿಂದಾಗಿ ಪಾರ್ಕಿಂಗ್ ಸ್ಥಳದಲ್ಲಿ ಟ್ರಕ್‌ಗಳಿಗೆ ಬೆಂಕಿ ಹೊತ್ತಿಕೊಂಡಿದ್ದು, ಕಾರುಗಳು ಸಹ ಹಾನಿಗೊಳಗಾಗಿವೆ.

ಬಂದರಿನ ಮೇಲೆ ಬ್ಯಾಲಿಸ್ಟಿಕ್ ಕ್ಷಿಪಣಿಗಳಿಂದ ದಾಳಿ ಮಾಡಲಾಗಿದೆ ಎಂದು ಒಡೆಸಾ ಪ್ರದೇಶದ ಮುಖ್ಯಸ್ಥ ಒಲೆಹ್ ಕೈಪರ್ ಹೇಳಿದ್ದಾರೆ.

ಮತ್ತೊಂದೆಡೆ, ಉಕ್ರೇನ್‌ನ ಪಡೆಗಳು ರಷ್ಯಾದ ಯುದ್ಧನೌಕೆ ಮತ್ತು ಇತರ ಸೌಲಭ್ಯಗಳನ್ನು ಡ್ರೋನ್ ಮೂಲಕ ಹೊಡೆದುರುಳಿಸಿವೆ ಎಂದು ಉಕ್ರೇನ್ ಶನಿವಾರ ತಿಳಿಸಿದೆ.

ಬೇಹುಗಾರಿಕೆ: ಗಲ್ಲು



ಟೆಹರಾನ್ (ಎಪಿ): ಇಸ್ರೇಲ್‌ನ ಗುಪ್ತಚರ ಮತ್ತು ಸೇನೆಗಾಗಿ ಬೇಹುಗಾರಿಕೆ ನಡೆಸಿದ ಆರೋಪದಡಿ ವ್ಯಕ್ತಿಯೊಬ್ಬರನ್ನು ಶನಿವಾರ ಗಲ್ಲಿಗೇರಿಸಲಾಗಿದೆ.

ಅಖಿಲ್ ಕೇಶವರ್ಜ್ (27) ಮರಣ-ದಂಡನೆಗೊಳಗಾದ ವ್ಯಕ್ತಿ ಎಂದು ಸರ್ಕಾರಿ ಮಾಧ್ಯಮವೊಂದು ವರದಿ ಮಾಡಿದೆ. ಈತ ಮೊಸಾದ್‌ನೊಂದಿಗೆ ನಿಕಟ ಸಂಪರ್ಕ ಹೊಂದಿದ್ದ ಎನ್ನಲಾಗಿದೆ.

ಉರ್ಮಿಯಾದಲ್ಲಿರುವ ಮಿಲಿಟರಿ ಪ್ರಧಾನ ಕಚೇರಿಯ ಛಾಯಾಚಿತ್ರ-ಗಳನ್ನು ತೆಗೆಯುವಾಗ ಅಖಿಲ್‌ನನ್ನು ಬಂಧಿಸಲಾಗಿತ್ತು. ಟೆಹರಾನ್ ಸೇರಿದಂತೆ ಇರಾನ್‌ನ ವಿವಿಧ ನಗರಗಳಲ್ಲಿ ಮೊಸಾದ್‌ಗಾಗಿ ಈತ ಇಂತಹ ಇನ್ನೂರಕ್ಕೂ ಹೆಚ್ಚು ಕೆಲಸ ಮಾಡಿದ್ದಾನೆ ಎಂದು ಆರೋಪಿಸಲಾಗಿತ್ತು. ಈತನ ವಿಚಾರಣೆ ನಡೆಸಿ, ಮರಣದಂಡನೆ ವಿಧಿಸಲಾಗಿತ್ತು. ಸುಪ್ರೀಂ ಕೋರ್ಟ್ ಸಹ ಈ ಶಿಕ್ಷೆಯನ್ನು ಎತ್ತಿ ಹಿಡಿದಿತ್ತು.

ಆರೋಪಿ ವಿರುದ್ಧ ಬ್ಲೂ ಕಾರ್ನರ್ ನೋಟಿಸ್

ಪಣಜಿ (ಪಿಟಿಐ): ಗೋವಾದ ಅರ್ಪೋರಾದಲ್ಲಿರುವ ನೈಟ್‌ಕ್ಲಬ್‌ನಲ್ಲಿ ಬೆಂಕಿ ಅವಘಡಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಆರೋಪಿಯಾಗಿರುವ ಬ್ರಿಟನ್ ಪ್ರಜೆ ಸುರಿಂದರ್ ಕುಮಾರ್ ಖೋಸ್ಲಾ ವಿರುದ್ಧ ಬ್ಲೂ ಕಾರ್ನರ್ ನೋಟಿಸ್ ಹೊರಡಿಸಲು ಗೋವಾದ ಪೊಲೀಸರು ಪ್ರಕ್ರಿಯೆ ಪ್ರಾರಂಭಿಸಿದ್ದಾರೆ ಎಂದು ಹಿರಿಯ ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಡಿಸೆಂಬರ್ 6ರಂದು ಸಂಭವಿಸಿದ ದುರಂತದಲ್ಲಿ 25 ಜನರು ಮೃತಪಟ್ಟಿದ್ದರು. ಘಟನೆ ಸಂಭವಿಸುವಾಗ ಖೋಸ್ಲಾ ಗೋವಾದಲ್ಲಿ ಇದ್ದರು, ನಂತರ ಬಹುಶಃ ಮರುದಿನ ಅವರು ಬ್ರಿಟನ್‌ಗೆ ಪಲಾಯನ ಮಾಡಿದ್ದಾರೆ ಎಂದು ಅವರು ಹೇಳಿದ್ದಾರೆ. ದುರಂತ ಸಂಭವಿಸಿದ 'ಬಿರ್ಚ್ ಬೈ ರೋಮಿಯೊ ಲೇನ್' ನೈಟ್‌ಕ್ಲಬ್‌ನ ಮಾಲೀಕರಲ್ಲಿ ಖೋಸ್ಲಾ ಕೂಡಾ ಒಬ್ಬರು ಎಂದು ನಂಬಲಾಗಿದೆ 'ಅವರನ್ನು ಕರೆತರಲು ಬ್ಲೂ ಕಾರ್ನರ್ ನೋಟಿಸ್ ಹೊರಡಿಸುವ ಪ್ರಕ್ರಿಯೆ ಪ್ರಾರಂಭಿಸಿದ್ದೇವೆ. ಇದನ್ನು ಪೂರ್ಣಗೊಳಿಸಲು ಕೇಂದ್ರೀಯ ಏಜೆನ್ಸಿ-ಗಳೊಂದಿಗೆ ಅಗತ್ಯವಿರುವ ಔಪಚಾರಿಕ ಕಾರ್ಯಗಳನ್ನು ಪ್ರಾರಂಭಿಸಲಾಗುತ್ತಿದೆ' ಎಂದು ಅವರು ತಿಳಿಸಿದ್ದಾರೆ.

ನೈಟ್‌ಕ್ಲಬ್‌ನ ಮಾಲೀಕರಾದ ಸೌರಭ್ ಲೂತ್ರಾ, ಗೌರವ್ ಲೂತ್ರಾ, ಅಜಯ್ ಗುಪ್ತಾ ಮತ್ತು ಇತರ ಐದು ಮಂದಿ ಸೇರಿದಂತೆ ಎಂಟು ಜನರನ್ನು ಪೊಲೀಸರು ಇದುವರೆಗೆ ಬಂಧಿಸಿದ್ದಾರೆ.

ಸತತ 2ನೇ ದಿನವೂ ಅಂಬಾನಿ ಮಗನ ವಿಚಾರಣೆ

ನವದೆಹಲಿ (ಪಿಟಿಐ): ಕೈಗಾರಿಕೋದ್ಯಮಿ ಅನಿಲ್ ಅಂಬಾನಿ ಅವರ ಮಗ ಜಯ್ ಅನ್ಮೋಲ್ ಅಂಬಾನಿಯನ್ನು ಜಾರಿ ನಿರ್ದೇಶನಾಲಯವು (ಇ.ಡಿ) ಶನಿವಾರ ಸತತ ಎರಡನೇ ದಿನವೂ ವಿಚಾರಣೆಗೆ ಒಳಪಡಿಸಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಯೆಸ್ ಬ್ಯಾಂಕ್ ಸಾಲ ವಂಚನೆ ಆರೋಪಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಈ ತನಿಖೆ ನಡೆಯುತ್ತಿದೆ.

ಶುಕ್ರವಾರ ಮೊದಲ ಬಾರಿಗೆ ಅನ್ಮೋಲ್ ಅವರ ಹೇಳಿಕೆಗಳನ್ನು ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ದಾಖಲಿಸಲಾಗಿತ್ತು ಎಂದು ಅವರು ತಿಳಿಸಿದ್ದಾರೆ.

ಈ ಬೆಳವಣಿಗೆ ಬಗ್ಗೆ 'ರಿಲಯನ್ಸ್ ಅನಿಲ್ ಧೀರೂಭಾಯಿ ಅಂಬಾನಿ ಗ್ರೂಪ್' ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಪ್ರಕರಣದಲ್ಲಿ ಅನಿಲ್ ಅಂಬಾನಿ ಅವರನ್ನು ಈ ಹಿಂದೆಯೆ ಇ.ಡಿ ಪ್ರಶ್ನಿಸಿದೆ.

2017ರ ಮಾರ್ಚ್ 31ರ ಹೊತ್ತಿಗೆ 'ರಿಲಯನ್ಸ್ ಅನಿಲ್ ಧೀರೂಭಾಯಿ ಅಂಬಾನಿ ಗ್ರೂಪ್'ನಲ್ಲಿ ಸುಮಾರು ₹6,000 ಕೋಟಿಗಳ ಹೂಡಿಕೆ ಇತ್ತು. ಇದು ಒಂದು ವರ್ಷದೊಳಗೆ ದ್ವಿಗುಣಗೊಂಡು ₹13,000 ಕೋಟಿಗಳಿಗೆ ತಲುಪಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಈ ಹೂಡಿಕೆಗಳಲ್ಲಿ 'ದೊಡ್ಡ' ಭಾಗವು ನಿಷ್ಕ್ರಿಯ ಹೂಡಿಕೆಯಾಗಿ (ಎನ್‌ಪಿಐ) ಪರಿವರ್ತನೆಗೊಂಡಿತು. ಈ ವ್ಯವಹಾರಗಳಿಂದ ಬ್ಯಾಂಕ್ ₹3,300 ಕೋಟಿ ನಷ್ಟವನ್ನು ಅನುಭವಿಸಿತು ಎಂದು ಇ.ಡಿ ಆರೋಪಿಸಿದೆ.

ಪಿಜಿ ವೈದ್ಯಕೀಯ: 22ಕ್ಕೆ 2ನೇ ಸುತ್ತಿನ ಸೀಟು ಹಂಚಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ನಾತಕೋತ್ತರ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ಎರಡನೇ ಸುತ್ತಿನ ಸೀಟು ಹಂಚಿಕೆಯ ತಾತ್ಕಾಲಿಕ ಫಲಿತಾಂಶವನ್ನು ಇದೇ 22ಕ್ಕೆ ಪ್ರಕಟಿಸಲಾಗುತ್ತದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಪ್ರಕಟಣೆ ತಿಳಿಸಿದೆ.

ಕೆಲ ಅಭ್ಯರ್ಥಿಗಳಿಗೆ ಅಖಿಲ ಭಾರತ ಮಟ್ಟದ, ಎಂಸಿಸಿ ಎರಡನೇ ಸುತ್ತಿನಲ್ಲಿ ಸೀಟು ಹಂಚಿಕೆಯಾಗಿದೆ. ಅಂತಹವರು ಅಲ್ಲಿಯೇ ಪ್ರವೇಶ ಪಡೆಯುವುದಿದ್ದರೆ, ಅವರಿಗೆ ಅನುಕೂಲ ಆಗಲಿ ಎಂದು ಡಿ.22ರಂದೇ ತಾತ್ಕಾಲಿಕ ಫಲಿತಾಂಶ ಪ್ರಕಟಿಸಲಾಗುತ್ತಿದೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ.

ಎಂಸಿಸಿ ಸೀಟಿಗೆ ಪ್ರವೇಶ ಪಡೆಯಲು ಇಚ್ಛಿಸುವ ಅಭ್ಯರ್ಥಿಗಳು ತಮ್ಮ ಮೂಲ ದಾಖಲೆಗಳನ್ನು ಡಿ.23ರಂದು ಸಂಜೆ 4 ಗಂಟೆಯೊಳಗೆ ಪ್ರಾಧಿಕಾರದ ಕಚೇರಿಗೆ ಬಂದು ಪಡೆಯಬಹುದು. ಈ ಸುತ್ತಿನಲ್ಲಿ ಭಾಗವಹಿಸಲು ಕಟ್ಟಿರುವ ಶುಲ್ಕದಲ್ಲಿ ₹25 ಸಾವಿರ ಕಡಿತ ಮಾಡಿಕೊಂಡು, ಉಳಿದ ಹಣವನ್ನು ಒಂದೇ ದಿನದಲ್ಲಿ ಹಿಂದಿರುಗಿಸಲಾಗುತ್ತದೆ ಎಂದು ವಿವರಿಸಿದ್ದಾರೆ.

ಎಂಸಿಸಿ ಸೀಟಿಗೆ ಪ್ರವೇಶ ಪಡೆಯುವ ಕಾರಣದಿಂದ ಪ್ರಾಧಿಕಾರದಲ್ಲಿ ಎರಡನೇ ಸುತ್ತಿನಲ್ಲಿ ತಾತ್ಕಾಲಿಕವಾಗಿ ಹಂಚಿಕೆಯಾಗಿ ರದ್ದುಗೊಳ್ಳುವ ಪಿಜಿ ಸೀಟುಗಳನ್ನು ಅದೇ ಸುತ್ತಿನಲ್ಲೇ ಅರ್ಹರಿಗೆ ಸಿಗುವ ಹಾಗೆ ಮಾಡಿ, ಡಿ.24ರಂದು ಅಂತಿಮ ಫಲಿತಾಂಶ ಪ್ರಕಟಿಸಲಾಗುತ್ತದೆ. ಅಭ್ಯರ್ಥಿಗಳು ಈ ಮೊದಲು ದಾಖಲಿಸಿದ್ದ ಆಯ್ಕೆಗಳ ಆಧಾರದ ಮೇಲೆಯೇ ಅಂತಿಮವಾಗಿ ಸೀಟು ಹಂಚಿಕೆ ಮಾಡಲಾಗುತ್ತದೆ ಎಂದು ಮಾಹಿತಿ ನೀಡಿದ್ದಾರೆ.

ಎರಡನೇ ಸುತ್ತಿನಲ್ಲಿ ಸೀಟು ಹಂಚಿಕೆಯಾದವರು ಕಡ್ಡಾಯವಾಗಿ ಪ್ರವೇಶ ಪಡೆಯಬೇಕು. ಹಾಗೆಯೇ ಈ ಸುತ್ತಿನಲ್ಲಿ ಪ್ರವೇಶ ಪಡೆದ ಅಭ್ಯರ್ಥಿಗಳಿಗೆ 3ನೇ ಸುತ್ತಿನಲ್ಲಿ ಭಾಗವಹಿಸಲು ಅವಕಾಶ ನೀಡಲಾಗುವುದು. ಈ ಸಂಬಂಧ ಮಾರ್ಗಸೂಚಿಗಳನ್ನು ಬದಲಿಸಲಾಗಿದೆ ಎಂದು ತಿಳಿಸಿದ್ದಾರೆ.

'ಭಾರತದಲ್ಲಿ ಈಗ 23 ಏಮ್ಸ್'

ನವದೆಹಲಿ (ಪಿಟಿಐ): ದೇಶದಾದ್ಯಂತ ಗುಣಮಟ್ಟದ ಆರೋಗ್ಯ ಒದಗಿಸುವುದು ಮತ್ತು ವೈದ್ಯಕೀಯ ತರಬೇತಿ ವಿಸ್ತರಿಸುವ ಬದ್ಧತೆಯನ್ನು ಸರ್ಕಾರ ಹೊಂದಿದೆ ಎಂದು ಕೇಂದ್ರ ಆರೋಗ್ಯ ಸಚಿವ ಜೆ.ಪಿ. ನಡ್ಡಾ ಅವರು ತಿಳಿಸಿದ್ದಾರೆ.

ಲಖ್ನೋದಲ್ಲಿ ನಡೆದ ಕಿಂಗ್ ಜಾರ್ಜ್ ಅವರ ವೈದ್ಯಕೀಯ ಕಾಲೇಜಿನ 21ನೇ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಶನಿವಾರ ಮಾತನಾಡಿದ ಅವರು, 'ದೇಶದಲ್ಲಿ ಇದೀಗ 23 ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಗಳ (ಏಮ್ಸ್) ಕಾರ್ಯನಿರ್ವಹಿಸುತ್ತಿವೆ. ಕಳೆದ 11 ವರ್ಷದಲ್ಲಿ ದೇಶದಲ್ಲಿ ವೈದ್ಯಕೀಯ ಕಾಲೇಜುಗಳ ಸಂಖ್ಯೆ 387ರಿಂದ 819ಕ್ಕೆ ಏರಿಕೆಯಾಗಿದೆ' ಎಂದು ಹೇಳಿದರು.

ಕೈಟ್ಸ್ ಮುಡಿಗೆ ವಿಶ್ವ ಟೆನಿಸ್ ಲೀಗ್ ಕಿರೀಟ

ಈಗಲ್ಸ್ ತಂಡಕ್ಕೆ ನಿರಾಸೆ • ಪಂದ್ಯಕ್ಕೆ ಚಾಲನೆ ನೀಡಿದ ಕ್ರಿಕೆಟ್ ತಾರೆ ಕೆ.ಎಲ್. ರಾಹುಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶನಿವಾರ ಸಂಜೆಯ ಚಳಿಯ ವಾತಾವರಣದಲ್ಲಿ ಸೇರಿದ್ದ ಸುಮಾರು ಮೂರು ಸಾವಿರದಷ್ಟು ಪ್ರೇಕ್ಷಕರಿಗೆ, ತಾರಾ ವರ್ಚಸ್ಸಿನ ಆಟಗಾರರಿದ್ದ ವಿಶ್ವ ಟೆನಿಸ್ ಲೀಗ್ ಫೈನಲ್ ಪಂದ್ಯ ನಿರಾಸೆ ಮೂಡಿಸಲಿಲ್ಲ. ಕೈಟ್ಸ್ ತಂಡ ಹೊನಲು ಬೆಳಕಿನಡಿ ನಡೆದ ತೀವ್ರ ಹೋರಾಟದ ಪಂದ್ಯದಲ್ಲಿ 22–19 ರಿಂದ ಈಗಲ್ಸ್ ತಂಡವನ್ನು ಸೋಲಿಸಿ ನಾಲ್ಕನೇ ಆವೃತ್ತಿಯ ವಿಶ್ವ ಟೆನಿಸ್ ಲೀಗ್ ಚಾಂಪಿಯನ್ ಪಟ್ಟಕ್ಕೇರಿತು.

ಕಬ್ಬನ್ ಪಾರ್ಕ್‌ನ ಎಸ್.ಎಂ.ಕೃಷ್ಣ ಟೆನಿಸ್ ಕ್ರೀಡಾಂಗಣದಲ್ಲಿ ಮೊದಲ ಮೂರು ಪಂದ್ಯಗಳ ನಂತರವೂ ಎರಡೂ ತಂಡಗಳ ಅಂಕಗಳ ನಡುವೆ ಹೆಚ್ಚೇನೂ ಅಂತರ ಇರಲಿಲ್ಲ.

ಮೊದಲ ಸಿಂಗಲ್ಸ್‌ನಲ್ಲಿ ಕೈಟ್ಸ್ ತಂಡದ ಪರ ಉಕ್ರೇನ್‌ನ ಮಾರ್ತಾ ಕೊಸ್ಟಿಯುಕ್ 6 –4 ರಿಂದ ಭರವಸೆಯ ಆಟಗಾರ್ತಿ ಈಗಲ್ಸ್‌ನ ಶ್ರೀವಲ್ಲಿ ರಶ್ಮಿಕಾ ಭಮಿಡಿಪಾಟಿ ಅವರನ್ನು ಸೋಲಿಸಿದರು.

ಶ್ರೀವಲ್ಲಿ 7ನೇ ಗೇಮ್‌ನಲ್ಲಿ ಕೆಲವು ಉತ್ತಮ ಫೋರ್‌ಹ್ಯಾಂಡ್ ರಿಟರ್ನ್‌ಗಳ ಮೂಲಕ ಎದುರಾಳಿಯ ಸರ್ವ್ ಬ್ರೇಕ್ ಮಾಡಿದರು. ಆದರೆ ಎಂಟನೇ ಗೇಮ್‌ನಲ್ಲಿ ಮಾರ್ತಾ ಎದುರಾಳಿಯ ಸರ್ವ್ ಬ್ರೇಕ್ ಮಾಡಿದ್ದರಿಂದ ಸ್ಕೋರ್ 4–4 ಸಮನಾಯಿತು. ನಂತರ ಹತ್ತನೇ ಗೇಮ್‌ನಲ್ಲಿ ಮಾರ್ತಾ ನಿರ್ಣಾಯಕ ಬ್ರೇಕ್ ಪಡೆದರು. ಶ್ರೀವಲ್ಲಿ ಒಂದು ಡಬಲ್ ಫಾಲ್ಟ್ ಎಸಗಿದರು. ನಂತರ ಒಂದು 'ಲಾಬ್' ಅನ್ನು ಬಿರುಸಾಗಿ ಹೊಡೆಯುವ ಅವಕಾಶದಲ್ಲಿ ಶ್ರೀವಲ್ಲಿ ಎಡವಿದರು. ಬಳಿಕ ಬಿರುಸಿನ ಸರ್ವ್ ರಿಟರ್ನ್ ಹೊಡೆತದ ಮೂಲಕ ಉಕ್ರೇನ್‌ನ ಆಟಗಾರ್ತಿ ಗೇಮ್ ಹಾಗೂ ಪಂದ್ಯ ತಮ್ಮದಾಗಿಸಿಕೊಂಡರು.

ಆದರೆ ಮಿಶ್ರ ಡಬಲ್ಸ್‌ನಲ್ಲಿ ಈಗಲ್ಸ್ ತಂಡದ ಗೇಲ್ ಮಾನ್ಫಿಲ್ಸ್– ಶ್ರೀವಲ್ಲಿ 6–4, 6–3 ರಿಂದ ಮಾರ್ತಾ–ದಕ್ಷಿಣೇಶ್ವರ್ ಸುರೇಶ್ ಜೋಡಿಯನ್ನು ಸೋಲಿಸಿತು. ಈ ಪಂದ್ಯದಲ್ಲಿ ಮಾನ್ಫಿಲ್ಸ್ ಮತ್ತು ಸುರೇಶ್ ಅವರ ಸರ್ವ್‌ಗಳು ಗಮನ ಸೆಳೆದವು.

ಪುರುಷರ ಡಬಲ್ಸ್‌ನಲ್ಲಿ ಕೈಟ್ಸ್‌ನ ದಕ್ಷಿಣೇಶ್ವರ ಸುರೇಶ್ ಜೊತೆಗೂಡಿದ ಆಸ್ಟ್ರೇಲಿಯಾದ ತಾರೆ ನಿಕ್ ಕಿರ್ಗಿಯೋಸ್ 6–3 ರಿಂದ ಸುಮಿತ್ ನಾಗಲ್ ಮತ್ತು ಗೇಲ್ ಮಾನ್ಫಿಲ್ಸ್ ಜೋಡಿಯನ್ನು ಸೋಲಿಸಿ ಕೈಟ್ಸ್ ತಂಡಕ್ಕೆ ಅಲ್ಪ ಮುನ್ನಡೆ ಒದಗಿಸಿದರು.

ನಿರ್ಣಾಯಕವಾಗಿದ್ದ ಕೊನೆಯ (ಪುರುಷರ ಸಿಂಗಲ್ಸ್) ಪಂದ್ಯದಲ್ಲಿ ದಕ್ಷಿಣೇಶ್ವರ್ ಸುರೇಶ್ 7–6 (7–4) ರಿಂದ ಸುಮಿತ್ ನಾಗಲ್ ಅವರನ್ನು ಸೋಲಿಸಿ ಕೈಟ್ಸ್ ತಂಡಕ್ಕೆ ಮೂರು ಅಂಕಗಳಿಂದ ಗೆಲುವು ಪಡೆಯಲು ನೆರವಾದರು.

ಭಾರತ ಕ್ರಿಕೆಟ್ ತಂಡದ ತಾರೆ ಕೆ.ಎಲ್.ರಾಹುಲ್ ಅವರು ಪಂದ್ಯಕ್ಕೆ ಚಾಲನೆ ನೀಡಿದರು. ಟೆನಿಸ್ ಬಾಲ್‌ಗಳನ್ನು ರ‍್ಯಾಕೆಟ್‌ನಲ್ಲಿ ಪ್ರೇಕ್ಷಕರ ಸ್ಟ್ಯಾಂಡ್‌ಗಳಿಗೆ ಆಡಿ ರಂಜಿಸಿದರು.



ನಾಲ್ಕನೇ ಆವೃತ್ತಿಯ ವಿಶ್ವ ಟೆನಿಸ್ ಲೀಗ್ ಪ್ರಶಸ್ತಿ ಗೆದ್ದ ಕೈಟ್ಸ್ ತಂಡ. (ಎಡದಿಂದ); ಕೋಚ್ ಜೂಲಿಯನ್ ನೋಲೆ, ಮಾರ್ತಾ ಕೊಸ್ಟಿಯುಕ್, ನಿಕ್ ಕಿರ್ಗಿಯೋಸ್, ದಕ್ಷಿಣೇಶ್ವರ್ ಸುರೇಶ್ ಮತ್ತು ಅಂಕಿತಾ ರೈನಾ ಪ್ರಜಾವಾಣಿ ಚಿತ್ರ: ಬಿ.ಕೆ. ಜನಾರ್ದನ

ಸಂತೋಷ್ ಟ್ರೋಫಿ: ಲಕ್ಷದ್ವೀಪ ವಿರುದ್ಧ ಗೆಲುವು

ನಿಖಿಲ್ ಮಿಂಚು: ಕರ್ನಾಟಕ ಶುಭಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಯಕ ನಿಖಿಲ್ ರಾಜ್ ಮುರುಗೇಶ್ ಅವರ ಗಳಿಸಿದ ಎರಡು ಗೋಲುಗಳ ನೆರವಿನಿಂದ ಕರ್ನಾಟಕ ತಂಡವು 'ಸಂತೋಷ್ ಟ್ರೋಫಿ'ಗಾಗಿ ನಡೆಯುತ್ತಿರುವ 79ನೇ ಸೀನಿಯರ್ ಪುರುಷರ ರಾಷ್ಟ್ರೀಯ ಫುಟ್‌ಬಾಲ್ ಚಾಂಪಿಯನ್‌ಷಿಪ್ ಪಂದ್ಯದಲ್ಲಿ 3–0ಯಿಂದ ಲಕ್ಷದ್ವೀಪ ತಂಡವನ್ನು ನಿರಾಯಾಸವಾಗಿ ಮಣಿಸಿ ಶುಭಾರಂಭ ಮಾಡಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಅರ್ಹತಾ ಸುತ್ತಿನ 'ಎಚ್' ಗುಂಪಿನ ಪಂದ್ಯದಲ್ಲಿ ಬೆಂಗಳೂರು ಯುನೈಟೆಡ್ ಫುಟ್‌ಬಾಲ್ ಕ್ಲಬ್ ತಂಡದ ನಿಖಿಲ್ 8ನೇ ಮತ್ತು 43ನೇ ನಿಮಿಷಗಳಲ್ಲಿ ಗೋಲು ದಾಖಲಿಸಿದರು. ಕಾರ್ತಿಕ್ ಗೋವಿಂದ್ ಸ್ವಾಮಿ ಮತ್ತೊಂದು ಗೋಲನ್ನು (90 + 3ನೇ) ತಂದಿತ್ತರು.

ರವಿಬಾಬು ರಾಜು ಮಾರ್ಗದರ್ಶನದ ಆತಿಥೇಯ ತಂಡವು ಎಂಟನೇ ನಿಮಿಷದಲ್ಲೇ ಮುನ್ನಡೆ ಪಡೆಯಿತು. ಪೆನಾಲ್ಟಿ ಕಾರ್ನರ್ ಅವಕಾಶವನ್ನು ನಿಖಿಲ್ ಅವರು ಎದುರಾಳಿ ಗೋಲ್‌ಕೀಪರ್ ಮೊಹಮ್ಮದ್ ಸಮೀರ್ ಶೇಕ್ ಅವರ ಕಣ್ತಪ್ಪಿಸಿ ಚೆಂಡನ್ನು ಗುರಿ ಸೇರಿಸಿದರು.

ಮೊದಲಾರ್ಧದ ಮುಕ್ತಾಯಕ್ಕೆ ಕೆಲವೇ ನಿಮಿಷ ಬಾಕಿ ಇರುವಂತೆ ಬೆಂಗಳೂರು ಎಫ್‌ಸಿ ತಂಡ ಪ್ರತಿಭೆ ಸಿ.ರೋಹನ್ ಸಿಂಗ್ ಅವರು ನೀಡಿದ ಪಾಸ್‌ನಲ್ಲಿ ನಿಖಿಲ್ ಮತ್ತೊಂದು ಗೋಲು ದಾಖಲಿಸಿ, ತಂಡದ ಮೊತ್ತವನ್ನು ದ್ವಿಗುಣಗೊಳಿಸಿದರು.

ದ್ವಿತೀಯಾರ್ಧದಲ್ಲಿ ಉಭಯ ತಂಡಗಳು ರಕ್ಷಣಾತ್ಮಕ ಆಟದ ಮೊರೆ ಹೋದವು. ಆದರೆ, 'ಇಂಜುರಿ' ಅವಧಿಯಲ್ಲಿ ಕಾರ್ತಿಕ್ ಅಮೋಘವಾಗಿ ಗೋಲು ಗಳಿಸಿ, ಕರ್ನಾಟಕದ ಗೆಲುವಿನ ಅಂತರವನ್ನು ಹೆಚ್ಚಿಸಿದರು.

ಕರ್ನಾಟಕ ತಂಡವು ಸೋಮವಾರ ಸರ್ವಿಸಸ್ ತಂಡವನ್ನು ಎದುರಿಸಲಿದೆ.

ಸರ್ವಿಸಸ್‌ಗೆ ಗೆಲುವು: ದಿನದ ಮೊದಲ ಪಂದ್ಯದಲ್ಲಿ ಸರ್ವಿಸಸ್ ತಂಡವು 4–0ಯಿಂದ ಗೋವಾ ತಂಡವನ್ನು ಮಣಿಸಿತು.



ಕರ್ನಾಟಕ ತಂಡದ ನಾಯಕ ನಿಖಿಲ್ ರಾಜ್ ಮುರುಗೇಶ್ ಅವರು ಚೆಂಡಿಗೆ ಕಿಕ್ ಮಾಡಿದರು

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆಡುವರೇ ವಿರಾಟ್ ಕೊಹ್ಲಿ?

ಪ್ರಜಾವಾಣಿ ವಾರ್ತೆ



ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಪಂದ್ಯಗಳನ್ನು ಆಯೋಜಿಸಲು ಕರ್ನಾಟಕ ಸರ್ಕಾರವು ಷರತ್ತುಬದ್ಧ ಅನುಮತಿ ನೀಡಿದೆ.

ಆದರೆ ಈಗ ಅದಕ್ಕೂ ಮುನ್ನವೇ ಈ ಕ್ರೀಡಾಂಗಣದಲ್ಲಿ ವಿರಾಟ್ ಕೊಹ್ಲಿಯ ಆಟವನ್ನು ಕಣ್ತುಂಬಿಕೊಳ್ಳುವ ತವಕದಲ್ಲಿ ಬೆಂಗಳೂರು ಕ್ರಿಕೆಟ್‌ಪ್ರಿಯರು ಇದ್ದಾರೆ. ಸುಮಾರು 10 ಸಾವಿರ ಪ್ರೇಕ್ಷಕರಿಗೆ ಪಂದ್ಯ ವೀಕ್ಷಿಸಲು ಪ್ರವೇಶ ನೀಡುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಇದೇ 24ರಂದು ಇಲ್ಲಿ ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಡಿ ಗುಂಪಿನ ಪಂದ್ಯ ನಡೆಯಲಿದೆ. ಅದರಲ್ಲಿ ದೆಹಲಿ ಮತ್ತು ಆಂಧ್ರ ತಂಡಗಳು ಮುಖಾಮುಖಿಯಾಗಲಿವೆ. ಈ ಟೂರ್ನಿಯಲ್ಲಿ ಕೊಹ್ಲಿ ಅವರು ಎರಡು ಪಂದ್ಯಗಳಲ್ಲಿ ತಮ್ಮ ತವರು ದೆಹಲಿ ತಂಡವನ್ನು ಪ್ರತಿನಿಧಿಸಲಿದ್ದಾರೆ.

ವಿರಾಟ್ ಅವರಿಗೆ ಬೆಂಗಳೂರು ಎರಡನೇ ತವರು ಇದ್ದಂತೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದಲ್ಲಿ ಅವರು ಆರಂಭದಿಂದಲೂ ಆಡುತ್ತಿದ್ದಾರೆ. ಅದರಿಂದಾಗಿ ಬೆಂಗಳೂರಿನಲ್ಲಿ ಅಪಾರ ಸಂಖ್ಯೆಯ ಅಭಿಮಾನಿಗಳು ಅವರಿಗೆ ಇದ್ದಾರೆ. ಆದ್ದರಿಂದ ಒಂದೊಮ್ಮೆ ಅವರು ಡಿ. 24ರ ಪಂದ್ಯದಲ್ಲಿ ಆಡಿದರೆ ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಅಭಿಮಾನಿಗಳು ಆಗಮಿಸುವ ನಿರೀಕ್ಷೆ ಇದೆ. ಆದರೆ ಟೂರ್ನಿಯ ಯಾವ ಪಂದ್ಯಗಳಲ್ಲಿ ವಿರಾಟ್ ಆಡಲಿದ್ದಾರೆಂಬುದು ಇನ್ನೂ ಖಚಿತವಾಗಿಲ್ಲ. ಈ ಕಾರಣಕ್ಕಾಗಿಯೇ ಸರ್ಕಾರದಿಂದ ಅನುಮತಿ ಪಡೆಯಲು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಪದಾಧಿಕಾರಿಗಳು ಶನಿವಾರ ಗೃಹ ಸಚಿವ ಜಿ. ಪರಮೇಶ್ವರ್ ಅವರನ್ನು ಭೇಟಿಯಾಗಿದ್ದಾರೆ.

'ವಿರಾಟ್ ಅವರು ದೆಹಲಿ ತಂಡದಲ್ಲಿ ವಿಜಯ್ ಹಜಾರೆ ಟ್ರೋಫಿ ಟೂರ್ನಿಯಲ್ಲಿ ಆಡುವುದನ್ನು ಬಿಸಿಸಿಐ ಸ್ಪಷ್ಟಪಡಿಸಿದೆ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಂದ್ಯ ಆಯೋಜನೆಗೆ ಗೃಹ ಸಚಿವರನ್ನು ಭೇಟಿಯಾಗಿ ಅನುಮತಿ ಕೇಳಿಕೊಂಡಿದ್ದೇವೆ' ಎಂದು ಕೆಎಸ್‌ಸಿಎ ವಕ್ತಾರ ವಿನಯ್ ಮೃತ್ಯುಂಜಯ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಚಿಕ್ಕಮಗಳೂರು ಗಾಲ್ಫ್ ಕ್ಲಬ್‌ಗೆ ಬೆಳ್ಳಿ ಹಬ್ಬದ ಸಂಭ್ರಮ

ಗಾಲ್ಫ್ ಶಿಸ್ತು ಕಲಿಸುವ ಆಟ: ಜಾರ್ಜ್

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಗಾಲ್ಫ್ ಒಂದು ಶಿಸ್ತಿನ ಆಟ. ಇದು ಮನುಷ್ಯನಲ್ಲಿ ಶಿಸ್ತು ಮತ್ತು ಆತ್ಮ ವಿಶ್ವಾಸ ಹೆಚ್ಚಿಸುತ್ತದೆ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಹೇಳಿದರು.

ಚಿಕ್ಕಮಗಳೂರು ಗಾಲ್ಫ್ ಕ್ಲಬ್ (ಸಿಜಿಸಿ) ಬೆಳ್ಳಿ ಹಬ್ಬ ಕಾರ್ಯಕ್ರಮವನ್ನು ಶನಿವಾರ ಉದ್ಘಾಟಿಸಿ ಅವರು ಮಾತನಾಡಿದರು.

'ನಾನು ಉತ್ತಮ ಗಾಲ್ಫ್ ಆಟಗಾರ ಅಲ್ಲ. ಹಾಕಿ ಆಟಗಾರ. ಆದರೆ, ಗಾಲ್ಫ್ ಬಗ್ಗೆ ಗೊತ್ತಿದೆ. ಗಾಲ್ಫ್ ಕೇವಲ ಆಟ ಮಾತ್ರವಲ್ಲ. ಪರಸ್ಪರ ಸ್ನೇಹ ಬೆಳೆಸುತ್ತದೆ, ಮೌಲ್ಯಗಳನ್ನು ಕಲಿಸುತ್ತದೆ' ಎಂದರು.

ಮಾಜಿ ಐಪಿಎಸ್ ಅಧಿಕಾರಿ ಅಣ್ಣಾಮಲೈ ಮಾತನಾಡಿ, 'ಗಾಲ್ಫ್ ಆಟ ಉತ್ತಮ ವ್ಯಕ್ತಿತ್ವ ರೂಪಿಸುತ್ತದೆ. ಸದಾ ಸಂತೋಷ, ಉತ್ಸಾಹ, ಚಟುವಟಿಕೆಯಿಂದ ಇರಬೇಕಾದರೆ ಈ ಆಟ ಪ್ರಮುಖ ಪಾತ್ರ ವಹಿಸುತ್ತದೆ. ಗಾಲ್ಫ್ ಕ್ಲಬ್ ಕಟ್ಟಿರುವ ಸಂಸ್ಥಾಪಕ ಅಧ್ಯಕ್ಷ ಎ.ಬಿ. ಸುದರ್ಶನ್ ಮತ್ತು ತಂಡದ ಸಾಧನೆ ಮರೆಯುವಂತಹದಲ್ಲ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನಿವೃತ್ತ ಐಪಿಎಸ್ ಅಧಿಕಾರಿ ಪರಶಿವಮೂರ್ತಿ ಮಾತನಾಡಿ, 'ಚಿಕ್ಕಮಗಳೂರಿನಲ್ಲಿ ಗಾಲ್ಫ್ ಕ್ಲಬ್ ಆರಂಭಿಸಿದ್ದೇ ದೊಡ್ಡ ಸಾಹಸ. ಸುದರ್ಶನ್ ಅವರು ಆರಂಭದಲ್ಲಿ ಅನೇಕ ವಿರೋಧ ಮತ್ತು ತೊಂದರೆಗಳನ್ನು ಎದುರಿಸಿದರು. ಆದರೆ, ಛಲ ಬಿಡದೇ ಕ್ಲಬ್ ಕಟ್ಟಿದರು. ನಾನು ಆ ಸಂದರ್ಭದಲ್ಲಿ ಇಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿದ್ದೆ. ಕ್ಲಬ್‌ಗೆ ನನ್ನ ಸಹಕಾರ ನಿಮಿತ್ತ ಮಾತ್ರ' ಎಂದು ಹೇಳಿದರು.

ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಮಾತನಾಡಿ, 'ಕಾಫಿನಾಡಾಗಿರುವ ಚಿಕ್ಕಮಗಳೂರನ್ನು ಗಾಲ್ಫ್ ನಾಡಾಗಿಸುವ ಪ್ರಯತ್ನವನ್ನು ಸುದರ್ಶನ್ ಮಾಡಿದ್ದಾರೆ. ಅವರ ತಂಡ ಮಾಡಿರುವ ಕೆಲಸವನ್ನು ಮುಂದಿನ ಪೀಳಿಗೆ ಸದಾ ಸ್ಮರಿಸುತ್ತದೆ' ಎಂದರು.

ಶಾಸಕ ಎಚ್.ಡಿ. ತಮ್ಮಯ್ಯ, ಕ್ಲಬ್ ಸಂಸ್ಥಾಪಕ ಅಧ್ಯಕ್ಷ ಎ.ಬಿ.ಸುದರ್ಶನ್, ಕ್ಯಾಪ್ಟನ್ ಎ.ಬಿ.ರವಿಶಂಕರ್ ಇದ್ದರು.

ವೈದ್ಯ ಡಾ. ಜೆ.ಪಿ.ಕೃಷ್ಣೇಗೌಡ, ಉದ್ಯಮಿ ಕಿಶೋರ್ ಕುಮಾರ್ ಹೆಗ್ಡೆ, ಪ್ರಕಾಶ್ ಅಲ್ವಾರಿಸ್ ಅವರನ್ನು ಕ್ಲಬ್‌ನಿಂದ ಸನ್ಮಾನಿಸಲಾಯಿತು.



ಬೆಳ್ಳಿ ಹಬ್ಬದ ನೆನಪಿಗಾಗಿ ಚಿಕ್ಕಮಗಳೂರು ಗಾಲ್ಫ್ ಕ್ಲಬ್ ಆವರಣದಲ್ಲಿ ಸ್ಥಾಪಿಸಿರುವ ಎ.ಬಿ.ಸುದರ್ಶನ್ ಅವರ ಪ್ರತಿಮೆಯನ್ನು ಇಂಧನ ಸಚಿವ ಕೆ.ಜೆ.ಜಾರ್ಜ್ ಅನಾವರಣಗೊಳಿಸಿದರು.

ಚಿಕ್ಕಮಗಳೂರಿನಲ್ಲಿ ಕ್ಲಬ್ ಆರಂಭಿಸಬೇಕು ಎಂದು ಹೊರಟಾಗ ಹಲವು ಸವಾಲುಗಳು ಎದುರಾದವು. ಆಗ ಬೆನ್ನಿಗೆ ನಿಂತವರು ಹಲವರು. ಅವರನ್ನು ಎಂದಿಗೂ ಮರೆಯುವಂತಿಲ್ಲ
ಎ.ಬಿ.ಸುದರ್ಶನ್, ಸಂಸ್ಥಾಪಕ ಅಧ್ಯಕ್ಷ

ಉನ್ನತಿ, ಆಯುಷ್, ನಿಖಿಲ್ ಸೇರಿ 18 ಸಾಧಕರಿಗೆ ಕೆಒಎ ವಾರ್ಷಿಕ ಪ್ರಶಸ್ತಿ


ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದಯೋನ್ಮುಖ ಅಥ್ಲೀಟ್ ಬಿ.ಉನ್ನತಿ ಅಯ್ಯಪ್ಪ, ಬ್ಯಾಡ್ಮಿಂಟನ್ ತಾರೆ ಆಯುಷ್ ಶೆಟ್ಟಿ, ಫುಟ್‌ಬಾಲ್ ಆಟಗಾರ ನಿಖಿಲ್ ರಾಜ್ ಎಂ, ಗಾಲ್ಫ್ ಪ್ರತಿಭೆ ಪ್ರಣವಿ ಎಸ್. ಅರಸ್ ಸೇರಿದಂತೆ 18 ಸಾಧಕರನ್ನು ಕರ್ನಾಟಕ ಒಲಿಂಪಿಕ್ ಸಂಸ್ಥೆಯ (ಕೆಒಎ) 22ನೇ ವರ್ಷದ ವಾರ್ಷಿಕ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಪ್ರಶಸ್ತಿ ಪುರಸ್ಕೃತರು: ಬಿ.ಉನ್ನತಿ ಅಯ್ಯಪ್ಪ (ಅಥ್ಲೆಟಿಕ್ಸ್), ಆಯುಷ್ ಶೆಟ್ಟಿ (ಬ್ಯಾಡ್ಮಿಂಟನ್), ಪ್ರತ್ಯಾಂಶು ತೋಮರ್ (ಬ್ಯಾಸ್ಕೆಟ್‌ಬಾಲ್), ಎಸ್. ತನ್ವಿ (ಫೆನ್ಸಿಂಗ್), ನಿಖಿಲ್‌ರಾಜ್ ಎಂ (ಫುಟ್‌ಬಾಲ್), ಪ್ರಣವಿ ಎಸ್. ಅರಸ್ (ಗಾಲ್ಫ್), ಉದಯ್ ನಾಯ್ಡು (ಜಿಮ್ನಾಸ್ಟಿಕ್), ಐಶ್ವರ್ಯಾ ವಿ. (ಕಯಾಕಿಂಗ್ ಮತ್ತು ಕನೊಯಿಂಗ್), ಎಸ್.ಡಿ. ಪ್ರಜ್ವಲ್ ದೇವ್ (ಟೆನಿಸ್), ಜಗದೀಪ್ ದಯಾಳ್ (ಹಾಕಿ), ಸುಜನ್ (ನೆಟ್‌ಬಾಲ್), ದಿವ್ಯಾ ಟಿ.ಎಸ್. (ರೈಫಲ್ ಶೂಟಿಂಗ್), ಆಕಾಶ್ ಮಣಿ (ಈಜು), ಆಕಾಶ್ ಕೆ.ಜೆ (ಟೇಬಲ್ ಟೆನಿಸ್), ಸತೀಶ್ ಬಸವರಾಜ್ (ಪತ್ರಿಕಾ ಛಾಯಾಗ್ರಾಹಕ).



ಉನ್ನತಿ ಅಯ್ಯಪ್ಪ



ಆಯುಷ್ ಶೆಟ್ಟಿ

ಜೀವಮಾನದ ಸಾಧನೆಗಾಗಿ: ಪಿ.ಎಸ್. ಜರೀನಾ (ಅಂತರರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಆಟಗಾರ), ಮುಕುಂದ್ ಕಿಲ್ಲೇಕರ್ (ಅಂತರರಾಷ್ಟ್ರೀಯ ಬಾಕ್ಸರ್), ವಿ.ಎಸ್.ವಿನಯ (ಅಂತರ ರಾಷ್ಟ್ರೀಯ ಹಾಕಿ ಆಟಗಾರ).

ಇಂದು ಪ್ರಶಸ್ತಿ ಪ್ರದಾನ: ಬೆಂಗಳೂರಿನ ಲೋಕ ಭವನದ ಗಾಜಿನ ಮನೆಯಲ್ಲಿ ಇದೇ 21ರಂದು ಬೆಳಿಗ್ಗೆ 11.30ಕ್ಕೆ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಪ್ರಶಸ್ತಿ ಪ್ರದಾನ ಮಾಡುವರು.

ಗೃಹ ಸಚಿವ ಡಾ.ಜಿ.ಪರಮೇಶ್ವರ, ಶಾಸಕ ರಿಜ್ವಾನ್ ಅರ್ಷದ್ ಭಾಗವಹಿಸುವರು. ಪ್ರಶಸ್ತಿ ಪುರಸ್ಕೃತರಿಗೆ ನಗದು, ಸ್ಮರಣಿಕೆ ಮತ್ತು ಪ್ರಮಾಣಪತ್ರ ನೀಡಲಾಗುವುದು ಎಂದು ಕೆಒಎ ಮಹಾಪ್ರಧಾನ ಕಾರ್ಯದರ್ಶಿ ಟಿ.ಅನಂತರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬೋರಗಾಂವ್‌ನಲ್ಲಿ ನಡೆದ ಸ್ಪರ್ಧೆಯಲ್ಲಿ ಫಾರ್ಚ್ಯೂನರ್ ಗೆದ್ದ ‘ಹೆಲಿಕಾಪ್ಟರ್ ಬೈಜ್ಯಾ’ (ಎಡದಲ್ಲಿರುವುದು) ಮತ್ತು ‘ಬ್ರೇಕ್‌ಫೇಲ್’ ಖ್ಯಾತಿಯ ಎತ್ತಿನ ಜೋಡಿ

ಬಹುಮಾನಗಳ ಸರದಾರ

ಹೆಲಿಕಾಪ್ಟರ್ ಬೈಜ್ಯಾ!

ನಮ್ಮ ಬೆಳಗಾವಿ ನೆಲದ ‘ಹೆಲಿಕಾಪ್ಟರ್ ಬೈಜ್ಯಾ’ ಎನ್ನುವ ಎತ್ತು ಮಹಾರಾಷ್ಟ್ರದ ಸಾಂಗ್ಲಿಯಲ್ಲಿ ಧೂಳು ಎಬ್ಬಿಸಿ ಗೆದ್ದದ್ದು ಐಷಾರಾಮಿ ‘ಫಾರ್ಚ್ಯೂನರ್’ ಕಾರನ್ನು. ಇದು ಇಲ್ಲಿಯವರೆಗೆ ನೂರಕ್ಕೂ ಹೆಚ್ಚು ಸ್ಪರ್ಧೆಗಳಲ್ಲಿ ಭಾಗವಹಿಸಿದೆ. ಆದರೆ, ಒಮ್ಮೆಯೂ ಸೋಲನ್ನು ಕಂಡೇ ಇಲ್ಲ! ಈ ಬೈಜ್ಯಾನ ರೋಚಕ ಕಥನ ನಿಮ್ಮ ಓದಿಗಾಗಿ...

• ಇಮಾಮ್‌ಹುಸೇನ್ ಗೂಡುನವರ



ಎತ್ತಿನಬಂಡಿ ಓಟದ ಸ್ಪರ್ಧೆಯ ವಿಹಂಗಮ ನೋಟ

ಅದು ಆರೂವರೆ ಕಿಲೋಮೀಟರ್ ಎತ್ತಿನಬಂಡಿ ಓಟದ ಸ್ಪರ್ಧೆ. ಕಟ್ಟುಮಸ್ತಾದ ಆ ಎತ್ತುಗಳು ಬಂಡಿಯನ್ನು ಎಳೆದುಕೊಂಡು ಮಿಂಚಿನ ವೇಗದಲ್ಲಿ ಓಡತೊಡಗಿದವು. ಅರ್ಧದಷ್ಟು ದಾರಿ ಕ್ರಮಿಸುತ್ತಲೇ ಎತ್ತುಗಳ ಮೇಲೆ ಬಣ್ಣ ಎರಚಿ ಹುರುಪು ತುಂಬಲಾಯಿತು. ಗುರಿ ಹತ್ತಿರವಾಗುತ್ತಿದ್ದಾಗ ಜನಸ್ತೋಮ ಹುಚ್ಚೆದ್ದು ಕೂಗುತ್ತಾ, ಅವುಗಳನ್ನೇ ಹಿಂಬಾಲಿಸುತ್ತಾ ಓಡುತ್ತಿದ್ದರು. ಆಗ ಎತ್ತುಗಳು ಬಾಲವನ್ನು ಗಾಳಿಯಲ್ಲಿ ಹಾರಿಸುತ್ತ, ಚಂಗನೆ ನೆಗೆಯುತ್ತಾ ಓಡುತ್ತಿದ್ದವು. ಸಿಳ್ಳೆ ಚಪ್ಪಾಳೆ ಕೇಕೆ ಇಡೀ ಮೈದಾನವನ್ನು ತುಂಬಿತ್ತು. ದೂಳಿನಿಂದ ಆವರಿಸಿದ್ದ ಮೈದಾನದಲ್ಲಿ ಹನ್ನೊಂದುವರೆ ನಿಮಿಷಗಳಲ್ಲಿ ಹೆಲಿಕಾಪ್ಟರ್ ಬೈಜ್ಯಾ ಜೋಡೆತ್ತುಗಳು ಮೊದಲಿಗೆ ಗುರಿ ಮುಟ್ಟಿದವು. ಐಷಾರಾಮಿ ‘ಫಾರ್ಚ್ಯೂನರ್’ ಕಾರನ್ನು ಬಹುಮಾನವಾಗಿ ಪಡೆದು ಬೀಗಿದವು. ಆಗ ಜನರ ಹರ್ಷೋದ್ಗಾರ ಮುಗಿಲು ಮುಟ್ಟಿತ್ತು.

ಮಹಾರಾಷ್ಟ್ರದ ಸಾಂಗ್ಲಿ ಜಿಲ್ಲೆಯ ಬೋರಗಾಂವ್‌ನಲ್ಲಿ ಆಯೋಜಿಸಿದ್ದ ದೇಶದ ಅತೀ ದೊಡ್ಡ ಪ್ರಮಾಣದ ಎತ್ತುಗಳ ಬಂಡಿ ಓಟದ ಸ್ಪರ್ಧೆಯಲ್ಲಿ ದುಬಾರಿ ಬೆಲೆಯ ಬಹುಮಾನ ಗೆದ್ದ ಜೋಡಿಯಲ್ಲಿ ಒಂದು ಎತ್ತು ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಶಿರೂರಿನದ್ದು. ಅದೇ ‘ಹೆಲಿಕಾಪ್ಟರ್ ಬೈಜ್ಯಾ’!

‘ಅರರೇ, ಇದೇನಿದು ಇಂಥ ಹೆಸರು’ ಎಂದು ಹುಬ್ಬೇರಿಸಬೇಡಿ. ಮೈದಾನದಲ್ಲಿ ಹೆಲಿಕಾಪ್ಟರ್ ಇಳಿಯುವಾಗ ಇಲ್ಲವೇ ಮೇಲೇರುವಾಗ ಸುತ್ತಲೂ ದೂಳು ಆವರಿಸುತ್ತದೆ. ಅದೇ ರೀತಿ ಈ ಎತ್ತು ಓಡಲು ಆರಂಭಿಸಿದರೆ ಇಡೀ ಮೈದಾನ ದೂಳುಮಯವಾಗುತ್ತದೆ. ಅದಕ್ಕೆ ‘ಹೆಲಿಕಾಪ್ಟರ್ ಬೈಜ್ಯಾ’ ಎಂದು ಅಭಿಮಾನಿಗಳೇ ಹೆಸರಿಟ್ಟಿದ್ದಾರೆ.

ರೈತ ಬಾಳು ಹಜಾರೆ ಅವರಿಗೆ ಸೇರಿದ ಈ ಎತ್ತು ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿ ತುಂಬಾ ಫೇಮಸ್ಸು. ಎಂಟು ವರ್ಷ ವಯಸ್ಸಿನ ಸದೃಢ ಮೈಕಟ್ಟಿನ ಈ ಎತ್ತು ಈವರೆಗೆ ನೂರಕ್ಕೂ ಅಧಿಕ ಸ್ಪರ್ಧೆಗಳಲ್ಲಿ ಗೆದ್ದಿದೆ. ಬುಲೆಟ್ ಬೈಕುಗಳು, ಬೈಕ್‌ಗಳು, ಟ್ರ್ಯಾಕ್ಟರ್‌ಗಳು, ಬೆಳ್ಳಿಯ ಗದೆಗಳು, ನಗದು ಬಹುಮಾನ ಹೀಗೆ... ಈವರೆಗೆ ಇದು ಪಡೆದ ಒಟ್ಟು ಬಹುಮಾನದ ಮೊತ್ತ ಸುಮಾರು ₹2 ಕೋಟಿ!

ಆ ಕ್ಷಣ ರೋಮಾಂಚನಕಾರಿ...

‘ನಾನು ಎತ್ತಿನಬಂಡಿ ಓಡಿಸುವ ಹತ್ತಾರು ಸ್ಪರ್ಧೆಗಳಲ್ಲಿ ಭಾಗವಹಿಸಿದ್ದೇನೆ. ಆದರೆ, ಬೋರಗಾಂವ್‌ನಲ್ಲಿ ನಡೆದ ಸ್ಪರ್ಧೆಯಲ್ಲಿ ಬೇರೆಯೇ ಚಿತ್ರಣವಿತ್ತು. ಅಲ್ಲಿ ಸೇರಿದ್ದ ಲಕ್ಷ ಲಕ್ಷ ಜನರ ಹರ್ಷೋದ್ಗಾರದ ಮಧ್ಯೆ ಎತ್ತಿನಬಂಡಿ ಓಡಿಸಿದ ಕ್ಷಣ ಮೈ-ಮನದಲ್ಲಿ ರೋಮಾಂಚನ ಉಂಟು ಮಾಡಿತು. ಖುಷಿಯಿಂದ ಎತ್ತಿನಗಾಡಿ ಓಡಿಸಿ ಗುರಿ ಮುಟ್ಟಿದೆ. ನಮ್ಮ ಎತ್ತುಗಳು ಓಡುವ ವೇಗ ನೋಡಿದರೆ, ಯಾವುದೋ ವಾಹನದಲ್ಲಿ ಹೋಗುತ್ತಿರುವ ಅನುಭವವಾಗುತ್ತಿತ್ತು’ ಎಂದು ರಾವಸಾಹೇಬ ಚೌಗಲೆ ಆ ಕ್ಷಣಗಳನ್ನು ನೆನಪಿಸಿಕೊಂಡರು.

ಖಿಲಾರಿ ತಳಿಯ ಎತ್ತು

‘ನಾಲ್ಕು ವರ್ಷಗಳ ಹಿಂದೆ ₹6.5 ಲಕ್ಷಕ್ಕೆ ಇದನ್ನು ಖರೀದಿಸಿದೆ. ಆಹಾರವಾಗಿ ಮೇವು, ಹಿಂಡಿ ನೀಡುತ್ತೇವೆ. ನಿಯಮಿತವಾಗಿ ನೀರು ಕುಡಿಸುತ್ತೇವೆ. ವ್ಯಾಯಾಮಕ್ಕಾಗಿ ನೇಗಿಲು ಹೊಡೆಸುತ್ತೇವೆ. ಸಣ್ಣ ಆರೋಗ್ಯ ಸಮಸ್ಯೆಯಾದರೂ ಪಶುವೈದ್ಯರನ್ನು ಕರೆಸಿ ಚಿಕಿತ್ಸೆ ಕೊಡಿಸುತ್ತೇವೆ. ನಮ್ಮ ಮನೆಯ ಮಗುವಿನಂತೆ ಆರೈಕೆ ಮಾಡುತ್ತೇವೆ. ದಷ್ಟಪುಷ್ಟವಾಗಿರುವ ಖಿಲಾರಿ ತಳಿಯ ಎತ್ತು ಈಗ ಏನಿಲ್ಲವೆಂದರೂ ₹1 ಕೋಟಿ ಬೆಲೆ ಬಾಳುತ್ತದೆ’ ಎನ್ನುವಾಗ ಬಾಳು ಹಜಾರೆ ಮೊಗದಲ್ಲಿ ಸಂಭ್ರಮ ಉಕ್ಕಿಬರುತ್ತಿತ್ತು.

‘ನಾನು ಏಳು ಎತ್ತುಗಳನ್ನು ಸಾಕುತ್ತಿದ್ದೇನೆ. ಆದರೆ, ‘ಹೆಲಿಕಾಪ್ಟರ್ ಬೈಜ್ಯಾ’ ಎತ್ತಿನ ಸಾಮರ್ಥ್ಯಕ್ಕೆ ಸರಿಸಾಟಿಯಾಗಬಲ್ಲ ಮತ್ತೊಂದು ಎತ್ತು ಸಿಗುತ್ತಿಲ್ಲ. ಹಾಗಾಗಿ ಬೋರಗಾಂವ್‌ನಲ್ಲಿ ನಡೆದ ಸ್ಪರ್ಧೆಗೆ ಹೋದಾಗ, ಇದಕ್ಕೆ ಸಾಂಗ್ಲಿಯ ‘ಬ್ರೇಕ್‌ಫೇಲ್’ ಖ್ಯಾತಿಯ ಎತ್ತು ಹುಡುಕಿ ಮೈದಾನಕ್ಕೆ ಇಳಿಸಿದೆವು. ಎರಡರ ಸಾಮರ್ಥ್ಯ, ದೇಹದಾರ್ಢ್ಯತೆಯಲ್ಲಿ ಭಿನ್ನತೆ ಇತ್ತು. ಆದರೆ, ನಮ್ಮ ಎತ್ತು ತನ್ನೊಂದಿಗೆ ಆ ಎತ್ತನ್ನು ವೇಗವಾಗಿ ಓಡಿಸಿಕೊಂಡು ಹೋಗಿ ಗುರಿ ಮುಟ್ಟಿತು’ ಎಂದು ಬಾಳು ಹೆಮ್ಮೆಯಿಂದ ಹೇಳುತ್ತಾರೆ.

‘ಬೇರೆ ಎತ್ತಿನೊಂದಿಗೆ ನಮ್ಮ ಎತ್ತನ್ನು ಓಡಿಸಿ ಗೆದ್ದಾಗ ಪ್ರಶಸ್ತಿ ಹಂಚಿಕೊಳ್ಳುತ್ತೇವೆ. ಬಹುಮಾನವಾಗಿ ಬಂದ ವಾಹನವನ್ನು ನಾವು ಪಡೆದರೆ, ಮತ್ತೊಂದು ಎತ್ತಿನ ಮಾಲೀಕರಿಗೆ ಅವರ ಅಪೇಕ್ಷೆಯಂತೆ ಹಣ ನೀಡುತ್ತೇವೆ. ಈವರೆಗೆ ಒಂದೇ ಒಂದು ಸ್ಪರ್ಧೆಯಲ್ಲೂ ‘ಹೆಲಿಕಾಪ್ಟರ್ ಬೈಜ್ಯಾ’ ಸೋತಿಲ್ಲ’ ಎಂದು ಅವರು ಬೀಗುತ್ತಾರೆ.

ಗೆದ್ದವರಿಗೆ ಫಾರ್ಚ್ಯೂನರ್ ಕಾರ್

ಬೇರೆ ಬೇರೆ ಕಡೆ ನಡೆಯುವ ಎತ್ತಿನಬಂಡಿ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಸಣ್ಣಪುಟ್ಟ ಬಹುಮಾನ ನೀಡುವುದು ಸಾಮಾನ್ಯ.

13ನೇ ಪುಟಕ್ಕೆ...



ಬೋರಗಾಂವ್‌ನಲ್ಲಿ ನಡೆದ ಸ್ಪರ್ಧೆಯಲ್ಲಿ ಫಾರ್ಚ್ಯೂನರ್ ಗೆದ್ದ ಅಥಣಿ ತಾಲ್ಲೂಕಿನ ಶಿರೂರಿನ ‘ಹೆಲಿಕಾಪ್ಟರ್ ಬೈಜ್ಯಾ’ ಖ್ಯಾತಿಯ ಎತ್ತಿನ ಜೊತೆಯಲ್ಲಿ ಬಾಳು ಹಜಾರೆ (ಎಡದಲ್ಲಿರುವವರು)

ಫ್ಲೆಕ್ಸ್‌ಗಳಲ್ಲೂ ‘ಹೆಲಿಕಾಪ್ಟರ್ ಬೈಜ್ಯಾ’ ಹವಾ

‘ಸಾಂಗ್ಲಿ ಜಿಲ್ಲೆಯಲ್ಲಿ ನಡೆಯುವ ಎತ್ತಿನಬಂಡಿ ಸ್ಪರ್ಧೆಗಳಲ್ಲಿ ಸತತ ಮೂರು ವರ್ಷ ಗೆದ್ದಿದ್ದೇವೆ. ಮೊದಲ ವರ್ಷ ಟ್ರ್ಯಾಕ್ಟರ್, ಎರಡನೇ ವರ್ಷ ಥಾರ್ ಜೀಪ್ ಮತ್ತು ಮೂರನೇ ವರ್ಷ ಫಾರ್ಚ್ಯೂನರ್ ನಮ್ಮ ಪಾಲಾಗಿದೆ. ನಮ್ಮ ಎತ್ತು ಯಾವುದೇ ಊರಿನ ಸ್ಪರ್ಧೆಗೆ ಹೋದರೂ ಬ್ಯಾನರ್ ಮತ್ತು ಫ್ಲೆಕ್ಸ್‌ಗಳಲ್ಲಿ ಅದರ ಫೋಟೊ ಹಾಕಿ ಅಭಿಮಾನಿಗಳು ಸಂಭ್ರಮಿಸುತ್ತಾರೆ. ವಿವಿಧ ಸ್ಪರ್ಧೆಗಳಲ್ಲಿ ಗೆದ್ದು ಬಂದ ನಂತರ, ಕರ್ನಾಟಕ, ಮಹಾರಾಷ್ಟ್ರ, ಉತ್ತರ ಪ್ರದೇಶ, ಆಂಧ್ರ ಪ್ರದೇಶದಿಂದಲೂ ಜನರು ಮನೆಗೆ ಬಂದು ನಮ್ಮನ್ನು ಸತ್ಕರಿಸುತ್ತಾರೆ. ಇದು ಅಭಿಮಾನದ ಸಂಗತಿ’ ಎನ್ನುತ್ತಾರೆ ರೈತ ಬಾಳು ಹಜಾರೆ.



ಅಬ್ಬೆ ಡುಬಾಯೀಸ್ ಚರ್ಚ್

ಅಬ್ಬೆ ಡುಬಾಯೀಸ್ ಚರ್ಚ್‌ಗೆ 225 ವರ್ಷ


• ಚಿತ್ರ–ಲೇಖನ: ಗಣಂಗೂರು ನಂಜೇಗೌಡ

ಪ್ರಾಗೈತಿಹಾಸಿಕ ಕಾಲದಿಂದ 18ನೇ ಶತಮಾನದ ಅಂತ್ಯದವರೆಗಿನ ನೂರಾರು ಪಳೆಯುಳಿಕೆಗಳನ್ನು ತನ್ನ ಒಡಲಲ್ಲಿ ಹುದುಗಿಸಿಕೊಂಡಿರುವ ಶ್ರೀರಂಗಪಟ್ಟಣ ಸರ್ವಧರ್ಮ ಸಮನ್ವಯ ತಾಣ.

ಇಲ್ಲಿ ದೇವಾಲಯ, ಮಸೀದಿ, ಜೈನ ಬಸದಿ ಮಾತ್ರವಲ್ಲದೆ ಚರ್ಚ್‌ಗಳೂ ಇವೆ. ಈ ಪೈಕಿ ಇಲ್ಲಿನ ಗಂಜಾಂನಲ್ಲಿ 225 ವರ್ಷಗಳ ಹಿಂದೆ ಸ್ಥಾಪನೆಯಾಗಿರುವ ಅಮಲೋದ್ಭವ ಮಾತೆಯ ಚರ್ಚ್ (ಅಬ್ಬೆ ಡುಬಾಯೀಸ್ ಚರ್ಚ್) ತನ್ನ ರಚನಾ ಶೈಲಿ ಮತ್ತು ಪಾಶ್ಚಾತ್ಯ ಪರಂಪರೆಯ ಕಾರಣಕ್ಕೆ ಗಮನ ಸೆಳೆಯುತ್ತದೆ.

ನಾಲ್ಕನೇ ಆಂಗ್ಲೋ–ಮೈಸೂರು ಯುದ್ಧದಲ್ಲಿ ಟಿಪ್ಪು ಸುಲ್ತಾನ್ ಬ್ರಿಟಿಷರ ಗುಂಡಿಗೆ ಬಲಿಯಾದ ಮರು ವರ್ಷ, ಅಂದರೆ 1800 ರಲ್ಲಿ ಪಾರಿಸ್ ಮಿಷನರಿ (ಎಂಇಪಿ) ಗೆ ಸೇರಿದ ರೋಮನ್ ಕ್ಯಾಥೊಲಿಕ್ ಪಂಥದ ಪಾದ್ರಿ ಅಬ್ಬೆ ಡುಬಾಯೀಸ್ ಈ ಚರ್ಚ್‌ನ ಸ್ಥಾಪಕರು. ಹೆಂಚಿನಮನೆಯಲ್ಲಿ ಆರಂಭವಾದ ಈ ಚರ್ಚ್ ಕಾಲಾನುಕಾಲಕ್ಕೆ ತನ್ನ ರೂಪವನ್ನು ಬದಲಿಸಿಕೊಂಡಿದೆ.

ಇಂಗ್ಲಿಷ್ ಅಕ್ಷರದ ‘ಟಿ’ ಆಕಾರದಲ್ಲಿರುವ ಫ್ರೆಂಚ್ ವಾಸ್ತುಶೈಲಿಯ, ಭಾಗಶಃ ಗ್ರೀಕ್ ಶೈಲಿಯ ಲಕ್ಷಣಗಳನ್ನೂ ಹೊಂದಿರುವ ಈ ಚರ್ಚ್‌ನ ಒಳಭಾಗದಲ್ಲಿ ಮೂರು ಪೀಠಗಳಿವೆ. ಮಧ್ಯಭಾಗದಲ್ಲಿರುವ ದೊಡ್ಡ ಪೀಠ ಯೇಸು ಕ್ರಿಸ್ತನನ್ನು ಶಿಲುಬೆ ಏರಿಸುವ ಸನ್ನಿವೇಶವನ್ನು ಬಿಂಬಿಸುತ್ತದೆ. ಮರದಿಂದ ಕೆತ್ತಿದ ತ್ರಿಭುಜಾಕೃತಿಯ ಗೋಪುರದ ಮಧ್ಯೆ ಯೇಸು ಕ್ರಿಸ್ತನ ಪ್ರತಿಮೆ ಇದ್ದು, ಅದರ ತುತ್ತ ತುದಿಯಲ್ಲಿ ಮಾತೆ ಮೇರಿಯ ಪ್ರತಿಮೆಯನ್ನು ನಿಲ್ಲಿಸಲಾಗಿದೆ. ಈ ಶಿಲುಬೆಯ ಎಡ ಪಾರ್ಶ್ವದಲ್ಲಿ ಮಾತೆ ಮೇರಿಯ ಮೂರ್ತಿ ಹಾಗೂ ಬಲ ಭಾಗದಲ್ಲಿ ಬಾಲ ಯೇಸುವನ್ನು ಹಿಡಿದಿರುವ ಜೋಸೆಫರ ಮೂರ್ತಿಗಳನ್ನು ಸ್ಥಾಪಿಸಲಾಗಿದೆ. ರಥದ ಮಾದರಿಯಲ್ಲಿರುವ ಈ ಪೀಠ ಕಲಾತ್ಮಕವಾಗಿದ್ದು, ನೋಡುಗರ ಕಣ್ಮನ ಸೆಳೆಯುತ್ತದೆ.



ಪಾದ್ರಿ ಅಬ್ಬೆ ಡುಬಾಯೀಸ್

ಸುಮಾರು 150 ಮಂದಿ ಕುಳಿತು ಪ್ರಾರ್ಥನೆ ಮಾಡಬಹುದಾದ ಸಭಾಂಗಣಕ್ಕೆ ಮೂರು ದ್ವಾರಗಳಿದ್ದು ಇವು ಕೂಡ ತ್ರಿಭುಜಾಕೃತಿಯಲ್ಲಿವೆ. ಪೂರ್ವಾಭಿಮುಖವಾಗಿರುವ ಚರ್ಚ್‌ನ ಒಳಾವರಣದ ಬಲ ಭಾಗದಲ್ಲಿ ಪಾದ್ರಿ ಅಬ್ಬೆ ಡುಬಾಯೀಸ್ ಧರಿಸುತ್ತಿದ್ದ ಬಟ್ಟೆಗಳು, ನಂತರದ ವರ್ಷಗಳಲ್ಲಿ ಬಂದ ಪಾದ್ರಿಗಳು ಬಳಸುತ್ತಿದ್ದ ಗಡಿಯಾರ ಇತರ ಪರಿಕರಗಳನ್ನು ಸಂರಕ್ಷಿಸಲಾಗಿದೆ.

ಹದಿನಾಲ್ಕು ಪ್ರಸಂಗಗಳು

ಚರ್ಚ್‌ನ ಸಭಾಂಗಣದ ಗೋಡೆಗಳ ಮೇಲೆ ‘ಕ್ರಿಸ್ತನ ಹಾದಿ’ ಪ್ರಸಂಗವನ್ನು ಬಿಂಬಿಸುವ ಹದಿನಾಲ್ಕು ಚಿತ್ರಗಳು ಗಮನ ಸೆಳೆಯುತ್ತವೆ. ಜೆರುಸಲೇಂನಲ್ಲಿ ರೋಮ್ ಚಕ್ರವರ್ತಿಯ ಪ್ರತಿನಿಧಿಯಾಗಿದ್ದ ಪಿಲಾತನು ಯೇಸು ಕ್ರಿಸ್ತನನ್ನು ಶಿಲುಬೆಗೆ ಏರಿಸುವಂತೆ ತೀರ್ಪು ನೀಡುವುದು. ಯೇಸುವಿಗೆ ಶಿಲುಬೆ ಹೊರಿಸುವುದು. ಕ್ರಿಸ್ತನು ಮೊದಲ ಬಾರಿ ಬೀಳುವುದು. ತಾಯಿ ಮೇರಿಯನ್ನು ಸಂಧಿಸುವುದು.

11ನೇ ಪುಟಕ್ಕೆ...

ಜನನಿ ಹೆಣ್ಮಕ್ಕಳ ಬ್ಯಾಂಡ್...



ಜನನಿ ಬ್ಯಾಂಡ್ ತಂಡದೊಂದಿಗೆ ಶಮಿತಾ ಮಲ್ನಾಡ್

• ಕೀರ್ತಿಕುಮಾರಿ ಎಂ.

ಜನನಿ ಎಂದರೆ...

ಇಂಥದ್ದೊಂದು ಪರಿಕಲ್ಪನೆಯನ್ನು ಆಸ್ಥೆ ವಹಿಸಿ ಕಾರ್ಯರೂಪಕ್ಕೆ ತಂದಿರುವುದು ದಂತ ವೈದ್ಯೆ, ಗಾಯಕಿ ಶಮಿತಾ ಮಲ್ನಾಡ್. ಮಹಿಳಾ ಬ್ಯಾಂಡ್‌ನ ಈ ತಂಡಕ್ಕೆ ಅವರು ‘ಜನನಿ ಮಹಿಳಾ ಬ್ಯಾಂಡ್’ ಎಂಬ ಹೆಸರಿಟ್ಟಿದ್ದಾರೆ. ಜನನಿ ಎಂದರೆ ಸೃಷ್ಟಿಕರ್ತೆ, ತಾಯಿ ಅಥವಾ ಹೆಣ್ಣು ಎಂದರ್ಥ.

ಈ ಬ್ಯಾಂಡ್‌ನಲ್ಲಿ ಕೀಬೋರ್ಡ್ (ಭುವನೇಶ್ವರಿ ಬಲರಾಮ್), ಕೊಳಲು (ವರ್ಷಾ ಆಚಾರ್ಯ) ಲೀಡ್ ಗಿಟಾರ್ (ಗೀತಾ), ಬೇಸ್ ಗಿಟಾರ್ (ಕುಶಲಾ), ಪ್ಯಾಡ್ (ಪಲ್ಲವಿ ಕಿಣಿ), ಡ್ರಮರ್ (ಪ್ರಿಯಾ ಆ್ಯಂಡ್ರೂ), ತಬಲ, ತಾಳವಾದ್ಯ (ಪೂರ್ಣಿಮಾ, ವೈಷ್ಣವಿ) ವಯೋಲಿನ್ (ರಮ್ಯಾ ಚೇತನ್), ಕಿಬೋರ್ಡ್ (ವಿನೋನಾ ಜೆನ್ನಿ) ಇದ್ದಾರೆ.

ಅಂದು ಮಹಿಳಾ ಬ್ಯಾಂಡ್‌ನ ಮೊತ್ತಮೊದಲ ಕಾರ್ಯಕ್ರಮಕ್ಕೆ ಬಂದಿದ್ದವರಿಗೆ ಹೆಚ್ಚೇನೂ ನಿರೀಕ್ಷೆ ಇರಲಿಲ್ಲ. ‘ಹೆಣ್ಮಕ್ಕಳು ಹೇಗೆ ವಾದ್ಯಗಳನ್ನು ನುಡಿಸುತ್ತಾರೆ ನೋಡೋಣ’ ಎಂದುಕೊಂಡೇ ಅನಿವಾಸಿ ಕನ್ನಡಿಗರು ಬಂದಿದ್ದರು. ಆದರೆ, ಅದು ಸಾಮಾನ್ಯ ಸಂಗೀತ ಕಾರ್ಯಕ್ರಮವಷ್ಟೇ ಆಗಿರಲಿಲ್ಲ, ಸಂಗೀತದ ರಸದೌತಣವಾಗಿತ್ತು. ವಿದೇಶಿ ನೆಲದಲ್ಲಿ ಕನ್ನಡದ ಕಂಪನ್ನು ಸೂಸಿದ ಸೊಗಸಾದ ಕಾರ್ಯಕ್ರಮವಾಗಿತ್ತು. ಕಾರ್ಯಕ್ರಮ ನಡೆದ ಅಷ್ಟೂ ಹೊತ್ತು ಕೇಳುಗರು ಪ್ರತಿ ಹಾಡಿಗೂ ಹೆಜ್ಜೆ ಹಾಕಿದರು. ಪ್ರತಿ ಆಲಾಪಕ್ಕೂ ತಲೆದೂಗಿದರು, ಆಸ್ವಾದಿಸಿದರು, ಆನಂದಿಸಿದರು. ಅಲ್ಲಿಗೆ ಮಹಿಳಾ ಬ್ಯಾಂಡ್‌ಗೆ ಇದ್ದ ಅಳುಕು ಮಾಯವಾಯಿತು.

ಯಾವುದೇ ಸಂಗೀತ ಕಾರ್ಯಕ್ರಮದಲ್ಲಿ ವಾದ್ಯವೃಂದ ಪ್ರಮುಖ ಪಾತ್ರ ವಹಿಸುತ್ತದೆ. ಕಾರ್ಯಕ್ರಮದ ಯಶಸ್ಸು ಇಲ್ಲವೇ ವೈಫಲ್ಯ ವಾದ್ಯಗಾರರನ್ನು ಅವಲಂಬಿಸಿರುತ್ತದೆ. ಸಂಗೀತ ಕಾರ್ಯಕ್ರಮಗಳಲ್ಲಿ ವಾದ್ಯಗಾರರು ಬಹುತೇಕ ಪುರುಷರೇ ಆಗಿರುತ್ತಾರೆ. ವೀಣೆ, ಗಿಟಾರ್, ವಯೋಲಿನ್, ಕೊಳಲು... ಹೀಗೆ ಕೆಲವೇ ಕೆಲವು ವಾದ್ಯಗಳನ್ನು ಬಿಟ್ಟರೆ ತಬಲ, ಡ್ರಮ್ಸ್, ಕೀಬೋರ್ಡ್‌ನಂತಹ ವಾದ್ಯಗಳ ನುಡಿಸುವಿಕೆಯಲ್ಲಿ ಹೆಣ್ಮಕ್ಕಳನ್ನು ಕಾಣುವುದು ಅಪರೂಪ. ಈ ವಿಚಾರದಲ್ಲಿ ಹೆಣ್ಮಕ್ಕಳಿಗೆ ಕುಟುಂಬದ ಬೆಂಬಲವೂ ಕಡಿಮೆ. ಈ ನಿಟ್ಟಿನಲ್ಲಿ ಎಲ್ಲ ರೀತಿಯ ವಾದ್ಯ ನುಡಿಸುವಿಕೆಯಲ್ಲೂ ಹೆಣ್ಮಕ್ಕಳು ಯಾರಿಗೂ ಕಮ್ಮಿ ಇಲ್ಲ ಎಂದು ಕೂಗಿ ಹೇಳಲು ಹೊರಟಿದೆ ‘ಜನನಿ ಮಹಿಳಾ ಬ್ಯಾಂಡ್’.



ಜನನಿಯ ಜನನ...

ನಾಲ್ಕೈದು ವರ್ಷಗಳ ಹಿಂದೆ ಅಮೆರಿಕದಲ್ಲಿ ಸಂಗೀತ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಶಮಿತಾ ಮಲ್ನಾಡ್ ಅವರು ಮಹಿಳಾ ವಾದ್ಯವೃಂದವನ್ನು ಒಳಗೊಂಡ ಸಂಗೀತ ಕಾರ್ಯಕ್ರಮದ ಪರಿಕಲ್ಪನೆ ಕುರಿತು ಅಮೆರಿಕದ ಕನ್ನಡ ಸಂಘಟನೆಗಳಾದ ‘ಕಸ್ತೂರಿ ಮೀಡಿಯಾ’ ಮತ್ತು ‘ಧ್ವನಿ ಮೀಡಿಯಾ’ ಸಂಘಟಕರಾದ ಗೋವರ್ಧನ್ ಮತ್ತು ಜಯಾ ಅವರಿಗೆ ತಿಳಿಸಿದ್ದರು.

‘ವಿದೇಶಗಳಲ್ಲಿ ಸಂಗೀತ ಕಾರ್ಯಕ್ರಮ ಆಯೋಜಿಸಿದಾಗ ಭಾರತದಿಂದ ಅಥವಾ ಕರ್ನಾಟಕದಿಂದ ಪುರುಷ ವಾದ್ಯವೃಂದದವರೇ ಬರುತ್ತಾರೆ. ನಾವ್ಯಾಕೆ ವಿಭಿನ್ನವಾದ ಕಾರ್ಯಕ್ರಮವನ್ನು ನಡೆಸಿಕೊಡಬಾರದು? ಹೆಣ್ಮಕ್ಕಳೂ ಸೊಗಸಾಗಿ ವಾದ್ಯಗಳನ್ನು ನುಡಿಸಬಲ್ಲರು. ಅವರಿಗೆ ಅವಕಾಶ ನೀಡಬೇಕಷ್ಟೇ’ ಎಂದು ಕೋರಿದರು.

ಹೆಣ್ಮಕ್ಕಳನ್ನು ವಿದೇಶಕ್ಕೆ ಕರೆದುಕೊಂಡು ಹೋದಾಗ ಸಂಘಟಕರ ಮೇಲೆ ಹೆಚ್ಚಿನ ಜವಾಬ್ದಾರಿ ಇರುತ್ತದೆ. ನಿಭಾಯಿಸುವುದು ಕಷ್ಟ ಎಂಬ ಮಾತು ಕೇಳಿಬಂದಿತು. ಆದರೂ ಪ್ರಾರಂಭದಲ್ಲಿಯೇ ನಕಾರಾತ್ಮಕ ಮಾತೇಕೆ. ಒಮ್ಮೆ ಆಯೋಜಿಸಿ ನೋಡೋಣ ಎಂದು ಶಮಿತಾ ಮಲ್ನಾಡ್ ಒಪ್ಪಿಸಿದರು. ಆದರೆ ಅಷ್ಟರಲ್ಲಾಗಲೇ ಕೊರೊನಾ ಅಪ್ಪಳಿಸಿತು. ಈ ಯೋಜನೆ ನನೆಗುದಿಗೆ ಬಿತ್ತು. ಆದರೆ ಶಮಿತಾ ಮಲ್ನಾಡ್ ಮಾತ್ರ ಪಟ್ಟು ಸಡಿಲಿಸಲಿಲ್ಲ. 2025ರ ನವೆಂಬರ್‌ನಲ್ಲಿ ಅಮೆರಿಕದ ಐದು ಕಡೆಗಳಲ್ಲಿ ಮಹಿಳಾ ಬ್ಯಾಂಡ್ ಸಂಗೀತ ಕಾರ್ಯಕ್ರಮವನ್ನು ಆಯೋಜಿಸಿದರು. ಅವರ ಈ ನಿರ್ಧಾರವು ಅಭೂತಪೂರ್ವ ಕ್ಷಣಕ್ಕೆ ಸಾಕ್ಷಿಯಾಯಿತು.

> ದೇಶ–ವಿದೇಶಗಳಿಗೆ ಹೋಗಿ ಎಲ್ಲಾ ತರಹದ ಕಾರ್ಯಕ್ರಮಗಳನ್ನು ನಡೆಸಿಕೊಡಬೇಕು. ಜನರನ್ನು ರಂಜಿಸಬೇಕು. ಅದನ್ನು ನೋಡಿ ಮತ್ತಷ್ಟು ಮಹಿಳಾ ಬ್ಯಾಂಡ್‌ಗಳು ಹುಟ್ಟಿಕೊಳ್ಳಬೇಕು. ಈ ಕ್ಷೇತ್ರದಲ್ಲಿ ಹೆಣ್ಮಕ್ಕಳಿಗೆ ಅವಕಾಶ ಮತ್ತು ಪ್ರೋತ್ಸಾಹ ಲಭಿಸಬೇಕು
>
> **ಶಮಿತಾ ಮಲ್ನಾಡ್**, ಗಾಯಕಿ

ಅಮೆರಿಕದ ಸಿಯಾಟಲ್‌ನಲ್ಲಿ ಮೊದಲಿಗೆ ಇಂಥದ್ದೊಂದು ಕಾರ್ಯಕ್ರಮ ಆಯೋಜಿಸಿದಾಗ ಹೆಣ್ಮಕ್ಕಳು ಎಲ್ಲ ತರಹದ ವಾದ್ಯಗಳನ್ನು ನುಡಿಸುತ್ತಾರಾ ಎಂಬ ಅನುಮಾನದಿಂದಲೇ ಜನರು ಬಂದಿದ್ದರು. ಆದರೆ ಕಾರ್ಯಕ್ರಮ ಆರಂಭವಾದ ನಂತರ ಅವರಿಗಿದ್ದ ಅನುಮಾನಗಳು ದೂರವಾದವು. ಇಡೀ ಕಾರ್ಯಕ್ರಮ ಅಚ್ಚುಕಟ್ಟಾಗಿ ಮೂಡಿಬಂದಿತು. ಬಳಿಕ ರಿಚ್ಮಂಡ್, ಶಾರ್ಲೆಟ್, ರ್‍ಯಾಲೆ, ಬಾಸ್ಟನ್‌ನಲ್ಲಿ ‘ಜನನಿ ಮಹಿಳಾ ಬ್ಯಾಂಡ್’ ಸಂಗೀತ ರಸದೌತಣ ಬಡಿಸಿತು.

ಜನರ ಉತ್ಸಾಹ, ಪ್ರೋತ್ಸಾಹದಿಂದಾಗಿ ಶಮಿತಾ ಮಲ್ನಾಡ್ ಮತ್ತು ಅವರ ತಂಡವು ಮತ್ತಷ್ಟು ಹುರುಪಿನಿಂದ ಮುಂದಡಿ ಇಡುತ್ತಿದೆ. ಕರ್ನಾಟಕದಲ್ಲಿಯೂ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಿದೆ.

ವಿಭಿನ್ನ ಪರಿಕಲ್ಪನೆ

‘ಜನನಿ ಮಹಿಳಾ ಬ್ಯಾಂಡ್’ ನಡೆಸಿಕೊಡುವ ಕಾರ್ಯಕ್ರಮಗಳಲ್ಲಿ ಟ್ರೆಂಡಿಂಗ್ ಹಾಡುಗಳು, ನಟ–ನಟಿಯರಿಗೆ ಸಮರ್ಪಣೆ ಮಾಡುವ ಹಾಡುಗಳು, ಜನಪದ, ತತ್ವಪದ, ಭಾವಗೀತೆ, ಹಳೆಯ ಜನಪ್ರಿಯ ಮತ್ತು ಸುಮಧುರ ಹಾಡುಗಳ ಮೂಲಕ ಕೇಳುಗರನ್ನು ರಂಜಿಸಲಾಗುತ್ತಿದೆ. ಈ ಬ್ಯಾಂಡ್‌ನಲ್ಲಿ ಇಂತಿಷ್ಟೇ ವಾದ್ಯಗಾರರು ಎಂದಿಲ್ಲ.

12ನೇ ಪುಟಕ್ಕೆ...

ಪರ್ತ್‌ನಲ್ಲಿ ಕನ್ನಡ ಡಿಂಡಿಮ



• ಮಮತಾ ಅರಸೀಕೆರೆ

ಆಸ್ಟ್ರೇಲಿಯಾದ ಪರ್ತ್‌ನಲ್ಲಿ ಸುಮಾರು ಮೂರು ಸಾವಿರಕ್ಕೂ ಹೆಚ್ಚು ಕನ್ನಡಿಗರಿದ್ದಾರೆ. ಅವರು ತಮ್ಮ ಮಕ್ಕಳಿಗೆ ಮಾತೃಭಾಷೆ ಮರೆತುಹೋಗಬಾರದೆಂದು ಕನ್ನಡ ಕಲಿಕೆ ಕಾಯಕ ಪ್ರಾರಂಭಿಸಿದ್ದಾರೆ. ಇದಕ್ಕಾಗಿ ಒಂದು ವಿಶೇಷ ಕನ್ನಡ ಶಾಲೆಯೂ ಪ್ರಾರಂಭಗೊಂಡಿದ್ದು, ಇಲ್ಲಿ ಆಟ, ಪಾಠದ ಜತೆಗೆ ನಾಡು-ನುಡಿಯನ್ನು ಬೆಳೆಸುವ ಸಾಂಸ್ಕೃತಿಕ ಚಟುವಟಿಕೆಗಳು ನಡೆಯುತ್ತವೆ...

ವಿದೇಶಿ ನೆಲದಲ್ಲಿ ನಮ್ಮವರು ಕನ್ನಡತನದ ಬಗ್ಗೆ ತೋರುವ ಅಪಾರ ಆಸ್ಥೆ ಬೆರಗು ಹುಟ್ಟಿಸುತ್ತದೆ. ತಮ್ಮ ನೆಲದ ಎಲ್ಲಾ ಬಗೆಯ ಸಾಂಸ್ಕೃತಿಕ ಅಸ್ಮಿತೆಗಳನ್ನು ಕಾಪಾಡಿಕೊಳ್ಳಲು ಬಯಸುವ ಅನಿವಾಸಿ ಕನ್ನಡಿಗರ ಪ್ರಯತ್ನಕ್ಕೆ ಮನದುಂಬಿಬರುತ್ತದೆ. ಅತೀವ ಭಾವುಕತೆ, ಆದಿ ನೆಲೆಯಿಂದ ಕಳಚುವ ಪುಟ್ಟ ಆತಂಕ ಅಲ್ಲಿ ಪ್ರಧಾನವಾಗಿ ಕಾಣುತ್ತದೆ.

ಕನ್ನಡದ ನೆಲದಿಂದ ಹೊರಗೆ ಪ್ರವಾಸ ಹೊರಟಾಗ ದೇಶದ ಬೇರೆ ರಾಜ್ಯದಲ್ಲಿಯೇ ಆಗಲಿ ಕನ್ನಡದ ಒಂದೇ ಒಂದು ಇನಿದನಿ ಕೇಳಿದರೂ ಸಾಕು ಓಡಿ ಅವರನ್ನು ಮಾತಾಡಿಸಿ ಕೈಕುಲುಕಿ ಸಂಭ್ರಮಪಡುವ ಕಾಲವಿತ್ತು. ಈಗ ಕನ್ನಡಿಗರು ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ಅಷ್ಟೇ ಯಾಕೆ ಭೂಗೋಳದ ವಿವಿಧ ದೇಶಗಳಲ್ಲೂ ನೆಲೆಸಿ ಪತಾಕೆ ಹಾರಿಸುತ್ತಿದ್ದಾರೆ. ಅವರ ಸಂಭ್ರಮಗಳು, ಆಸಕ್ತಿಗಳು ವಿಶೇಷವಾಗಿವೆ.

ಇಷ್ಟೆಲ್ಲ ಪೀಠಿಕೆ ಏಕೆಂದರೆ, ನಾನು ಆಸ್ಟ್ರೇಲಿಯಾದ ಪರ್ತ್‌ಗೆ ಹೋಗಲು ಅಣಿಯಾದಾಗ ಅಲ್ಲಿನ ಕನ್ನಡ ಸಂಘದ ಅಧ್ಯಕ್ಷ ಶಂಕರ್ ಅವರಿಂದ ವಿಶಿಷ್ಟ ಮನವಿಯೊಂದಿತ್ತು. ಪರ್ತ್‌ನಲ್ಲಿ ಕನ್ನಡ ಶಾಲೆಯೊಂದಿದೆ. ಅಲ್ಲಿ ಸುಮಾರು ನೂರು ಮಕ್ಕಳು ಕನ್ನಡ ಕಲಿಯುತ್ತಿದ್ದಾರೆ. ಅವರಿಗೆ ಈಗಾಗಲೇ ಸರಳ ಕನ್ನಡದ ಪುಸ್ತಕಗಳನ್ನು ಒದಗಿಸಲಾಗಿದೆ. ಆದರೆ ಅವರಿಗೆ ಕರ್ನಾಟಕದ ಶಾಲೆಗಳಲ್ಲಿ ವಿದ್ಯಾರ್ಥಿಗಳು ಕಲಿಯುವ ಸುಲಭ ಕನ್ನಡದ ಪಠ್ಯಪುಸ್ತಕಗಳು ಬೇಕಿದ್ದವು. 'ಪಠ್ಯಪುಸ್ತಕಗಳನ್ನು ತರಲು ಸಾಧ್ಯವಾ?' ಎಂದು ಶಂಕರ್ ಅವರ ಈ ಮನವಿಗೆ ಮೊದಲು ಯೋಚಿಸುವಂತಾಯಿತು. ಅವುಗಳೆಲ್ಲ ಪುಸ್ತಕಗಳ ಅಂಗಡಿಗಳಲ್ಲಿ ಸಿಗುವಂಥವುಗಳಲ್ಲ. ಶಿಕ್ಷಣ ಇಲಾಖೆಯ ಎಸ್‌ಎಸ್‌ಎ ಅಧಿಕಾರಿಗಳಿಗೆ ಪತ್ರ ಬರೆಸಿ ಪುಸ್ತಕಗಳ ವ್ಯವಸ್ಥೆ ಮಾಡಿಕೊಳ್ಳಲಾಯಿತು. ಸುಮಾರು 200 ಕೆ.ಜಿ. ಇದ್ದ ಲಗೇಜನ್ನು ಪರ್ತ್‌ಗೆ ಕೊಂಡೊಯ್ಯುವ ವ್ಯವಸ್ಥೆಯೂ ಆಯಿತು. ಅಲ್ಲಿನ ಕನ್ನಡಿಗ ಪೋಷಕರಿಗೆ ಪುಸ್ತಕಗಳನ್ನು ಹಸ್ತಾಂತರಿಸಿದಾಗ ಅವರ ಮೊಗದಲ್ಲಿ ಕಂಡ ಮಿಂಚು, ಖುಷಿಯನ್ನು ಕಾಣುವುದೇ ಸೊಗಸಾದ ಅನುಭವವಾಗಿತ್ತು.

ಪರ್ತ್‌ನಲ್ಲಿ ಸುಮಾರು ಮೂರು ಸಾವಿರಕ್ಕೂ ಹೆಚ್ಚು ಕನ್ನಡಿಗರಿದ್ದಾರೆ. ಬಹುತೇಕರಿಗೆ ತಮ್ಮ ಭವಿಷ್ಯದ ಕುಡಿಗಳು ಕನ್ನಡದ ಪರಂಪರೆ, ಸೊಗಡನ್ನು ಮುಂದುವರೆಸಬೇಕೆಂಬ ಮಹೋನ್ನತ ಆಶಯವಿದೆ. ಮತ್ತೂ ಮುಂದಾಲೋಚಿಸಿ ಆಸ್ಟ್ರೇಲಿಯಾದ ಇಂಗ್ಲಿಷ್ ಉಚ್ಚಾರದ ಕನ್ನಡ ಬಿಟ್ಟು ತಮ್ಮಂತೆಯೆ ಕನ್ನಡಿಗರ ಮೂಲ ಉಚ್ಚಾರದಲ್ಲಿಯೇ ಮಾತು ಕಲಿಯಬೇಕೆಂಬ ಮಹದಾಸೆಯೂ ಇದೆ. ಕರ್ನಾಟಕದ ಯಾವುದೋ ಊರಿನಲ್ಲಿರುವ ಅಜ್ಜ-ಅಜ್ಜಿಯರೊಂದಿಗೆ ಬಂಧುಗಳೊಂದಿಗೆ ಕನ್ನಡ ಕಂಪಿನಲ್ಲೇ ಸಂಭಾಷಿಸಬೇಕೆಂಬ ಉದ್ದೇಶವಿದೆ. ಕನ್ನಡದೆಡೆಗೆ ಆಸಕ್ತಿ ಬೆಳೆಸುವುದು ಹೇಗೆ? ಕನ್ನಡ ಸಾಹಿತ್ಯದೆಡೆಗೆ ಆಕರ್ಷಿಸುವುದು ಹೇಗೆ? ಎಂಬ ಪ್ರಶ್ನೆಗಳು ಅವರನ್ನು ಕಾಡುತ್ತಿವೆ. ಹಾಗಾಗಿ ಸಾಧ್ಯವಾದಷ್ಟೂ ಕನ್ನಡದಲ್ಲೇ ಮಾತನಾಡುವುದು, ಕನ್ನಡದಲ್ಲೇ ಸಂವಹಿಸುವುದು. ಕರ್ನಾಟಕ ನೆಲದ ಕನ್ನಡಿಗರಿಗಿಂತ ಅತ್ಯುತ್ಸಾಹ, ಅತ್ಯಾಸಕ್ತಿ ಅವರಲ್ಲಿ ಚಿಮ್ಮುತ್ತಲೇ ಇರುತ್ತದೆ.

ಪ್ರತೀ ಭಾನುವಾರ ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ಕನ್ನಡ ಶಾಲೆಗಳ ಅವಧಿ. ಅಲ್ಲಿ ಐದು ಮಂದಿ ಶಿಕ್ಷಕಿಯರಿದ್ದಾರೆ. ಇವರು ಭಾಷಾಪ್ರೇಮದಿಂದ ಉಚಿತವಾಗಿ ಕಲಿಸಲು ಬರುತ್ತಾರೆ. ಒಬ್ಬರು ಪ್ರಾಂಶುಪಾಲರೂ ಇದ್ದಾರೆ. ಎಲ್ಲರಿಗೂ ಒಂದೇ ಆಸಕ್ತಿ, ಕಾತುರ. ಮಕ್ಕಳು ಕನ್ನಡವನ್ನು ಕಲಿಯಬೇಕು, ತಮ್ಮ ಪರಂಪರೆಯನ್ನು ಮುಂದುವರೆಸಬೇಕೆಂಬ ತಹತಹ. ಮತ್ತೂ ಒಂದು ಖುಷಿಯೆಂದರೆ ಆಸ್ಟ್ರೇಲಿಯಾ ಸರ್ಕಾರ ಕೂಡ ಭಾಷಾಪ್ರೇಮವನ್ನು ಉತ್ತೇಜನಗೊಳಿಸಲು ವಾರ್ಷಿಕವಾಗಿ ಏಳು ಸಾವಿರ ಡಾಲರ್‌ಗಳನ್ನು ಅನುದಾನ ರೂಪದಲ್ಲಿ ನೀಡುತ್ತದಂತೆ.

ಆರಂಭದಲ್ಲಿ ಇಬ್ಬರು ಮಕ್ಕಳೊಂದಿಗೆ ಆರಂಭವಾದ ಶಾಲೆಗೆ ಅಲ್ಲಿನ ಎಲ್ಲಾ ಕನ್ನಡಿಗ ಮಕ್ಕಳು ದಾಖಲಾಗಿಲ್ಲವಾದರೂ ನೂರಕ್ಕೂ ಹೆಚ್ಚು ಮಕ್ಕಳು ಶಾಲೆಯಲ್ಲಿ ಪಾಠ, ಆಟ, ಸಾಂಸ್ಕೃತಿಕ ಚಟುವಟಿಕೆಗಳನ್ನು ಪರಿಚಯಿಸಿಕೊಳ್ಳುತ್ತಾರೆ. ಮಕ್ಕಳು ನೋಡುವಂತಹ ಕನ್ನಡ ಸಿನಿಮಾ ಪ್ರದರ್ಶನವೂ ಜರುಗುತ್ತದೆ.

ಖಂಡಾಂತರದಲ್ಲೂ ಕನ್ನಡ ಡಿಂಡಿಮ ಕೇಳಿಸುತ್ತಿರುವುದಕ್ಕೆ ಖುಷಿ ಆಯಿತು. ❖



ತರಗತಿಯಲ್ಲಿ ಕನ್ನಡ ಕಲಿಯುತ್ತಿರುವ ಪರ್ತ್ ಶಾಲೆ ಮಕ್ಕಳು

ಆನ್‌ಲೈನ್ ಸಾಹಿತ್ಯಿಕ ಪತ್ರಿಕೆ

ಮೂಲ ಬೇರುಗಳನ್ನು ಕಡಿದುಕೊಳ್ಳದೆ ಅಲ್ಲಿಯೆ ಚಿಗುರನ್ನು ಹುಲುಸಾಗಿ ಬೆಳೆಸುವ ಮಹತ್ವಾಕಾಂಕ್ಷೆ ಅವರಲ್ಲಿದೆ. ಹಾಗಾಗಿ ತಿಂಗಳಿಗೊಂದು ಕಾರ್ಯಕ್ರಮದ ರೂಪದಲ್ಲಿ ಎಲ್ಲರೂ ಒಟ್ಟಿಗೆ ಸೇರುವುದು, ಹಬ್ಬಗಳ ನೆಪದಲ್ಲಿ ಒಂದಾಗುವುದು, ಒಬ್ಬೊಬ್ಬರ ಮನೆಯಲ್ಲಿ ಒಟ್ಟಾಗಿ ಚಟುವಟಿಕೆಗಳನ್ನು ಕೈಗೊಳ್ಳುವುದು ನಡೆದೇ ಇರುತ್ತದೆ. 'ಸಿಂಚನ ಎಂಬ ಆನ್‌ಲೈನ್ ಸಾಹಿತ್ಯಿಕ ಪತ್ರಿಕೆ'ಯನ್ನೂ ಅವರು ಹೊರತಂದಿದ್ದಾರೆ. ಅಲ್ಲಿ ಸ್ಥಳೀಯ ಕನ್ನಡಿಗರು ಬರೆದ ಲೇಖನಗಳು, ವಚನ ವಿಮರ್ಶೆ, ಕವಿತೆ, ಕತೆಗಳನ್ನು ಪ್ರಕಟಿಸಲಾಗುತ್ತದೆ. ಆ ನೆಲದಿಂದಲೆ ಕನ್ನಡದ ನೆಲದ ಪತ್ರಿಕೆಗಳಿಗೂ ಲೇಖನಗಳು ಹರಿದುಬರುತ್ತವೆ. ಆ ನೆಲದಲ್ಲಿ ಕ್ರೀಡಾಪಟುಗಳಿದ್ದಾರೆ, ಕಲಾವಿದರಿದ್ದಾರೆ. ಸಾಧಕರಿದ್ದಾರೆ. ಕನ್ನಡತನದ ಮೆರುಗನ್ನು ಹೊಳೆಯಿಸುತ್ತಾರೆ.



ಕನ್ನಡದಲ್ಲಿ ಬರೆದ ಖುಷಿಯಲ್ಲಿ...



ನಾಟಕದ ದೃಶ್ಯ

ನಮಗೆ ಬೇಕು, 'ನಮ್ಮೊಳಗೊಬ್ಬ ಗಾಂಧಿ'

• ಕುಮಾರ್ ಎಸ್.

ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಇತ್ತೀಚೆಗೆ ಪ್ರದರ್ಶನ ಕಂಡ ನಾಟಕಕಾರ ಡಿ.ಎಸ್.ಚೌಗಲೆ ವಿರಚಿತ, ಚಿದಂಬರರಾವ್ ಜಂಬೆ ಅವರ ನಿರ್ದೇಶನದ 'ನಮ್ಮೊಳಗೊಬ್ಬ ಗಾಂಧಿ' ನಾಟಕ, ಗಾಂಧಿಯನ್ನು ಸಮಕಾಲೀನ ಸವಾಲುಗಳ ನೆರಳಲ್ಲಿ ಅವರ ಮಹತ್ವ ಮತ್ತು ಅಗತ್ಯವನ್ನು ನೆನಪಿಸಿತು.

ಸ್ವಾತಂತ್ರ್ಯ ಹೋರಾಟ, ಅಹಿಂಸಾವಾದ, ಸಹಬಾಳ್ವೆ, ಸಮಾನತೆಯ ಆಶಯಗಳ ಬಗ್ಗೆ ಬದುಕಿನುದ್ದಕ್ಕೂ ಮಾತನಾಡಿ, ಜಗತ್ತಿಗೆ ಮಾದರಿಯನ್ನು ಬಿಟ್ಟು ಹೋದ ಗಾಂಧೀಜಿಯ ವ್ಯಕ್ತಿತ್ವ ಮತ್ತು ವರ್ಚಸ್ಸನ್ನು ನಿರಂತರವಾಗಿ ಹಾಗೂ ವ್ಯವಸ್ಥಿತವಾಗಿ ಒಡೆಯುವ ಯತ್ನ ನಡೆಯುತ್ತಿರುವಾಗ, ಈ ನಾಟಕ ಗಾಂಧಿ ತತ್ವ ಮತ್ತು ಚಿಂತನೆಗಳನ್ನು ನಮ್ಮೊಳಗೆ ಪ್ರತಿನಿಧ್ವನಿಸುವಂತೆ ಮಾಡಿತು.

ಗಾಂಧೀಜಿಯ ಬದುಕು-ಹೋರಾಟದಿಂದ ಪ್ರಭಾವಿತರಾದ ಅಜ್ಜ ಮತ್ತು ಆತನ ಕುಟುಂಬ, ನೆರೆ, ಅವರ ಆಗಮನದ ನಿರೀಕ್ಷೆಯಲ್ಲಿರುತ್ತದೆ. ದಂಡಿ ಉಪ್ಪಿನ ಸತ್ಯಾಗ್ರಹ, ಅಸಹಕಾರ ಚಳವಳಿ, ನೌಕಾಲಿಯ ಸಂದರ್ಭಗಳನ್ನು ಪ್ರಸ್ತಾಪಿಸುತ್ತಾ ದೂರದಲ್ಲೆಲ್ಲೋ ಹೋರಾಡುವ ಗಾಂಧಿ ಪ್ರಭಾವದಿಂದ ಸಣ್ಣ ಹಳ್ಳಿಯ ಅಜ್ಜನೊಬ್ಬ ಅವರ ಮಾರ್ಗದಲ್ಲಿ ನಡೆಯುತ್ತಾ, ಹೋರಾಟ ಮತ್ತು ಚಿಂತನೆಗಳನ್ನು ಪಸರಿಸುವುದನ್ನು ನಾಟಕ ಕಟ್ಟಿಕೊಡುತ್ತದೆ.

ಇಂದು ದೇಶದಲ್ಲಿ ಚರ್ಚೆಯಾಗುತ್ತಿರುವ ಹಲವು ಸೂಕ್ಷ್ಮ ವಿಷಯಗಳನ್ನು ನಾಟಕದ ಉದ್ದಕ್ಕೂ ನಾಟಕಕಾರರು ತಂದಿದ್ದು, ಗಾಂಧಿ ಸಮಕಾಲೀನ ಮಹತ್ವವನ್ನು ಮತ್ತೆ ಚಿಂತಿಸುವಂತೆ ಮಾಡುತ್ತದೆ. ನಾವು ಇಂದು ಮನೆಯ ಸಾಮಾನ್ಯ ಪದಾರ್ಥಗಳ ಮೇಲೂ ಜಿಎಸ್‌ಟಿ ಹೇರಿದ್ದನ್ನು ಚರ್ಚಿಸುತ್ತಿದ್ದೇವೆ. ಅಂದು ಗಾಂಧೀಜಿ ಬ್ರಿಟಿಷರು ಉಪ್ಪಿನ ಮೇಲೆ ಹೇರಿದ ಕರದ ವಿರುದ್ಧ ಹೋರಾಡಿದ್ದರು. ದೇಶ ಸ್ವತಂತ್ರಗೊಂಡರೂ ಸಂಭ್ರಮದಲ್ಲಿ ಪಾಲ್ಗೊಳ್ಳದೆ ಬಾಪು ನೌಕಾಲಿಯ ಕೋಮು ಗಲಭೆಯನ್ನು ತಣ್ಣಗೆ ಮಾಡುವ ಕೆಲಸದಲ್ಲಿ ತೊಡಗಿದ್ದರು. ಇವತ್ತು ದೇಶದ ಮೂಲೆ ಮೂಲೆಗಳಲ್ಲಿ ಧರ್ಮ-ದ್ವೇಷ ಹೊತ್ತಿ ಉರಿಯುತ್ತಿರುವುದನ್ನು ನೋಡುತ್ತಲೇ ಇದ್ದೇವೆ. ಹೀಗಾಗಿ ಗಾಂಧೀಜಿಯ ಶಕ್ತಿಯೊಂದರ ಕೊರತೆಯನ್ನು ನಾಟಕ ಎತ್ತಿ ಹಿಡಿಯುತ್ತದೆ. ಕ್ವಿಟ್ ಇಂಡಿಯಾ ಚಳವಳಿಯು ಸೇರಿದಂತೆ ಹಲವು ಹೋರಾಟಗಳಲ್ಲಿ ಸಕ್ರಿಯವಾಗಿ ತೊಡಗಿದ್ದ ರಹೀಮನ ವಿರುದ್ಧ ಸುಳ್ಳು ಪ್ರಕರಣವೊಂದರಲ್ಲಿ ಜೈಲಿಗೆ ಹಾಕಿದ ನಾಟಕದ ದೃಶ್ಯವೊಂದು ಇಂದು ಉಮರ್ ಖಾಲಿದ್ ಸೇರಿದಂತೆ ಹತ್ತಾರು ಪ್ರಕರಣವೇ ಇಲ್ಲದೇ ಜೈಲಿನಲ್ಲಿ ಕೊಳೆತು ದಿನ ಕಳೆಯುತ್ತಿರುವ ಸಂದರ್ಭವನ್ನು ನೆನಪಿಸಿತು.

ಗಾಂಧಿ ಬರುತ್ತಾರೆ, ಅವರಿಗೆ ಉಡುಗೊರೆ ಕೊಡಬೇಕೆಂಬ ಸಂಭ್ರಮದಲ್ಲೇ ಹೋರಾಟದಲ್ಲಿ ತೊಡಗಿಕೊಳ್ಳುವ, ಸ್ಥಳೀಯವಾಗಿ ಸದಾ ನಿಗಾ ಇಡುವ ಶಾನುಭೋಗ, ಅವಕಾಶಗಳ ದುರುಪಯೋಗ ಮಾಡಿಕೊಳ್ಳುವ ಶೆಟ್ಟಿಯಂತಹ ಸ್ವಾರ್ಥಿಗಳ ವಿರುದ್ಧ ಪ್ರತಿರೋಧ ಒಡ್ಡುವ ಈ ಪಾತ್ರಗಳನ್ನು ತಮ್ಮೊಂದಿಗೆ ಇರುವ ಅಜ್ಜನಲ್ಲೇ ಗಾಂಧಿಯನ್ನು ಕಾಣುತ್ತಾ, ಜಾತೀಯತೆಯನ್ನು ಮೀರುವ, ಧರ್ಮ ಭೇದವನ್ನು ಮೀರುವ ಉದಾತ್ತತೆಯನ್ನು ತೋರುತ್ತಾರೆ. ಮೂಕಮ್ಮ, ರಮಾ, ಸುಶೀಲ ಪಾತ್ರಗಳು ಕಮಲಾದೇವಿ ಚಟ್ಟೋಪಾಧ್ಯಾಯರನ್ನು ನೆನೆಯುವ ಮೂಲಕ, ಸ್ವಾತಂತ್ರ್ಯ ಹೋರಾಟದಲ್ಲಿ ಸ್ತ್ರೀಯರ ಪಾತ್ರವನ್ನು ನೆನಪಿಸುತ್ತವೆ. ಮೂಕಮ್ಮ, ರಮಾ ನಾಟಕದ ಸಶಕ್ತ ಪಾತ್ರಗಳು. ಮಹಿಳೆಯನ್ನು ಚೌಕಟ್ಟುಗಳಲ್ಲಿ ಬಂಧಿಸುವ ಹೇಳಿಕೆಗಳು ಕೇಳಿ ಬರುತ್ತಿರುವ ಈ ಕಾಲದಲ್ಲಿ ಗಾಂಧಿ ಪ್ರಭಾವ, ಮಹಿಳೆಯರಿಗೆ ನೀಡಿದ ಧೈರ್ಯ ಮತ್ತು ಸ್ವಾತಂತ್ರ್ಯಗಳನ್ನು ನಾಟಕ ಕನ್ನಡಿ ಹಿಡಿದಂತೆ ತೋರಿಸುತ್ತದೆ.

ಗಾಂಧಿಯ ಹತ್ಯೆಯ ಸುದ್ದಿಯ ಆಘಾತದಿಂದ, ನಮ್ಮೊಳಗೆ ಗಾಂಧಿಯಂತಿದ್ದ ಅಜ್ಜನೂ ಸಾವನ್ನಪ್ಪುವ ದೃಶ್ಯ ಒಂದು ಕ್ಷಣ ಮನಕಲಕಿ ಬಿಡುತ್ತದೆ. ಗಾಂಧೀ ಚಿಂತನೆಯ ಮೇಲೆ ಈಗ ನಡೆಯುತ್ತಿರುವ ದಾಳಿ, ನಮ್ಮೊಳಗೂ ಅಂತಹ ಆಘಾತ ಮತ್ತು ಅಧೀರತೆ ಹುಟ್ಟಿಸಿದೆ ಎಂಬ ಆತಂಕವನ್ನು ಈ ದೃಶ್ಯ ನಮ್ಮೊಳಗೆ ದಾಟಿಸಿಬಿಡುತ್ತದೆ.

ಸರಳ ರಂಗ ಸಜ್ಜಿಕೆಯಲ್ಲಿ ಅನಾವರಣಗೊಂಡ ಈ ನಾಟಕದಲ್ಲಿ ಅಜ್ಜನ ಪಾತ್ರದ ಸೈಯದ್ ಅಲಿ, ಮೂಕಮ್ಮ ಪಾತ್ರದ ಪೂಜಾ, ಗುಂಡನ ಪಾತ್ರದ ಭೀಮೇಶ, ರಹೀಮ ಪಾತ್ರದ ಬಸವರಾಜ ಹುಲ್ಲಳ್ಳಿ ನ್ಯಾಯ ಒದಗಿಸುವಂತೆ ನಟಿಸಿದರು. ರಾಘವ ಕಮ್ಮಾರರ ಹಾಡುಗಳು ನೆನಪಲ್ಲಿ ಉಳಿಯುತ್ತವೆ. ನಾಟಕದುದ್ದಕ್ಕೂ ಬಳಕೆಯಾದ ಕಬೀರ್‌ದಾಸ್, ಜ್ಯೋತಿ ಝಾ, ಪುತಿನ, ಗುಲ್ಜಾರ್, ಸುರಭಿ ರೇಣುಕಾಂಬೆ, ಬಸವಣ್ಣನ ವಚನ ಮತ್ತು ಮಿಕೆಲ್ ನೋಯ್ಮಾ ಅವರ ಪದ್ಯದ ತುಣುಕುಗಳು ನಾಟಕದ ಅನುಭವವನ್ನು ಹಿಗ್ಗಿಸಿದವು. ಶಿವಮೊಗ್ಗ ರಂಗಾಯಣದ ಪ್ರಯೋಗವನ್ನು ಕರ್ನಾಟಕ ನಾಟಕ ಅಕಾಡೆಮಿ ಆಯೋಜಿಸಿತ್ತು. ❖

ಅಬ್ಬೆ ಡುಬಾಯೀಸ್ ಚರ್ಚ್‌ಗೆ 225 ವರ್ಷ

10ನೇ ಪುಟದಿಂದ...

ಸಿರೇನ್ಯಾದ ಸಿಮೋನನು ಶಿಲುಬೆ ಹೊರಲು ಸಹಾಯ ಮಾಡುವುದು. ವೆರೊನಿಕಾ ಎಂಬ ಮಹಿಳೆ ಯೇಸುವಿನ ಮುಖವನ್ನು ಒರೆಸುವುದು. ಎರಡನೇ ಬಾರಿ ನೆಲಕ್ಕೆ ಬೀಳುವುದು. ಜೆರುಸಲೇಂನ ಮಹಿಳೆಯರು ಮರುಗುತ್ತಾ ರೋದಿಸುವುದು. ಯೇಸು ಮೂರನೇ ಸಾರಿ ನೆಲಕ್ಕೆ ಬೀಳುವುದು. ಬಟ್ಟೆಗಳನ್ನು ಕಳಚಿ ನಗ್ನಗೊಳಿಸುವುದು. ಯೇಸು ಕ್ರಿಸ್ತನನ್ನು ಶಿಲುಬೆಗೆ ಜಡಿಯುವುದು. ಶಿಲುಬೆಯಲ್ಲಿ ಪ್ರಾಣ ಬಿಡುವುದು. ಶಿಲುಬೆಯಿಂದ ಇಳಿಸುವುದು ಮತ್ತು ಶರೀರವನ್ನು ಸಮಾಧಿ ಮಾಡುವ ಪ್ರಸಂಗಗಳನ್ನು ಈ ಹದಿನಾಲ್ಕು ಚಿತ್ರಗಳು ಕ್ರಮಾನುಸಾರ ವಿವರಿಸುತ್ತವೆ.

ಚರ್ಚ್‌ನ ಮುಂದೆ, ಬಲ ಭಾಗದಲ್ಲಿ ಅಬ್ಬೆ ಡುಬಾಯೀಸ್ ಕಾಲದ ಗಂಟೆ ಗೋಪುರವಿದೆ. ಸುಮಾರು 25 ಅಡಿ ಎತ್ತರದ ಈ ಗೋಪುರ ಮೂರು ಭಾಗಗಳನ್ನು ಹೊಂದಿದ್ದು, ತುದಿಯಲ್ಲಿ 'ಪವಿತ್ರ ಕ್ರಾಸ್' ನಿಲ್ಲಿಸಲಾಗಿದೆ. ಅದರ ಕೆಳಗೆ ಫ್ರಾನ್ಸ್‌ನಿಂದ ತಂದಿರುವ ವಿಶೇಷ ರಿಂಗಣ ಧ್ವನಿಸುವ ಲೋಹದ ಗಂಟೆಯನ್ನು ಇರಿಸಲಾಗಿದೆ. ಗೋಪುರದ ಕೆಳ ಮಧ್ಯ ಭಾಗದಲ್ಲಿ ಆಳೆತ್ತರದ ಕ್ರಾಸ್ ನಿರ್ಮಿಸಿದ್ದು, ಅದರಲ್ಲಿ ಈ ಚರ್ಚ್ ಸ್ಥಾಪನೆಯಾದ ವರ್ಷ (ಕ್ರಿ.ಶ.1800)ವನ್ನು ಕೆತ್ತಲಾಗಿದೆ. ಈ ಪಟ್ಟಣದಲ್ಲಿ ನೆಲೆಸಿದ್ದ ಕ್ರೈಸ್ತರಿಗೆ ಪ್ರಾರ್ಥನೆಯ ಸಮಯವನ್ನು ನೆನಪಿಸಲು ಈ ಗಂಟೆಯನ್ನು ಬಾರಿಸಲಾಗುತ್ತಿತ್ತು ಎಂದು ಚರ್ಚ್‌ನ ಪಾದ್ರಿ ಸಗಾಯ್ ಪುಷ್ಪರಾಜ್ ಹೇಳುತ್ತಾರೆ.

ದೊಡ್ಡ ಸ್ವಾಮಿಯೋರು

ಫ್ರಾನ್ಸ್ ಮೂಲದ ರೋಮನ್ ಕೆಥೋಲಿಕ್ ಕ್ರೈಸ್ತ ಧರ್ಮ ಪ್ರಚಾರಕ ಅಬ್ಬೆ ಡುಬಾಯೀಸ್ ಕ್ರಿ.ಶ.1792ರಲ್ಲಿ ಪಾಂಡಿಚೆರಿ ಮಿಷನ್‌ಗೆ ಬಂದವರು. ಅಂದಿನ ಬ್ರಿಟಿಷ್ ಭಾರತದ ಗವರ್ನರ್ ಜನರಲ್ ಮಾರ್ಕಸ್ ವೆಲ್ಲೆಸ್ಲಿ ಅವರ ಸೂಚನೆಯಂತೆ, ಶ್ರೀರಂಗಪಟ್ಟಣ ಪತನದ ಬಳಿಕವೂ ಇಲ್ಲೇ ಉಳಿದಿದ್ದ ಯೂರೋಪಿಯನ್ನರ ಧಾರ್ಮಿಕ ಆಚರಣೆಗೆ ಸಹಕರಿಸಲು ಮತ್ತು ಧರ್ಮ ಬೋಧನೆ ಉದ್ದೇಶದಿಂದ ಕ್ರಿ.ಶ.1800ರಲ್ಲಿ ಗಂಜಾಂಗೆ ಬಂದರು. ಫ್ರೆಂಚ್ ಭಾಷಿಕರಾದ ಡುಬಾಯೀಸ್ ಕೆಲವೇ ದಿನಗಳಲ್ಲಿ ಕನ್ನಡ ಕಲಿತು ಸ್ಥಳೀಯರ ಜತೆ ಒಡನಾಟ ಬೆಳೆಸಿಕೊಂಡರು. ಪರಂಗಿ ಜನರನ್ನು ಇಲ್ಲಿನ ಜನ ಅನುಮಾನದಿಂದ ನೋಡುತ್ತಿದ್ದುದನ್ನು ಮನಗಂಡು ಹಿಂದೂ ಸನ್ಯಾಸಿಯಂತೆ ಬಟ್ಟೆ ಧರಿಸಿ ಓಡಾಡಲಾರಂಭಿಸಿದರು. ಜನರ ವಿಶ್ವಾಸ ಗಳಿಸಲು ತಾವು ಸ್ಥಾಪಿಸಿದ ಚರ್ಚ್‌ಗೆ 'ಅಮಲೋದ್ಭವ ಮಾತೆ ದೇವಾಲಯ' ಎಂದು ಹೆಸರಿಟ್ಟರು.


ಸಿಡುಬು, ಪ್ಲೇಗ್, ಕಾಲರಾದಂತಹ ರೋಗಗಳಿಗೆ ಆಧುನಿಕ ಲಸಿಕೆ ಪರಿಚಯಿಸಿ ಸಾಕಷ್ಟು ಮಂದಿಯನ್ನು ಗುಣಪಡಿಸಿದರು. ಮೈಸೂರು ರಾಜ ವಂಶಸ್ಥರು ಸೇರಿದಂತೆ 18 ತಿಂಗಳ ಅವಧಿಯಲ್ಲಿ 25,432 ಮಂದಿಗೆ ಲಸಿಕೆ ಹಾಕಿದ್ದಾಗಿ ಅವರೇ ಬರೆದಿಟ್ಟಿದ್ದಾರೆ.

ಅನಕ್ಷರಸ್ಥರ ಸಂಖ್ಯೆ ದೊಡ್ಡದಿದ್ದ ಕಾಲದಲ್ಲಿ ಗಂಜಾಂನಲ್ಲಿ ಶಾಲೆ ತೆರೆದು ಮಕ್ಕಳಿಗೆ ಶಿಕ್ಷಣ ನೀಡಲು ಶುರು ಮಾಡಿದರು. ಡುಬಾಯೀಸ್ ಅವರ ಪ್ರೀತಿ ಮತ್ತು ವಿಶ್ವಾಸಕ್ಕೆ ಮನಸೋತ ಸ್ಥಳೀಯರು ಅವರನ್ನು 'ದೊಡ್ಡ ಸ್ವಾಮಿಯೋರು' ಎಂದೇ ಕರೆಯಲಾರಂಭಿಸಿದರು. 21 ವರ್ಷ ಗಂಜಾಂನಲ್ಲಿದ್ದ ಈ ಕ್ರೈಸ್ತ ಸನ್ಯಾಸಿ ಆರೋಗ್ಯ, ಶಿಕ್ಷಣ, ಮೌಢ್ಯಾಚರಣೆ ಬಗ್ಗೆ ಜಾಗೃತಿ ಮೂಡಿಸಿ ಸಾರ್ಥಕ ಸೇವೆ ಸಲ್ಲಿಸಿದರು. ಫ್ರೆಂಚ್ ಭಾಷೆಯಲ್ಲಿ 'ಹಿಂದೂ ಮ್ಯಾನರ್ಸ್, ಕಸ್ಟಮ್ಸ್ ಆ್ಯಂಡ್ ಸೆರಮನೀಸ್' ಹೆಸರಿನ ಕೃತಿಯನ್ನೂ ರಚಿಸಿದ್ದಾರೆ. ಇಲ್ಲಿಂದ ಫ್ರಾನ್ಸ್‌ಗೆ ಮರಳಿದ ಎರಡು ವರ್ಷಗಳ ಬಳಿಕ, 1823ರಲ್ಲಿ ಅವರು ನಿಧನರಾದರು.

ಮುಖ್ಯ ಆಚರಣೆಗಳು

ಅಮಲೋದ್ಭವ ಮಾತೆ ಚರ್ಚ್‌ನಲ್ಲಿ ಮಾರ್ಚ್ ತಿಂಗಳಲ್ಲಿ ಗಂಜಾಂ ಮತ್ತು ಆಸುಪಾಸಿನ ಗ್ರಾಮಗಳ ರೋಮನ್ ಕೆಥೊಲಿಕ್ ಕ್ರೈಸ್ತರು ಉಪವಾಸ ವ್ರತ ಆಚರಿಸುತ್ತಾರೆ. ಇದೇ ಮಾಸದ ಶುಭ ಗುರುವಾರ ಯೇಸು ಕ್ರಿಸ್ತನ 'ಕಡೇ ಭೋಜನ' (ದಿ ಲಾಸ್ಟ್ ಸಪ್ಪರ್)ದ ಸ್ಮರಣೆ ನಡೆಯುತ್ತದೆ. ಅದು ಯೇಸು ಕ್ರಿಸ್ತನು ತನ್ನ ಶರೀರವನ್ನು ರೊಟ್ಟಿಯ ರೂಪದಲ್ಲಿ ಹಂಚಿದ ದಿನವೆಂದು ಕ್ರೈಸ್ತರು ನಂಬುತ್ತಾರೆ. ಶುಭ ಶುಕ್ರವಾರ 'ಯೇಸುವಿನ ಪಾಡು ಮತ್ತು ಮರಣ ಪ್ರಸಂಗ'ವನ್ನು ನೆನೆಯಲಾಗುತ್ತದೆ. ಅದರ ಮುಂದಿನ ಭಾನುವಾರ ಪುನುರುತ್ಥಾನದ ಸ್ಮರಣೆ ನಡೆಯುತ್ತದೆ.

ಡಿ.8ರಂದು ಚರ್ಚ್ ಸ್ಥಾಪನೆಯ ನೆನಪಿಗೆ 'ಅಮಲೋದ್ಭ ಮಾತೆಯ ಹಬ್ಬ'ದ ಆಚರಣೆ ಸಂದರ್ಭದಲ್ಲಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮಾತೆ ಮೇರಿಯ ಉತ್ಸವ ನಡೆಯುತ್ತದೆ. ಡಿ.24ರ ರಾತ್ರಿ ಮತ್ತು ಡಿ.25ರ ಬೆಳಿಗ್ಗೆ ನಡೆಯುವ ಕ್ರಿಸ್‌ಮಸ್ ಆಚರಣೆಯಲ್ಲಿ ಕ್ರೈಸ್ತರು ಮಾತ್ರವಲ್ಲದೆ ಹಿಂದೂ ಧರ್ಮೀಯರೂ ಪಾಲ್ಗೊಂಡು ಮೊಂಬತ್ತಿ ಬೆಳಗುವುದು ವಿಶೇಷ.



ಮುನ್ನೋಟ 21-12-2025 ರಿಂದ 27-12-2025

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಹಿರಿಯರಿಂದ ಗೌರವ ದೊರೆಯುವ ಸಾಧ್ಯತೆಗಳಿವೆ. ಆದಾಯವು ಕಡಿಮೆ ಇದ್ದು ಖರ್ಚನ್ನು ಕಡಿಮೆ ಮಾಡಿಕೊಳ್ಳಬೇಕಾದ ಅನಿವಾರ್ಯತೆ ಇರುತ್ತದೆ. ಹಿರಿಯರ ಆಸ್ತಿ ದೊರೆಯುವ ಸಂದರ್ಭವಿದೆ. ವಿದ್ಯಾರ್ಥಿಗಳಿಗೆ ಈಗ ಹೆಚ್ಚು ಶ್ರಮಹಾಕಲೇಬೇಕಾದ ಅನಿವಾರ್ಯತೆ ಇದೆ. ಔಷಧಿ ವ್ಯಾಪಾರಿಗಳಿಗೆ ಉತ್ತಮ ವ್ಯವಹಾರವಿರುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ವಾರದ ಆರಂಭದಲ್ಲಿ ಯಾವುದೇ ಕೆಲಸ ಮಾಡಲು ಉತ್ಸಾಹವಿರುವುದಿಲ್ಲ. ಆದಾಯವು ಅಗತ್ಯವನ್ನು ಪೂರೈಸುತ್ತದೆ. ನಿಮ್ಮ ನಿರ್ಧಾರಗಳು ದೃಢವಾಗಿರುತ್ತವೆ. ಒಡಹುಟ್ಟಿದವರ ಸಹಕಾರ ದೊರೆಯುತ್ತದೆ. ಸ್ಥಿರಾಸ್ತಿ ಮಾಡುವ ವಿಚಾರದಲ್ಲಿ ಸಾಕಷ್ಟು ಎಚ್ಚರಿಕೆಯನ್ನು ತೆಗೆದುಕೊಳ್ಳಿ. ತೆರಿಗೆ ತಜ್ಞರಿಗೆ ಈಗ ಪದೋನ್ನತಿ ದೊರೆಯುತ್ತದೆ. ನೂತನ ವಾಹನ ಖರೀದಿ ಬಗ್ಗೆ ಸಾಕಷ್ಟು ಚಿಂತನೆ ಮಾಡುವಿರಿ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಗೌರವಯುತವಾದ ನಡವಳಿಕೆ ನಿಮ್ಮಲ್ಲಿ ಇರುತ್ತದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಆಸ್ತಿ ಮಾರಾಟಗಾರರಿಗೆ ನಿರೀಕ್ಷಿತ ಲಾಭವಿರುವುದಿಲ್ಲ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶ ದೊರೆಯುತ್ತದೆ. ನರ ಸಂಬಂಧಿ ದೋಷಗಳು ಕೆಲವರನ್ನು ಕಾಡಬಹುದು. ಸಂಗಾತಿಯ ಆದಾಯದಲ್ಲಿ ಹೆಚ್ಚಳ ಕಾಣಬಹುದು. ವ್ಯವಹಾರದಲ್ಲಿ ಹೊಸ ವ್ಯಕ್ತಿಗಳಿಂದ ಸಹಕಾರ ದೊರೆಯುತ್ತದೆ. ಸಂಗೀತ ವಿದ್ವಾಂಸರುಗಳಿಗೆ ಪುರಸ್ಕಾರ ದೊರೆಯುವ ಸಾಧ್ಯತೆಯಿದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಮನಸ್ಸಿನಲ್ಲಿ ಯಾವುದೋ ರೀತಿಯ ಚಿಂತೆ ಕಾಡುತ್ತದೆ. ಆದಾಯವು ಮಧ್ಯಮ ಗತಿಯಲ್ಲಿರುತ್ತದೆ. ಹಿರಿಯರ ಸಹಕಾರ ದೊರೆಯುವುದು ಕಷ್ಟ. ಕಣ್ಣಿನ ದೋಷಗಳು ಕೆಲವರನ್ನು ಕಾಡಬಹುದು. ಆಸ್ತಿ ಮಾಡುವ ಉತ್ಸಾಹ ಹೆಚ್ಚುತ್ತದೆ. ಸಂಗಾತಿಯು ಕುಟುಂಬಕ್ಕಾಗಿ ಹೆಚ್ಚು ಶ್ರಮ ವಹಿಸುವರು. ವಿದ್ಯಾರ್ಥಿಗಳಿಗೆ ನಿರೀಕ್ಷಿಸಿದ ಯಶಸ್ಸು ದೊರೆಯುತ್ತದೆ. ನೌಕರಿಯಲ್ಲಿರುವವರಿಗೆ ಸಹೋದ್ಯೋಗಿಗಳಿಂದ ಕಿರಿಕಿರಿ ಉಂಟಾಗುವ ಸಾಧ್ಯತೆಯಿದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಧರ್ಮ ಕಾರ್ಯಗಳನ್ನು ಮಾಡುವ ಬಗ್ಗೆ ಹೆಚ್ಚು ಒಲವನ್ನು ತೋರುವಿರಿ. ಹಿರಿಯರು ಮಕ್ಕಳೊಂದಿಗೆ ವಾದವಿವಾದಗಳನ್ನು ಮಾಡದಿರುವುದು ಉತ್ತಮ. ಸ್ತ್ರೀಯರೊಂದಿಗೆ ಆರ್ಥಿಕ ವ್ಯವಹಾರವನ್ನು ಮಾಡುವಾಗ ಎಚ್ಚರಿಕೆ ಇರಲಿ. ಆದಾಯವು ಮಧ್ಯಮ ಗತಿಯಲ್ಲಿರುತ್ತದೆ. ಉದ್ದಿಮೆಯೊಂದರ ಸ್ಥಾಪನೆಗೆ ಬೇಕಾದ ಪರವಾನಗಿಗಳನ್ನು ಪ್ರಯತ್ನ ಪಟ್ಟು ಪಡೆಯಬಹುದು. ಜಮೀನು ವ್ಯವಹಾರಗಳಲ್ಲಿ ತಲೆಹಾಕದಿರುವುದು ಬಹಳ ಉತ್ತಮ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಆದಾಯವು ಮಧ್ಯಮ ಗತಿಯಲ್ಲಿರುತ್ತದೆ. ಸ್ಥಿರಾಸ್ತಿಯನ್ನು ಮಾಡಿಕೊಳ್ಳುವ ಯೋಗವಿದೆ. ಉನ್ನತ ಶಿಕ್ಷಣ ಮಾಡಬೇಕೆನ್ನುವವರ ಆಸೆಗೆ ಹಿನ್ನಡೆಯಾಗಬಹುದು. ವಾದ-ವಿವಾದಗಳಲ್ಲಿ ನಿಮಗೆ ಯಶಸ್ಸು ದೊರೆಯುತ್ತದೆ. ಯಂತ್ರೋಪಕರಣಗಳ ವ್ಯಾಪಾರ ಮಾಡುವವರಿಗೆ ವ್ಯಾಪಾರ ವೃದ್ಧಿಸುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಬಣ್ಣ ಬಣ್ಣದ ಮಾತುಗಳಿಂದ ಜನಬೆಂಬಲ ಪಡೆಯಲೆತ್ನಿಸುವಿರಿ. ಆದಾಯವು ಸಾಮಾನ್ಯ ಗತಿಯಲ್ಲಿರುತ್ತದೆ. ಖರ್ಚು ಹೆಚ್ಚಾಗುವ ಸಂದರ್ಭಗಳಿವೆ. ಸಂಗಾತಿಯ ವಾದ ವಿವಾದಗಳಿಂದಾಗಿ ಸಾಕಷ್ಟು ಬೇಸರ ಮೂಡಬಹುದು. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಅಲ್ಪ ಯಶಸ್ಸು ಇರುತ್ತದೆ. ಸಂಪೂರ್ಣವಾಗಿ ತಾವೇ ಕುಟುಂಬವನ್ನು ನಡೆಸುತ್ತಿರುವ ಮಹಿಳೆಯರಿಗೆ ಉತ್ತಮ ಗೌರವ ಸಿಗುತ್ತದೆ. ರಾಸಾಯನಿಕ ವಸ್ತುಗಳನ್ನು ತಯಾರಿಸುವವರಿಗೆ ಬೇಡಿಕೆ ಹೆಚ್ಚುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ನಿಮ್ಮ ಬುದ್ಧಿವಂತಿಕೆ ಮತ್ತು ವಿವೇಚನೆಯನ್ನು ಬಳಸಿ ಕೆಲಸ ಮಾಡುವಿರಿ. ಅನಿರೀಕ್ಷಿತ ಮೂಲದಿಂದ ಹಣ ದೊರೆತು ಸಂತಸವಾಗುವುದು. ಕೃಷಿಯಿಂದ ಹೆಚ್ಚು ಆದಾಯ ಬರುತ್ತದೆ. ಶತ್ರುಗಳನ್ನು ಸಾಕಷ್ಟು ಕಾಡುವಿರಿ. ಕೆಲವು ಹಂಗಾಮಿ ಮಹಿಳಾ ಉದ್ಯೋಗಿಗಳಿಗೆ ಉದ್ಯೋಗ ಖಾಯಂ ಆಗಬಹುದು. ಗೃಹಾಲಂಕಾರ ವಸ್ತುಗಳನ್ನು ಕೊಳ್ಳುವ ಯೋಗವಿದೆ. .ಕೃಷಿ-ವಿಷಯದಲ್ಲಿ ನೂತನ ವಿಧಾನಗಳನ್ನು ಅಳವಡಿಸಿಕೊಂಡು ಪ್ರಯೋಗಶೀಲರಾಗುವಿರಿ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ನಿಮ್ಮ ವ್ಯಕ್ತಿತ್ವದಲ್ಲಿ ಹೊಸ ಚೇತನವನ್ನು ಕಾಣಬಹುದು. ಆದಾಯವು ಕಡಿಮೆ ಇದ್ದರೂ ನಿಭಾಯಿಸುವ ಶಕ್ತಿ ಇರುತ್ತದೆ. ಬಂಧುಗಳ ಸಹಕಾರ ಕೇಳಬೇಡಿ. ವ್ಯವಸಾಯದಲ್ಲಿ ತೊಡಗಿಸಿಕೊಂಡಿರುವವರಿಗೆ ಸಹಾಯಧನ ಹರಿದು ಬರುತ್ತವೆ. ಬಂಧುಗಳ ಮಧ್ಯಪ್ರವೇಶದಿಂದಾಗಿ ಪ್ರೇಮ ಪ್ರಕರಣಗಳು ಯಶಸ್ಸನ್ನು ಕಾಣುತ್ತವೆ. ವಿದ್ಯಾರ್ಥಿಗಳಿಗೆ ಸಾಮಾನ್ಯ ಫಲಿತಾಂಶವಿರುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಬಹಳ ಸಂಯಮದಿಂದ ಇರುವಿರಿ. ಆದಾಯವು ಕಡಿಮೆ ಇರುತ್ತದೆ. ವಿದೇಶಿ ವ್ಯವಹಾರ ಮಾಡುವವರ ಆದಾಯ ಹೆಚ್ಚುತ್ತದೆ. ವಿದೇಶಿ ಭಾಷಾಬೋಧಕರಿಗೆ ಸೂಕ್ತ ಅವಕಾಶಗಳು ದೊರೆಯುತ್ತವೆ. ಕೃಷಿಯಿಂದ ಆದಾಯ ಕಡಿಮೆ. ವಿದ್ಯಾರ್ಥಿಗಳು ಶ್ರಮಪಟ್ಟು ಓದಲೇಬೇಕು. ವ್ಯವಹಾರಗಳಿಂದ ನಿಮ್ಮ ಸಂಪರ್ಕವನ್ನು ವೃದ್ಧಿ ಮಾಡಿಕೊಳ್ಳುವಿರಿ. ಲೆಕ್ಕಪರಿಶೋಧಕರಿಗೆ ಬಿಡುವಿಲ್ಲದ ಕೆಲಸದೊಂದಿಗೆ ಆದಾಯವೂ ಹೆಚ್ಚುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ. ಯುವಕರು ಉಡಾಫೆ ಮಾತಿನಿಂದ ಅಧಿಕಾರಿಗಳ ಕೆಂಗಣ್ಣಿಗೆ ಗುರಿಯಾಗಬಹುದು. ನ್ಯಾಯಾಲಯ ಸಂಬಂಧಿ ವ್ಯವಹಾರಗಳಲ್ಲಿ ಯಶಸ್ಸನ್ನು ಕಾಣಬಹುದು. ಸ್ವ ಉದ್ಯೋಗಸ್ಥರ ಆದಾಯದಲ್ಲಿ ಹೆಚ್ಚಳವನ್ನು ಕಾಣಬಹುದು. ಆರೋಗ್ಯ ಕ್ಷೇತ್ರದಲ್ಲಿ ಕೆಲಸ ಮಾಡುವವರ ಆದಾಯದಲ್ಲಿ ಹೆಚ್ಚಳವಾಗುತ್ತದೆ. ಕುಟುಂಬ ಸಮೇತರಾಗಿ ಧಾರ್ಮಿಕ ಕಾರ್ಯದಲ್ಲಿ ಪಾಲ್ಗೊಳ್ಳುವಿರಿ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಅತಿಯಾಗಿ ಕೆಲಸ ಮಾಡಬೇಕಾದೀತು. ಆದಾಯವು ಏರಿಕೆ ಹಾದಿಯನ್ನು ಕಾಣುತ್ತದೆ. ವೃತ್ತಿಯಲ್ಲಿ ಆದಾಯ ಹೆಚ್ಚುತ್ತದೆ. ನೀವಾಗಿಯೇ ಬಂಧುಗಳ ವಿರೋಧವನ್ನು ಕಟ್ಟಿಕೊಳ್ಳುವಿರಿ. ಆಸ್ತಿ ಮಾಡುವ ವಿಚಾರದಲ್ಲಿ ಶುಭ ಸೂಚನೆ ಇರುತ್ತದೆ. ವಿದ್ಯಾರ್ಥಿಗಳಿಗೆ ಹೆಚ್ಚು ಅನುಕೂಲವಿರುತ್ತದೆ. ಮಕ್ಕಳ ಆರೋಗ್ಯದಲ್ಲಿ ಸಾಕಷ್ಟು ವ್ಯತ್ಯಾಸಗಳನ್ನು ಕಾಣಬಹುದು.


ಪದಬಂಧ 2923

ಮೇಲಿನಿಂದ ಕೆಳಕ್ಕೆ

1.ಒಳ್ಳೆಯ ಪ್ರಗತಿಯನ್ನು ಕವಿ ಬಣ್ಣಿಸುವ ಪರಿ 4
2. ದೇವರಿಗೆ ಪೂಸುವ ಶ್ರೇಷ್ಠ ಗಂಧ 5
3. ತಿಂಗಳಿಗೊಮ್ಮೆ ಅಚ್ಚಾಗಿ ಓದುಗರ ಕೈಸೇರುವ ಸಂಚಿಕೆ 5
4. ನಾಚಿಕೆಯಿಂದ ತಲೆತಗ್ಗಿಸಿದ ಮುಖ 4
6. ಕೃಷ್ಣ ಅರ್ಜುನನಿಗೆ ನೀಡಿದ ವಿರಾಟ್ ಪ್ರಪಂಚದ ಆಕಾರ ದರ್ಶನ 4
8. ತೀರಾ ಹೃದಯವಿದ್ರಾವಕ ದುಃಖದ ಸಂದರ್ಭ 5
10. ಅಷ್ಟಾಂಗ ಯೋಗದಲ್ಲಿ ಮೊದಲೆರಡು ಶಿಸ್ತಿನ ಮಜಲು 5
12. ಕನ್ನಡದ ವಾಸ್ತವ ಏರಿಳಿತವಾದಾಗ ತೆಲುಗಿನವ ಬರುವೆಯಾ ಎಂದು ಕೇಳಬಹುದು? 3
13. ಮೂರು ಗಾಲಿಗೆ ಸುಸಂಸ್ಕೃತ ನಾಮ 3
14. ಸಾಂಬಾರದ ಕಹಿ ಪಾಯಸದ ಸಿಹಿ ಪದಾರ್ಥಗಳ ವಿನಿಮಯದ ವಿವಾಹವಿಧಿ 5
16. ಹಣಕಟ್ಟಿದರೂ ಮತ್ತೆ ಕಟ್ಟಬೇಕಾಗಬಹುದು 5
17. ಈ ಮಾಲೆ ಕೊರಳಿಗೆ ಬಿದ್ದರೆ ತಿನ್ನುವುದು ಕಡಿಮೆಯಾಗಬೇಕು 4
19. ಸಾವಿನೊಡೆಯನ ಬಾಗಿಲು 4

ಎಡದಿಂದ ಬಲಕ್ಕೆ

1ಏಳು ಮಾತು ಏಳು ಹೆಜ್ಜೆ, ಜೀವನದ ಬೆಸುಗೆ 4
3. ಪಕ್ಷದ ಋತು ಇಬ್ಬನಿಯ ಸಮಯ 4
5. ಒಬ್ಬನ ನಡೆ-ನುಡಿ-ನಡತೆಯಲ್ಲಿನ ಬೆಳವಣಿಗೆ 5
7. ಯಾವಾಗಲೂ ಸಂತೋಷದಿಂದಿರುವವ 4
9. ಮುಕ್ಕಣ್ಣನಿಗೊಂದು ಪರ್ಯಾಯನಾಮ 4
11. ಹೊಸದಾಗಿ ಅಚ್ಚಾದ ಸುದ್ದಿ ಸಮಾಚಾರದ ಪೇಪರ್ 5
14. ಬದುಕಿನ ರೀತಿ ಹೀಗಿರುತ್ತದಲ್ಲ 5
17. ಅತಿಯನ್ನು ಅಂತ್ಯವಾಗಿಸದೆ ಪರಿಮಿತಿಯನ್ನು ದಾಟಿ ಹೋಗುತ್ತಿರುವಾಗ ಹೇಳುವ ಮಾತು 4
18. ಎಲ್ಲವೂ ಮಹಾಶಿವನ ತತ್ವದಿಂದ ತುಂಬಿಹೋಗಿದೆ 4
20. ಜೊತೆಯಾಗಿ ಸೇರಿಹೋದ ಪ್ರಾಣಕ್ಕೆ ಸಿನಿಮೀಯ ಲೇಪ 5
21. ಸಿಹಿದ್ರವದಲ್ಲಿ ತೇಲಾಡುವ ಗೋಲಾಕಾರದ ಕೆನೆಹಾಲು ಬಾಂಗ್ಲಾ ಮಂದಿಗೆ ಅತಿ ಪ್ರೀತಿ 4
22. ಅಲ್ಪ ಖಾರವಾಗುವ ಕಡೆಗಣಿಸುವಿಕೆ 4



ಪದಬಂಧ ಉತ್ತರ -2922

ಮೇಲಿಂದ ಕೆಳಕ್ಕೆ

1.ವಿವಾಹ 2.ನವನವೀನ 3.ಸಹಜನಗು 4.ಮಿನುಗು 7.ವರ್ಧನ 11.ಲಾಯರು 13.ಮಾನಸ 15.ಗರತಿಹಾಡು 16.ಅರವಳಿಕೆ 17.ಶಾರದ 19.ಪಾನಕ 21.ಜರಡಿ

ಎಡದಿಂದ ಬಲಕ್ಕೆ

1. ವಿದೇಶಯಾನ 3.ಸಪ್ತಮಿ 5.ವಸ್ತುಸಂಗ್ರಹ 6.ಹಯವದನ 8.ಜಿನುಗು 9.ವೀಣಾವಾದನ 10.ಜಲಾನಯನ 12.ಗುಮಾನಿ 14.ಮರುಗ 16.ಅನುಶಾಸನ 18.ರವಿವಾಸರ 19.ಪಾರ್ವತಿ 20.ವರದರಾಜ 22.ಹಾಸುಗಂಬಳಿ 23.ಕರಡು 24.ಕೆಡಕುನುಡಿ

‘ಹೊಸ ಬಗೆಯ ಸಂಗೀತ ಸೃಷ್ಟಿಗೆ ಪ್ರಯತ್ನಿಸಿದ್ದೇನೆ’



• ಉಮಾ ಅನಂತ್

ಸಂತೂರ್ ನಾದ ಮಂದ್ರದಲ್ಲಿ ಜುಳುಜುಳು ಹರಿಯುವ ನದಿಯಂತೆ. ತಾರಕಕ್ಕೇರಿದರೆ ಇದು ಭೋರ್ಗರೆಯುವ ಜಲಪಾತದಂತೆ. ಮಂದ್ರ-ಮಧ್ಯ-ತಾರಕ ಸ್ಥಾಯಿಯಲ್ಲಿ ಪ್ರಚಲಿತ ರಾಗಗಳನ್ನು ಲೀಲಾಜಾಲವಾಗಿ ನುಡಿಸುವುದನ್ನು ಕೇಳುವುದೇ ಕಿವಿಗಳಿಗೆ ಹಬ್ಬ. ಇದೇ ಸಂತೂರ್ ನಾದಝರಿಯನ್ನು ಉಣಬಡಿಸುವುದರಲ್ಲಿ ಸಂತೂರ್ ಮಾಂತ್ರಿಕರಾಗಿದ್ದ ಪಂ. ಶಿವಕುಮಾರ್ ಶರ್ಮಾ ಅವರ ಪುತ್ರ ಹಾಗೂ ಶಿಷ್ಯ ರಾಹುಲ್ ಶರ್ಮಾ ಅವರೂ ತಂದೆಯಂತೆಯೇ ಸಿದ್ಧಹಸ್ತರು.

ಉತ್ತರ್-ದಕ್ಷಿಣ್ ಸಂಗೀತೋತ್ಸವ ಅಂಗವಾಗಿ ಕಾಶ್ಮೀರ ಮೂಲದ ಸಂತೂರ್ ವಾದಕ ರಾಹುಲ್ ಶರ್ಮಾ ಅವರ ಸೋಲೊ ಕಛೇರಿ ಬೆಂಗಳೂರಿನ ಚೌಡಯ್ಯ ಹಾಲ್‌ನಲ್ಲಿ ಡಿ. 21 ರಂದು ಸಂಜೆ 6 ಗಂಟೆಗೆ ಆಯೋಜಿಸಲಾಗಿದೆ. ಈ ಹಿನ್ನೆಲೆಯಲ್ಲಿ ರಾಹುಲ್ ಶರ್ಮಾ ಅವರು ‘ಭಾನುವಾರದ ಪುರವಣಿ’ಯೊಂದಿಗೆ ಸಂತೂರ್ ನುಡಿಸಾಣಿಕೆಯ ವೈಶಿಷ್ಟ್ಯವನ್ನು ಹಂಚಿಕೊಂಡಿದ್ದಾರೆ.

• **ನಿಮ್ಮ ತಂದೆ ಪಂ. ಶಿವಕುಮಾರ್ ಶರ್ಮಾ ಸಂತೂರ್‌ನಲ್ಲಿ ಚಮತ್ಕಾರ ತೋರಿಸುತ್ತಿದ್ದರು. ವಿಶ್ವದಾದ್ಯಂತ ಸಂತೂರ್ ನಾದ ಪಸರಿಸಿದ ನಿಮ್ಮ ತಂದೆಯವರ ನುಡಿಸಾಣಿಕೆ ನಿಮ್ಮ ಮೇಲೆ ಎಷ್ಟರಮಟ್ಟಿಗೆ ಪ್ರಭಾವಿಸಿದೆ?**

ಭಾರತೀಯ ಸಂಗೀತದಲ್ಲಿ ಅದರಲ್ಲೂ ಸಂತೂರ್ ವಾದನದ ಪ್ರವರ್ತಕರೆಂದರೆ ಪಂ. ಶಿವಕುಮಾರ್ ಶರ್ಮಾ. ಅವರೇ ನನ್ನ ಗುರು. ಅವರ ಸಂಗೀತ ಮಾರ್ಗದರ್ಶನದೊಂದಿಗೆ ನಾನು ಸಂತೂರ್‌ನಲ್ಲಿ ಪ್ರಯೋಗಶೀಲ ಗುಣ ಬೆಳೆಸಿಕೊಂಡಿದ್ದೇನೆ. ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತವಲ್ಲದೆ ಸಿಂಫೊನಿ, ಎಲೆಕ್ಟ್ರಾನಿಕಾ, ಜಾಸ್‌ನಂತಹ ಹೊಸ ಪ್ರಕಾರಗಳಲ್ಲಿಯೂ ಸಂತೂರ್ ಅನ್ನು ಪ್ರಯೋಗಿಸಿ ಹೊಸ ಕೇಳುಗರನ್ನು ಸೃಷ್ಟಿಸಿದ್ದೇನೆ. ತಂದೆಯವರ ಜೊತೆಗೆ ವಿಶ್ವದಾದ್ಯಂತ ಅನೇಕ ಸಂತೂರ್ ಕಛೇರಿಗಳಲ್ಲಿ ನುಡಿಸಿ ಅವರ ವಾದನ ಶೈಲಿಯನ್ನು ನನ್ನ ಶೈಲಿಯೊಂದಿಗೆ ಬೆಸೆದು ಹೊಸದೊಂದು ಸಂಗೀತ ಸೃಷ್ಟಿಯಾಗುವಂತೆ ಪ್ರಯತ್ನಿಸಿದ್ದೇನೆ. ಇದು ನಮ್ಮ ತಂದೆಯವರ ಪ್ರಭಾವದಿಂದಲೇ ಎಂಬುದನ್ನು ಹೇಳಬಲ್ಲೆ.

• **ಸಂತೂರ್ ವಾದನದಲ್ಲಿ ಮನೋಧರ್ಮ ಸಂಗೀತದ ಅಭಿವ್ಯಕ್ತಿಯ ಬಗ್ಗೆ ಹೇಳಿ.**

ಸಂತೂರ್‌ನಲ್ಲಿ ಮನೋಧರ್ಮ ಸಂಗೀತ ಎಂದರೆ ಅದು ಹಿಂದೂಸ್ತಾನಿ ಸಂಗೀತದ ಇತರ ವಾದನ ಪ್ರಕಾರಗಳಂತೆಯೇ. ಸಂತೂರ್ ನುಡಿಸಾಣಿಕೆಯಲ್ಲಿ ತಂತ್ರಕಾರಿ ಅಂಶಗಳಾದ ಗಮಕ, ಮೀಂಡ್, ಆಂದೋಲನ್‌ಗಳಲ್ಲಿ ಪ್ರಯೋಗ ಮಾಡಬಹುದು. ಕಷ್ಟಕರ ರಾಗಗಳನ್ನೂ, ಪ್ರಹರ ರಾಗಗಳನ್ನೂ ಲೀಲಾಜಾಲವಾಗಿ ನುಡಿಸಬಹುದು. ನಮ್ಮ ಚಾಕಚಕ್ಯತೆ ಹಾಗೂ ನುಡಿಸಾಣಿಕೆಯಲ್ಲಿ ಪ್ರಾವೀಣ್ಯತೆ ಅಭಿವ್ಯಕ್ತವಾಗುವುದು ಮನೋಧರ್ಮ ಸಂಗೀತದಲ್ಲೇ. ರಾಗಾಲಾಪ, ರಾಗ ವಿಸ್ತರಣೆ, ರಾಗದ ವಿಲಂಬಿತ್, ಧೃತ್... ಹೀಗೆ ಎಲ್ಲದರಲ್ಲೂ ಹೊಸತನವನ್ನು ತರುವುದು ಸವಾಲಿನ ಕೆಲಸ. ಇದರಲ್ಲಿ ಯಶಸ್ಸು ಗಳಿಸಿದರೆ ಒಬ್ಬ ವಾದಕನ ಸಂತೂರ್ ಕಛೇರಿ ಯಶಸ್ವಿಯಾದಂತೆಯೇ.

• **ನೂರು ತಂತಿಗಳ ಕಾಶ್ಮೀರಿ ಸಂತೂರ್ ವಾದನದಲ್ಲಿ ನಿಮ್ಮ ‘ಸಂಗೀತ ಕೃಷಿ’ ಹೇಗೆ ಸಾಗಿದೆ?**

ನಾನು ಶಾಸ್ತ್ರೀಯ ಸಂಗೀತದೊಂದಿಗೆ ವಿಶ್ವ ಸಂಗೀತವನ್ನು ಬೆಸೆಯುವ ಪ್ರಯತ್ನವನ್ನು ಮಾಡುತ್ತಲೇ ಬಂದಿದ್ದೇನೆ. ಈ ತಂತಿ ವಾದ್ಯಕ್ಕೆ ಹೆಚ್ಚು ವಿಸ್ತಾರವಾದ ಸ್ವರ ಶ್ರೇಣಿಯನ್ನು ಪೋಣಿಸಿದ್ದೇನೆ. ನನ್ನ ಹದಿನೇಳನೇ ವಯಸ್ಸಿಗೆ ಸಂತೂರ್ ನುಡಿಸಲು ತಂದೆಯಿಂದ ಆರಂಭಿಸಿ ಅವರೊಂದಿಗೇ ಕಛೇರಿಯನ್ನೂ ನೀಡಲಾರಂಭಿಸಿದೆ. ತಬಲಾ ಮಾಂತ್ರಿಕ ಉಸ್ತಾದ್ ಜಾಕಿರ್ ಹುಸೇನ್ ಅವರೊಂದಿಗೆ, ವಿಶ್ವಪ್ರಸಿದ್ಧ ಸ್ಯಾಕ್ಸೋಫೋನ್ ವಾದಕ ಕೆನ್ನಿ ಜಿ (KENNY G) ಅವರೊಂದಿಗೆ ‘ನಮಸ್ತೆ ಇಂಡಿಯಾ’ ಎಂಬ ಆಲ್ಬಂ ಹೊರತಂದಿದ್ದೇನೆ. ಅಲ್ಲದೆ ಪಿಯಾನೊ ವಾದಕ ರಿಚರ್ಡ್ ಕ್ಲೇಡರ್‌ಮನ್ ‘ಕಾನ್‌ಫ್ಲ್ಯುಯೆನ್ಸ್ (CONFLUENCE) ಎಂಬ ವಿಶಿಷ್ಟ ಸಂಗೀತ ಆಲ್ಬಂ ಹೊರತಂದಿದ್ದು, ಇದು ವಿಶ್ವಮಟ್ಟದಲ್ಲಿ ಮನ್ನಣೆ ಪಡೆದಿದೆ. ಅಲ್ಲದೆ ನನ್ನದೇ ಸಂಗೀತ ಸಂಯೋಜನೆಯ ‘ಮ್ಯೂಸಿಕ್ ಆಫ್ ದಿ ಹಿಮಾಲಯಾಸ್’, ಟ್ರೀ ಆಫ್ ಟ್ರಾಂಕ್ವಿಲಿಟಿ’ ಎಂಬ ಎರಡು ವಿಶಿಷ್ಟ ಆಲ್ಬಂಗಳನ್ನು ಬಿಡುಗಡೆ ಮಾಡಿದ್ದು ಕೂಡ ಸಂತೂರ್ ವಾದನದಲ್ಲಿ ಮಾಡಿದ ಹೊಸ ಪ್ರಯತ್ನ ಎನ್ನಬಹುದು. ಅಲ್ಲದೆ 60ಕ್ಕೂ ಹೆಚ್ಚು ಲೈವ್ ಮತ್ತು ಸ್ಟುಡಿಯೊ ರೆಕಾರ್ಡಿಂಗ್ ಆಲ್ಬಂಗಳಿಗೆ ಸಂತೂರ್ ನುಡಿಸಿದ್ದೇನೆ.

• **ಸಂತೂರ್ ವಾದ್ಯ ಪರ್ಷಿಯನ್ ಮೂಲದ್ದಾದರೂ ಭಾರತದಲ್ಲಿ ಬಹಳ ಜನಪ್ರಿಯವಾಗಲು ಪಂ. ಶಿವಕುಮಾರ್ ಶರ್ಮಾ ಅವರೇ ಕಾರಣ. ಇದನ್ನು ಮುಂದುವರಿಸುವ ಜವಾಬ್ದಾರಿಯನ್ನು ಹೇಗೆ ನಿಭಾಯಿಸುವಿರಿ?**


ಸಂತೂರ್ ಒಂದು ವಿಶಿಷ್ಟ ವಾದ್ಯ ಪ್ರಕಾರ. ಇದು ಮರದ ಪೆಟ್ಟಿಗೆಯಂತಿದ್ದು ನೂರಕ್ಕೂ ಹೆಚ್ಚು ತಂತಿಗಳಿದ್ದವು. ನಮ್ಮ ತಂದೆ ಇದಕ್ಕೆ 93 ತಂತಿಗಳನ್ನು ಮಾತ್ರ ಅಳವಡಿಸಿ ಶಾಸ್ತ್ರೀಯ ಸಂಗೀತ ರಾಗಗಳನ್ನು ನುಡಿಸುತ್ತಿದ್ದರು. ನಾನೂ ಅದನ್ನೇ ಮುಂದುವರಿಸಿಕೊಂಡು ಹೋಗುತ್ತಿದ್ದೇನೆ. ಇದರ ನುಡಿಸಾಣಿಕೆ ಕ್ರಮವೂ ವಿಭಿನ್ನ. ಕುಳಿತುಕೊಂಡು ವಾದ್ಯವನ್ನು ಮಡಿಲಲ್ಲಿಟ್ಟು ಎರಡು ಕೈಗಳಲ್ಲಿ ಮೃದುವಾದ ಮರದ ಕಡ್ಡಿಗಳಿಂದ (ಮೆಜ್ರಾಬ್) ತಂತಿಗಳ ಮೇಲೆ ಒತ್ತಡ ಹಾಕುವ ಮೂಲಕ ಸ್ವರಗಳನ್ನು ನುಡಿಸಲಾಗುತ್ತದೆ. ತಂದೆಯವರು ಮಾಡಿದ ಪ್ರಯೋಗಗಳಲ್ಲದೆ ನಾನು ಜನಪದ ಸಂಗೀತ, ಜಾಸ್, ಗಜಲ್‌ಗಳನ್ನೂ ಈ ವಾದ್ಯದಲ್ಲಿ ನುಡಿಸುತ್ತೇನೆ. ವಿದೇಶಿ ಸಂಗೀತಗಾರರೊಂದಿಗೆ ಸೇರಿ ಫ್ಯೂಷನ್ ಅನ್ನೂ ನುಡಿಸಿ ದೇಶ ವಿದೇಶಗಳಲ್ಲಿ ಸಂತೂರ್ ನಾದನದಿ ಪ್ರವಹಿಸುವಂತೆ ಮಾಡುವುದು ನನ್ನ ಉದ್ದೇಶ.

• **ಯುವ ಕಲಾವಿದರಿಗೆ ನಿಮ್ಮ ಸಲಹೆ ಏನು?**

ಯುವ ಸಂಗೀತಗಾರರು ಆರಂಭದಲ್ಲೇ ಸರಿಯಾದ ಗುರುವನ್ನು ಕಂಡುಕೊಳ್ಳಬೇಕು. ಸಂತೂರ್ ಕಲಿಯಬೇಕಾದರೆ ಉತ್ತಮ ಸ್ವರ ಜ್ಞಾನ ಅತ್ಯಗತ್ಯ. ಕಠಿಣ ಪರಿಶ್ರಮವನ್ನೂ ನಿರೀಕ್ಷಿಸುತ್ತದೆ ಈ ವಾದ್ಯ. ಸಮರ್ಪಿತ, ಶಿಸ್ತುಬದ್ಧ ಸಂಗೀತ ಕಲಿಯುವುದರಿಂದ ಸಂಗೀತ ಜೀವನವೂ ಸುಗಮವಾಗುತ್ತದೆ. ಸತತ ಪರಿಶ್ರಮದಿಂದ ಯಶಸ್ಸು ಸಿಕ್ಕೇ ಸಿಗುತ್ತದೆ. ❖


ಅಪರೂಪದ ಕಲಾವಿದ ಎನ್.ಸಿ.ದೇಸಾಯಿ

• ರಾಹುಲ ಬೆಳಗಲಿ



‘**ನಾನಾ ಸಾಹೇಬ್** ಚಿದಂಬರಗೌಡ ಬಹದ್ದೂರ ದೇಸಾಯಿ ಅವರದ್ದು ಚಿತ್ರಕಲಾ ಕ್ಷೇತ್ರದಲ್ಲಿ ದೊಡ್ಡ ಹೆಸರು. ಉತ್ತರ ಕರ್ನಾಟಕ ಭಾಗದ ಅಪರೂಪದ ಕಲಾವಿದರಲ್ಲಿ ಒಬ್ಬರಾಗಿದ್ದ ಅವರು, ಬಹುತೇಕ ಜನರ ಪಾಲಿಗೆ ಎನ್.ಸಿ.ದೇಸಾಯಿ ಎಂದೇ ಪ್ರಸಿದ್ಧರು. ದೀರ್ಘಕಾಲದವರೆಗೆ ಯೋಚಿಸಿ, ಇಂತಿಂಥ ಚೌಕಟ್ಟು ಹಾಕಿಕೊಂಡು ಕಲಾಕೃತಿಯನ್ನು ರಚಿಸಲು ಆರಂಭಿಸಿದರೆ ಸಾಕು, ಅದು ಪೂರ್ಣಗೊಳ್ಳುವವರೆಗೆ ತನ್ಮಯತೆ ಕಾಯ್ದುಕೊಳ್ಳುತ್ತಿದ್ದರು. ಅವರು ಅಕ್ಷರಶಃ ಕಲಾ ತಪಸ್ವಿಯಾಗಿದ್ದರು’.

ದೇಸಾಯಿ ಅವರ ಕಲಾಕೃತಿಗಳಲ್ಲಿನ ಸೂಕ್ಷ್ಮರೇಖೆಗಳು, ಬಣ್ಣಗಳ ವೈವಿಧ್ಯತೆ, ಕಲಾ ನೈಪುಣ್ಯತೆ ಮತ್ತು ಶ್ರದ್ಧೆಯನ್ನು ಹೀಗೆ ವಿವರಿಸಿದವರು ಕರ್ನಾಟಕ ಲಲಿತ ಕಲಾ ಅಕಾಡೆಮಿ ಸದಸ್ಯ ಬಸವರಾಜ ಕಲೆಗಾರ.



ಎನ್.ಸಿ.ದೇಸಾಯಿ

ದೇಸಾಯಿ ಅವರ ಜನ್ಮಶತಮಾನೋತ್ಸವದ ಪ್ರಯುಕ್ತ ಹುಬ್ಬಳ್ಳಿಯ ಶ್ರೀವಿಜಯ ಮಹಾಂತೇಶ ಲಲಿತ ಕಲಾ ಮಹಾವಿದ್ಯಾಲಯದಲ್ಲಿಈಚೆಗೆ ಏರ್ಪಡಿಸಲಾಗಿದ್ದ ದೇಸಾಯಿ ಅವರ ಕಲಾಕೃತಿಗಳ ಪ್ರದರ್ಶನ ಮತ್ತು ಮಾರಾಟದ ಸಂದರ್ಭದಲ್ಲಿ ಅವರ ಕಲಾಕೃತಿಗಳ ಮಹತ್ವವನ್ನು ಆತ್ಮೀಯವಾಗಿ ತಿಳಿಪಡಿಸಿದರು. ಶ್ರೇಷ್ಠ ಕಲಾವಿದ ಹೇಗೆ ಸರಳವಾಗಿ ಬದುಕಿದರು ಎಂಬದನ್ನೂ ಮಾತಿನಲ್ಲಿ ಕಟ್ಟಿಕೊಟ್ಟರು.

‘ದೇಸಾಯಿ ಅವರು ಗಂಟೆಗಳ ಲೆಕ್ಕದಲ್ಲಿ ಕೆಲಸ ಮಾಡುತ್ತಿರಲಿಲ್ಲ. ದಿನಗಟ್ಟಲೇ ಕಲೆಯನ್ನು ಧ್ಯಾನಿಸುತ್ತಿದ್ದರು. ಒಂದೇ ಕಡೆ ಗಂಟೆಗಟ್ಟಲೇ ಕೂತು ಕಲೆಗಾಗಿ ಸಮರ್ಪಿಸಿಕೊಳ್ಳುತ್ತಿದ್ದರು. ಅವರ ಕಲಾಕೃತಿಗಳು ಆಯಾ ಕಾಲಘಟ್ಟದ ಸಾಕ್ಷಿಪ್ರಜ್ಞೆ. ಅವು ದೇಶದ ಸಂಸ್ಕೃತಿಯ ಭಾಗವೂ ಹೌದು. ಅವುಗಳನ್ನು ರಕ್ಷಿಸಿ, ಮುಂದಿನ ಪೀಳಿಗೆಗೆ ತಲುಪಿಸಬೇಕಿದೆ’ ಎಂಬ ಕಾಳಜಿಯನ್ನು ಅವರು ವ್ಯಕ್ತಪಡಿಸಿದರು.

ಎನ್.ಸಿ.ದೇಸಾಯಿ ಅವರು ಕಲಾವಿದರಷ್ಟೇ ಆಗಿರಲಿಲ್ಲ. ಅವರು ಬಹುಭಾಷಾ ತಜ್ಞರಾಗಿದ್ದರು. ಬರಹಗಾರ, ವರ್ಣಚಿತ್ರಕಾರ, ಕಲಾ ವಿಮರ್ಶಕ, ಛಾಯಾಗ್ರಾಹಕರೂ ಆಗಿದ್ದರು. 50-60ರ ದಶಕದಲ್ಲೇ ಜಾಹೀರಾತು ಮತ್ತು ಸಂವಹನ ಕ್ಷೇತ್ರದಲ್ಲಿ ಛಾಪು ಮೂಡಿಸಿದ್ದರು. ಇದೆಲ್ಲಕ್ಕಿಂತ ಮುಖ್ಯವಾಗಿ, ಅವರು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದರು. ದೇಶವನ್ನು ಬ್ರಿಟಿಷರ ಆಳ್ವಿಕೆಯಿಂದ ಮುಕ್ತಗೊಳಿಸಲು ಶ್ರಮಿಸಿದ್ದರು.

ಎನ್.ಸಿ.ದೇಸಾಯಿ ಅವರು ಶಾಲಾ ಶಿಕ್ಷಣ ಪೂರ್ಣಗೊಳಿಸಲಿಲ್ಲ. ಆಗ ಮಹಾತ್ಮ ಗಾಂಧಿ ಅವರ ನೇತೃತ್ವದಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ಹೋರಾಟವು ಅವರ ಮೇಲೆ ಪ್ರಭಾವ ಬೀರಿತು. ಬ್ರಿಟಿಷರ ವಿರುದ್ಧ 1942ರಲ್ಲಿ ‘ಭಾರತ ಬಿಟ್ಟು ತೊಲಗಿ’ ಎಂದು ಗಾಂಧೀಜಿ ಕರೆ ಕೊಟ್ಟಿದ್ದನ್ನು ಗಂಭೀರವಾಗಿ ಪರಿಗಣಿಸಿ ಶಾಲಾ ಶಿಕ್ಷಣ ತ್ಯಜಿಸಿ, ಚಳವಳಿಗೆ ಧುಮ್ಮಿಕ್ಕಿದರು.

ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಸಿಕೊಂಡ ಬದ್ಧತೆ ಒಂದೆಡೆಯಿದ್ದರೆ, ಇನ್ನೊಂದೆಡೆ ಕಲಾಕ್ಷೇತ್ರದೆಡೆ ಹೆಚ್ಚಿನ ತುಡಿತವೂ ಇತ್ತು. ದೇಶ ಸ್ವಾತಂತ್ರ್ಯಗೊಂಡ ಮರುವರ್ಷವೇ ದೇಸಾಯಿ ಅವರು ಮುಂಬೈಗೆ ಪ್ರಯಾಣ ಬೆಳೆಸಿ, ಅಲ್ಲಿನ ಪ್ರೀಮಿಯರ್ ಆಟೋಮೊಬೈಲ್ಸ್ ಲಿಮಿಟೆಡ್ ಸಂಸ್ಥೆಯಲ್ಲಿ ವಿನ್ಯಾಸ ಕಲಾವಿದರಾಗಿ ಸೇರಿದರು. ಮೂರು ದಶಕಗಳು ಕಲಾವಿದರಾಗಿ ಕಾರ್ಯನಿರ್ವಹಿಸಿದ ಬಳಿಕ, ಪ್ರಚಾರ, ಜಾಹೀರಾತು ಮತ್ತು ಜನಸಂಪರ್ಕ ಕ್ಷೇತ್ರದಲ್ಲೂ ಹೆಚ್ಚಿನ ಆಸಕ್ತಿಯಿಂದ ತೊಡಗಿಸಿಕೊಂಡರು.

ಕಲೆಯನ್ನು ಮೇಲ್ಮಟ್ಟದಲ್ಲಿ ಅಧ್ಯಯನ ಮಾಡಿದರೆ ಅಥವಾ ಅರ್ಪಿಸಿಕೊಂಡರೆ ಸಾಲದು. ಅದನ್ನು ಶಿಸ್ತುಬದ್ಧತೆ ಮತ್ತು ಶಾಸ್ತ್ರೋಕ್ತವಾಗಿ ಕಲಿಯಬೇಕು ಎಂಬ ಉದ್ದೇಶದಿಂದ ಕಲಾ ಗುರು ಜಿ.ಎಸ್.ದಂಡಾವತಿಮಠ ಅವರ ಬಳಿ ಮಾರ್ಗದರ್ಶನ ಪಡೆದರು. ಅಲ್ಲಿನ ಪ್ರತಿಷ್ಠಿತ ಜೆ.ಜೆ. ಕಲಾ ಶಾಲೆಯಿಂದ ಲಲಿತ ಕಲೆ ಮತ್ತು ವರ್ಣಚಿತ್ರಕಲೆಯಲ್ಲಿ ಡಿಪ್ಲೊಮಾ ಪಡೆದರು.

ಬದುಕಿನ ಬಹುತೇಕ ವರ್ಷಗಳನ್ನು ಮುಂಬೈನಲ್ಲೇ ಕಳೆದ ಅವರು ಕಲೆಗಷ್ಟೇ ಸೀಮಿತಗೊಳ್ಳಲು ಇಷ್ಟಪಡಲಿಲ್ಲ. ಪತ್ರಿಕೋದ್ಯಮ ಕ್ಷೇತ್ರದತ್ತ ಒಲವು ತೋರಿದರು. ಮುಂಬೈನಲ್ಲಿನ ಕಲೆ ಮತ್ತು ಸಂಸ್ಕೃತಿ ಕುರಿತಾದ ಚಟುವಟಿಕೆಗಳು ಅದರಲ್ಲೂ ಮುಖ್ಯವಾಗಿ ಕನ್ನಡ ಸಂಘಸಂಸ್ಥೆಗಳು ಹಮ್ಮಿಕೊಳ್ಳುತ್ತಿದ್ದ ಕಾರ್ಯಕ್ರಮ, ಕಲಾ ಪ್ರದರ್ಶನ ಮುಂತಾದವುಗಳ ಬಗ್ಗೆ ಚಿತ್ರಗಳ ಸಹಿತ ವರದಿಗಳನ್ನು ಕನ್ನಡದ ಪತ್ರಿಕೆಗಳಿಗೆ ನೀಡುತ್ತಿದ್ದರು. ಕಲಾ ವಿಮರ್ಶೆ ಸೇರಿ ವಿವಿಧ ವಿಷಯಗಳ ಕುರಿತು ಲೇಖನಗಳನ್ನು ಬರೆಯುತ್ತಿದ್ದರು. ಅವರ ಹಲವಾರು ಛಾಯಾಚಿತ್ರಗಳು, ಕಲಾಕೃತಿಗಳು, ಬರಹಗಳು ಪ್ರಮುಖ ಕನ್ನಡ ದಿನ ಪತ್ರಿಕೆ, ವಾರ ಪತ್ರಿಕೆ, ಮಾಸ ಪತ್ರಿಕೆಗಳಲ್ಲಿ ಪ್ರಕಟಗೊಂಡವು.

ದೇಸಾಯಿ ಅವರು ತಮ್ಮ ಜೀವನದ ಕೊನೆಯ ಇಪ್ಪತ್ತು ವರ್ಷಗಳನ್ನು ಹುಬ್ಬಳ್ಳಿಯಲ್ಲಿ ಕಳೆದರು. ಕಲಾ ಸ್ಟುಡಿಯೊ ಸ್ಥಾಪಿಸಿದ ಅವರು, ಸಂವಹನ ಹಾಗೂ ಜಾಹೀರಾತು ಕಲೆಗೆ ಒತ್ತು ನೀಡಿದರು. ‘ದೃಶ್ಯ ಕಲಾ ಮಾಧ್ಯಮಕ್ಕೆ ಸೃಜನಾತ್ಮಕ ಸ್ಪರ್ಶ ನೀಡಬಹುದು’ ಎಂಬುದನ್ನು ಅವರು ತೋರಿಸಿಕೊಟ್ಟರು. ಹೊಸ ತಲೆಮಾರಿನ ಯುವಜನರಿಗೆ ಸ್ಫೂರ್ತಿಯಾದರು.



ವಿಯೆಟ್ನಾಂ ದೇಶದ ಗಣೇಶ



ಜಪಾನ್ ದೇಶದ ಗಣೇಶ

ಕಲೆಯಲ್ಲಿ ಆಧ್ಯಾತ್ಮದ ಒಲವು



ವಿವೇಕಾನಂದರ ಕಲಾಕೃತಿ

- ಎನ್.ಸಿ.ದೇಸಾಯಿ ಅವರ ಕಲಾಕೃತಿಗಳು ವಿವಿಧ ವಿಷಯ ಕುರಿತು ಬೆಳಕು ಚೆಲ್ಲಿದವು. ಎಲ್ಲಕ್ಕಿಂತ ಮಿಗಿಲಾಗಿ ಆಧ್ಯಾತ್ಮಿಕ ಚಿಂತನೆಯನ್ನೂ ಮೂಡಿಸಿದವು. 1956ರಿಂದ ಅವರು ದೇಶದ ವಿವಿಧೆಡೆ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನಗಳನ್ನು ನೀಡಿದರು. ಪ್ರತಿಷ್ಠಿತ ಕಲಾ ಗ್ಯಾಲರಿಗಳಿಗೆ ಸೀಮಿತಗೊಳ್ಳದೇ ಹುಬ್ಬಳ್ಳಿ, ಗದಗನಂತಹ ಊರುಗಳಲ್ಲಿಯೂ ಕಲಾಸಕ್ತರಿಗೆ ಕಲಾಕೃತಿಗಳನ್ನು ಪರಿಚಯಿಸಿದರು.
- ದೇಸಾಯಿ ಅವರ ‘ವಿಶ್ವವ್ಯಾಪಿ ಗಣಪತಿ’ ಅಥವಾ ‘ವಿದೇಶಗಳಲ್ಲಿ ವಿನಾಯಕ’ ಅಪರೂಪದ ಕಲಾ ಸರಣಿ ಆಗಿವೆ. ಜಗತ್ತಿನ ವಿವಿಧ ಸಂಸ್ಕೃತಿಗಳನ್ನು ಅಧ್ಯಯನ ಮಾಡಿ, ಗಣೇಶನನ್ನು ಚಿತ್ರಿಸಿದರು. ಥಾಯ್ಲೆಂಡ್, ಜಪಾನ್ ಮುಂತಾದ ದೇಶಗಳ ಸಾಂಸ್ಕೃತಿಕ ಹಿನ್ನೆಲೆಯೊಂದಿಗೆ ಗಣೇಶನಿಗೆ ವಿವಿಧ ರೂಪ ನೀಡಿದರು.
- 19ನೇ ಶತಮಾನದ ಸೊಲ್ಲಾಪುರದ ಸಂತ ಕಲಾವಿದ ಶುಭರಾಯನ ಕುರಿತು ಸಂಶೋಧನೆ ನಡೆಸಿದರು. ತಮ್ಮ ಬರಹ ಹಾಗೂ ಪ್ರಚಾರ ಕಾರ್ಯಗಳಿಂದ ಈ ಕಲಾವಿದನನ್ನು ಪುನರುಜ್ಜೀವನಗೊಳಿಸಿದರು. ಮಹಾರಾಷ್ಟ್ರದ ವರ್ಲಿ ಬುಡಕಟ್ಟುಗಳ ಜನಪದ ಕಲೆ ಕುರಿತು ಅಧ್ಯಯನ ಮಾಡಿದರು.
- 1999ರಲ್ಲಿ ಅವರು ಕರ್ನಾಟಕ ಲಲಿತ ಕಲಾ ಅಕಾಡೆಮಿ ಪ್ರಶಸ್ತಿ ಮತ್ತು ಕೇಂದ್ರ ಸರ್ಕಾರದ ಫೆಲೋಶಿಪ್‌ಗೆ ಪಾತ್ರರಾದರು.


ಜನನಿ ಹೆಣ್ಮಕ್ಕಳ ಬ್ಯಾಂಡ್...



ಕಾರ್ಯಕ್ರಮದಲ್ಲಿ ಶಮಿತಾ ಮಲ್ನಾಡ್ ಅವರ ಹಾಡಿಗೆ ಹೆಜ್ಜೆ ಹಾಕಿದ ಪ್ರೇಕ್ಷಕರು

10ನೇ ಪುಟದಿಂದ...

ಅಗತ್ಯಕ್ಕೆ ತಕ್ಕಂತೆ ಇರುತ್ತಾರೆ. ಅಮೆರಿಕ ಪ್ರವಾಸ ಸಂದರ್ಭದಲ್ಲಿ ಮೂವರು ವಾದ್ಯಗಾರರು ಮತ್ತು ಇಬ್ಬರು ಗಾಯಕರು ಇದ್ದರು. ಕರ್ನಾಟಕದಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಹತ್ತು ಮಂದಿ ವಾದ್ಯಗಾರ್ತಿಯರು ಇದ್ದರು.




‘ಯಾವುದೇ ಕೆಲಸಕ್ಕೂ ಮನೆಯಿಂದ ಮೊದಲು ಬೆಂಬಲ ಸಿಗಬೇಕು. ನನ್ನ ಈ ಪರಿಕಲ್ಪನೆಯನ್ನು ಮೊದಲು ತಿಳಿಸಿದ್ದು ಪತಿ ಅರುಣ್ ಅವರಿಗೆ. ಅವರು ಮರು ಯೋಚಿಸದೇ ಪ್ರೋತ್ಸಾಹ ನೀಡಿ, ಕೆಲವು ಸಲಹೆಯನ್ನೂ ನೀಡಿದರು. ಹೀಗಾಗಿ ಜನನಿ ಮಹಿಳಾ ಬ್ಯಾಂಡ್ ಹುಟ್ಟಿಕೊಂಡಿತು. ಹೆಣ್ಮಕ್ಕಳಿಗೆ ಮನೆಯಲ್ಲಿ ಬೆಂಬಲ ಸಿಕ್ಕರೆ ಗೆಲ್ಲುವ ಹುರುಪು ಬರುತ್ತದೆ. ತಂದೆ-ತಾಯಿ, ಮಕ್ಕಳು, ಸ್ನೇಹಿತರ ಬೆಂಬಲವೂ ಅಗತ್ಯ. ಅವರೆಲ್ಲರ ಪ್ರೋತ್ಸಾಹದಿಂದ ನನಗೆ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಾಯಿತು’ ಎನ್ನುತ್ತಾರೆ ಶಮಿತಾ.

ಕೆಲವೊಂದು ಆಲೋಚನೆಗಳು, ಕನಸುಗಳು ಕಾರ್ಯರೂಪಕ್ಕೆ ಬರುವವರೆಗೂ ಯಾರಿಗೂ ನಂಬಿಕೆ ಇರುವುದಿಲ್ಲ. ಅವುಗಳು ಸಾಕಾರವಾದಾಗಲೇ ನಂಬಿಕೆ, ಮೆಚ್ಚುಗೆ, ಅಭಿಮಾನ ಮೂಡುವುದು. ಈ ವಿಷಯದಲ್ಲಿ ಅಲ್ಪಕಾಲದಲ್ಲೇ ಜನನಿ ಮಹಿಳಾ ಬ್ಯಾಂಡ್ ಜನಪ್ರಿಯವಾಗುತ್ತಿರುವುದು ಇದಕ್ಕೆ ಸಾಕ್ಷಿ.

ಮೊದಲ ಓದು

ಗ್ರಾಮಭಾರತದ ಕುದುರೆ ಮೆರವಣಿಗೆ



ಕಬ್ಬಿಣದ ಕುದುರೆಗಳು
ಲೇ: ಹನೂರು ಚನ್ನಪ್ಪ
ಪ್ರ: ಜೋಳಿಗೆ
ಸಂ: 9845993527


ಹನೂರು ಚನ್ನಪ್ಪ, ತಮ್ಮ ಸೀಮೆಯ ದೇಸಿತನವನ್ನು ‘ಕಬ್ಬಿಣದ ಕುದುರೆಗಳು’ ಕಾದಂಬರಿಯಲ್ಲಿ ದುಡಿಸಿಕೊಂಡಿದ್ದಾರೆ. ವಿಸ್ತಾರ ಕಥಾ ಹಂದರದಲ್ಲಿ ವರ್ಗ-ವರ್ಣ ವ್ಯವಸ್ಥೆಗಳ ಭಿನ್ನ ಸ್ವರೂಪದ ತರತಮ ನೀತಿಯನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. ಆಹಾರದ ಆಯ್ಕೆಯ ಸ್ವಾತಂತ್ರ್ಯವನ್ನು ಸಮರ್ಥನೀಯವಾಗಿ ನಿಭಾಯಿಸಿದ್ದಾರೆ. ಆ ಮೂಲಕ ಆಹಾರ ಸಂಸ್ಕೃತಿ ಅನನ್ಯತೆಯನ್ನು ಚಿತ್ರಿಸಿದ್ದಾರೆ. ಗ್ರಾಮ ಸಮಾಜದ ಬಾಂಧವ್ಯದ ಬದುಕಿನ ಬೆಸುಗೆ ಇಲ್ಲಿ ಬಿಗಿಗೊಂಡಿರುವುದನ್ನು ಕಾಣಬಹುದು. ಮಾದೇಶ ಮತ್ತು ಮಾಲಿಂಗನಲ್ಲಿ ಶಿಕ್ಷಣ ಮೂಡಿಸಿದ ಪರಿವರ್ತನೆ ಮತ್ತು ಅವರ ವೈಚಾರಿಕ ಪ್ರಜ್ಞೆ ಕೂಡ ಸಮಾಜದ ಸಂಚಲನವನ್ನು ತೋರಿಸುತ್ತದೆ.

ಗ್ರಾಮ ದೇವತೆ ಮಾರಮ್ಮನ ಅವತಾರಗಳು ಕೂಡ ಸಾರವತ್ತಾಗಿ ಬಂದಿವೆ. ಊರ ಹೊರಗಿನ ದೇವಿಯ ಆರಾಧನೆ ಮತ್ತು ಪೂಜಾರಿ ಮೇಲೆ ದೇವಿ ಮೈದುಂಬುವ ಸನ್ನಿವೇಶ ಸೊಗಸಾಗಿದೆ. ಊಟೋಪಚಾರದಲ್ಲಿ ದೊಡ್ಕೇರಿ ಮತ್ತು ಚಿಕ್ಕೇರಿ ಜನರ ನಡುವೆ ಅಂತರ ಇದ್ದೇ ಇತ್ತು. ಆದರೆ ದೇವಿ ಸೇವೆಯನ್ನು ಇಬ್ಬರೂ ಸೇರಿಯೇ ಮಾಡಬೇಕು. ಈ ಸನ್ನಿವೇಶದಲ್ಲಿ; ‘ಹೆಂಡಬಾಡಿನ ವಿಚಾರದಲಿ ದೊಡ್ಡಕೇರಿನ ನಂಬಕಾಗಲ್ಲ, ಅಂತನೂ ಅವುರನ್ನ ನಾಮಲ್ಲ, ದೇವ್ರೆ ಬಂದ್ರೂ ಸಮಾದಾನ ಮಾಡಕ್ಕಾಗಲ್ಲ ಎಂತಲೂ ಅವರು ನಾಕು ವರ್ಷದ ಹಿಂದ ಕೋಣನ ಕೂದು ಪಂತಿಸೇವ ಮಾಡುತೀನಿ ಅಂತ ಹೋದವರು ಒಬ್ಬರಿಗೊಬ್ಬರು ಹೊಡದಾಡುಕೊಂಡು ಜೈಲಿನ ಕೋಣ ಸೇರ್ಕಂದು ಮೊನ್ನ ತಾನಾ ಈಚುಗ ಬಂದರಾ’ ಸಮಾಜದ ವಾಸ್ತವವನ್ನು ಹೀಗೆ ಕಲಾತ್ಮಕವಾಗಿ ಚಿತ್ರಿಸುತ್ತಾರೆ. ಮರಿ ಕಡಿಯುವ ಮುನ್ನ ಪೂಜಿಸಿ ಮುಡಿಸಿದ ಹೂವನ್ನು ಮರಿಗಳು ಪರಸ್ಪರ ಮೇಯುವ ಸನ್ನಿವೇಶ ಕ್ಷಣ ಮೌನಕ್ಕೆ ಜಾರಿಸುತ್ತದೆ.

ಚಾಮರಾಜನಗರ ಜಿಲ್ಲೆಯ ಜನಪದ ಧಾಟಿಯ ಭಾಷೆ ಆಕರ್ಷಣೀಯವಾಗಿ ನಿರೂಪಿತವಾಗಿದೆ. ಕಾದಂಬರಿಯ ಕಥನ ಶೈಲಿ ಕಾವ್ಯತ್ಮಕಗೊಂಡಿದ್ದು ಓದು ಮಾತ್ರವಲ್ಲದೆ ಹಾಡುವ ಗುಣವನ್ನೂ ಹೊಂದಿದೆ. ಸಮಾಜಮುಖಿ ಕಾಳಜಿಯ ತುಡಿತ ತನ್ನ ಜವಾಬ್ದಾರಿಯನ್ನು ಪೂರೈಸಿದೆ ಎನ್ನುವಂತೆ ಬಿಂಬಿತವಾಗಿದೆ. ಇಲ್ಲಿನ ಕಥಾ ಹಂದರಕ್ಕೆ ಪಾತ್ರಗಳೇ ಆಸರೆಯ ಕಂಭಗಳು.

ಪುಟ: 264 ₹325

ದುಡಿಯುವ ವರ್ಗಕ್ಕೆ ಸ್ವಾಭಿಮಾನ ತುಂಬಿದ ಬಡವರ ರಾಜಕುಮಾರ



ಬಡವರ ರಾಜಕುಮಾರ
ಲೇ: ಮಂಜುನಾಥ ಅದ್ದೆ
ಪ್ರ: ಕೌದಿ ಪ್ರಕಾಶನ
ಸಂ: 90086 60371

ಮನೆಮಂದಿ ಎಲ್ಲರೂ ಕುಳಿತು ನೋಡಬಹುದಾದ ಸದಭಿರುಚಿಯ ಸಾಮಾಜಿಕ ಚಿತ್ರಗಳ ಮೂಲಕ ಲೋಕಪ್ರಿಯರಾದವರು ಡಾ. ರಾಜಕುಮಾರ್. ಅವರ ಚಿತ್ರಗಳು ಯುವಕರಿಗೆ ಪ್ರೇರಣೆಯಾಗಿ, ಹಿರಿಯರು, ಮಕ್ಕಳು, ಮಹಿಳೆಯರಿಗೆ ಆಪ್ತವಾದವು. ಎಲ್ಲಾ ಜಾತಿ, ವರ್ಗಗಳ ಬಡವರ ಪರವಾದ ಆಶಯಗಳನ್ನು ಒಳಗೊಂಡ ಕಥೆಯುಳ್ಳ ಅವರ ಚಿತ್ರಗಳು ಅಂದಿನವರಿಗೆ ಮಾತ್ರವಲ್ಲ, ಇಂದಿನ ಕಿರಿಯರಲ್ಲೂ ಬದುಕಿನ ಕುರಿತು ಪ್ರೇರಣೆ ಮೂಡಿಸುತ್ತಿರುವುದು ಅಷ್ಟೇ ಸತ್ಯ.

ಇದೇ ವಸ್ತುವನ್ನು ಆಧರಿಸಿದ ಸಂಶೋಧನಾ ಪ್ರಬಂಧ ‘ಬಡವರ ರಾಜಕುಮಾರ’ ಕೃತಿ. ಪತ್ರಕರ್ತರೂ ಆಗಿರುವ ಮಂಜುನಾಥ ಅದ್ದೆ ಅವರು ಡಿ.ಲಿಟ್.ಗಾಗಿ ಬರೆದ ಕೃತಿ ಇದು.


ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿಗಳು ರೂಪಿಸಿದ ಸಂಪತ್ತಿನ ಕ್ರೋಡೀಕರಣ ಮತ್ತು ಅದರ ಪರಿಣಾಮಗಳನ್ನು ಆಧಾರವಾಗಿಟ್ಟುಕೊಂಡು ಡಾ. ರಾಜಕುಮಾರ್ ಅವರ ಸಂಪತ್ತಿಗೆ ಸವಾಲ್ ಸಿನಿಮಾವನ್ನು ಲೇಖಕರು ಈ ಕೃತಿಯಲ್ಲಿ ವಿಶ್ಲೇಷಿಸಿದ್ದಾರೆ. ಶ್ರಮಿಕ ವರ್ಗ ವಿಧೇಯರಾಗಿರಬೇಕು ಎಂಬುದನ್ನು ‘ಭದ್ರ’ ಎಂಬ ಸಿಡಿಗುಂಡಿನ ಯುವಕನ ಪಾತ್ರದ ಮೂಲಕ ಅಳಿಸಿಹಾಕಿ, ದುಡಿಯುವ ಜನರ ಸ್ವಾಭಿಮಾನ ಮತ್ತು ಆತ್ಮವಿಶ್ವಾಸವನ್ನು ಹೆಚ್ಚಿಸಿದವರು ಅವರು ಎಂದು ಲೇಖಕರು ತಮ್ಮ ಕೃತಿಯಲ್ಲಿ ದಾಖಲಿಸಿದ್ದಾರೆ.

ಸಾಮಾಜಿಕ, ಪೌರಾಣಿಕ, ಐತಿಹಾಸಿಕ, ಭಕ್ತಿ ಪ್ರಧಾನ, ಕ್ರಾಂತಿ ಹೀಗೆ ಎಲ್ಲಾ ಬಗೆಯ ಪಾತ್ರಗಳಲ್ಲೂ ರಾಜಕುಮಾರ್ ಅವರು ಅಭಿನಯಿಸಿದ್ದಾರೆ. ಪ್ರತಿ ಸಿನಿಮಾಗಳಲ್ಲೂ ನಿರ್ಲಕ್ಷಿತ ಸಮುದಾಯ, ವರ್ಗ, ಜಾತಿಗಳಿಗೆ ಸೇರಿದ ಪಾತ್ರಗಳಿಗೆ ಜೀವ ತುಂಬುವ ಮೂಲಕ ಬಹುಸಂಖ್ಯಾತ ನಿರ್ಲಕ್ಷಿತ ಜಾತಿ ಮತ್ತು ವರ್ಗಗಳ ಜನರಿಗೆ ನಾಯಕರಂತೆ ಕಂಡಿದ್ದಾರೆ. ಯಾವುದೇ ಆಲೋಚನಾ ಪ್ರೇರಿತ ಉದ್ದೇಶವಿಲ್ಲದೆ ಕೇವಲ ತಮ್ಮ ಕಸುಬು ಮತ್ತು ತಾನಿರುವ ಕ್ರಮದ ಮೂಲಕವೇ ಜಾತಿ, ವರ್ಗಗಳನ್ನು ಮೀರಿ ನಾಯಕರಾದವರು ಡಾ. ರಾಜಕುಮಾರ್.

ಡಾ. ರಾಜಕುಮಾರ್ ಅವರ ಅಧ್ಯಯನದಲ್ಲಿ ಕರ್ನಾಟಕದಲ್ಲಿ ಪ್ರಜಾತಂತ್ರ ಹಿನ್ನೆಲೆ, ಸಾಂಸ್ಕೃತಿಕ ನಾಯಕತ್ವ, ಸ್ವಾತಂತ್ರ್ಯಾನಂತರದ ಕರ್ನಾಟಕ ಮತ್ತು ಪ್ರಜಾತಂತ್ರದ ಸವಾಲುಗಳು, ಜನಭಾಷೆಯಾಗಿ ಚಲನಚಿತ್ರ, ಕರ್ನಾಟಕದ ಚಳವಳಿಗಳು ಮತ್ತು ರಾಜಕುಮಾರ್ ಹೀಗೆ ಹಲವು ಆಯಾಮಗಳಲ್ಲಿ ಲೇಖಕ ಮಂಜುನಾಥ ಅದ್ದೆ ಅವರು ಸಂಶೋಧಿಸಿ, ಇಲ್ಲಿ ದಾಖಲಿಸಿದ್ದಾರೆ.

ಪುಟ: 344 ₹400

ಮಾನವೀಯತೆಯನ್ನು ಪ್ರತಿಪಾದಿಸುವ ಕಥೆಗಳು



ಒಂದು ತೇಗದ ಕುರ್ಚಿ
ಲೇ : ಸಿದ್ದು ಸತ್ಯಣ್ಣವರ
ಪ್ರ: ಅಮೂಲ್ಯ ಪುಸ್ತಕ
ಸಂ: 9448676770

‘ಒಂದು ತೇಗದ ಕುರ್ಚಿ’ ಸಿದ್ದು ಸತ್ಯಣ್ಣವರ ಮೊದಲ ಕಥಾ ಸಂಕಲನ.

ಕಥಾ ಸಂಕಲನದ ಶೀರ್ಷಿಕೆಯಾಗಿರುವ ‘ಒಂದು ತೇಗದ ಕುರ್ಚಿ’ಯು ಗ್ರಾಮೀಣ ಭಾಗದ ದಲಿತ ಯುವಕನೊಬ್ಬನು ಶೋಷಣೆಯನ್ನು ವಿರೋಧಿಸುವ ಪ್ರತಿರೂಪದಂತಿದೆ. ಜಮೀನ್ದಾರನ ಬಳಿಯಿದ್ದ ತೇಗದ ಕುರ್ಚಿಯು ಇಲ್ಲಿ ಸಾಮಾಜಿಕ ಅಸಮಾನತೆಯ ರೂಪಕದಂತೆ ಬಳಕೆಯಾಗಿದೆ.

‘ಒಂದು ತೇಗದ ಕುರ್ಚಿ’ ಹಾಗೂ ‘ರಾಮನ ತ್ರಾಸು’ ಕಥೆಗಳು ಒಂದೇ ರೀತಿಯ ವಸ್ತುವಿನಂತೆ ತೋರುತ್ತವೆ. ‘ಒಂದು ತೇಗದ ಕುರ್ಚಿ’ಯಲ್ಲಿ ದಲಿತ ಯುವಕನೊಬ್ಬ ಪತ್ರಕರ್ತನಾಗಿ, ಜಮೀನ್ದಾರನ ವಿರುದ್ಧ ನಿಂತರೆ, ‘ರಾಮನ ತ್ರಾಸು’ ಕಥೆಯಲ್ಲಿ ಪೊಲೀಸ್ ಪೇದೆಯಾಗಿ ನೌಕರಿ ಸೇರಿದ್ದ ರಾಮು, ಮೇಲ್ಜಾತಿಯ ಸಿದ್ದಯ್ಯನ ದಬ್ಬಾಳಿಕೆಯನ್ನು ವಿರೋಧಿಸುವ ಧ್ವನಿಯಿದೆ. ಎರಡೂ ಕಥೆಗಳು ಕೂಡ ಅಂತ್ಯದಲ್ಲಿ ಓದುಗನ ಮನ ತಾಕುತ್ತವೆ.


ಹತ್ಯೆ, ಮಂಜವ್ವ, ಸೂರೀಕೆರೆ ಕಥೆಗಳು ಜಾತಿ ಸಂಘರ್ಷದ ನೆಲೆಗಟ್ಟಿನಲ್ಲಿವೆ. ಮನದ ಮರ, ಹಂದಿ ಗೊಂಬೆ ಕಥೆಗಳು ಬದಲಾಗುತ್ತಿರುವ ಕಾಲಘಟ್ಟದ ಸ್ಥಿತ್ಯಂತರದ ಕಥಾವಸ್ತುವಿನಿಂದ ಕೂಡಿವೆ.

ಈ ಕಥಾ ಸಂಕಲನದ ಬಹುತೇಕ ಕಥೆಗಳು ಜಾತಿ ಜಾತಿಗಳ ನಡುವಿನ ಸಂಘರ್ಷವನ್ನು ಕಥಾವಸ್ತುವನ್ನಾಗಿಸಿದ್ದು, ಗ್ರಾಮೀಣ ಭಾಗದ ಹಿನ್ನೆಲೆಯನ್ನು ಹೊಂದಿವೆ. ಈ ಕಥೆಗಳಲ್ಲಿ ಬಳಸಿರುವ ಗದಗ ಭಾಗದ ಭಾಷೆ, ಪದ ಬಳಕೆಯು ಕಥೆಗಳಿಗೆ ಜೀವ ತಂದಿದೆ.

ಇಲ್ಲಿನ ಕಥೆಗಳು ಸಾಮಾಜಿಕ ಕಳಕಳಿಯನ್ನು ಹೊಂದಿವೆ. ಜಾತಿ ಪದ್ಧತಿಯನ್ನು ವಿರೋಧಿಸುತ್ತಾ, ಮಾನವೀಯತೆಯನ್ನು ಪ್ರತಿಪಾದಿಸುತ್ತವೆ.

ಪುಟ: 84 ₹110

ಕಾದಿಯಾ ಧ್ರೋ ಕಣಿವೆಯ ವಿಹಂಗಮ ನೋಟ



ಅದ್ಭುತವಾದ ಪ್ರವಾಸಿ ತಾಣಗಳನ್ನು ನೋಡಲು ನಾವು ವಿದೇಶಕ್ಕೇ ಹೋಗಬೇಕೆಂದೇನಿಲ್ಲ. ನಮ್ಮ ಮಣ್ಣಿನಲ್ಲೇ ಹಲವು ವಿಸ್ಮಯಗಳನ್ನು ಹೊತ್ತ ಪ್ರದೇಶಗಳು ನೂರಾರಿವೆ. ಇಂಥ ಒಂದು ಪ್ರದೇಶದಲ್ಲಿ ಹೆಜ್ಜೆ ಹಾಕಿ ತಮ್ಮ ಅನುಭವಗಳನ್ನು ಕಟ್ಟಿಕೊಟ್ಟಿದ್ದಾರೆ ಲೇಖಕರು.

ಗುಜರಾತಿನ ಮೌನ ಕಣಿವೆಯ ಅದ್ಭುತ ಯಾನ

• ಜಿ.ನಾಗೇಂದ್ರ ಕಾವೂರು

ಪ್ರವಾಸ

ಉತ್ತರ ಅಮೆರಿಕ ಪ್ರವಾಸದ ಸಮಯದಲ್ಲಿ, ಅರಿಜೋನಾದಲ್ಲಿರುವ 'ಗ್ರ್ಯಾಂಡ್ ಕ್ಯಾನನ್'ಗೆ ಭೇಟಿ ನೀಡಬೇಕೆಂಬ ಹಂಬಲ ಅನೇಕರ ಮನಸ್ಸಿನಲ್ಲಿ ಇರುತ್ತದೆ. ನನ್ನ ಕನಸೂ ಅದೇ ಆಗಿತ್ತು. ಆದರೆ ಕಾಲಮಿತಿಯಿಂದಾಗಿ ಸಾಧ್ಯವಾಗಿರಲಿಲ್ಲ. ಆದರೂ ಪ್ರಕೃತಿ ತನ್ನದೇ ರೀತಿಯಲ್ಲಿ ನನ್ನ ಹಂಬಲವನ್ನು ತೀರಿಸುವ ಅದ್ಭುತ ಮಾರ್ಗವನ್ನು ತೋರಿಸಿಕೊಟ್ಟಿತು. ಇತ್ತೀಚೆಗೆ ಕೈಗೊಂಡ ಗುಜರಾತ್ ಪ್ರವಾಸದ ವೇಳೆ ಅಸಾಧ್ಯವೆನಿಸಿದ್ದ ಕನಸು ನನಸಾಯಿತು. ಭಾರತದ ಮಣ್ಣಿನಲ್ಲಿಯೇ ಒಂದು 'ಗ್ರ್ಯಾಂಡ್ ಕ್ಯಾನನ್' ಕಾಣುವ ಅವಕಾಶ ದೊರೆಯಿತು!

ಗುಜರಾತಿನ ಪಶ್ಚಿಮ ಭಾಗದಲ್ಲಿರುವ 'ಭುಜ್' ಪಟ್ಟಣದಿಂದ ಕೇವಲ 32 ಕಿಲೋಮೀಟರ್ ಅಂತರದಲ್ಲಿರುವ 'ಕಾದಿಯಾ ಧ್ರೋ' ಪ್ರಕೃತಿಯ ವಿಚಿತ್ರ ವಿನ್ಯಾಸದ ಒಂದು ಕಣಿವೆ. ಸ್ಥಳೀಯರು ಅದನ್ನು ಪ್ರೀತಿಯಿಂದ 'ಇಂಡಿಯಾಸ್ ಗ್ರ್ಯಾಂಡ್ ಕ್ಯಾನನ್' ಎಂದು ಕರೆಯುತ್ತಾರೆ.

ಕಚ್ ಭಾಷೆಯಲ್ಲಿ 'Kadiya' ಎಂದರೆ ಕಾರಿಗ (artisan) ಮತ್ತು 'Dhro' ಎಂದರೆ ಸಣ್ಣ ಕೆರೆ (small pond). ಬಣ್ಣ ಬಣ್ಣದ ಜೇಡಿಮಣ್ಣಿನ ಪದರಕಲ್ಲುಗಳು ಮತ್ತು ಮರಳುಗಲ್ಲುಗಳಿಂದ ತುಂಬಿರುವ ಈ ಪ್ರದೇಶದ ಭೂದೃಶ್ಯವನ್ನು ನೋಡಿದರೆ, ಅದು ನಿಜಕ್ಕೂ ಒಬ್ಬ ಕುಶಲಕರ್ಮಿಯ ಕೈಚಳಕದ ಕಲಾಕೃತಿಯಂತೆ ಕಾಣುತ್ತದೆ.

ಭೈಯಾದ್ ನದಿ ವರ್ಷದಲ್ಲಿ ಸುಮಾರು ಐದರಿಂದ ಆರು ತಿಂಗಳು ಹರಿದು ನಂತರ ಕಾದಿಯಾ ಧ್ರೋ ಪ್ರದೇಶದ ಸುತ್ತಲೂ ಚದುರಿಕೊಂಡಿರುವ ಸಣ್ಣ ಕೆರೆಗಳಾಗಿ ಪರಿವರ್ತನೆಗೊಳ್ಳುತ್ತದೆ. ಈ ಕೆರೆಗಳು ಮೀನುಗಳಿಗೂ, ಮೊಸಳೆಗಳಿಗೂ ವಾಸಸ್ಥಳವೆಂದು ಪ್ರಸಿದ್ಧವಾಗಿವೆ. ಆದ್ದರಿಂದ ಇಲ್ಲಿ ನೀರಿಗಿಳಿಯುವುದು ಅಪಾಯಕಾರಿ.



ಬೆಳಿಗ್ಗೆ ಪ್ರವಾಸಿಗರನ್ನು ಹೊತ್ತ ಬಸ್ ಭುಜ್ ಪಟ್ಟಣದಿಂದ ಪ್ರಯಾಣ ಆರಂಭಿಸಿದಾಗ ಸುತ್ತಮುತ್ತಲಿನ ಬಯಲು ಪ್ರದೇಶಗಳು ಮೌನದಲ್ಲೇ ತಮ್ಮ ಕಥೆ ಹೇಳುತ್ತಿದ್ದಂತೆಯೇ ಕಂಡವು. ಮಣ್ಣಿನ ಬಣ್ಣ ಬದಲಾವಣೆ, ಬಂಡೆಗಳ ಆಕೃತಿ ಮತ್ತು ತಂಪಾದ ಗಾಳಿ ಆ ಪ್ರದೇಶ ನಿಧಾನವಾಗಿ ವಿಶಿಷ್ಟ ವಾತಾವರಣವನ್ನು ಸೃಷ್ಟಿಸಿತು.


ಸುಮಾರು ಒಂದು ಗಂಟೆಯ ಪ್ರಯಾಣದ ನಂತರ ನಾವು ಕೊಡ್ಕಿ ಹಳ್ಳಿ ತಲುಪಿದೆವು. ಇಲ್ಲಿಂದ 'ಕಾದಿಯಾ ಧ್ರೋ' ತಲುಪಲು ಉಬ್ಬು ತಗ್ಗುಗಳಿಂದ ಕೂಡಿದ ಸುಮಾರು ಐದು ಕಿಲೋಮೀಟರ್ ಕಚ್ಚಾ ರಸ್ತೆಯಲ್ಲಿ ಜೀಪ್‌ಗಳಲ್ಲೇ ಸಾಗಬೇಕು. ನಾವು 'ಕೊಡ್ಕಿ' ತಲುಪಿದಾಗ 'ಕಾದಿಯಾ ಧ್ರೋ'ಗೆ ನಮ್ಮನ್ನು ಕರೆದುಕೊಂಡು ಹೋಗಲು ಕಾಯ್ದಿರಿಸಿದ್ದ ಜೀಪ್‌ಗಳು ನಮಗಾಗಿ ಕಾಯುತ್ತಿದ್ದವು.

ಉಬ್ಬು ತಗ್ಗುಗಳ ಕಚ್ಚಾ ರಸ್ತೆಯಲ್ಲಿ ಸಾಗುವಾಗ ದೋಣಿಯಲ್ಲಿ ಪಯಣಿಸುವಾಗ ಓಲಾಡುವಂತೆ ಓಲಾಡುತ್ತಿದ್ದೆವು. ಜೀಪ್‌ಗಳು ಚಲಿಸುತ್ತಿರುವಾಗ ಏಳುತ್ತಿದ್ದ ಕೆಂಪನೆಯ ದೂಳು ನಮ್ಮನ್ನಾವರಿಸಿತ್ತು. ಕೊನೆಗೂ ಕಣಿವೆಯ ಅಂಚಿಗೆ ತಲುಪಿದೆವು. ಅಲ್ಲಿಂದ ಕಾಣುವ ದೃಶ್ಯ ನಮ್ಮನ್ನು ಮಂತ್ರಮುಗ್ಧರನ್ನಾಗಿಸಿತು. ಭೂಮಿಯ ಬಣ್ಣದ ಪದರಗಳು ಹರಡಿಕೊಂಡಿದ್ದವು. ಸಾವಿರಾರು ವರ್ಷಗಳು ಗಾಳಿ, ಮಳೆ ಮತ್ತು ನದಿಯ ನೀರಿನ ಕೊರೆತದಿಂದ ರೂಪುಗೊಂಡ ಆ ಕಣಿವೆಗಳು ಮತ್ತು ಸೂರ್ಯ ಕಿರಣಗಳಲ್ಲಿ ಹೊಳೆಯುವ ಕಲ್ಲುಗಳ ನೋಟ ಪ್ರಕೃತಿಯ ಶಿಲ್ಪಕೌಶಲದ ಜೀವಂತ ಸಾಕ್ಷಿಗಳಾಗಿದ್ದವು.

ಸ್ಥಳೀಯರ ಪ್ರಕಾರ, ಅನೇಕ ಶತಮಾನಗಳ ಹಿಂದೆ ಇಲ್ಲಿ ಹರಿಯುತ್ತಿದ್ದ ಭೈಯಾದ್ ನದಿ ತನ್ನ ಪಥವನ್ನು ಬದಲಾಯಿಸುತ್ತಾ ಭೂಮಿಯನ್ನು ಆಳವಾಗಿ ಕತ್ತರಿಸಿಕೊಂಡು ಹೋಯಿತು. ಈಗ ಆ ನದಿ ಒಣಗಿದರೂ, ಅದರ ಗುರುತುಗಳು ಕಣಿವೆಯ ಪ್ರತಿ ಕಲ್ಲಿನ ಮೇಲೆ ಸ್ಪಷ್ಟವಾಗಿ ಉಳಿದಿವೆ. ಕೆಲವೆಡೆ ಕಲ್ಲಿನ ಮೇಲಿನ ಕಬ್ಬಿಣದ ರೇಖೆಗಳು ಸೂರ್ಯನ ಪ್ರಖರವಾದ ಬೆಳಕಿಗೆ ಹೊಳೆಯುತ್ತಾ ಕಣಿವೆಗೆ ವಿಶಿಷ್ಟ ಆಕರ್ಷಣೆಯನ್ನು ನೀಡುತ್ತವೆ. ಮಳೆಗಾಲದಲ್ಲಿ ಕೆಲವು ದಿನಗಳು ನದಿ ಹರಿಯುತ್ತದಂತೆ. ಮಿಕ್ಕ ದಿನಗಳಲ್ಲಿ ನೀರಿನ ಹರಿವು ಕ್ಷೀಣಿಸುತ್ತದೆ.

ನಾವು ಕಣಿವೆಯ ಅಂಚಿನಲ್ಲಿ ನಿಂತು ಆ ಮೌನದ ದೃಶ್ಯವನ್ನು ಹೆಚ್ಚು ಹೊತ್ತು ನೋಡುತ್ತಿದ್ದೆವು. ಗಾಳಿಯ ಹಾದಿಯಲ್ಲಿ ದೂರದಿಂದ ಕೇಳಿಬರುತ್ತಿದ್ದ ಪಕ್ಷಿಗಳ ಇಂಚರ ಪ್ರಕೃತಿಯ ಸಂಗೀತದ ಭಾಗವಾಗಿದ್ದವು. ಆ ಕ್ಷಣದಲ್ಲಿ ನನ್ನೊಳಗಿನ ಅಮೆರಿಕದ ಗ್ರ್ಯಾಂಡ್ ಕ್ಯಾನನ್‌ನ ಹಂಬಲ ಸಂಪೂರ್ಣವಾಗಿ ಕರಗಿಹೋಯಿತು. 'ನೀನು ನೋಡಬೇಕೆಂದು ಹಂಬಲಿಸುತ್ತಿದ್ದ ಅದ್ಭುತ ಇಲ್ಲಿ ನಿನ್ನದೇ ನೆಲದಲ್ಲಿ ಇದೆ, ನೋಡು' ಎಂದು ಪ್ರಕೃತಿಯು ನನಗೆ ಸಾರಿ ಹೇಳಿದಂತೆ ಭಾಸವಾಯಿತು.

ನಾವೆಲ್ಲರೂ ಕಣಿವೆಯ ನಡುವೆ ಸಾಗಿದೆವು. ಬಂಡೆಗಳು, ನದಿ ಹಾದಿ ಎಲ್ಲವೂ ಚಿತ್ರಕಲೆಯಂತಿದ್ದವು. ಪ್ರಮುಖ ಸ್ಥಳವೆಂದರೆ ನದಿ ಹರಿಯುವ ಆ ವಿಶಾಲ ಕಣಿವೆ-



ಇದು ನಿಸರ್ಗವೇ ನಿರ್ಮಿಸಿದ ಕಲ್ಲಿನ ಬಾವಿ!

ಅದು ನಿಜಕ್ಕೂ ಭೂಮಿಯ ಒಂದು ವಿಸ್ಮಯ. ಒಂದು ಕಡೆ ಕಲ್ಲಿನಲ್ಲಿ ಕೊರೆದ ವೃತ್ತಾಕಾರದ ಬಾವಿ ನಮ್ಮಲ್ಲಿ ಅಚ್ಚರಿ ಮೂಡಿಸಿತು. ನದಿಯ ನೀರಿನ ಕೊರೆತದಿಂದ ರೂಪ ತಳೆದಿರುವ ಬಾವಿ ನೂರಾರು ಅಡಿಗಳ ಆಳವಿದೆಯೆಂದು ನಮ್ಮ ಗೈಡ್ ಹೇಳಿದರು.ಕಣಿವೆಯ ಮತ್ತೊಂದು ಪಾರ್ಶ್ವದಲ್ಲಿರುವ ಪುಟ್ಟ ಜಲಪಾತ ನಮ್ಮನ್ನು ಆಕರ್ಷಿಸಿತು. ಎಲ್ಲರೂ ಮಿಂದು ಆನಂದಪಟ್ಟೆವು.

ಸಂಜೆಯ ಹೊತ್ತಿಗೆ ಸೂರ್ಯನ ಕಿರಣಗಳು ಕಣಿವೆಯ ಮೇಲಿಂದ ಹರಿದು ಬರುವಾಗ ಬಣ್ಣದ ಪದರಗಳು ಬಂಗಾರದ ಹೊಳಪಿನಿಂದ ಮೆರೆಯುತ್ತಿದ್ದವು. ಕೆಲ ಕ್ಷಣಗಳು ಎಲ್ಲವೂ ನಿಶ್ಚಲವಾಗಿ ನಿಂತಂತಾಯಿತು. ಹಿಂತಿರುಗುವಾಗ, ಆ ಮೌನದ ಕಣಿವೆಯ ಸ್ಮರಣೆ ಮನಸ್ಸಿನಲ್ಲಿ ಶಾಶ್ವತವಾಗಿ ಅಚ್ಚಳಿಯದಂತೆ ಉಳಿಯಿತು. ನಾವು ಅನೇಕ ಬಾರಿ ದೂರದ ದೇಶಗಳಲ್ಲಿ ಅಚ್ಚರಿಗಳನ್ನು ಹುಡುಕುತ್ತೇವೆ, ಆದರೆ ನಮ್ಮದೇ ದೇಶದ ಮಣ್ಣಿನೊಳಗೂ ಅದೆಷ್ಟೋ ಅದ್ಭುತಗಳು ಅಡಗಿವೆ ಎಂಬುದನ್ನು ಈ ಪ್ರಯಾಣ ನನಗೆ ಮತ್ತೆ ನೆನಪಿಸಿತು.

ಈ ಯಾನ ನನಗೆ ಕೇವಲ ಒಂದು ಪ್ರವಾಸವಾಗಿರಲಿಲ್ಲ, ಅದು ಪ್ರಕೃತಿಯೊಂದಿಗೆ ನಡೆದ ಆಂತರಿಕ ಸಂಭಾಷಣೆಯಾಗಿತ್ತು. 'ಸೌಂದರ್ಯ ಅಂದರೆ ಸ್ಥಳದಲ್ಲಲ್ಲ, ಅದು ನೋಡುವ ದೃಷ್ಟಿಯಲ್ಲಿ ಇದೆ' ಎಂಬ ಅರಿವು ಮನಸ್ಸಿನಲ್ಲಿ ಆಳವಾಗಿ ಮೂಡಿತು. ಭುಜ್‌ನ ಸಮೀಪದ ಈ 'ಭಾರತದ ಗ್ರ್ಯಾಂಡ್ ಕ್ಯಾನನ್'– ಪ್ರಕೃತಿಯ ಬಣ್ಣ, ಮೌನ ಮತ್ತು ಮಹತ್ವದ ಅಪರೂಪದ ಸಂಗಮ– ಜೀವನದ ಒಂದು ಅಮೂಲ್ಯ ಅನುಭವವಾಗಿ ಉಳಿಯಿತು.

'ಕಾದಿಯಾ ಧ್ರೋ' ಖಂಡಿತವಾಗಿಯೂ ಭೇಟಿ ನೀಡಬೇಕಾದ ಸ್ಥಳ. ನಾವು ಅದನ್ನು ಪ್ರಕೃತಿಯ ಸಹಜ ಸೌಂದರ್ಯದಲ್ಲಿ ಕಂಡೆವು. ಪ್ರವಾಸಿಗರ ಹೆಚ್ಚುತ್ತಿರುವ ಭೇಟಿ ಕಾರಣದಿಂದ, ಇನ್ನೂ ಒಂದು ದಶಕದ ನಂತರ ಅದು ತನ್ನ ಮೂಲ ಸ್ವರೂಪವನ್ನು ಕಳೆದುಕೊಳ್ಳಬಹುದು ಎಂಬ ಭಾವನೆ ಉಂಟಾಯಿತು. ಆದರೆ ನಾವು ನೋಡಿದ ಕಾದಿಯಾ ಧ್ರೋ ನಿಜಕ್ಕೂ ಅಪರೂಪದ ನೈಸರ್ಗಿಕ ಕಣಿವೆ– 'ಭಾರತದ ಗ್ರ್ಯಾಂಡ್ ಕ್ಯಾನನ್' ಎಂಬ ಬಿರುದಿಗೆ ತಕ್ಕಂತದ್ದು. ಈ ಸ್ಥಳವನ್ನು ವೀಕ್ಷಿಸಲು ನವೆಂಬರ್‌ನಿಂದ ಫೆಬ್ರುವರಿವರೆಗೆ ಸಮಯ ಸೂಕ್ತ.

❖

ಬಹುಮಾನಗಳ ಸರದಾರ...



ಇವೇ ನೋಡಿ ಬಹುಮಾನ!

10ನೇ ಪುಟದಿಂದ...

ಆದರೆ, ಬೋರಗಾಂವ್‌ನಲ್ಲಿ ನಡೆದ ಸ್ಪರ್ಧೆಯಲ್ಲಿ ಗೆದ್ದವರಿಗೆ ತಲಾ ಎರಡು ಫಾರ್ಚ್ಯೂನರ್, ಥಾರ್ ಜೀಪ್, ಏಳು ಟ್ರ್ಯಾಕ್ಟರ್ ಮತ್ತು 150ಕ್ಕೂ ಅಧಿಕ ಬೈಕ್ ಬಹುಮಾನವಾಗಿ ನೀಡಲಾಯಿತು.

ಒಂದು ಫಾರ್ಚ್ಯೂನರ್ 'ಹೆಲಿಕಾಪ್ಟರ್ ಬೈಜ್ಯಾ' ಮತ್ತು 'ಬ್ರೇಕ್‌ಫೇಲ್' ಪಾಲಾದರೆ, ಒಂದು ಸಾವಿರ ಅಡಿಯ ಓಟದ ಸ್ಪರ್ಧೆಯಲ್ಲಿ ಗೆದ್ದ ಮಹಾರಾಷ್ಟ್ರದ ಔರಂಗಾಬಾದ್‌ನ ಸಂಭಾಜಿ ನಗರದ 'ಲಖನ್' ಮತ್ತು ಹಿಂಗೋಲಿಯ 'ಸರ್ಜಾ' ಎತ್ತಿನಜೋಡಿ ಮತ್ತೊಂದು ಫಾರ್ಚ್ಯೂನರ್ ಗೆದ್ದುಕೊಂಡವು.

ಅಲ್ಲಿ ಎತ್ತುಗಳ ಓಟದ ಸ್ಪರ್ಧೆ ಕಣ್ತುಂಬಿಕೊಳ್ಳಲೆಂದೇ ಲಕ್ಷಾಂತರ ಜನ ಸೇರುತ್ತಾರೆ. ಎತ್ತ ನೋಡಿದರೂ ಜನವೋ ಜನ. ದೇಶದ ವಿವಿಧೆಡೆಯಿಂದ ಬಂದಿದ್ದ ಜನರು ಇಲ್ಲಿನ ಬಹುಮಾನಗಳನ್ನು ಕಂಡು ಒಂದರೆಕ್ಷಣ ದಂಗಾದರು.

ಮೂರು ವರ್ಷಗಳಿಂದ ಆಯೋಜನೆ

ಎತ್ತಿನಬಂಡಿಗಳ ಓಟದ ಸ್ಪರ್ಧೆಗೆ ಸಾಂಗ್ಲಿ ಹೆಸರುವಾಸಿ. ಪಶ್ಚಿಮ ಮಹಾರಾಷ್ಟ್ರದ ಕೃಷಿ ಸಮುದಾಯದಲ್ಲಿ ಎತ್ತುಗಳನ್ನು ಓಡಿಸಿ ಸಂಭ್ರಮಿಸುವ ಈ ಸಂಪ್ರದಾಯ ಬೇರೂರಿದೆ. ಹಲವು ದಶಕಗಳಿಂದಲೂ ಇಂಥ ಸ್ಪರ್ಧೆಗಳನ್ನು ಸಂಘಟಿಸಲಾಗುತ್ತಿದೆ. ಅವು ಸಣ್ಣ ಪ್ರಮಾಣದಲ್ಲಿ ಇರುತ್ತಿದ್ದವು. ಆದರೆ, ಕುಸ್ತಿಪಟುವೂ ಆಗಿರುವ ರಾಜಕಾರಣಿ ಚಂದ್ರಹಾರ ಪಾಟೀಲ ಅವರು, ಚಂದ್ರಹಾರ ಪಾಟೀಲ ಯೂಥ್ ಫೌಂಡೇಷನ್ ವತಿಯಿಂದ ಈಚೆಗೆ ಆಯೋಜಿಸಿದ್ದ ದೊಡ್ಡ ಪ್ರಮಾಣದ ಎತ್ತಿನಬಂಡಿ ಸ್ಪರ್ಧೆ ಇಡೀ ದೇಶದ ಗಮನ ಸೆಳೆಯಿತು. ಇದರಲ್ಲಿ ಕರ್ನಾಟಕ, ಮಹಾರಾಷ್ಟ್ರ ಮತ್ತಿತರ ರಾಜ್ಯಗಳ 1,200 ಎತ್ತಿನ ಜೋಡಿಗಳು ಪಾಲ್ಗೊಂಡು, ತಮ್ಮ ತಾಕತ್ತು ಪ್ರದರ್ಶಿಸಿದವು.

'ರಾಸುಗಳ ಬಗ್ಗೆ ರೈತರಿಗೆ ಕಾಳಜಿ ಹೆಚ್ಚಲಿ. ಗ್ರಾಮೀಣ ಕ್ರೀಡೆಯೂ ಉಳಿಯಲೆಂದು 2023 ರಿಂದ ಎತ್ತಿನಬಂಡಿ ಓಟದ ಸ್ಪರ್ಧೆಯನ್ನು ಆಯೋಜಿಸುತ್ತಿದ್ದೇವೆ. ವಿವಿಧ ಊರುಗಳಲ್ಲಿ ನಡೆಯುವ ಸ್ಪರ್ಧೆಗಳಂತೆ ಇದು ಇರಬಾರದು. ವಿಶಿಷ್ಟವಾಗಿ ಆಯೋಜಿಸಬೇಕು ಎಂದುಕೊಂಡು ಹಿಂದಿನ ಸ್ಪರ್ಧೆಗಳಲ್ಲಿ ಥಾರ್ ಜೀಪ್, ಟ್ರ್ಯಾಕ್ಟರ್‌ಗಳನ್ನು ಬಹುಮಾನವಾಗಿ ನೀಡಿದ್ದೆವು. ಈ ಬಾರಿ ಇನ್ನಷ್ಟು ದುಬಾರಿ ಬೆಲೆಯ ಬಹುಮಾನ ನೀಡಿ ದೇಶದ ಗಮನ ಸೆಳೆದೆವು. ವರ್ಷದಿಂದ ವರ್ಷಕ್ಕೆ ನಮ್ಮ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳುವವರ ಸಂಖ್ಯೆ ಹೆಚ್ಚುತ್ತಿದೆ' ಎಂದು ಚಂದ್ರಹಾರ ಪಾಟೀಲ ಖುಷಿಯಿಂದ ಹೇಳುತ್ತಾರೆ.

ಮುಂದಿನ ವರ್ಷ ನಡೆಯುವ ಸ್ಪರ್ಧೆಯಲ್ಲಿ ಗೆದ್ದ ಎತ್ತಿನಜೋಡಿಗೆ 'ಬಿಎಂಡಬ್ಲ್ಯು ಕಾರು' ಬಹುಮಾನವಾಗಿ ನೀಡಲು ಚಿಂತನೆ ನಡೆಸಿದ್ದಾರೆ.

700 ಎಕರೆಯಲ್ಲಿ ಸ್ಪರ್ಧೆ

ಈ ಸ್ಪರ್ಧೆಯನ್ನು ಹತ್ತಲ್ಲ, ಇಪ್ಪತ್ತಲ್ಲ; 700 ಎಕರೆ ಪ್ರದೇಶದಲ್ಲಿ ಆಯೋಜಿಸಲಾಗುತ್ತದೆ. ಮೂರು ವಿಭಾಗಗಳಲ್ಲಿ ನಡೆದ ಸ್ಪರ್ಧೆಗಳೆಲ್ಲ ರೋಚಕತೆಯಿಂದ ಕೂಡಿದ್ದವು. ಸ್ಪರ್ಧೆ ಆಯೋಜನೆಗೆ ಎರಡು ತಿಂಗಳು ಮೊದಲೇ ತಯಾರಿ ಆರಂಭಿಸಲಾಗುತ್ತದೆ. ಚಂದ್ರಹಾರ ಪಾಟೀಲ ಯೂಥ್ ಫೌಂಡೇಷನ್‌ನ ಸ್ವಯಂಸೇವಕರಿಗೆ ಜವಾಬ್ದಾರಿ ಹಂಚಿಕೆಯಾಗುತ್ತದೆ. ಸ್ಪರ್ಧೆಯಲ್ಲಿ ಪಾಲ್ಗೊಳ್ಳುವವರು ಮತ್ತು ವೀಕ್ಷಣೆಗೆ ಬಂದವರಿಗೆ ಕುಡಿಯುವ ನೀರು, ಉಪಾಹಾರ, ಊಟದ ವ್ಯವಸ್ಥೆ ಮಾಡಲಾಗುತ್ತದೆ.

'ವಿವಿಧ ಜಾತ್ರೆ, ಉತ್ಸವಗಳಲ್ಲಿ ನಡೆಯುವ ಎತ್ತಿನಬಂಡಿ ಓಟದ ಸ್ಪರ್ಧೆಗಳಿಗೆ ಸಾಕ್ಷಿಯಾಗಿದ್ದೇನೆ. ಆದರೆ, ಸಾಂಗ್ಲಿಯಲ್ಲಿ ನಡೆಯುವಂಥ ಸ್ಪರ್ಧೆ ಜೀವನದಲ್ಲೇ ನೋಡಿಲ್ಲ. ಯಾವುದೇ ಜಾತ್ರೆಗಿಂತ ಹತ್ತುಪಟ್ಟು ಹೆಚ್ಚು ಜನ ಅಲ್ಲಿ ಸೇರಿರುತ್ತಾರೆ. ಮೈದಾನಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಕಾಲಿಡದಷ್ಟು ದಟ್ಟಣೆ ಕಂಡುಬರುತ್ತದೆ' ಎಂದು ಮುಖಂಡ ಶುಭಂ ಪಾಟೀಲ ಹೇಳುತ್ತಾರೆ.

'ನಾವು ಬಹಳಷ್ಟು ಕಡೆ ಎತ್ತುಗಳ ಓಟದ ಸ್ಪರ್ಧೆಗೆ ಹೋಗಿದ್ದೇವೆ. ಆದರೆ, ಬೋರಗಾಂವ್‌ನಲ್ಲಿ ನಡೆದಿದ್ದು ಸ್ಪರ್ಧೆಯಷ್ಟೇ ಅಲ್ಲ; ಒಂದು ಜಾತ್ರೆ. ಅಲ್ಲಿ ಸೇರಿದ್ದ ಜನರನ್ನು ಕಂಡು ಮತ್ತಷ್ಟು ಹುರುಪು ಬಂದಿತು' ಎನ್ನುತ್ತಾರೆ ಬಾಳು ಅವರ ಸಹೋದರ ಅಪ್ಪಾಸಾಹೇಬ ಹಜಾರೆ.

ರೈತಾಪಿಗಳು ದಿನವೂ ಹೊಲ ಗದ್ದೆ ತೋಟಗಳಲ್ಲಿ ದುಡಿದು ದಣಿದಿರುತ್ತಾರೆ. ಇಂಥ ಸಮುದಾಯ ತನ್ನ ನೋವು, ದಣಿವು ಮರೆತು ಸಂಭ್ರಮಿಸಬೇಕು ಎನ್ನುವ ಕಾರಣಕ್ಕಾಗಿಯೇ ಹಲವು ಆಚರಣೆ, ಸಂಪ್ರದಾಯ, ಸಾಹಸ ಸ್ಪರ್ಧೆಗಳನ್ನು ಅನುಸರಿಸಿಕೊಂಡು ಬರಲಾಗುತ್ತಿದೆ. ಸಂಕ್ರಾಂತಿ ಹಬ್ಬದ ವೇಳೆಯಲ್ಲಿ ರಾಸುಗಳ ಜಾತ್ರೆಗಳು ಹೆಚ್ಚಾಗಿ ನಡೆಯುತ್ತವೆ. ಆದರೆ, ಬೋರಗಾಂವ್‌ನಲ್ಲಿ ನಡೆಯುವ ಎತ್ತಿನಬಂಡಿ ಓಟ ಸ್ಪರ್ಧೆ ಮತ್ತೊಂದು ಹಂತವನ್ನು ತಲುಪಿದೆ. ಇದನ್ನು ಕಣ್ತುಂಬಿಕೊಳ್ಳಲು ಸೇರುವ ಜನರೇ ಇದರ ಜನಪ್ರಿಯತೆಗೆ ಸಾಕ್ಷಿ.

ಅಂದಹಾಗೆ, ನಮ್ಮ ನೆಲದ 'ಹೆಲಿಕಾಪ್ಟರ್ ಬೈಜ್ಯಾ' ಹೀಗೆಯೇ ಗೆಲ್ಲುತ್ತಲೇ ಇರಲಿ. ❖

ಮಜ ಮಜ ಮಜಕೂರ

ಎಂ.ಎಸ್.ಪೂಜಾರ

ಹುಡುಕಾಟ

ಇಲ್ಲಿ ಕೊಟ್ಟಿರುವ ಪದಗಳಿಂದ ಒಂದೊಂದು ಅಕ್ಷರ ಆಯ್ಕೆ ಮಾಡಿಕೊಂಡು ಒಬ್ಬ ಕವಿಯ ಹೆಸರು ಹುಡುಕಿ.

1.ಆಲೋಚನೆ
2.ಚಿನ್ನದ ದರ
3.ವೀರಾವೇಶ
4.ಶರವೇಗ
5.ಅವಲೋಕನ
6.ಅಂಕಣಬರಹ
7.ಪ್ರಭಾವಿವ್ಯಕ್ತಿ

ಉತ್ತರ: ____________

ಗಣಿತದಲ್ಲಿ ಗರ್ದಿಗಮ್ಮತ್ತು

1) 493827 X7 = 3456789

2) 18759 X7 = 131313

3) 1569664903 X7 = 10987654321


ತಾರ್ಕಿಕ ಗಣಿತ

?	7
35	21

ಗುಂಡನ ಕರಾಮತ್ತು!

ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಗುಂಡ ಮನೆಯ ಹತ್ತಿರದಲ್ಲೇ ಇದ್ದ ಜಿಮ್‌ಗೆ ಹೋಗುತ್ತಿದ್ದ. ಒಂದು ದಿನ ಅಲ್ಲೇ ಇದ್ದ ದೊಡ್ಡದಾದ ಬಾರ್‌ಬೆಲ್ ಪೋಸ್ಟರ್ ಮುಂದೆ ನಿಂತು ಅದನ್ನು ಎತ್ತುತ್ತಿರುವಂತೆ ನಿಂತಿದ್ದ. ಇದನ್ನು ಕಂಡು ಆತನ ಸ್ನೇಹಿತ 'ಭಾರಿ ಬಲಶಾಲಿ ನೀನು' ಎಂದು ಹೊಗಳಿದ. ಆತನ ಹೊಗಳಿಕೆಗೆ ಮನದೊಳಗೇ ನಕ್ಕ ಗುಂಡ ಮೆಲ್ಲನೆ ಆ ಪೋಸ್ಟರ್ ಎದುರಿನಿಂದ ಪಕ್ಕಕ್ಕೆ ಸರಿದ. ಇದನ್ನು ಕಂಡ ಗುಂಡನ ಸ್ನೇಹಿತ ಅವಾಕ್ಕಾದ.



ಶಬ್ದಾಟ

ಇಲ್ಲಿರುವ ನಾಲ್ಕಕ್ಷರ ಪದಕ್ಕೆ ಕೊಟ್ಟಿರುವ ಇನ್ನೊಂದಕ್ಷರ ಸೇರಿಸಿ ಐದಕ್ಷರದ ಅರ್ಥಬದ್ಧ ಪದ ಮಾಡಿ.

ನಾನುರಾಜ + ಗಿ = ____________

ಕೊಂಚತಂತ್ರ π

ಪೈ ಬೆಲೆ ಸಾಮಾನ್ಯವಾಗಿ 22/7 ಎಂದು ಹೇಳುತ್ತೇವೆ. ಆದರೆ ಅದೊಂದು ಅನಿಯಮಿತ ಅನಂತ ಸಂಖ್ಯಾ ಸರಣಿ. ಅದು 3.1415...ಹೀಗೆ ಪ್ರಾರಂಭವಾಗುತ್ತದೆ. ಇದನ್ನು ನೆನಪಿಡಲು ಈ ವಾಕ್ಯವನ್ನು ನೆನಪಿಡಿ.

ದೇವರೇ ನೀ ನಮ್ಮನ್ನೆಲ್ಲ ಈ ಭೂಮಿಗೆತಂದೆ

3 . 1 4 1 5

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ಮಜಾ	+	ಬರ	+	ಯಾ	=	
2	ಮೇಣ	+	ಶರ	+	ಳ	=	
3	ಮಗ	+	ನಸೆ	+	ಳೆ	=	
4	ಗುಡಿ	+	ಪಣ	+	ಸು	=	
5	ಸುರಿ	+	ಮಾಸ	+	ರು	=	

ಮೋಜಿನ ಇಂಗ್ಲಿಷ್

ಇಲ್ಲಿ ಕೊಟ್ಟಿರುವ ND ಅಕ್ಷರಗಳ ಹಿಂದೆ ಇನ್ನೆರಡು ಅಕ್ಷರ ತುಂಬಿ ನಾಲ್ಕಕ್ಷರಗಳ 8 ಪದ ರಚಿಸಿ.

1			N	D
2			N	D
3			N	D
4			N	D
5			N	D
6			N	D
7			N	D
8			N	D

ಜಾಣಪದ ಆಟ

ಇಲ್ಲಿ ಕೊಟ್ಟಿರುವ 20 ಅನುಸ್ವಾರ ಅಕ್ಷರಗಳಿಗೆ ಪದಪಟ್ಟಿಯಿಂದ ಸೂಕ್ತ ಇಪ್ಪತ್ತು ಪದ ಆಯ್ದು ತುಂಬಿ ಮೂರಕ್ಷರದ ಅರ್ಥಬದ್ಧ ಪದ ಮಾಡಿ.

ಪದಪಟ್ಟಿ

ಯೋಗ	ಗತಿ	ಪದ	ಕುಶ
ಕಣ	ದಣಿ	ಪ್ರತಿ	ಕುಲ
ತರ	ವಾದ	ಗೀತ	ಯಮ
ಬರ	ಜನ	ಬಾರಿ	ದೇಶ
ದಿನ	ಕುರ	ಬಲಿ	ಗಡಿ

1	ಸಂ	
2	ಸಂ	
3	ಸಂ	
4	ಸಂ	
5	ಸಂ	
6	ಸಂ	
7	ಸಂ	
8	ಸಂ	
9	ಸಂ	
10	ಸಂ	

11	ಅಂ	
12	ಅಂ	
13	ಅಂ	
14	ಅಂ	
15	ಅಂ	
16	ಅಂ	
17	ಅಂ	
18	ಅಂ	
19	ಅಂ	
20	ಅಂ	

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಈ ಇಮೇಲ್‌ಗೆ ಕಳುಹಿಸಿ...

majakoora@prajavani.co.in

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ: 1.ನವನಾಯಕ 2.ಮೂರುಸಾವಿರ 3.ಕಲಬೆರಕೆ 4.ಮಾವನಮನೆ 5.ಕನಸುಗಾರ

ಶಬ್ದಾಟ: ಮೊಸರನ್ನ

ಮೋಜಿನ ಇಂಗ್ಲಿಷ್: 1.OAK 2.OAT 3.OIL 4.AID 5.AIM 6.EAR 7.OUT 8.EAT 9.OUR


ಜಾಣಪದ ಆಟ 1:1.ಅಮರ 2.ಸಮರ 3.ಭ್ರಮರ 4.ಚಾಮರ 5.ಪಾಮರ 6.ಮಾಮರ 7.ಜನಕ 8.ಬೆನಕ 9.ಕನಕ 10.ತನಕ 11.ಪಾನಕ 12.ನಾನಕ

ಜಾಣಪದ ಆಟ 2: 1.ಅವಗುಣ 2.ಅವಮಾನ 3.ಅವನತಿ 4.ಅವತಾರ 5.ಅವಶೇಷ

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ನಿಯತಿ ನಾವಡ
ಕುಂದಾಪುರ




ನುಡಿ ಭೀಮೇಶ ಯರಡೋಣಿ
ಧಾರವಾಡ



ಕಿರಣ್ಮಯಿ ವಿ.ಎಸ್.
ಬೆಂಗಳೂರು



ಸಂಹಿತ್ ಎಚ್.ಶೆಟ್ಟಿ
ಬ್ರಹ್ಮಾವರ



ಮಾನ್ವಿ ರಾಜೇಶ್
ಸಾಗರ



ಅದ್ವಿತ್ ಬಿ.ಕೆ.
ಬಳ್ಳಾರಿ

ಇಶಾನ್, ರಿಂಕುಗೆ ಅವಕಾಶ; ಗಿಲ್‌ಗೆ ಕೊಕ್

ಟಿ20 ಕ್ರಿಕೆಟ್ ವಿಶ್ವಕಪ್: ಸೂರ್ಯಕುಮಾರ್ ನಾಯಕತ್ವದ ಭಾರತ ತಂಡ ಪ್ರಕಟ

ಐಸಿಸಿ ಪುರುಷರ ಟಿ20 ವಿಶ್ವಕಪ್ 2026

ಮುಂಬೈ (ಪಿಟಿಐ): ವಿಕೆಟ್‌ಕೀಪರ್ ಇಶಾನ್ ಕಿಶನ್ ಮತ್ತು ಸ್ಫೋಟಕ ಶೈಲಿಯ ಬ್ಯಾಟರ್ ರಿಂಕು ಸಿಂಗ್ ಅವರು ಮುಂದಿನ ಫೆಬ್ರುವರಿಯಲ್ಲಿ ನಡೆಯಲಿರುವ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಭಾರತ ತಂಡವನ್ನು ಪ್ರತಿನಿಧಿಸಲಿದ್ದಾರೆ. ಆದರೆ ಬ್ಯಾಟಿಂಗ್ ಲಯ ಕಂಡುಕೊಳ್ಳದ ಶುಭಮನ್ ಗಿಲ್ ಅವರಿಗೆ ಕೊಕ್ ನೀಡಲಾಗಿದೆ.

ಶನಿವಾರ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಸೀನಿಯರ್ ತಂಡದ ಆಯ್ಕೆ ಸಮಿತಿಯು ಪ್ರಕಟಿಸಿರುವ 15 ಆಟಗಾರರ ತಂಡಕ್ಕೆ ಸೂರ್ಯಕುಮಾರ್ ಯಾದವ್ ನಾಯಕರಾಗಿ ಮುಂದುವರಿದಿದ್ದಾರೆ. ಅವರು ಕೂಡ ಬ್ಯಾಟಿಂಗ್ ಲಯಕ್ಕಾಗಿ ಪರದಾಡುತ್ತಿದ್ದಾರೆ. ಆದರೆ ಅವರ ನಾಯಕತ್ವದಲ್ಲಿ ಭಾರತ ತಂಡವು ಏಷ್ಯಾ ಕಪ್ ಮತ್ತು ದಕ್ಷಿಣ ಆಫ್ರಿಕಾ ಎದುರಿನ ಸರಣಿಯಲ್ಲಿ ಜಯಿಸಿತ್ತು.

‘ಶುಭಮನ್ ಗಿಲ್ ಅವರು ನಿರೀಕ್ಷೆಗೆ ತಕ್ಕಂತೆ ರನ್ ಗಳಿಸಿಲ್ಲ. ಪ್ರಸ್ತುತ ಅವರು ವಿಶ್ವಕಪ್ ಟೂರ್ನಿಯಲ್ಲಿ ಆಡುವ ತಂಡದಲ್ಲಿ ಸ್ಥಾನ ಪಡೆದಿಲ್ಲ’ ಎಂದು ಆಯ್ಕೆ ಸಮಿತಿ ಮುಖ್ಯಸ್ಥ ಅಜಿತ್ ಅಗರಕರ್ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಕಳೆದೊಂದು ವರ್ಷದಲ್ಲಿ ಯಾವುದೇ ಟೂರ್ನಿಗೂ ಇಶಾನ್ ಕಿಶನ್ ಅವರನ್ನು ಪರಿಗಣಿಸಿರಲಿಲ್ಲ. ಎಡಗೈ ಬ್ಯಾಟರ್ ಮತ್ತು ವಿಕೆಟ್‌ಕೀಪರ್ ಇಶಾನ್ ಅವರ ನಾಯಕತ್ವದಲ್ಲಿ ಈಚೆಗೆ ಜಾರ್ಖಂಡ್ ತಂಡವು ಸೈಯದ್ ಮುಷ್ತಾಕ್ ಅಲಿ ಟಿ20 ಟೂರ್ನಿಯ ಚಾಂಪಿಯನ್ ಆಗಿತ್ತು. ಇಶಾನ್ ಅಮೋಘ ಶತಕ ಕೂಡ ಹೊಡೆದಿದ್ದರು.

ಇಶಾನ್ ಸ್ಥಾನ ಪಡೆದ ಕಾರಣ ಎಡಗೈ ಬ್ಯಾಟರ್ ಯಶಸ್ವಿ ಜೈಸ್ವಾಲ್ ಮತ್ತು ವಿಕೆಟ್‌ಕೀಪರ್ ಜಿತೇಶ್ ಶರ್ಮಾ ಅವರಿಗೆ ಸ್ಥಾನ ಕೈತಪ್ಪಿದೆ. ಅಭಿಷೇಕ್ ಶರ್ಮಾ, ಇಶಾನ್, ತಿಲಕ್ ವರ್ಮಾ, ರಿಂಕು ಮತ್ತು ಸೂರ್ಯಕುಮಾರ್ ಯಾದವ್ ಅವರು ಇರುವುದರಿಂದ ಅಗ್ರ ಮತ್ತು ಮಧ್ಯಮ ಕ್ರಮಾಂಕದ ಬ್ಯಾಟಿಂಗ್ ಪಡೆಯು ಬಲಾಢ್ಯವಾಗಿದೆ. ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ, ಅಕ್ಷರ್ ಪಟೇಲ್ ಮತ್ತು ವಾಷಿಂಗ್ಟನ್ ಸುಂದರ್ ಅವರಿಂದಾಗಿ ತಂಡವು ಸಮತೋಲನಗೊಂಡಿದೆ.



ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡಲಿರುವ ಭಾರತ ತಂಡ (ಎಡದಿಂದ ಬಲಕ್ಕೆ), ಮೇಲಿನ ಸಾಲು; ಸೂರ್ಯಕುಮಾರ್ ಯಾದವ್, ಅಕ್ಷರ್ ಪಟೇಲ್, ಅಭಿಷೇಕ್ ಶರ್ಮಾ, ಸಂಜು ಸ್ಯಾಮ್ಸನ್, ಹಾರ್ದಿಕ್ ಪಾಂಡ್ಯ, ಮಧ್ಯದ ಸಾಲು: ತಿಲಕ್ ವರ್ಮಾ, ಇಶಾನ್ ಕಿಶನ್, ರಿಂಕು ಸಿಂಗ್, ವಾಷಿಂಗ್ಟನ್ ಸುಂದರ್, ಶಿವಂ ದುಬೆ, ಕೆಳಗಿನ ಸಾಲು: ಜಸ್‌ಪ್ರೀತ್ ಬೂಮ್ರಾ, ಹರ್ಷಿತ್ ರಾಣಾ, ಕುಲದೀಪ್ ಯಾದವ್, ವರುಣ್ ಚಕ್ರವರ್ತಿ, ಅರ್ಷದೀಪ್ ಸಿಂಗ್ — ಪಿಟಿಐ ಚಿತ್ರ

ವೇಗದ ಬೌಲಿಂಗ್ ವಿಭಾಗದಲ್ಲಿ ಅನುಭವಿ ಮತ್ತು ಉದಯೋನ್ಮುಖ ಬೌಲರ್‌ಗಳಿದ್ದಾರೆ. ಕುಲದೀಪ್ ಯಾದವ್ ಸ್ಪಿನ್ ವಿಭಾಗದ ಶಕ್ತಿ ಹೆಚ್ಚಿಸುವ ನಿರೀಕ್ಷೆ ಇದೆ.

ವಿಶ್ವಕಪ್ ಟೂರ್ನಿಯು ಮುಂಬರುವ ಫೆಬ್ರುವರಿ 7ರಿಂದ ನಡೆಯಲಿದೆ. ಹಾಲಿ ಚಾಂಪಿಯನ್ ಭಾರತ ಮತ್ತು ಶ್ರೀಲಂಕಾದ ಜಂಟಿ ಆತಿಥ್ಯದಲ್ಲಿ ಒಂದು ತಿಂಗಳ ಕಾಲ ಆಯೋಜನೆಗೊಳ್ಳಲಿದೆ.

ತಂಡ: ಸೂರ್ಯಕುಮಾರ್ ಯಾದವ್ (ನಾಯಕ), ಅಭಿಷೇಕ್ ಶರ್ಮಾ, ತಿಲಕ್ ವರ್ಮಾ, ಹಾರ್ದಿಕ್ ಪಾಂಡ್ಯ, ಶಿವಂ ದುಬೆ, ಅಕ್ಷರ್ ಪಟೇಲ್ (ಉಪನಾಯಕ), ಕುಲದೀಪ್ ಯಾದವ್, ಜಸ್‌ಪ್ರೀತ್ ಬೂಮ್ರಾ, ಅರ್ಷದೀಪ್ ಸಿಂಗ್, ಹರ್ಷಿತ್ ರಾಣಾ, ಸಂಜು ಸ್ಯಾಮ್ಸನ್ (ವಿಕೆಟ್‌ಕೀಪರ್), ವಾಷಿಂಗ್ಟನ್ ಸುಂದರ್, ವರುಣ ಚಕ್ರವರ್ತಿ, ಇಶಾನ್ ಕಿಶನ್ (ವಿಕೆಟ್‌ಕೀಪರ್), ರಿಂಕು ಸಿಂಗ್.

ಪ್ರಶಸ್ತಿ ‘ದಾಖಲೆ’ ಮೇಲೆ ಭಾರತ ಕಣ್ಣು

ಯುವ ಏಕದಿನ ಏಷ್ಯಾಕಪ್: ಆಯುಷ್ ಪಡೆಗೆ ಪಾಕ್ ಸವಾಲು

ದುಬೈ (ಪಿಟಿಐ): ದಾಖಲೆಯ ಪ್ರಶಸ್ತಿ ಮೇಲೆ ಕಣ್ಣಿಟ್ಟಿರುವ ಭಾರತ 19 ವರ್ಷದೊಳಗಿನವರ ತಂಡವು ಭಾನುವಾರ ನಡೆಯಲಿರುವ ಯೂತ್ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಬದ್ಧ ಎದುರಾಳಿ ಪಾಕಿಸ್ತಾನ ಯುವ ತಂಡವನ್ನು ಎದುರಿಸಲಿದೆ.

ಆಯುಷ್ ಮ್ಹಾತ್ರೆ ನಾಯಕತ್ವದ ಭಾರತ ತಂಡವು ಎ ಗುಂಪಿನ ಪಂದ್ಯದಲ್ಲಿಯೂ ಹೋದ ಭಾನುವಾರ ಪಾಕಿಸ್ತಾನ ವಿರುದ್ಧ ಆಡಿತ್ತು. ಅದರಲ್ಲಿ ಭಾರತ ಭರ್ಜರಿ ಜಯ ಸಾಧಿಸಿತ್ತು. ಶುಕ್ರವಾರ ನಡೆದ ಸೆಮಿಫೈನಲ್‌ನಲ್ಲಿ ಆಯುಷ್ ಬಳಗ ಶ್ರೀಲಂಕಾ ವಿರುದ್ಧ ಜಯ ಸಾಧಿಸಿತ್ತು. ಪಾಕ್ ತಂಡವು ಹಾಲಿ ಚಾಂಪಿಯನ್ ಬಾಂಗ್ಲಾದೇಶ ವಿರುದ್ಧ ಜಯ ದಾಖಲಿಸಿತ್ತು.

ಫಿಫ್ಟಿ–50 ಮಾದರಿಯ ಈ ಟೂರ್ನಿಯಲ್ಲಿ ಇದುವರೆಗೆ ಉದಯೋನ್ಮುಖ ಆಟಗಾರರು ತಮ್ಮ ಪ್ರತಿಭೆ ಮೆರೆದಿದ್ದಾರೆ.



ಆಯುಷ್

17 ವರ್ಷದ ವಿಕೆಟ್ ಕೀಪರ್ ಬ್ಯಾಟರ್ ಅಭಿಗ್ಯಾನ್ ಕುಂದು, 14 ವರ್ಷದ ವೈಭವ್ ಸೂರ್ಯವಂಶಿ ಗಮನ ಸೆಳೆದಿದ್ದಾರೆ. ಅಭಿಗ್ಯಾನ್ (209; 125ಎ) ದ್ವಿಶತಕ ಮತ್ತು ವೈಭವ್ ಶತಕಗಳು ದಾಖಲೆ ಪುಸ್ತಕ ಸೇರಿದವು. ಫೈನಲ್‌ನಲ್ಲಿಯೂ ತಮ್ಮ ಭುಜಬಲ ಪರಾಕ್ರಮ ಮೆರೆಯುವ ಉತ್ಸಾಹದಲ್ಲಿ ಇಬ್ಬರೂ ಇದ್ದಾರೆ. ಹೈದರಾಬಾದಿನ ಆ್ಯರನ್ ಜಾರ್ಜ್ ಮೂರು ಅರ್ಧಶತಕ ಗಳಿಸಿದ್ದಾರೆ. ವಿಹಾನ್ ಮಲ್ಹೋತ್ರಾ, ಸಮೀರ್ ಮಿನ್ಹಾಸ್ ಕೂಡ ಅಮೋಘ ಲಯದಲ್ಲಿದ್ದಾರೆ.

ಲೀಗ್ ಹಂತದಲ್ಲಿ ಪಾಕ್ ವಿರುದ್ಧ ಭಾರತದ ಬೌಲರ್‌ಗಳೂ ಶಿಸ್ತುಬದ್ಧ ದಾಳಿ ನಡೆಸಿದ್ದರು. ಆಲ್‌ರೌಂಡರ್ ಕನಿಷ್ಕ ಚೌಹಾಣ್ ಆ ಪಂದ್ಯದಲ್ಲಿ ಮೂರು ವಿಕೆಟ್ ಗಳಿಸಿದ್ದರು. ಭಾರತದ ದೀಪೇಶ್ ದೇವೇಂದ್ರನ್ ಮತ್ತು ಪಾಕಿಸ್ತಾನದ ಅಬ್ದುಲ್ ಸುಭಾನ್ ಅವರು ತಲಾ 11 ವಿಕೆಟ್ ಗಳಿಸಿದರು. ದೀಪೇಶ್ ಅವರು ಮಲೇಷ್ಯಾ ಎದುರು (22ಕ್ಕೆ5) ಅಮೋಘ ಬೌಲಿಂಗ್ ಮಾಡಿದ್ದರು.

ಪಾಕಿಸ್ತಾನ ತಂಡದಲ್ಲಿ ಎಡಗೈ ಬೌಲರ್ ನಿಕಾಬ್ ಶಫೀಕ್ ಭಾರತದ ಎದುರಿನ ಪಂದ್ಯದಲ್ಲಿ ಎರಡು ವಿಕೆಟ್ ಗಳಿಸಿದ್ದರು. ಲೆಗ್‌ಸ್ಪಿನ್ನರ್ ಅಹಮದ್ ಹುಸೇನ್ ಅವರು ಬ್ಯಾಟರ್‌ಗಳಿಗೆ ಸವಾಲೊಡ್ಡಬಲ್ಲರು. ಫರ್ಹಾನ್ ಯೂಸುಫ್ ನಾಯಕತ್ವದ ಪಾಕ್ ತಂಡವು ಕಠಿಣ ಪೈಪೋಟಿಯೊಡ್ಡುವ ಛಲದಲ್ಲಿದೆ. ಭಾರತವು ಇಲ್ಲಿಯವರೆಗೆ ಎಂಟು ಸಲ ಚಾಂಪಿಯನ್ ಆಗಿದೆ. ಪಾಕ್ ಒಂದು ಬಾರಿ ಮಾತ್ರ ಪ್ರಶಸ್ತಿ ಜಯಿಸಿತ್ತು.

ಪಂದ್ಯ ಆರಂಭ: ಬೆಳಿಗ್ಗೆ 10.30
ನೇರಪ್ರಸಾರ: ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್

ಸೆಮಿಯಲ್ಲಿ ಸಾತ್ವಿಕ್– ಚಿರಾಗ್ ಜೋಡಿಗೆ ನಿರಾಸೆ

ಹಾಂಗ್‌ಝೌ (ಪಿಟಿಐ): ಭಾರತದ ಅಗ್ರಮಾನ್ಯ ಪುರುಷರ ಡಬಲ್ಸ್ ಜೋಡಿ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಶನಿವಾರ ಬಿಡಬ್ಲ್ಯುಎಫ್ ಬ್ಯಾಡ್ಮಿಂಟನ್ ವಿಶ್ವ ಟೂರ್ ಫೈನಲ್ಸ್‌ನ ಸೆಮಿಫೈನಲ್‌ನಲ್ಲಿ ಸೋತ ನಂತರ ಟೂರ್ನಿಯಿಂದ ಹೊರಬಿದ್ದರು.

ಎರಡನೇ ಶ್ರೇಯಾಂಕದ ಸಾತ್ವಿಕ್–ಚಿರಾಗ್ ಜೋಡಿಯು 21-10, 17-21, 13-21 ರಿಂದ ಚೀನಾದ ಲಿಯಾಂಗ್ ವೀ ಕೆಂಗ್ ಮತ್ತು ವಾಂಗ್ ಚಾಂಗ್ ವಿರುದ್ಧ ಮುಗ್ಗರಿಸಿತು.

ಮೊದಲ ಗೇಮ್‌ನಲ್ಲಿ ಪಾರಮ್ಯ ಮೆರೆದಿದ್ದ ಭಾರತದ ಆಟಗಾರರು ನಂತರದಲ್ಲಿ ಲಯ ತಪ್ಪಿದರು. ಒಂದು ಗಂಟೆ ಮೂರು ನಿಮಿಷಗಳ ಹೋರಾಟದಲ್ಲಿ ಜಯ ಸಾಧಿಸಿದ ಚೀನಾದ ಜೋಡಿಯು ಪ್ರಶಸ್ತಿ ಸುತ್ತಿಗೆ ಲಗ್ಗೆ ಹಾಕಿತು.

ಗುಂಪು ಹಂತದಲ್ಲಿ ಸಾತ್ವಿಕ್– ಚಿರಾಗ್ ಇದೇ ಎದುರಾಳಿಯನ್ನು ಮೂರು ಗೇಮ್‌ಗಳ ಹೋರಾಟದಲ್ಲಿ ಮಣಿಸಿದ್ದರು. ಬಿ ಗುಂಪಿನಲ್ಲಿ ತನ್ನ ಮೂರೂ ಪಂದ್ಯಗಳನ್ನು ಗೆದ್ದಿದ್ದ ಭಾರತದ ಜೋಡಿ ಅಗ್ರಸ್ಥಾನದೊಂದಿಗೆ ನಾಕೌಟ್ ಪ್ರವೇಶ ಪಡೆದಿತ್ತು.

ಮಹಿಳಾ ಟಿ20: ಶುಭಾರಂಭದ ವಿಶ್ವಾಸದಲ್ಲಿ ಭಾರತ

ಹರ್ಮನ್ ಪಡೆಗೆ ಲಂಕಾ ಸವಾಲು

ವಿಶಾಖಪಟ್ಟಣ (ಪಿಟಿಐ): ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಭಾರತ ಮಹಿಳೆಯರ ತಂಡವು ಭಾನುವಾರ ಇಲ್ಲಿ ಆರಂಭವಾಗುವ ಶ್ರೀಲಂಕಾ ವಿರುದ್ಧದ ಐದು ಪಂದ್ಯಗಳ ಟಿ20 ಸರಣಿಯಲ್ಲಿ ಶುಭಾರಂಭ ಮಾಡುವ ಹುಮ್ಮಸ್ಸಿನಲ್ಲಿದೆ.

ಸರಣಿಯ ಮೊದಲೆರಡು ಪಂದ್ಯಗಳು ವಿಶಾಖಪಟ್ಟಣದಲ್ಲಿ ನಡೆಯಲಿವೆ. ನಂತರದ ಮೂರು ಪಂದ್ಯಗಳು ತಿರುವನಂತಪುರದಲ್ಲಿ ಆಯೋಜನೆಯಾಗಿವೆ. ಇಂಗ್ಲೆಂಡ್ ಆತಿಥ್ಯದಲ್ಲಿ 2026ರ ಜೂನ್ ಮತ್ತು ಜುಲೈನಲ್ಲಿ ಮಹಿಳೆಯರ ಟಿ20 ವಿಶ್ವಕಪ್ ನಡೆಯಲಿದ್ದು, ಈ ನಿಟ್ಟಿನಲ್ಲಿ ಭಾರತದ ಆಟಗಾರ್ತಿಯರ ಮೇಲೆ ಸ್ಥಿರ ಪ್ರದರ್ಶನ ನೀಡುವ ಒತ್ತಡವಿದೆ.



ಸ್ಮೃತಿ ಮಂದಾನ

ಅನುಭವಿಗಳೊಂದಿಗೆ ಉದಯೋನ್ಮುಖ ಆಟಗಾರ್ತಿಯರು ಭಾರತ ತಂಡದಲ್ಲಿದ್ದಾರೆ. ಏಕದಿನ ವಿಶ್ವಕಪ್ ಗೆದ್ದ ತಂಡದಲ್ಲಿದ್ದ ಹರ್ಮನ್‌ಪ್ರೀತ್, ಸ್ಮೃತಿ ಮಂದಾನ, ಜೆಮಿಮಾ ರಾಡ್ರಿಗಸ್, ದೀಪ್ತಿ ಶರ್ಮಾ, ರೇಣುಕಾ ಸಿಂಗ್ ಮೇಲೆ ಹೆಚ್ಚಿನ ನಿರೀಕ್ಷೆಯಿದೆ. ಗುಣಲನ್ ಕಮಲಿನಿ ಮತ್ತು ವೈಷ್ಣವಿ ಶರ್ಮಾ ಅವರು ಇದೇ ಮೊದಲ ಬಾರಿ ತಂಡದಲ್ಲಿ ಸ್ಥಾನ ಗಳಿಸಿದ್ದು, ಅವರ ಪ್ರದರ್ಶನವನ್ನು ಚಿಂತಕರ ಚಾವಡಿ ಸೂಕ್ಷ್ಮವಾಗಿ ಗಮನಿಸಲಿದೆ.

17 ವರ್ಷದ ವಿಕೆಟ್‌ಕೀಪರ್–ಬ್ಯಾಟರ್ ಕಮಲಿನಿ ಅವರು ಬಿಸಿಸಿಐ 23 ವರ್ಷದೊಳಗಿನ ಟಿ20 ಟ್ರೋಫಿಯಲ್ಲಿ ತಮಿಳುನಾಡು ಪರ ಉತ್ತಮ ಪ್ರದರ್ಶನ ನೀಡಿದ್ದಾರೆ. ಈ ವರ್ಷದ ಆರಂಭದಲ್ಲಿ 19 ವರ್ಷದೊಳಗಿನವರ ವಿಶ್ವಕಪ್ ಟೂರ್ನಿಯಲ್ಲಿ ಮತ್ತು ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್)ನಲ್ಲಿ ಮುಂಬೈ ಇಂಡಿಯನ್ಸ್ ತಂಡಕ್ಕೆ ಆಡಿದ್ದಾರೆ.

19 ವರ್ಷದ ಎಡಗೈ ಸ್ಪಿನ್ನರ್ ವೈಷ್ಣವಿ 19 ವರ್ಷದೊಳಗಿನ ವಿಶ್ವಕಪ್‌ನಲ್ಲಿ ಅತಿ ಹೆಚ್ಚು ವಿಕೆಟ್ (17) ಪಡೆದು, ಆಯ್ಕೆದಾರರ ಗಮನ ಸೆಳೆದಿದ್ದರು. ರಾಧಾ ಯಾದವ್ ಅವರ ಅನುಪಸ್ಥಿತಿಯಲ್ಲಿ ವೈಷ್ಣವಿ ಅವರು ಶ್ರೀಚರಣಿ ಅವರೊಂದಿಗೆ ಕಣಕ್ಕೆ ಇಳಿಯುವ ಸಾಧ್ಯತೆಯಿದೆ. 29 ವರ್ಷದ ಮಂದಾನ ತನ್ನ ಮದುವೆ ರದ್ದಾದ ನಂತರ ಕ್ರಿಕೆಟ್‌ಗೆ ಮರಳಿದ್ದು, ಅವರ ಆಟದ ಬಗ್ಗೆ ಹೆಚ್ಚಿನ ಕುತೂಹಲವಿದೆ. ವಿಶ್ವಕಪ್ ಗೆಲುವಿನ ನಂತರ ವಿರಾಮ ತೆಗೆದುಕೊಂಡಿದ್ದ ಹರ್ಮನ್‌ಪ್ರೀತ್, ತಮ್ಮ ಟಿ20 ಲಯವನ್ನು ಮರಳಿ ಪಡೆಯಲು ಎದುರು ನೋಡುತ್ತಿದ್ದಾರೆ.

ಅನುಭವಿ ಚಾಮರಿ ಅಟಪಟ್ಟು ನೇತೃತ್ವದ ಶ್ರೀಲಂಕಾ ತಂಡವು ಆತಿಥೇಯರಿಗೆ ಪ್ರಬಲ ಸವಾಲೊಡ್ಡುವ ವಿಶ್ವಾಸದಲ್ಲಿದೆ.

ಪಂದ್ಯ ಆರಂಭ: ರಾತ್ರಿ 7
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಮೈಸೂರು: ಚಳಿಗಾಲದ ರೇಸ್ ರದ್ದು

ಮೈಸೂರು: ಮೈಸೂರು ಟರ್ಫ್ ಕ್ಲಬ್‌ನಲ್ಲಿ ಬೀಡುಬಿಟ್ಟಿರುವ ಒಂದು ಕುದುರೆಯಲ್ಲಿ ಗ್ಲ್ಯಾಂಡರ್ಸ್ ರೋಗದ ಸೋಂಕು ದೃಢಪಟ್ಟ ಕಾರಣ ಇಲ್ಲಿ ನಿಗದಿಯಾಗಿದ್ದ ಚಳಿಗಾಲದ ಉಳಿದ ರೇಸ್‌ಗಳನ್ನು ರದ್ದು ಮಾಡಲಾಗಿದೆ ಎಂದು ಕ್ಲಬ್ ಶನಿವಾರ ತಿಳಿಸಿದೆ.

ರೇಸ್‌ಕೋರ್ಸ್ ಮತ್ತು ಸುತ್ತಮುತ್ತಲಿನ ಎರಡು ಕಿಲೋ ಮೀಟರ್ ಆವರಣವನ್ನು ಅಧಿಸೂಚಿತ ಪ್ರದೇಶವೆಂದು ಸರ್ಕಾರ ಗುರುತಿಸಿದೆ. ಈ ಪ್ರದೇಶದಲ್ಲಿ ಕುದುರೆ, ಕತ್ತೆ ಮತ್ತು ಹೇಸರಗತ್ತೆಗಳ ಓಡಾಟ ನಿಷೇಧಿಸಲಾಗಿದೆ.

ಅಲ್ಲದೆ, ‘ಟರ್ಫ್ ಕ್ಲಬ್ ಅಥಾರಿಟೀಸ್ ಆಫ್ ಇಂಡಿಯಾ’ ಮೈಸೂರಿನಲ್ಲಿ ಫೆಬ್ರವರಿ 28 ಮತ್ತು ಮಾರ್ಚ್ 1ರಂದು ನಿಗದಿಪಡಿಸಿದ್ದ ‘ಇಂಡಿಯನ್ ಟರ್ಫ್ ಇನ್ವಿಟೇಷನ್ ಕಪ್’ ವಾರಾಂತ್ಯದ ರೇಸ್‌ಗಳನ್ನು ಮುಂದೂಡಲಾಗಿದೆ.

ಫಿನ್ ಸ್ವಿಮ್ಮಿಂಗ್: ಮಾನ್ಯಾಗೆ ಹ್ಯಾಟ್ರಿಕ್ ಚಿನ್ನ

ಪ್ರಜಾವಾಣಿ ವಾರ್ತೆ

ಮಂಗಳೂರು: ಮಾನ್ಯಾ ವಾದ್ವಾ ಅವರು ಶನಿವಾರ ಇಲ್ಲಿ ಆರಂಭವಾದ ಐದನೇ ಫಿನ್ ಸ್ವಿಮ್ಮಿಂಗ್ ಚಾಂಪಿಯನ್‌ಷಿಪ್‌ನಲ್ಲಿ ‘ಹ್ಯಾಟ್ರಿಕ್’ ಚಿನ್ನದ ದಾಖಲೆ ಬರೆದರು. ಅದರೊಂದಿಗೆ ಕರ್ನಾಟಕದ ಈಜುಪಟುಗಳು ಒಟ್ಟು 9 ಚಿನ್ನಗಳೊಂದಿಗೆ 22 ಪದಕಗಳನ್ನು ಗಳಿಸಿದರು. ಪದಕ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದ್ದಾರೆ.

ವಿಒನ್ ಈಜು ಕೇಂದ್ರ, ಭಾರತ ಅಂಡರ್ ವಾಟರ್ ಸ್ಪೋರ್ಟ್ಸ್ ಫೆಡರೇಷನ್ ಮತ್ತು ಕರ್ನಾಟಕ ಫಿನ್‌ಸ್ವಿಮ್ಮಿಂಗ್ ಸಂಸ್ಥೆ ಆಯೋಜಿಸಿರುವ ಚಾಂಪಿಯನ್‌ಷಿಪ್‌ನಲ್ಲಿ ಬೆಂಗಳೂರಿನ ರಾಜ್ ವಾದ್ವಾ ಮತ್ತು ಮಂಜುಳಾ ಅವರ ಪುತ್ರಿ, ಡಿಪಿಎಸ್‌ನ 8ನೇ ಗ್ರೇಡ್ ವಿದ್ಯಾರ್ಥಿನಿ ಮಾನ್ಯಾ ಜೂನಿಯರ್ ‘ಡಿ’ ವಿಭಾಗದ 50 ಮೀಟರ್ಸ್ ಸರ್ಫೇಸ್ ಸ್ವಿಮ್ಮಿಂಗ್ ಮತ್ತು 200 ಮೀ ಬೈಫಿನ್ಸ್‌ನಲ್ಲಿ ಚಿನ್ನ ಗೆದ್ದುಕೊಂಡರು. 4x100 ಮೀ ಬೈಫಿನ್ ರಿಲೆಯಲ್ಲಿ ದಾಖಲೆಯೊಂದಿಗೆ ಚಿನ್ನ ಗೆದ್ದ ಕರ್ನಾಟಕ ತಂಡದಲ್ಲೂ ಅವರು ಇದ್ದರು.



ಮಾನ್ಯಾ ವಾದ್ವಾ

ದಿನದ ಮೊದಲ ಸ್ಪರ್ಧೆಯಲ್ಲೇ ಕರ್ನಾಟಕ ಪದಕ ಗೆದ್ದಿತು. ಪುರುಷರ ‘ಎ’ ವಿಭಾಗದ 800 ಮೀಟರ್ಸ್ ಬೈಫಿನ್ಸ್‌ನಲ್ಲಿ ಮಹಮ್ಮದ್ ಅಬ್ದುಲ್ ಬಾಸಿತ್ ಬೆಳ್ಳಿ ಪದಕ ಗಳಿಸಿದರು. ಒಡಿಶಾದ ಅನ್ಮುಮನ್ ಅವರ ಪ್ರಬಲ ಪೈಪೋಟಿ ಮೀರಿ ಅವರು ಕರ್ನಾಟಕದ ಖಾತೆ ತೆರೆದರು.

9 ಚಿನ್ನ, 7 ಬೆಳ್ಳಿ ಮತ್ತು 6 ಕಂಚಿನ ಪದಕ ಗೆದ್ದುಕೊಂಡ ಕರ್ನಾಟಕ 96 ಪಾಯಿಂಟ್ ಗಳಿಸಿದೆ. 19 ಚಿನ್ನ, 23 ಬೆಳ್ಳಿ ಮತ್ತು 18 ಕಂಚಿನ ಪದಕಗಳೊಂದಿಗೆ 197 ಪಾಯಿಂಟ್ ಗಳಿಸಿರುವ ಪಶ್ಚಿಮ ಬಂಗಾಳ ಅಗ್ರಸ್ಥಾನದಲ್ಲಿದೆ. ಗೋವಾ ಮತ್ತು ಉತ್ತರಪ್ರದೇಶ ತಲಾ 3 ಚಿನ್ನ ಗಳಿಸಿದೆ.

ಜೂನಿಯರ್ ‘ಡಿ’ ವಿಭಾಗದ 50 ಮೀ. ಸರ್ಫೇಸ್‌ನಲ್ಲಿ ಮಾನ್ಯಾ 25:65 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು.

ಕರ್ನಾಟಕ–ಬರೋಡಾ ಪಂದ್ಯ ಡ್ರಾ

ಬೆಂಗಳೂರು: ಕರ್ನಾಟಕ ತಂಡದ ಆರಂಭ ಆಟಗಾರ ಆರ್. ರೋಹಿತ್ ರೆಡ್ಡಿ ಹಾಗೂ ಆಲ್‌ರೌಂಡರ್ ಸುಕೃತ್ ಜೆ. ಅವರು ವಿಜಯ್ ಮರ್ಚೆಂಟ್ ಟ್ರೋಫಿ (16 ವರ್ಷದೊಳಗಿನವರ) ಕ್ರಿಕೆಟ್ ಟೂರ್ನಿಯ ಬರೋಡಾ ವಿರುದ್ಧದ ಪಂದ್ಯದಲ್ಲಿ ಅಂತಿಮ ದಿನವಾದ ಶನಿವಾರ ಶತಕ ಗಳಿಸಿ ಅಜೇಯವಾಗಿ ಉಳಿದರು. ಅದರೊಂದಿಗೆ, ರಾಯಪುರ ದಲ್ಲಿ ನಡೆದ ಎಲೀಟ್ ಡಿ ಗುಂಪಿನ ಪಂದ್ಯವು ಡ್ರಾನಲ್ಲಿ ಅಂತ್ಯಗೊಂಡಿತು.

1 ವಿಕೆಟ್‌ಗೆ 6 ರನ್‌ಗಳೊಂದಿಗೆ ಆಟ ಮುಂದುವರಿಸಿದ ರಾಜ್ಯ ತಂಡವು 65 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡು ಕುಸಿಯುವ ಭೀತಿಯಲ್ಲಿತ್ತು. ಆಗ, ರೋಹಿತ್–ಸುಕೃತ್ ಜೋಡಿ ಮುರಿಯದ ಆರನೇ ವಿಕೆಟ್ ಜೊತೆಯಾಟದಲ್ಲಿ 172 ರನ್ ಸೇರಿಸಿದರು. ಟೂರ್ನಿಯಲ್ಲಿ ರಾಜ್ಯ ತಂಡಕ್ಕೆ ಇದು ಸತತ ಮೂರನೇ ಡ್ರಾ ಆಗಿದೆ. ಮಧ್ಯ ಪ್ರದೇಶ ಹಾಗೂ ಉತ್ತರಾಖಂಡ ವಿರುದ್ಧ ಡ್ರಾ ಮಾಡಿಕೊಂಡಿದ್ದ ಆರೂಷ್ ಜೈನ್ ಪಡೆಯು ಮೊದಲ ಇನಿಂಗ್ಸ್ ಮುನ್ನಡೆಯ ಆಧಾರದಲ್ಲಿ 3 ಅಂಕ ಪಡೆಯಿತು. ಆದರೂ, 9 ಪಾಯಿಂಟ್ಸ್‌ಗಳೊಂದಿಗೆ ಅಂಕಪಟ್ಟಿಯಲ್ಲಿ ಮೂರನೇ ಸ್ಥಾನಕ್ಕೆ ಸೀಮಿತವಾಯಿತು. ಆಂಧ್ರ ಪ್ರದೇಶ ಹಾಗೂ ಮಧ್ಯ ಪ್ರದೇಶ ತಂಡಗಳು (ತಲಾ 13 ಅಂಕ) ಮೊದಲೆರಡು ಸ್ಥಾನಗಳಲ್ಲಿವೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಕರ್ನಾಟಕ: 234; ಬರೋಡಾ: 177; ಎರಡನೇ ಇನಿಂಗ್ಸ್: ಕರ್ನಾಟಕ: 81.5 ಓವರ್‌ಗಳಲ್ಲಿ 5ಕ್ಕೆ 237 (ಆರ್. ರೋಹಿತ್ ರೆಡ್ಡಿ ಔಟಾಗದೆ 105, ಸುಕೃತ್ ಜೆ. ಔಟಾಗದೆ 100; ಯುವರಾಜ್ ಸಿನ್ಹ 40ಕ್ಕೆ2).

ಜಯದ ಸನಿಹ ಆಸ್ಟ್ರೇಲಿಯಾ

ಅಡಿಲೇಡ್ (ಎಪಿ): ನೇಥನ್ ಲಯನ್ ಮತ್ತು ಪ್ಯಾಟ್ ಕಮಿನ್ಸ್ ಅವರ ಚುರುಕಾದ ದಾಳಿಯ ಬಲದಿಂದ ಆಸ್ಟ್ರೇಲಿಯಾ ತಂಡವು ಆ್ಯಷಸ್ ಟೆಸ್ಟ್ ಸರಣಿ ಜಯದ ಸನಿಹ ಬಂದು ನಿಂತಿದೆ.

ಇಲ್ಲಿ ನಡೆಯುತ್ತಿರುವ ಟೆಸ್ಟ್ ಪಂದ್ಯದಲ್ಲಿ 435 ರನ್‌ಗಳ ಗೆಲುವಿನ ಗುರಿಯನ್ನು ಬೆನ್ನಟ್ಟಿದ್ದ ಇಂಗ್ಲೆಂಡ್ ನಾಲ್ಕನೇ ದಿನದಾಟದ ಮುಕ್ತಾಯಕ್ಕೆ 63 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 207 ರನ್ ಗಳಿಸಿದೆ. ಪಂದ್ಯದ ಕೊನೆಯ ದಿನವಾದ ಭಾನುವಾರ ಜಯಗಳಿಸಲು ಇಂಗ್ಲೆಂಡ್‌ಗೆ 228 ರನ್‌ಗಳ ಅಗತ್ಯವಿದೆ. ಕ್ರೀಸ್‌ನಲ್ಲಿ ಜೆಮಿ ಸ್ಮಿತ್ (ಬ್ಯಾಟಿಂಗ್ 2) ಮತ್ತು ವಿಲ್ ಜ್ಯಾಕ್ಸ್ (ಬ್ಯಾಟಿಂಗ್ 11) ಇದ್ದಾರೆ. ಆತಿಥೇಯ ತಂಡವು ಐದು ಪಂದ್ಯಗಳ ಸರಣಿಯಲ್ಲಿ 2–0ಯಿಂದ ಮುಂದಿದೆ.

ಬೃಹತ್ ಮೊತ್ತವನ್ನು ಬೆನ್ನಟ್ಟಿ ಗೆದ್ದು ವಿಶ್ವದಾಖಲೆ ನಿರ್ಮಿಸುವ ಭರದಲ್ಲಿದ್ದ ಇಂಗ್ಲೆಂಡ್ ತಂಡಕ್ಕೆ ಆರಂಭಿಕ ಬ್ಯಾಟರ್ ಜಾಕ್ ಕ್ರಾಲಿ (85; 151ಎ, 4X8) ಆತ್ಮವಿಶ್ವಾಸ ಮೂಡಿಸಿದ್ದರು. ಆದರೆ ಬೆನ್ ಡಕೆಟ್ ಹಾಗೂ ಒಲಿ ಪೋಪ್ ಬೇಗನೆ ನಿರ್ಗಮಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ: 91.2 ಓವರ್‌ಗಳಲ್ಲಿ 371. ಇಂಗ್ಲೆಂಡ್: 87.2 ಓವರ್‌ಗಳಲ್ಲಿ 286. ಎರಡನೇ ಇನಿಂಗ್ಸ್: ಆಸ್ಟ್ರೇಲಿಯಾ: 84.4 ಓವರ್‌ಗಳಲ್ಲಿ 349 (ಅಲೆಕ್ಸ್ ಕ್ಯಾರಿ 72, ಬ್ರೈಡನ್ ಕಾರ್ಸ್ 80ಕ್ಕೆ3, ಜೋಶ್ ಟಂಗ್ 70ಕ್ಕೆ4) ಇಂಗ್ಲೆಂಡ್: 63 ಓವರ್‌ಗಳಲ್ಲಿ 6ಕ್ಕೆ207 (ಜಾಕ್ ಕ್ರಾಲಿ 85, ಜೋ ರೂಟ್ 39, ಹ್ಯಾರಿ ಬ್ರೂಕ್ 30, ಪ್ಯಾಟ್ ಕಮಿನ್ಸ್ 24ಕ್ಕೆ3, ನೇಥನ್ ಲಯನ್ 64ಕ್ಕೆ3)